ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಪ್ರಾಯಿಸ್ಡ ಆದ್ದು. [

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 22, ಸನ್ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ಕಂಟ್ರೋಲರವರು, ಪಬ್ಲಿಕ್ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ ನೋಟಿಸ್‌ಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು—ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 31ನೆ ಆಗಸ್ಟ್—1ನೆ ಸೆಪ್ಟಂಬರ್ 1904.

ನಂ. 1833—17-12—ಸ್ಯಾನಿಟೇಷನ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮತ್ತು ನಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರಿ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ತುಮಕೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಅಮ್ಮನಘಟ್ಟಕ್ಕೆ ಸೇರಿದ ಗೊಲ್ಲರಹಟ್ಟಿ..	ಗುಬ್ಬಿ.	2. ಚೆನ್ನಸೆಟ್ಟಿಹಳ್ಳಿ ...	ಗುಬ್ಬಿ.

ತಾರೀಖು 7ನೆ ಸೆಪ್ಟಂಬರ್ 1904.

ನಂ. 1989—83-2—ಸ್ಯಾನಿಟೇಷನ್, ಮುಳಬಾಗಲನಲ್ಲಿ ಪ್ಲೇಗ್ ರೋಗವು ಇರ್ಧೆಯೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದಲೂ ಮತ್ತು ಅದರ ವ್ಯಾಪಕವನ್ನು ಅಡ್ಡೀಪಡಿಸಬೇಕಾಗಿರುವದ್ದರಿಂದಲೂ, 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ II ನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಕೋಲಾರ ಡಿಸ್ಟ್ರಿಕ್ಟು ಮುಳಬಾಗಲ್ ತಾಲ್ಲೂಕು ಮುಳಬಾಗಲ್ ಟವನ್ನಲ್ಲಿರುವ ಹೈದರಲ್ಲಿ ದರ್ಗಾವಿನಲ್ಲಿ 1904ನೆ ಸೆಪ್ಟಂಬರ್ 11ರ ಲಾಗಾಯತು 29ರ ವರಿವಿಗೆ ನಡೆಯುವ ಉರ್ಸಿಗೆ ಹೊರಗಿನಿಂದ ಜನಗಳು ಬರುವದನ್ನು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಡ್ಡೀ ಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರಿ ಉರ್ಸಿಗೆ ಹೊರಡುವ ದರೋಜಿನ ಜನಗಳು ಖಾಪಸು ಕಳುಹಿಸಲ್ಪಡುವರು.

ತಾರೀಖು 31ನೆ ಆಗಸ್ಟು - 1ನೆ ಸೆಪ್ಟಂಬರ್ 1904.

ನಂ. 1835-35-6—ಸ್ಯಾನಿಟೇರ್ಸ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ ಅನುಸರಿಸಿ 1898ನೆ ಫೆಬ್ರವರಿ 10ನೆ ಮುಕ್ರಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನಗಳ ಉದ್ದೇಶಗಳಿಗೋಸ್ಕರ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಹೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
1. ಭೀಮಸಾಗರ	.	ಚಿತ್ರದುರ್ಗ.	8. ಕವಾಡಿಗರ ಹಟ್ಟಿ	...	ಚಿತ್ರದುರ್ಗ.
2. ಕೋಗುಂಡಿ	..	ಡಿಟೋ	9. ಹಲಿಯೂರು	..	ಡಿಟೋ
3. ಬಳ್ಳಕಟ್ಟೆ	....	ಡಿಟೋ	10 ಜಗಳೂರು ಗೊಲ್ಲರಹಟ್ಟಿ	..	ಜಗಳೂರು.
4. ಕಾಪುಹಳ್ಳಿ	...	ಡಿಟೋ	11. ಸುಳ್ಳೇಟನಹಳ್ಳಿ	..	ಡಿಟೋ
5. ಕೆಂಚಹಳ್ಳಿ ಗೊಲ್ಲರಹಟ್ಟಿ	...	ಡಿಟೋ	12. ಮುದ್ದೇರು	..	ಹೊಳಲಕೆರೆ.
6. ಶಾಂತಿಪುರ ಗೊಲ್ಲರಹಟ್ಟಿ	..	ಡಿಟೋ	13. ಕಡೂರು	..	ಡಿಟೋ
7. ಜಂಗಿಕಟ್ಟೆ	..	ಡಿಟೋ			

ತಾರೀಖು 7—8ನೆ ಸೆಪ್ಟಂಬರ್ 1904.

ನಂ. (2007)—60-2—ಸ್ಯಾನಿಟೇರ್ಸ, ಕಡೂರು ಡಿಸ್ಟ್ರಿಕ್ಟಿನ ಶ್ರಿಂಗೇರಿಯಲ್ಲಿ ನಡೆಯುವ ನವರಾತ್ರಿ ಉತ್ಸವದ ಸಂದರ್ಭದಲ್ಲಿ ಮಂಗಳೂರಿನಿಂದಲೂ ಮತ್ತು ಪ್ಲೇಗ ರೋಗ ತಗಲಿದ ಇತರ ಪ್ರದೇಶಗಳಿಂದಲೂ ಜನಗಳು ಸದರಿ ಸ್ಥಳದಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ, 1897ನೆ ಇಸವಿಯ ಸಾಂಕ್ರಾಮಿಕರೋಗಗಳ 11ನೆ ನಂಬರ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, 1904ನೆ ಆಕ್ಟೋಬರ 9ರ ಲಾಗಾಯಿತು 24ರ ವರಿವಿಗೆ ಮಂಗಳೂರಿನಿಂದಲೂ ಮತ್ತು ಪ್ಲೇಗ ರೋಗ ತಗಲಿದ ಇತರ ಪ್ರದೇಶಗಳಿಂದಲೂ ಜನಗಳು ಸದರಿ ಸ್ಥಳಕ್ಕೆ ಬರುವದನ್ನು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಡ್ಡಿ ಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಉತ್ಸವಕ್ಕೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 8—9ನೆ ಸೆಪ್ಟಂಬರ್ 1904.

ನಂ. 2045—81-2—ಸ್ಯಾನಿಟೇರ್ಸ, ಚಿತ್ರದುರ್ಗ ಡಿಸ್ಟ್ರಿಕ್ಟು ಚಳ್ಳಕೆರೆ ತಾಲ್ಲೂಕಿನ ಗೌರಸಮುದ್ರ ಗ್ರಾಮದಲ್ಲಿ ನಡೆಯುವ ಜಾತ್ರೆಯ ಸಂದರ್ಭದಲ್ಲಿ ಪ್ಲೇಗರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳದಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ ರೋಗವು ವ್ಯಾಪಿಸುವ ಅಪಾಯವುಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ, 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ 11ನೆ ನಂಬರ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, 19 ನೆ ಸೆಪ್ಟಂಬರ 13ರ ಲಾಗಾಯಿತು 15ರ ವರಿವಿಗೆ ಪ್ಲೇಗ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಕ್ಕೆ ಬರುವದನ್ನು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಡ್ಡಿ ಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರಿ ಜಾತ್ರೆಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 16-17ನೆ ಸೆಪ್ಟಂಬರ್ 1904.

ನಂ (2206)—58-4—ಸ್ಯಾನಿಟೇರ್ಸ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ ಅನುಸರಿಸಿ 1898ನೆ ಫೆಬ್ರವರಿ 10ನೆ ಮುಕ್ರಂ 9383—ಮಿ. ಫೈ. 21—96 ವ 9384—ಮಿ. ಫೈ. 21—96ನೆ ನಂಬರುಗಳ ಇಸ್ತಿಹಾರ್ನಾಮೆಗಳೊಂದಿಗೆ ಕೊಡಲ್ಪಟ್ಟ ರೆಗ್ಯುಲೇಷನಗಳ ಉದ್ದೇಶಗಳಿಗೋಸ್ಕರ ಮೈಸೂರ ಡಿಸ್ಟ್ರಿಕ್ಟಿನಲ್ಲಿರುವ ಇದರಹೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು : —

ಸ್ಥಳ.				ತಾಲ್ಲೂಕು.
1. ಹೊಂಗನೂರು	..	.	..	ಚಾಮರಾಜನಗರ.
2. ಕಟ್ಟಿಹಳ್ಳಿ	.	...	...	ಗುಂಡ್ಲುಪೇಟೆ.
3. ಸೋಮಹಳ್ಳಿ	...	..	..	ಡಿಟೋ
4. ಅಂಕನಳ್ಳಿ	...	...	....	ಕೃಷ್ಣರಾಜಪೇಟೆ.
5. ಲಿಂಗರಾಜ ಛತ್ರ	...	..	...	ಮಂಡ್ಯ.
6. ಮದ್ರಹಳ್ಳಿ	..	...	...	ಮಳವಳ್ಳಿ.
7. ಕನ್ನಘಟ್ಟ	.	..	...	ನಾಗಮಂಗಲ.
8. ಕವಡಹಳ್ಳಿ	...	..	..	ಡಿಟೋ
9. ಕೆಸ್ತೂರ ಕೊಪ್ಪಲು	..	..	..	ಡಿಟೋ
10. ಮಲ್ಲೇಗೌಡನಹಳ್ಳಿ	...	..	...	ಡಿಟೋ

ತಾರೀಖು 17–19ನೆ ಸೆಪ್ಟೆಂಬರ 1904.

ನಂ. 2278—17–15—ಸ್ಯಾನಿಟೇರ್ಸ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಸ ಅನುಸರಿಸಿ 1898ನೆ ಫೆಬ್ರುವರಿ 10ನೆ ಮಾರ್ಚಂ 9383—ಮಿ. ಫೈ. 21–96 ವ 9384—ಮಿ. ಫೈ. 21–96ನೆ ನಂಬರುಗಳ ಇಸ್ತಿಹಾರ್ನಾಮೆಗಳೊಂದಿಗೆ ಕೊಡಲ್ಪಟ್ಟ ರೆಗ್ಯುಲೇರ್ಸಗಳ ಉದ್ದೇಶಗಳಿಗೋಸ್ಕರ ತುಮಕೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಚಿಕ್ಕಹೊನ್ನಡಿಕೆ	... ತುಮಕೂರು.	5. ಗುರುಗದಹಳ್ಳಿ	ತಿಪಟೂರು.
2. ವಡ್ರಹಳ್ಳಿ	.. ಡಿಟೋ	6. ಮಾದೆನೂರು	... ಡಿಟೋ
3. ಕಡಬಕಾಪ್ಪೆ	.. ಗುಬ್ಬಿ.	7. ಕಲ್ಲಸಟ್ಟಿಹಳ್ಳಿ	.. ಡಿಟೋ
4. ಬೆಲಗೆರೆ	.. ಡಿಟೋ		

ತಾರೀಖು 17–19ನೆ ಸೆಪ್ಟೆಂಬರ 1904.

ನಂ. 2276—16–6—ಸ್ಯಾನಿಟೇರ್ಸ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಸ ಅನುಸರಿಸಿ 1898ನೆ ಫೆಬ್ರುವರಿ 10ನೆ ಮಾರ್ಚಂ 9383—ಮಿ. ಫೈ. 21–96 ವ 9384—ಮಿ. ಫೈ. 21–96ನೆ ನಂಬರುಗಳ ಇಸ್ತಿಹಾರ್ನಾಮೆಗಳೊಂದಿಗೆ ಕೊಡಲ್ಪಟ್ಟ ರೆಗ್ಯುಲೇರ್ಸಗಳ ಉದ್ದೇಶಗಳಿಗೋಸ್ಕರ ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಶಟ್ಟಿಹಳ್ಳಿ	... ಹಾಸನ.	12. ಸೂರಪುರ	.. ಬೇಲೂರು.
2. ಗೊಂಬೂರು	.. ಡಿಟೋ	13. ಚಿಕ್ಕೀರಯ್ಯನ ಕೊಪ್ಪಲು	.. ಡಿಟೋ
3. ಮುದುಗೆರೆ	.. ಡಿಟೋ	14. ಲಕ್ಷ್ಮೀಪುರ	.. ಡಿಟೋ
4. ದುದ್ದಿ	.. ಡಿಟೋ	15. ಕಿರಗಡ್ಲು	.. ಡಿಟೋ
5. ತೊರಗರವಳ್ಳಿ	.. ಆಲೂರು (ಸಬ್ ತಾಲ್ಲೂಕು.)	16. ಕೋಡಿಹಳ್ಳಿ (ಹಾರ್ನಹಳ್ಳಿ ಹೋಬಳಿ.)	.. ಅರಸೀಕೆರೆ.
6. ಮೊವನೂರು	ಡಿಟೋ	17. ಹಾರನಹಳ್ಳಿ	.. ಡಿಟೋ
7. ಕನತೂರು	.. ಡಿಟೋ	18. ಜೋಡಿವಲ್ಲೂಪುರ	... ಡಿಟೋ
8. ಕಿಗಟ್ಟು	... ಡಿಟೋ	19. ಗೊಲ್ಲರಹಟ್ಟಿ	.. ಡಿಟೋ
9. ನೇರ್ಲಿಕೆರೆ	.. ಡಿಟೋ	20. ಕೋಡಿಹಳ್ಳಿ (ಕಸಬಾ ಹೋಬಳಿ)	ಡಿಟೋ
10. ಓತಪಾತನಹಳ್ಳಿ	.. ಬೇಲೂರು.	21. ಮಾರಡಿ	... ಅರಕಲಗೂಡು.
11. ಬಿಟ್ಟುವಳ್ಳಿ	.. ಡಿಟೋ		

ತಾರೀಖು 14—15ನೆ ಸೆಪ್ಟೆಂಬರ 1904.

ನಂ. (2124)–33–4—ಎಡ್ಯು., ಮೆ॥ ಫ್ರ್ಯಾಂಕ್ ರೇಜಿನಾಲ್ಡ್‌ಸೆಲ್, ಬಿ. ಎ., (ಆಕ್ಸನ್) ಯವರು ಬೆಂಗಳೂರ ಸೆಂಟ್ರಲ್ ಕಾಲೇಜಿನಲ್ಲಿ ಇಂಗ್ಲಿಷ್ ಭಾಷಾ ವ ಸಾಹಿತ್ಯದ ಪ್ರೊಫೆಸ್ಸರಾಗಿ ಮೊಕರರ್ರಾಮಡಲ್ಪಟ್ಟಿರುತ್ತಾರೆ.

ತಾರೀಖು 17ನೆ ಸೆಪ್ಟೆಂಬರ 1904.

ನಂ. ಜು. 740—ಸಿ. 39–5, ಬೆಂಗಳೂರಲ್ಲಿರುವ ಪ್ರಿನ್ಸಿಪಲ್ ಮುನ್‌ಸೀಫರ ಕೋರ್ಟಿನ ಲೇಟ್ ಹೆಡ್ ಮುನಷಿ ರಂಗರಾವ್ ರೀಛಂಡ್ ಆರ್ಡರುಗಳ ಸೃಷ್ಟನೆ ಮತ್ತು ಅವುಗಳನ್ನ ಮೋಸಕರವಾಗಿ ವ ಅಪ್ರಮಾಣಿಕವಾಗಿ ಚಲಾಯಿಸಿದ ತಕಶೀರುಗಳಿಗೋಸ್ಕರ ಚೀಫ್ ಕೋರ್ಟಿನವರಿಂದ ಬರತರ್ಫ ಮಾಡಲ್ಪಟ್ಟಿರುವದರಿಂದ ಪುನಹ ಸರ್ಕಾರ ನೌಕರಿಯಲ್ಲಿ ದಾಖಲಾಗಲು ಅರ್ಹರಾಗಿರುವದಿಲ್ಲವೆಂದು ಇದರಿಂದ ಪ್ರಸಿದ್ಧಪಡಿಸಿರುತ್ತೆ.

ತಾರೀಖು 17ನೆ ಸೆಪ್ಟೆಂಬರ 1904.

ನಂ. ಜು. 738—ಸಿ. 83—2, ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಸೆಕ್ಷನ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟಿನ ರವಿನ್ಯೂ ಪ್ರೊಬೇಷನರಾದ ಮೆ॥ ಎಂ. ಎಸ್. ರಾಮಚಂದ್ರರಾವ್, ಬಿ. ಎ., ಬಿ. ಎಲ್., ಯವರು ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಮೊಕರರ್ರಾಮಡಲ್ಪಟ್ಟಿರುತ್ತಾರೆ.

ತಾರೀಖು 16—17ನೆ ಸೆಪ್ಟೆಂಬರ 1904.

ನಂ. (2195)—8—6—ಮೆಡಿ., ಅಸಿಸ್ಟಂಟ್ ಸರ್ಜರಾದ ಮೆ॥ ಜೆ. ಎ. ಕೋಲಿಲೊ ಯವರಿಗೆ 1904ನೆ ಜುಲೈ 15ನೆ ಮಾರ್ಚಂ 326—8—2ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಎರಡು ತಿಂಗಳು ಮತ್ತು ಇಪ್ಪತ್ತುನಾಲ್ಕು ದಿನಗಳ ಪ್ರಿವಿಲೇಜ್ ರಜಾವನ್ನು ಅವರು 1904ನೆ ಜೂನ್ 3ನೆ ತಾರೀಖಿನಾರಭ್ಯ ಉಪಯೋಗಿಸಿಕೊಂಡು, 1904ನೆ ಜುಲೈ 31ನೆ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ, ಉಪಯೋಗಿಸಿಕೊಳ್ಳದ ರಜಾ ಭಾಗವು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ತಾರೀಖು 16—17ನೆ ಸೆಪ್ಟೆಂಬರ 1904.

ನಂ. 2198—118—2—ಲೋ. ಬೋ., ಕೋಲಾರದ ಭಂಗಾರ ಗಣಿಗಳ ಸ್ಯಾನಿಟರಿ ಬೋರ್ಡಿಗೋಸ್ಕರ ಮಾಡಲ್ಪಟ್ಟ ರೂಲುಗಳ 1ನೆ ಸೆಕ್ಷನಿನ 1 ಬಿ ನೇ ಪ್ಯಾರಾ ಅನುಸರಿಸಿ ಮೈಸೂರ ಶ್ರೀಮನ್ ಮಹಾರಾಜಾ ಸರ್ಕಾರದವರು, ಮೈಸೂರ ಗೋಲ್ಡ್‌ಮೈನಿಂಗ್ ಕಂಪನಿಯ ಆಕ್ಟಿಂಗ್ ಸೂಪರಿಂಟೆಂಡೆಂಟರಾದ ಮೆ॥ ಆರ್‌ಥೂರ್ ಗಿಫ್ ಫೋರ್ಸ್ಟ್ ಯವರನ್ನ, ಇಂಗ್ಲೆಂಡಿಗೆ ಹೋಗಿದ್ದ ಮೆ॥ ಆರ್. ಹ್ಯಾನ್ಕಾಕ್ ಯವರ ಗೈರಹಾಜರಿ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಕೋಲಾರದ ಭಂಗಾರ ಗಣಿಗಳ ಸ್ಯಾನಿಟರಿ ಬೋರ್ಡಿನ ನಾನ್ ಅಫಿಷಿಯಲ್ ಮೆಂಬರಾಗಿ ಆಕ್ಟಿಂಗ್ ತರೀಕ್ ಮೊಕರರ್ರಾಮಡಿರುತ್ತಾರೆ.

ತಾರೀಖು 7ನೆ ಸೆಪ್ಟೆಂಬರ್ 1904.

ನಂ. ರೆ. 2163—ಲೋ. ಸ. 50—04—5, ಚಿತ್ರದುರ್ಗ ಡಿಸ್ಟ್ರಿಕ್ಟ್ ಚಿತ್ರದುರ್ಗ ತಾಲ್ಲೂಕಿನ ಇದರಡಿ ಕಂಡ ಗ್ರಾಮಗಳಿಗೆ 1888ನೆ ಇಸವಿಯ ಲ್ಯಾಂಡ್ ರೆವಿನ್ಯೂ ಕೋಡಿನ ನಿಯಮಗಳನುಸರಿಸಿ ರಿವಿಜ್ಡ್ ಸರ್ವೆ ಸೆಟಲ್‌ಮೆಂಟ್ ಪ್ರಾರಂಭಿಸಿರುವದರಿಂದ, ಇದರಿಂದ ಸಮಸ್ತ ಜನಗಳ ತಿಳಿವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, 1888ನೆ ಇಸವಿಯ ಮೈಸೂರು ಲ್ಯಾಂಡ್ ರೆವಿನ್ಯೂ ಕೋಡು 112ನೆ ಸೆಕ್ಷನ್ನಿಂದ ಕೊಡಲ್ಪಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರ ಶ್ರೀಮಂತ ಮಹಾರಾಜ ಸರ್ಕಾರದವರು, ಮೇಲ್ಕಂಡ ಸೆಟಲ್‌ಮೆಂಟ್ ಅನುಸರಿಸಿ ಮೂವತ್ತು ವರುಷಗಳ ಕಾಲಕ್ಕೆ ಹಾಕಲ್ಪಟ್ಟ ಕಂದಾಯಗಳು 1905—06ನೆ ರೆವಿನ್ಯೂ ಸಂವತ್ಸರ ಮೊದಲಿಗೊಂಡು 1934—35ನೆ ರೆವಿನ್ಯೂ ಸಂವತ್ಸರಕ್ಕೆ ಅಬ್ಬೈರ ಆಗತಕ್ಕದೆಂದು ಪ್ರಸಿದ್ಧಪಡಿಸುತ್ತಾರೆ :—

ಮಾಮಲೆ ತಾಲ್ಲೂಕು.	ಹೋಬಳಿ ತಾಲ್ಲೂಕು.	ನಂಬರ್.	ಗ್ರಾಮದ ಹೆಸರು.	ಮಾಮಲೆ ತಾಲ್ಲೂಕು.	ಹೋಬಳಿ ತಾಲ್ಲೂಕು.	ನಂಬರ್.	ಗ್ರಾಮದ ಹೆಸರು.
1	2	3	4	1	2	3	4
ದಾವಣಗೆರೆ.	ಚಿತ್ರದುರ್ಗ.	1	ಐಸಮುದ್ರ	ದಾವಣಗೆರೆ		40	ಚಿಕ್ಕಬ್ಬಿಗೆರೆ
		2	ಬಿಕದರಗಟ್ಟ			41	ಹಿರೇಕಬ್ಬಿಗೆರೆ
		3	ಅರಸೂರು			42	ಮುದ್ದಾಪುರ
		4	ಹಂಪಸೂರು			43	ಯೆಲಗೋಡು
		5	ದ್ಯಾವನಹಳ್ಳಿ			44	ಕೆಂಚವ್ವನಗತಿಹಳ್ಳಿ
		6	ಯಮ್ಮೆಹಟ್ಟಿ			45	ಅಡವಿಗೊಲ್ಲರಹಳ್ಳಿ
		7	ಹೆಮ್ಮನಗಟ್ಟ			46	ಅಚ್ಚವನಹಳ್ಳಿ
		8	ಕಲ್ಲುಕುಂಟೆ			47	ಹುಲಿಹಾಲ್
		9	ಭರ್ಮಸಾಗರ			48	ಒಸ್ತಿಹಳ್ಳಿ
		10	ಕೊಲಹಾಲ್			49	ರಂಗವ್ವನಹಳ್ಳಿ
		11	ಹೆಗಡೆಹಾಲ			50	ಬ್ಯಾಲಹಾಲ್
		12	ಕೀವಿನಹಳ್ಳಿ			51	ಬಸವನವನಕೆರೆ
		13	ನಂದಿಹಳ್ಳಿ			52	ಬ್ಯಾಡರಿನಕೆರೆ
		14	ಹೆಗ್ಗೇರಿ			53	ಸುಲ್ತಾನಿಪುರ
		15	ಗುರಪ್ಪನಹಳ್ಳಿ			54	ಚಿಪ್ಪನಕೆರೆ
		16	ಚಿಕ್ಕ ಬೆನ್ನೂರು			55	ಸೂರೇನಹಳ್ಳಿ
		17	ಹಿರೇಬೆನ್ನೂರು			56	ರಾಯಣ್ಣನಹಳ್ಳಿ
		18	ಗೌರಮ್ಮನಹಳ್ಳಿ			57	ಚೊಕ್ಕಣ್ಣನಹಳ್ಳಿ
		19	ಚಲ್ಲಂದಿ			58	ಹೊರೇಕನಹಳ್ಳಿ
		20	ನಿಂಗವ್ವನಗತಿಹಳ್ಳಿ			59	ಕೊನ್ನಮ್ಮನ ಹಳ್ಳಿ
		21	ಜುರ್ಕಹಳ್ಳಿ			60	ವೀರವ್ವನಗತಿಹಳ್ಳಿ
		22	ನರಿಕಟ್ಟ			61	ಶೀಗೆಹಳ್ಳಿ
		23	ಗೊಲ್ಲರಹಳ್ಳಿ			62	ಶಿದ್ದಾಪುರ
		24	ಹರಲಕಟ್ಟ			63	ಮದಕಲಹಳ್ಳಿ
		25	ಕೋಗುಂಡೆ			64	ಅಲಗವಾಡಿ
		26	ಚೌಲಿಹಳ್ಳಿ			65	ದೊಡ್ಡಿನಹಾಲ್
		27	ಕಾಲಗೆರೆ			66	ಮೆಡ್ಕೇರಪುರ
		28	ಪಾವ ರಹಳ್ಳಿ			67	ಕೊಣನೂರು
		29	ಕಾಕಬಾಳ			68	ಚಿಕ್ಕೇನಹಳ್ಳಿ
		30	ಕೋಡಿಹಳ್ಳಿ			69	ಬಮ್ಮವ್ವನಗತಿಹಳ್ಳಿ
		31	ಬೈರಾಪುರ			70	ಹುಲಿಗೆರೆ
		32	ಕರಿಯಂಣನಹಳ್ಳಿ			71	ಜಂಪಣ್ಣನಹಳ್ಳಿ
		33	ರಿಂಗಟ್ಟ			72	ಒಬಳಾಪುರ
		34	ಸಿದ್ದವ್ವದುರ್ಗ			73	ಹೊಸರಂಗಾಪುರ
		35	ಪಾವನಹಳ್ಳಿ			74	ಹಳೇರಂಗಾಪುರ
		36	ಬಲಿಗಟ್ಟ			75	ಕೆಂಚಮಾರ್ನಹಳ್ಳಿ
		37	ಬೈರವಾರ			76	ಲಿಂಗದಹಳ್ಳಿ
		38	ಕತರ್‌ಹಾಲ್			77	ಲಕ್ಷ್ಮಿಸಾಗರ
		39	ಕರಿಯಮ್ಮನಹಳ್ಳಿ			78	ಬೆಲೆಕಟ್ಟ

ಸೂಬೆ ತಾಲ್ಲೂಕು.	ಹೋಬಳಿ ತಾಲ್ಲೂಕು.	ನಂಬರ್.	ಗ್ರಾಮದ ಹೆಸರು.	ಸೂಬೆ ತಾಲ್ಲೂಕು.	ಹೋಬಳಿ ತಾಲ್ಲೂಕು.	ನಂಬರ್.	ಗ್ರಾಮದ ಹೆಸರು.
1	2	3	4	1	2	3	4
ಚಿತ್ರದುರ್ಗ.	ಚಿತ್ರದುರ್ಗ.	79	ಮೂಗಲಹಳ್ಳಿ	ಚಿತ್ರದುರ್ಗ.	ಚಿತ್ರದುರ್ಗ.	129	ಪಂಡ್ರಹಳ್ಳಿ
		80	ತಿವಗೆರೆ			130	ಕಾಟೇನಹಳ್ಳಿ
		81	ಹಾಲಂದರೆ			131	ಕುಂಚಿಗನಹಾಲ್
		82	ಪಾಲಕ್ಕಿಹಳ್ಳಿ			132	ಇಂಗಲದಹಾಲ್
		83	ಕ್ಯಾಸಾಪುರ			133	ಪದ್ದವ್ವನಹಳ್ಳಿ
		84	ಸಾಗರಹಳ್ಳಿ			134	ಹನೇಹಳ್ಳಿ
		85	ಮೂರಗಟ್ಟ			135	ಸೊಂಡೆಕೊಳ
		86	ಆವುಹಳ್ಳಿ			136	ಜಾನಕೊಂಡ
		87	ಹಿರೇಗುಂಟನೂರು			137	ಕೆಲಗೊಟ್ಟ
		88	ತುರಬೈಲೂರು			138	ಮುಲ್ಲನಕಟ್ಟ
		89	ಮಳಲಿ			139	ಕುರಬರಹಳ್ಳಿ
		90	ಬಾಳೆಕಟ್ಟ			140	ತಮಟಹಾಲ್
		91	ನೆಲಿಕಟ್ಟ			141	ಕುರಬರ ಮುರಡೀಕೆರೆ
		92	ಭೀಮಸಮುದ್ರ			142	ಅತ್ತಿಕಟ್ಟ
		93	ಪಾಳ್ಯ			143	ಕಿರಬನಕಾಲ್
		94	ದಿಂಡಹಳ್ಳಿ			144	ನೇರ್ಲಗುಂಟೆ
		95	ಚಿಕ್ಕ ಗುಂಟನೂರು			145	ಗುಡದರಂಗವ್ವನಹಳ್ಳಿ
		96	ಕಡ್ಲೆಗುಂದ			146	ಮಲ್ಲಾಪುರ
		97	ಹುಣಸಿಕಟ್ಟೆ			147	ಗನ್ನೂರು
		98	ದ್ಯಾಮವ್ವನಹಳ್ಳಿ			148	ಕಲ್ಲೇನಹಳ್ಳಿ
		99	ಕೊಡಗವಳ್ಳಿ			149	ಪಿಲ್ಲೇಕಾರೇನಹಳ್ಳಿ
		100	ವ್ಯಾಸಮಲ್ಲಾಪುರ			150	ಮ್ಯಾಗಲಹಳ್ಳಿ
		101	ಬಿಟ್ಟದ ನಾಗೇನಹಳ್ಳಿ			151	ಮಾದಿಹಳ್ಳಿ
		102	ಬಮ್ಮೇನಹಳ್ಳಿ			152	ಮೇಡಕೇರಿಪುರ
		103	ಸಿದ್ದವ್ವನಹಳ್ಳಿ			153	ಶಂಗಾಪುರ
		104	ಬೇಡರ ಬಮ್ಮೆನಹಳ್ಳಿ			154	ತಿರಮಲಪುರ
		105	ಮೂರಿಜೋಗಿಹಳ್ಳಿ			155	ಹುಲ್ಲೂರು
		106	ಅಲಗಟ್ಟ			156	ಮಾನಂಗಿ
		107	ಚಿಕ್ಕ ಅಲಗಟ್ಟ			157	ದಳವಾಯಿಲಹಳ್ಳಿ
		108	ವಿಜಯಾಪುರ			158	ಜಗದಲಿಪುರ
		109	ಪೋಬವ್ವನಗತಿಹಳ್ಳಿ			159	ಕಸಬಾ ಚಿತ್ರದುರ್ಗ
		110	ಹಲಿಯೂರು			160	ರೋತಿಹಳ್ಳಿ
		111	ಚಿಕ್ಕಪುರ			161	ಕುರಬರಹಳ್ಳಿ
		112	ಹೊಸಹಳ್ಳಿ			162	ಚಿಕ್ಕಪ್ಪನಹಳ್ಳಿ
		113	ಈಚಲ ನಾಗೇನಹಳ್ಳಿ			163	ತರವನೂರು
		114	ಗುತ್ತಿನದಾವ			164	ಕುಣಬೇವ
		115	ತಿಬರ			165	ಬಾಗೇನಹಾಲ್
		116	ಗೊಡಬನಹಾಲ್			166	ಹುಣಿಕಟ್ಟ
		117	ಹಂದಿಗನದಾವ			167	ಮಾದನಾಯ್ಕನಹಳ್ಳಿ
		118	ಪೋಬಣ್ಣನಹಳ್ಳಿ			168	ಬೆಲಗಟ್ಟ
		119	ಯೇರಿಹಳ್ಳಿ			169	ಬಗ್ಗಲರಾಗವ್ವನಹಳ್ಳಿ
		120	ಕಕ್ಕೆಹರಪು			170	ವೀರಮೇಡಕೇರಿಪುರ
		121	ರಾಮಪುರ			171	ಚಿಕ್ಕ ಜಗಲೂರು
		122	ದೊಡ್ಡಪುರ			172	ಹಾಯಕಲ್
		123	ಮಹದೇವನಕಟ್ಟ			173	ಪೊಂಕನಹಳ್ಳಿ
		124	ಕಲ್ಲೇಹಡ್ಲು			174	ರಾಗಲೋಬನಹಳ್ಳಿ
		125	ಪುಪ್ಪಲಿಕನಹಳ್ಳಿ			175	ಜಂಮೇನಹಳ್ಳಿ
		126	ಇದ್ದಾಪುರ			176	ದ್ಯಾಮವ್ವನಹಳ್ಳಿ
		127	ಸೋಲಾಪುರ			177	ಜಂಪನಾಯ್ಕನಕೋಟೆ
		128	ಜಾಲಿಕಟ್ಟ			178	ಪಲ್ಲವಗೆರೆ

ತಾರೀಖು 8ನೆ ಸೆಪ್ಟಂಬರ್ 1904.

ನಂ. ರೆ. 2212—ಫಾ. 36—04-4, ಇದರಡೀ ಕಂಡ ತಖ್ತೆಯ 4ನೆ ಕಲಮಿನಲ್ಲಿ ನಮೂದಿಸಲ್ಪಟ್ಟ ಇಸ್ತಿಹಾರ್ನಾಮೆಗಳ ಪೈಕಿ ಫಾರೆಸ್ಟು ಸೆಟಲ್‌ಮೆಂಟ್ ಆಫಿಸರುಗಳ ದೊಕರರಾತಿಗೆ ಸಂಬಂಧಪಡುವ ಅಂಕವನ್ನು ಬದಲಾಯಿಸಿ ಮೈಸೂರ ಶ್ರೀಮನ್ ಮಹಾರಾಜ ಸರ್ಕಾರದವರು ಎಕ್‌ಸ್ಟ್ರಾ ಅಸಿಸ್ಟೆಂಟ್ ಕಮಿಷನರ್ ವ ಫಾರೆಸ್ಟು ಸೆಟಲ್‌ಮೆಂಟ್ ಆಫಿಸರಾದ ಮೌ|| ಎ. ಆನಂದರಾಯರನ್ನು ಸದರಿ ತಖ್ತೆಯ 3ನೆ ಕಲಮಿನಲ್ಲಿ ಕಂಡ ಬ್ಲಾಕುಗಳ ವಿಷಯದಲ್ಲಿ ಫಾರೆಸ್ಟು ಸೆಟಲ್‌ಮೆಂಟ್ ಆಫಿಸರಾಗಿ ಇರತಕ್ಕದ್ದೆಂದು ದೊಕರರ್ಮಾಡಿರುತ್ತಾರೆ :—

ನಂಬರ್.	ಡಿಸ್ಟ್ರಿಕ್ಟು.	ಫಾರೆಸ್ಟಿನ ಹೆಸರು.	ಇಸ್ತಿಹಾರಿನ— ನಂಬರು.	ತಾರೀಖು.
1	ಬೆಂಗಳೂರು ..	ನೋಲಸಾಯಿಕನಹಳ್ಳಿ ...	868—ಫಾ. ಫೈ. 55-95	24— 6—01
		ದೇವರಬೆಟ್ಟ ..	289—1580	17—10—01
		ಬಿಬ್ಬಿಗಿರಿಬೆಟ್ಟ ...	245—1740	3—10—02
		ಸೋಲದೇವನಹಳ್ಳಿ ..	462—4476	29— 1—03
		ಕೊರಂಗೆರೆ .	593—7085	26— 2—04
2	ಕೋಲಾರ ...	ಗೊವುಕುಂಟೆ ಗೊಲ್ಲಹಳ್ಳಿ ...	531—2858	13— 2—02
		ಕಾವುಸಂದ್ರ ಬ್ಲಾಕುಗಳು V ಮತ್ತು VI ...	711—3657	14— 4—02
3	ಮೈಸೂರು ...	ನಾಗನಪುರ ಬ್ಲಾಕು III ..	85— 570	9— 8—01
		,, I ..	87— 572	9— 8—01
		,, I ...	242—1292	1—10—01
		,, II ..	89— 574	9— 8—01
		ಬೀರಂಬೂಡಿ ಈಶಾನ್ಯ ಎಕ್ಸ್‌ಟೆಂಷನ್ ...	144— 825	24— 8—01
		ಬೀರಂಬೂಡಿ ಪೂರ್ವ ಎಕ್ಸ್‌ಟೆಂಷನ್ ..	146— 827	24— 8—01
		ಕಾವೇಘಟ್ಟ ಸೆಂಡಲ್ ಪ್ಲಾಂಟೇಷನ್ ...	366—1955	25—11—01
		ಅರಬಿಟ್ಟು	565—3045	28— 2—02
		ಬಸವನಕಾಲೆ	567—3047	28— 2—02
		ಮುದಿಬೆಟ್ಟ	659—3452	2— 4—02
		ಧನಗೂರು	695—3588	10— 4—02
		ಕಾಕನಕೋಟೆ ಪೂರ್ವ ಎಕ್ಸ್‌ಟೆಂಷನ್ ..	257—1947	20—10—04
		ಬೀವುನಬೀಡು ಸೆಂಡಲ್ ರಿಜರ್ವ್ ..	501—6118	28— 1—04
4	ಹಾಸನ ..	ಬಸಲಕಲ್ಲು ...	28— 133	9— 7—01
		ಬೆಟ್ಟದಪುರ	30— 135	
		ದಸವಿ	32— 137	
		ಖಾಕನಕಟ್ಟೆ	879—9785	25— 5—04
5	ಶಿವಮೊಗ್ಗ ..	ಜೋಗ	922—4862	19— 6—02
		ಕರ್ನಿ	306—3330	13—11—03
		ಕೊಡಚಾದ್ರಿ	309—3333	
		ಯೇರಿಕಟ್ಟೆ	312—3336	
		ವಾರ್ಕಂಡ	315—3339	
		ಗೊಗ್ಗಿ	318—3342	
		ಗೋವರ್ಧನಗಿರಿ	321—3345	
6	ಕಡೂರು ..	ಮೂಲಂದೂರು ಗುಡ್ಡೆ ...	189— 943	31— 8—01
		ಮೂಗರಮಕ್ಕಿ	193— 947	12—12—02
		ಗಂಗೇಗಿರಿ	199— 953	12—12—03
		ಹಡಿಕೆರೆ .. .	502—4939	12— 2—03
		ಲಕ್ಕವಳ್ಳಿ ಎಕ್ಸ್‌ಟೆಂಷನ್ (ಹೊಸಹಳ್ಳಿ ಬ್ಲಾಕ) ...	642—6482	23— 4—03
		ಡಿಟೋ (ಕಲ್ಲೆಕಾರ್) ..	732—39-95	11— 5—01
			351—12902	1—12—01
7	ಚಿತ್ರದುರ್ಗ ...	ಪೇವಿನಹಳ್ಳಿ ರಿಜರ್ವ್	890—9907	27— 5—04
		ಮಾರಿಕಣಿವೆ	863—ಫಾ. ಫೈ. 41-95	22— 6—01
		ಲಕ್ಕಿಹಳ್ಳಿ	865—41-95	22— 6—01

143)

ತಾರೀಖು 15ನೆ ಸೆಪ್ಟಂಬರ್ 1904.

ನಂ. ರೆ. 2356—ಲೋ. ರೆ. 48-04-7, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟ ಸಾಗರ ಡಿವಿಜನಿನ ಎಕ್‌ಸ್ಟ್ರಾ ಅಸಿಸ್ಟೆಂಟ್ ಕಮೀಷನರಾದ ಮೆ॥ ಬಿ. ಕೃಷ್ಣ ರಾಯರಿಗೆ 1904ನೆ ಆಗಸ್ಟ 20ನೆ ತಾರೀಖಿನಾರಭ್ಯ ಇಪ್ಪತ್ತು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 15ನೆ ಸೆಪ್ಟಂಬರ್ 1904.

ನಂ. ರೆ. 2359—ಲೋ. ರೆ. 41-04—2, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಹಾಸನ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮೀಷನರಾದ ಮೆ॥ ಕೆ. ಮಾರ್ತಾಂ, ಬಿ. ಎ., ಯವರಿಗೆ, 1904ನೆ ಜುಲೈ 4ನೆ ತಾರೀಖಿನಾರಭ್ಯ ಆರು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 15ನೆ ಸೆಪ್ಟಂಬರ್ 1904.

ನಂ. ರೆ. 2382—ಲೋ. ರೆ. 119-04-4, ಹೊಳೇ ನರಸೀಪುರದ ಅಮಲ್‌ದಾರ್ರಾದ ಮೆ॥ ಎಚ್. ಆರ್. ಶ್ರೀನಿವಾಸರಾಯರು ಕೆಲಸದಿಂದ ನಿವೃತ್ತರಾಗುವ ಬಗ್ಯೆ ಅಪ್ಪಣೆ ಕೊಡಲ್ಪಟ್ಟಿರುತ್ತಾರೆ.

ಹಾಸನ ಡಿಸ್ಟ್ರಿಕ್ಟ ಆಫೀಸಿನ ಡಿಸ್ಟ್ರಿಕ್ಟ ಶಿರಸ್ತೇದಾರ್ರಾದ ಬಿ. ಟಿ. ಸೀತಾರಾಮಯ್ಯನವರು ಹೊಳೇ ನರಸೀಪುರ ತಾಲ್ಲೂಕಿನ ಅಮಲ್‌ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕ್ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 17ನೆ ಸೆಪ್ಟಂಬರ್ 1904.

ನಂ. ರೆ. 2488—ಲೋ. ಸ. 7—04-5, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಮೈಸೂರ ಶೀಮೆಯ ಸರ್ವೆ ವ ಸೆಟಲ್ಮೆಂಟ್ ಕಮ್ಮಿಷನರಾದ ಕರ್ನಲ್ ಜೆ ಪಿ. ಗ್ರಾಂಟ್ ಸಾಹೇಬರಿಗೆ 1904ನೆ ಸೆಪ್ಟಂಬರ್ 20ನೆ ತಾರೀಖಿನಾರಭ್ಯ ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನ ಲಾಗಾಯ್ತು ಹದಿನೈದು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 21ನೆ ಸೆಪ್ಟಂಬರ್ 1904.

ನಂ. ರೆ. 2617—ಲೋ. ರ. 42-04-3, ಅಮಲ್‌ದಾರ್ರುಗಳ ಇದರಡೀ ಕಂಡ ನೇಮಣೂಕೆ ವ ವರ್ಗಾವರ್ಗಿಗಳು ಸರ್ಕಾರ ಕೆಲಸಕ್ಕೋಸ್ಕರ ಹುಕುಂ ಮಾಡಲ್ಪಟ್ಟಿರುತ್ತವೆ. ಅನ್ಯಥ ನಮೂದಿಸಿರುವದು ಹೊರ್ತಾಗಿ ಪ್ರತಿ ಅಮಲೆದಾರ್ರು ತಮ್ಮ ಉದ್ಯೋಗದ ಚಾರ್ಜನ್ನು ತಮ್ಮ ತಾಲ್ಲೂಕು ಶಿರಸ್ತೆದಾರ್ರಿಗೆ ವಹಿಸಿ ತಮ್ಮ ಹೊಸ ಸ್ಥಳಕ್ಕೆ ಸಾವಕಾಶ ಮಾಡದೆ ಹೊರಡತಕ್ಕದ್ದು :—

ಜಂಬರ್ ನಂ.	ಹೆಸರು.	ಎಲ್ಲಿಂದ.	ಎಲ್ಲಿಗೆ.	ಪರಾ.
1	ಮೆ॥ ಬಿ. ಕೇಶವಯ್ಯನವರು ...	ಹೊಸಕೋಟೆಯಿಂದ	ಮೊಳಕಾಲ್‌ಮೂರುವಿಗೆ	
2	,, ಎ. ಎಸ್. ಗುರುರಾಯರು ...	ಕುಣಿಗಲ್‌ನಿಂದ	ಹೊಸಕೋಟೆಗೆ	
3.	,, ಆರ್. ರಾಘವೇಂದ್ರರಾಯರು ..	ಶ್ರೀನಿವಾಸಪುರದಿಂದ	ಕುಣಿಗಲ್‌ಗೆ	
4	,, ಅಬ್ದುಲ್ ಹಕೀಂ, ಬಿ. ಎ., ಯವರು.	ಮೂಡಗೆರೆಯಿಂದ	ಶ್ರೀನಿವಾಸಪುರಕ್ಕೆ	
5	,, ಕೇಶವಾಚಾರ್ರು ...	ಶ್ರೀರಂಗಪಟ್ಟಣದಿಂದ	ಮೂಡಗೆರೆಗೆ	
6	,, ಎ. ಕೃಷ್ಣಸ್ವಾಮ್ಯಯ್ಯಂಗಾರ್, ಬಿ. ಎ., ಯವರು.	ಕೋಲಾರದಿಂದ	ಶ್ರೀರಂಗಪಟ್ಟಣಕ್ಕೆ	
7	,, ಎ. ಮೃತ್ಯುಂಜಯ ಅಯ್ಯರ್, ಬಿ. ಎ., ಯವರು.	..	ಕೋಲಾರಕ್ಕೆ	
8	,, ಟಿ. ವೆಂಕಟರಾಮಯ್ಯನವರು	ಸೀರ್ಯದಿಂದ	ನಂಜನಗೂಡಿಗೆ	
9	,, ಎಸ್. ವೆಂಕಟರಮಣ ಶ್ರೋತ್ರಿ, ಬಿ. ಎ., ಯವರು.	ತೀರ್ಥಹಳ್ಳಿಯಿಂದ	ಸೀರ್ಯಕ್ಕೆ	ಸೆಕ್ರಟೇರಿಯಟ್ಟಿಗೆ ಸೂಪರ್‌ಟೆಂಡೆಂಟರಾಗಿ ತೆಗದುಕೊಂಡ ಮೆ॥ ಸಿ. ವೆಂಕಟರಾಯರಿಗೆ ಬದಲಾಗಿ.
10	,, ಎಸ್. ಗೋಪಾಲಕೃಷ್ಣ ಅಯ್ಯಂಗಾರ್, ಬಿ. ಎ., ಬಿ. ಎಲ್., ಯವರು.	ಗುಂಡ್ಲುಪೇಟೆಯಿಂದ	ನಾಗಮಂಗಲಕ್ಕೆ	
11	,, ಎ. ಕೃಷ್ಣಯ್ಯ ಅರಸಿನವರು ...	ನಾಗಮಂಗಲದಿಂದ	ಗುಂಡ್ಲುಪೇಟೆಗೆ	
12	,, ಸಿ. ಆರ್. ಕೃಷ್ಣರಾಯರು ..	ಬೌರಿಂಗ್‌ಪೇಟೆಯಿಂದ	ತರೀಕೆರೆಗೆ	ಮೆ॥ ಎಸ್. ನಾರಾಯಣರಾಯರಿಗೆ ಚಾರ್ಜು ಒಪ್ಪಿಸಿದ ನಂತರ ಕೆಲಸದ ಮೇಲೆ ಹಾಜರಾಗತಕ್ಕದ್ದು.

ಹುಕುಂ ಬಮೋಜಿಬ್,

ಬಿ. ಕೆ. ವೆಂಕಟವರದಯ್ಯಂಗಾರ್,

ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ.

ಇಸ್ತಿಹಾರ್ನಾಮೆ.

ತಾರೀಖು 15ನೆ ಸೆಪ್ಟಂಬರ್ 1904.

ನಂ. 1024—5496, ಹಾಸನ ಡಿವೀಜನಿನ ಎಗ್ಜಿಕ್ಯೂಟಿವ್ ಇಂಜಿನಿಯರಾದ ಮೆ" ಸಿ. ಎ. ಮಹದೇವಶಾಸ್ತ್ರಿಯವರಿಗೆ ಕಳೆದ ಆಗಸ್ಟು 22ನೆ ತಾರೀಖಿನಾರಭ್ಯ ಆರು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 16ನೆ ಸೆಪ್ಟಂಬರ್ 1904.

ನಂ. 1034—5526, ಮಾಹೆ ಮಜಕೂರು 3ನೆ ಮುಕ್ತಂ 975—5299ನೆ ನಂಬರ್ ಈ ಆಫೀಸ್ ಇಸ್ತಿಹಾರ್ನಾಮೆಯನ್ನು ಬದಲಾಯಿಸಿ, ತುಮಕೂರ ಡಿವೀಜನಿಗೆ ಶೇರಿದ ಅಸಿಸ್ಟೆಂಟ್ ಇಂಜಿನಿಯರ್ ಮೆ" ಎಚ್. ಡಿ. ರೈಸ್ ಸಾಹೇಬರಿಗೆ ಮೈಸೂರ ಸರ್ವಿಸ್ ರೆಗ್ಯುಲೇಷನಗಳ 165 ಎ ನೆ ಆರ್ಟಿಕಲ್ ಅನುಸರಿಸಿ ಅದೇ ಮಾಹೆ 8ನೆ ತಾರೀಖಿನಾರಭ್ಯ ಒಂದು ತಿಂಗಳು ವ ಹದಿನೈದು ದಿನಗಳ ಪ್ರಿವಿಲೇಜ್ ರಜಾ ಮತ್ತು ಅದಕ್ಕನುಸರಿಸಿ ಆರು ತಿಂಗಳುಗಳ ತಲಬಿಲ್ಲದ ಎಕ್ಸ್ಟ್ರಾರ್ಡಿನೇರಿ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,

ಡಬ್ಲ್ಯೂ. ಮೆಕಹರ್ಜ್,

ಪಬ್ಲಿಕ್ ವರ್ಕ್ಸ ಇಲಾಖಾ ಮೈಸೂರು ಗವರ್ನಮೆಂಟ್ ಸೆಕ್ರಿಟರಿ.

ಮಿಲಿಟರಿ.

ಇಸ್ತಿಹಾರ್ ನಾಮೆಗಳು.

ತಾರೀಖು 16ನೆ ಸೆಪ್ಟಂಬರ್ 1904.

ನಂ. 933—5, ಮೈಸೂರ ಸರ್ವಿಸ್ ರೆಗ್ಯುಲೇಷನಗಳ 188ನೆ ಆರ್ಟಿಕಲ್ ಅನುಸರಿಸಿ ಮೈಸೂರ ಸಂಸ್ಥಾನದ ಫೌಜುಗಳ ಚೀಫ್ ಕಮ್ಯಾಂಡೆಂಟರಿಗೆ ಪರಸೊನಲ್ ಅಸಿಸ್ಟೆಂಟರಾದ ಮೆ|| ಆರ್. ಪುಟ್ಟಣ್ಣಾ, ಬಿ. ಎ., ಬಿ. ಎಲ್., ಯವರಿಗೆ 1904ನೆ ಸೆಪ್ಟಂಬರ್ 14ನೆ ತಾರೀಖಿನಾರಭ್ಯ ಅಕ್ಟೋಬರ್ 5ನೆ ತಾರೀಖಿನ ವರಿವಿಗೆ ಇಪ್ಪತ್ತೊಂದು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 16ನೆ ಸೆಪ್ಟಂಬರ್ 1904.

ನಂ. 936, ಇದರಿಂದ ತಿಳಿಯಪಡಿಸುವದೇನಂದರೆ, ಇಂಪೀರಿಯಲ್ ಸರ್ವಿಸ್ ಟ್ರೂಪ್ಸ್ ಪೋರ್ಟ್ ಕೋರಿನ ಹೆಚ್ಚುವರಿ ಟೂಕಣ ತಟ್ಟುಗಳು ವಿಶಿಷ್ಟವೂ ಎರವಲಾಗಿ ಕೊಟ್ಟಿರುವದರಿಂದ, ಐಯಿಂದ ಯಾವವೂ ದೊರೆಯಲಾರವು.

ಹುಕುಂ ಬಮೋಜಿಬ್,

ಆರ್. ಜಿ. ಜೋನ್ಸ್,

ಲೆಫ್ಟಿನೆಂಟ್ ಕರ್ನಲ್, ಮಿಲಿಟರಿ ಅಸಿಸ್ಟೆಂಟ್.

1433

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಘೋಷಿಸಿದ್ದು. [ನಂ. 38.

ಬೆಂಗಳೂರು, ಗುರುವಾರ, ಸೆಪ್ಟೆಂಬರ್ ತಾ|| 22, ಸನ 1904.

IIನ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ಸಂದಲ್ ಹರಾಜ್ ನೋಟಿಫಿಕೇಷನ್.

ತಾರೀಖು 18ನ ಆಗಸ್ಟ್ 1904ನೆ ಇಸವಿ.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ :— ಮೈಸೂರು ಸರಕಾರದ ಶ್ರೀಗಂಧದ ಸಾಲೆಯಾನ ನಡಿಯುತ್ತಿರ್ತ ಹರಾಜು ಈ ಕೆಳಗೆ ನಮೂದಿಸಿರುವ ಕೋಣಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು :—

ಡಿಸ್ಟ್ರಿಕ್ಟ್.	ಕೋಣಿ.	ಹರಾಜು ತಾರೀಖು.		ಸಂದಲ್ ಮರಗಳು ಇಟ್ಟಿರುವ ಕಡೆಯ ಹೆಸರು.	ಷರಾ.
ಮೈಸೂರು ...	ಹುಣಸೂರು ...	1904ನೆ ಇಸವಿ ನವಂಬರ್ ತಾರೀಖು	19	500	
ಡಿಟೋ	ಶ್ರೀರಂಗಪಟ್ಟ	ಡಿಟೋ ಡಿಟೋ	23	240	
ಬೆಂಗಳೂರು ...	ಬೆಂಗಳೂರು ..	ಡಿಟೋ ಡಿಟೋ	26	120	ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.
ಹಾಸನ ...	ಹಾಸನ ..	1904ನೆ ಇಸವಿ ಡಿಸೆಂಬರ್ ತಾರೀಖು	1	200	
ಕಡೂರು ..	ಚಿಕ್ಕಮಗಳೂರು ..	ಡಿಟೋ ಡಿಟೋ	5	200	
ಡಿಟೋ ..	ತರೀಕೆರೆ ..	ಡಿಟೋ ಡಿಟೋ	8	250	
ಶಿವಮೊಗ್ಗ ...	ಶಿವಮೊಗ್ಗ ...	ಡಿಟೋ ಡಿಟೋ	12	440	ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.
ಡಿಟೋ ..	ಸಾಗರ ..	ಡಿಟೋ ಡಿಟೋ	15	175	
ಡಿಟೋ ..	ತೀರ್ಥಹಳ್ಳಿ ..	ಡಿಟೋ ಡಿಟೋ	19	175	ಕಡೂರು ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.

2. ಪ್ರತಿಬಂದು ಕೋಣಿಯಲ್ಲಿಯು ಹರಾಜು ಮಾಡಲ್ಪಡುವ ಸಂದಲ್ ಲಾಟು ಮತ್ತು ಮೊತ್ತ ವಗೈರೆ ತಪಶೀಲು ಐಯಿಂದ ಇದೇ ಸಾಲ್ ಅಕೌಂಟಿನ ಅಖೈರು ವಳಗಾಗಿ ಫಾಯಿಷ ಮಾಡಲ್ಪಡುತ್ತದೆ.

ಎಂ. ಮುತ್ತಣ್ಣ,

ಕನ್‌ಸರ್ವೇಟರ್ ಆಫ್ ಫಾರೆಸ್ಟ್ಸ್ ಇನ್ ಮೈಸೂರು.

ತಾರೀಖು 2ನೆ ಸೆಪ್ಟಂಬರ್ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಇದರಡೀ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಹಿಡುವಳಿ ಇಲ್ಲದ ಆಕಾರ ಕಂಡ ಜಮೀನುಗಳು ಅಡಗಿರುವ ಸರ್ಕಾರಿ ಖಂಜರು ಜಮೀನುಗಳಲ್ಲಿಯೂ ಅವೃತವಾಹಲ್ ಮತ್ತು ಪಬ್ಲಿಕ್ ಕ್ಯಾಟಲ್ ಕಾವಲುಗಳಲ್ಲಿಯೂ ಗ್ರಾಮ ಬೇಲಿಗಳ ಅವರಾಯಿ ಮತ್ತು ಅಮರಾಯಿ ಬೇಲಿಗಳಲ್ಲಿಯೂ ದೊರಯುವ ಪಸಾರೆ ಹುಟ್ಟುವಳಿಗಳನ್ನು 1904ನೆ ಇಸವಿ ಅಕ್ಟೋಬರು 1ನೆ ತಾರೀಖು ಲಾಗಾಯಿತು 1905ನೆ ಇಸವಿ ಸೆಪ್ಟಂಬರು 30ನೆ ತಾರೀಖಿನ ವರಗೆ ಜಪ್ತಾಯಿಸುವ ಹಕ್ಕುದಾರಿಯು ಬಹಿರಂಗವಾದ ಹರಾಜು ಮೂಲಕ ತಾಲ್ಲೂಕುವಾರಾಗಿ ಈ ಕೆಳಗೆ ವಿವರಿಸಿರುವ ಆಫಿಸರವರಿಂದ ಈ ಕೆಳಗ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ವಿಕ್ರಯಿಸಲ್ಪಡುವದು :—

ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡಿಸ ತಕ್ಕ ಆಫಿಸರು.
ಯಡತೊರೆ	21—9—1904	ಅಯ್ಯಂಗಾರ ತಾಲ್ಲೂಕು ಹಡಿನಪೇಟೆ	ಗೆ
ಹುಣಸೂರು	22—9—1904		ಅಮಲದಾರರು
ಹೆಗ್ಗಡದೇವನಕೋಟೆ	24—9—1904		
ಗುಂಡ್ಲುಪೇಟೆ	21—9—1904	ಚಾಮರಾಜನಗರ ತಾಲ್ಲೂಕು ಕಬಿನಿಪೇಟೆ	
ಚಾಮರಾಜನಗರ	22—9—1904		
ನಂಜನಗೂಡು	26—9—1904		
ಟಿ. ನರಸೀಪುರ	23—9—1904		
ಮೈಸೂರು	21—9—1904		
ಮಳವಳ್ಳಿ	21—9—1904		
ಮಂಡ್ಯ	24—9—1904		
ಶ್ರೀರಂಗಪಟ್ಟಣ	26—9—1904		
ನಾಗಮಂಗಲ	28—9—1904		
ಕೃಷ್ಣರಾಜಪೇಟೆ	30—9—1904		

ಹುಟ್ಟುವಳಿ ತಪಶೀಲು.

1. ತಾರೇಕಾಯಿ, 2. ಶೀಗೇಕಾಯಿ, 3. ಅರಟವಾಳದಕಾಯಿ, 4. ದಿಂಡಿಗದ ಗೋಂದು, 5. ಕಾಡು ಅರಸಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಲೂರಂಗು, 9. ಪತಂಗ, 10. ಮಡ್ಡಿ, 11. ಚಿಲ್ಲದಬೀಜ, 12. ಹಾಲುಮಡ್ಡಿ, 13. ಚಗಚೆಬೀಜ, 14. ಹೊಂಗೇಬೀಜ, 15. ಗೇರುಬೀಜ, 16. ಸಾರಗದಕೊಂಬು, 17. ಗುಗ್ಗಳ, 18. ಅಳಲೇಕಾಯಿ, 19. ಬೇಲದಹಣ್ಣು, 20. ಅರಗು, (ನಾರಾಯಣದುರ್ಗ ಸ್ಟೇಟ್ ಫಾರೆಸ್ಟು ವಿನಹಾ) 21. ಶೀತಾಫಲದಹಣ್ಣು, 22. ಬೆಂಡೆನಾರು; ಈ ಕೆಳಗೆ ವಿವರಿಸಿರುವ ಸ್ಥಳಗಳ ಅಳಲೇಕಾಯಿ ಶೇರಿಯಿಲ್ಲಾ :—

ನಾಗಮಂಗಲದ ತಾಲ್ಲೂಕು ಬಾಬತು :—1. ಗರುಡಾಪುರ, 2. ಗರಕಹಳ್ಳಿ, 3. ಬಾಲನಹಳ್ಳಿ, 4. ಕೊರೆನಗುಂಡಿ, 5. ಇಂಡಸಹಳ್ಳಿ, 6. ಮಾರಹಳ್ಳಿ, 7. ಬೊಗಾದಿ.

ಶ್ರೀರಂಗಪಟ್ಟಣದ ತಾಲ್ಲೂಕು ಬಾಬತು :—1. ಗುಜಗಾನಹಳ್ಳಿ, 2. ಸಿಂಗಾಪುರ, 3. ಪಗಡೆಕಲ್ಲಹಳ್ಳಿ, 4. ಜೋಡಿ ರಾಂಪುರ, 5. ಕೊಂಡಹಳ್ಳಿ, 6. ನಾರಣಾಪುರ, 7. ಮಡನಹಳ್ಳಿ, 8. ಕಲ್ಲಕೆರೆ, 9. ಮೇಲುಕೋಟೆ, 10. ಕನಗಾನಹಳ್ಳಿ, 11. ತಾಳಕೆರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಾಬತು :—1. ಹಾಲಗೆರೆ, 2. ಹೊಸಹಳ್ಳಿ, 3. ಸಿಂಗಾಪುರ, 4. ಚಟಂಗೆರೆ, 5. ಕಂಡಹಳ್ಳಿ, 6. ಸಿಂಗಾಪುರ, 7. ವಸಂತಪುರ, 8 ವಾದಿಗರಹೊಸಹಳ್ಳಿ, 9. ಚಾಮಲಾಪುರ, 10. ಸಿಂದಘಟ್ಟ, 11. ಕೊಡಗಹಳ್ಳಿ, 12. ಚಾಗಿನಕೆರೆ, 13. ಕೊಪ್ಪನಹಳ್ಳಿ.

2 ಚಡ ದರಖಾಸ್ತುದಾರನು ಹರಾಜು ಅವನ ಹೆಸರಿಗೆ ಮಂಜೂರಾದ ಕೂಡ್ಲೆ ಇಜಾರೆ ಮೊಬಲಗು ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ತೇವಣಿ ಕಟ್ಟತಕ್ಕದ್ದು. ಅಲ್ಲದೆ ಕಂಟ್ರಾಕ್ಟು ಷರತ್ತು ಮೇರೆ ನಡಿಯಲು ತಕ್ಕ ಖಾತರಿ ಜಾಮೀನು ಸಹ ಕೊಡಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಕೂಡ್ಲೆ ಬಾಬು ಎಡನೇ ದಫ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ. ಮತ್ತು ಸದರೀ ಲುಕ್ಸಾನ್ ರೆವಿನ್ಯೂ ಡಿಮ್ಯಾಂಡಿನಂತೆ ವಸೂಲು ಮಾಡಿಕೊಳ್ಳಲ್ಪಡುತ್ತೆ.

3. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು 1904ನೆ ಅಕ್ಟೋಬರ್ 1ರಲ್ಲಿ ಬಾಬು ರೂಢಿಸಿಕೊಳ್ಳಲು ಪ್ರವೇಶಿಸತಕ್ಕದ್ದು ಮತ್ತು ಕಂಟ್ರಾಕ್ಟು ಮೊಬಲಗು ಪೈಕಿ ಉಳಿದ ಮೊಬಲಗನ್ನು ಮತ್ತು ಕಂಟ್ರಾಕ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ ಮೊಬಲಗನ್ನು ಸಹ ಮೂರು ಸಮವಾದ ಖಿಸ್ತುಗಳಲ್ಲಿ ಅಂದರೆ:—

1904ನೆ ಇಸವಿ ಡಿಸೆಂಬರ್ 31ನೆ ತಾರೀಖು.

1905ನೆ ಇಸವಿ ಮಾರ್ಚ 31ನೆ ತಾರೀಖು.

1905ನೆ ಇಸವಿ ಜೂನ 1ನೆ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು. ಕ್ಲಿಪ್ತವಾದ ತಾರೀಖುಗಳಲ್ಲಿ ಖಿಸ್ತುಗಳನ್ನು ಪಾವತಿ ಮಾಡದೆ ಇದ್ದಲ್ಲಿ ಶೇಕಡಾ ಸಾಲಿಯಾನಾ 6 ರೂಪಾಯಿಮೇರೆ ಬಡ್ಡಿ ಕಟ್ಟಲ್ಪಡುತ್ತೆ.

4. ಕಂಟ್ರಾಕ್ಟುದಾರನು ಯಾವ ಒಂದು ಖಿಸ್ತನ್ನು ಪಾವತಿ ಮಾಡದೆ ತಪ್ಪಿದರೂ ಅಥವಾ ಪಾವತಿ ಮಾಡಲು ಸಾವಕಾಶ ಮಾಡಿದರೂ 1905ನೆ ಜೂನ ಆಖೈರ ವಂಗೆ ಉಳಿದಿರುವ ಕಾಲದಲ್ಲಿ ಬಾಬು ಜಪ್ತಿಮಾಡುವ ಹಕ್ಕು ಹರಾಜು ಮಾಡಲ್ಪಡುವದು. ಮತ್ತು ಅವನ ಡಿಪೋಜಿಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದು. ಪರಂತು ತಪ್ಪಿಹೋದ ಕಂಟ್ರಾಕ್ಟುದಾರನು ಮತ್ತು ಜಾಮೀನದಾರನು ಸಹ ಅದರಿಂದ ಉಂಟಾಗುವ ನಷ್ಟಕ್ಕೆ ಗುರಿಮಾಡಲ್ಪಡುವರು.

5. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರಿಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಂದಾರರ ಸ್ಥಿರಪಟ್ಟ ಹಕ್ಕುದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ.

8. ಹರಾಜು, ಮೈಸೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷ್ನರವರ ಮಂಜೂರಾತಿಗೆ ಒಳಪಟ್ಟದ್ದಾಗಿದೆ.

9. ಕಂಟ್ರಾಕ್ಟುದಾರನ ಅಥವಾ ಅವನ ಕಡೆ ಕೂಲಿ ಜನಗಳ ಅಜಾಗ್ರತೆಯಿಂದ ಜಂಗಲಿಗೆ ಬೀಳುವ ಬೆಂಕಿ ಅಪಾಯದಿಂದ ಉಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನು ಜವಾಬುದಾರನಾಗಿರುತ್ತಾನೆ.

ಇಸ್ತಿಹಾರ್.

1904ನೆ ಇಸವಿ ಸೆಪ್ಟೆಂಬರ್ ತಾರೀಖು 15 ರಲ್ಲು.

ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ—ಇದರಡಿ ಕಂಡ ಮೈಸೂರು ಡಿಸ್ಟ್ರಿಕ್ಟು ಡಿಪೋಗಳಲ್ಲಿ ಅದರ ಬಾಜೂದಲ್ಲಿ ನಮೂದಿಸುವ ತಾರೀಖುಗಳಲ್ಲಿ ಚೌಬೀನೆ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಬೆಳಿಗ್ಯೆ 8 ಘಂಟೆಗೆ ಹರಾಜು ಸುರುವಾಗುತ್ತೆ.

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ಸುಮಾರು ಚೌಬೀನೆ ಮೊತ್ತ.											
			ಸಾಗ್ವಾನಿ ನಾಟೂ ಮತ್ತು ಜಂತೆ.		ಮನ್ನಾ ಜಾತಿ ನಾಟೂ ಮತ್ತು ಜಂತೆ.		ಕಾಡುನಾಟೂ ಮತ್ತು ಜಂತೆ.		ಸಾಗವಾನಿ ಸರಾ.		ಮನ್ನಾ ಜಾತಿ ಸರಾ.		ಕಾಡಸರಾ.	
			ಅದದು	ಸಲೆ ಅಡಿ.	ಅದದು	ಸಲೆ ಅಡಿ.	ಅದದು	ಸಲೆ ಅಡಿ.	ಅದದು	ಸಲೆ ಅಡಿ.	ಅದದು	ಸಲೆ ಅಡಿ.	ಅದದು	ಸಲೆ ಅಡಿ
1	ಮೈಸೂರು ವುಡಿಯಾರ್ಡು.	3-10-04	224	1728	293	4605	43	679	282	319	....	....	...	..
2	ನಂಜನಗೂಡು ಡಿಪೋ.	6-10-04	657	2620	993	8266	35	123	55	51	18	20	2	4

ಷರತ್ತು:—1895ನೆ ಇಸವಿ ಮಾರ್ಚ 10ನೆ ಮುಕ್ಕಂ 1529—R. F. 155—92ನೆ ನಂಬರು ಇಸ್ತಿಹಾರ್ನಾಮೆಯನ್ನ 25—4—1895ನೆ ಮುಕ್ಕಂ 15ನೆ ನಂಬರು ಮೈಸೂರ ಗೆಜೆಟ್ಟಿನಲ್ಲಿ ಫಾಯಿಷ್ ಮಾಡಿರುತ್ತೆ.

ನೋಟಿಸ.

ತಾರೀಖು 14ನೆ ಸೆಪ್ಟೆಂಬರ್ 1904.

ಮೈಸೂರು ಡಿಸ್ಟ್ರಿಕ್ಟ ತಾಲ್ಲೂಕುಗಳ ಸ್ಟೇಟ್ ಮತ್ತು ಡಿಸ್ಟ್ರಿಕ್ಟ ಫಾರೆಸ್ಟುಗಳ ಪಸಾರೆ ಜೆನತಿ ಜವಾಬಣಿ ಹಕ್ಕನ್ನು ಆ ಯಾಯ ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರು ಮತ್ತು ಫಾರೆಸ್ಟ್ ರೇಂಜ ಆಫಿಸರವರು ಸಹಾ ಕೇರಿ ಹರಾಜ ಮಾಡಿಸುತ್ತಾರೆಂ ಬ ವಿಷಯದಲ್ಲಿ 8—9—1904ನೆ ಮಕ್ಕಂ 36ನೆ ನಂ. ಮೈಸೂರು ಗೆಜೆಟನ IIನೆ ಭಾಗದ 519ನೆ ಪುಟದಲ್ಲಿ ಪ್ರಾಯಿಷ್ ಮಾ ಡಿರುವ 2—9—1904ನೆ ತಾರೀಖಿನ ನೋಟಿಫಿಕೇಷನನ್ನು ನೋಡಿ.

ಸಿ. ಅಪ್ಪಸ್ವಾಮಿ,
ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ, ಮೈಸೂರು ಡಿಸ್ಟ್ರಿಕ್ಟ.

ಪ್ರಕಟನೆ.

ತಾರೀಖು 14ನೆ ಸಪ್ಟೆಂಬರ 1904.

ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಇದರಡಿ ಕಂಡ ಫಾರೆಸ್ಟುಗಳಿಂದ ಅವುಗಳ ಬಾಜೂದಲ್ಲಿ ತೋರಿಸಲ್ಪಡುವ ಡಿಪೋಗಳಿಗೆ ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರಿಂದ ನಿಷ್ಕರ್ಷಿಸಲ್ಪಡಬಹುದಾದ ಮಾಹೆವಾರಿ ಚೌಬೀನವನ್ನು ಕಡದು ತಯಾರಿಮಾಡಿ ಗಾಡಿಗಳ ಮೇಲೆ ಸಾಗಿಸು ವದಕ್ಕೆ ದರಖಾಸ್ತುಗಳು ಅಪೇಕ್ಷಿಸಲ್ಪಟ್ಟಿರುತ್ತೆ :—

ತಾಲ್ಲೂಕು.	ಚೌಬೀನವನ್ನು ಕಡಿಯಬೇಕಾದ ಫಾರೆಸ್ಟ.	ಚೌಬೀನ ಇಡಬೇಕಾದ ಡಿಪೋ.	ಚೌಬೀನ ತರಹ.	ಸುಮಾರು ಫಾಸಲೆ ಮೈಲಿ.		ಷರಾ.
				ಜಂಗಲ್ ನಲ್ಲಿ.	ಹೈರೋಡ್.	
ಶಿವಮೊಗ್ಗ ..	ಸಕ್ರೆಬೈಲ.	ಶಿವಮೊಗ್ಗ ರೈಲ್ವೆ ಡಿಪೋ.	ಸಾಗವಾನಿ. ಬೀಟೆ. ಮತ್ತಿ. ಹುನಾಲು. ನೇರ್. ಜಂಪೆ. ತಡಸಲು. ದಿಂಡಿಗ. ಬೆಲಗ.	20,000	5	10	ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರವರ ಅಪ್ಪಣೆ ಅನುಸರಿಸಿ ನಾಟುವನ್ನು ದುಂಡಾಗಿ ಆಗಲಿ ಅಥವಾ ಚೌಮೂಲೆ ಶುದ್ಧವಾಗಿ ಆಗಲಿ ತಯಾರಿ ಮಾಡಬೇಕು. ದಿಂಡಿಗದ ಚೌಬೀನೆ ತೊಪ್ಪೆಯನ್ನು ತೆಗಿಯುವದು ಅವಶ್ಯಕ ವಿಲ್ಲ. ಆದರೆ ತಡಸಲು ಮತ್ತು ಜಂಪೆ ಬೆಲಗುಗಳ ತೊಪ್ಪೆಯನ್ನು ತೆಗಿದಾಬೇಕು.
ಡಿಟೋ	ಶಂಕ.	ಡಿಟೋ	ಸಾಗವಾನಿ. ಬೀಟೆ. ಮತ್ತಿ. ಹುನಾಲು. ನೇರ್. ಜಂಪೆ. ತಡಸಲು. ಬೆಲಗ.	1,00,000 ಈ ಪೈಕಿ 50,000 ಸಲೆ ಅಡಿ ಷರತ ಹೆಡ್ಡಿನಲ್ಲಿ ನಮೂದಿರುವ ಮೇರಿಗೆ ಲಧ್ಯೆ ಮಾಡಬೇಕಾದ್ದು ಮಟ್ಟಿಗೆ.	18	...	ಡಿಟೋ ಮೇರಿಗೆ ತಯಾರ್ ಮಾಡಬೇಕು. (1) ಸುಮಾರು 50,000 ಸಲೆ ಅಡಿ ಚೌಬೀನೆ ತಯಾರಾದ್ದು ಹಾಜರಿದೆ. ಇದನ್ನು ಲಧ್ಯೆ ಮಾಡಬೇಕಾದ್ದು ಮಟ್ಟಿಗೆ ಪ್ರತ್ಯೇಕವಾಗಿ ದರಖಾಸ್ತುಗಳನ್ನು ಕಳುಹಿಸಬೇಕು. (2) ಬಾಕಿ 50,000 ಸಲೆ ಅಡಿಯನ್ನು ಕತ್ರಾಯಿಶಿ ತಯಾರಿಯಿಂದ ಲಧ್ಯೆ ಮಾಡಲು ದರಖಾಸ್ತುಗಳನ್ನು ಅಪೇಕ್ಷಿಸಿರುತ್ತೆ. ಎರಡನೆ ಐಟಂ ಸಮ್ಬಂಧ ಕೂಡುವ ದರಖಾಸ್ತಿದಾರ್ರುಗಳು ತಡಸಲ ಜಂಪೆ ಬೆಲಗುಗಳನ್ನು ದರಖಾಸ್ತಿನಲ್ಲಿ ನಮೂದಿಸಬೇಕು. ಇವುಗಳ ತೊಪ್ಪೆಯನ್ನು ತೆಗಿಯಲು ಬೇರೆ ದರ ಕಾಣಿಸಬೇಕು. ಇಲ್ಲವಾದರೆ ನಾಟ ತಯಾರಿಗೆ ಮಾತ್ರಬಂದ ದರಖಾಸ್ತಗಳನ್ನು ಅಂಗೀಕರಿಸುವದಿಲ್ಲ.

ತಾಲ್ಲೂಕು.	ಚೌಬೀನ ಕೆಲಸದ ಹೆಸರು.	ಚೌಬೀನ ಆಯೋಗಿಗೆ ಅರ್ಜಿ ಚೌಬೀನ ಆದೇಶಾದ ಸ್ಥಳ.	ಚೌಬೀನ ತರಹೆ.	ಕಾಲಾವಧಿಯ ಸರಾಸರಿಯಿಂದ ಲೆಕ್ಕ ಚೌಬೀನ ಬೇಕಾದ ಚೌಬೀನ.	ಸುಮಾರು ಫಾಸಲೆ ಮೈಲಿ.		ಷರಾ.
					ಜಂಗಲ್ ನಲ್ಲಿ.	ಹೈರೋಡ್.	
ಚನ್ನಗಿರಿ ...	ಚನ್ನಗಿರಿ ವರ್ಕಿಂಗ್ ಸರ್ಕಲ್ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳು.	ಬೆಂಕಿಪುರ.	ಸಾಗವಾನಿ ಸೆಲಗು	5,000	4	12	ತೊಪ್ಪೆಯನ್ನ ತೆಗಿಯಬೇಕು. ಗಂಟುಗಳನ್ನ ಸಫೈ ಮಾಡುವದು, ಎರಡು ತುದಿಗಳನ್ನ ಸಫೈ ಆಗಿರುವಂತೆ ಕತ್ತರಿಸಬೇಕು.
ಚನ್ನಗಿರಿ ಮತ್ತು ಶಿವಮೊಗ್ಗ.	ಗಂಗೂರು ವರ್ಕಿಂಗ್ ಸರ್ಕಲ್ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳು.	ಡಿಟೋ	ಡಿಟೋ	3,000	4	9	
ಡಿಟೋ ..	ಉಬ್ರಾಣಿ ವರ್ಕಿಂಗ್ ಸರ್ಕಲ್ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳು.	ಡಿಟೋ	ಡಿಟೋ	6,000	14	2	
ಡಿಟೋ ..	ಡಿಟೋ	ಸಿವನೆ.	ಡಿಟೋ	6,000	16		
ಶಿವಮೊಗ್ಗ ಮತ್ತು ತರೀಕೆರೆ	ಹಾದಿಕೆರೆ ವರ್ಕಿಂಗ್ ಸರ್ಕಲ್.	ತರೀಕೆರೆ.	ಡಿಟೋ	8,000	13		
ಡಿಟೋ ..	ಡಿಟೋ	ಸಿವನೆ.	ಡಿಟೋ	1,000	15		

(2) ತಮೂಂ ದರಖಾಸ್ತುಗಳು "ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಚೌಬೀನೆ ಕತ್ರಾಯಿಶಿ ತಯಾರಿಯಿಂದ ಲದ್ದೆ ಮಾಡುವದಕ್ಕೆ ದರಖಾಸ್ತು" ಎಂತ ಮೇಲೆ ವಿಳಾಸ ಬರದು ಮೊಹರ್ ಮಾಡಿ ರಿಜಿಸ್ಟರ್ ಮೂಲಕ ರವಾನಿಸಬೇಕು. ದರಖಾಸ್ತು ಜೊತೆಯಲ್ಲಿ ದರಖಾಸ್ತು ಮಾಡಲ್ಪಡುವ ಪ್ರತಿ ಒಂದು ಫಾರೆಸ್ಟಿಗೂ 50 ರೂಪಾಯಿ ಜೆಲೆವುಳ್ಳ ಕರೆನ್ಸಿ ನೋಟುಗಳಿ ಯಾ ಪ್ರೊ ನೋಟುಗಳಿ ರವಾನಿಸಬೇಕು. ಮಂಜೂರ ಮಾಡಲ್ಪಡದೆ ಇರುವ ದರಖಾಸ್ತುದಾರನ ಬಾಬತು ನೋಟುಗಳು ವಾಪಸ್ ಮಾಡಲ್ಪಡುತ್ತವೆ.

(3) ದರಖಾಸ್ತುಗಳು ಶಿವಮೊಗ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ 1904ನೆ ಇಸವಿ ಅಕ್ಟೋಬರ್ ತಾರೀಖು 15ನೆ ತಾರೀಖಿನ ವರಿಗೆ ಅಂಗೀಕರಿಸಲ್ಪಡುವದು.

(4) ದರಖಾಸ್ತುದಾರು ತಾವು ಒಪ್ಪಿಕೊಳ್ಳುವ ಕಮ್ಮಿ ದರವನ್ನ ಪ್ರತಿ ಒಂದು ಫಾರೆಸ್ಟಿಗೂ ಮತ್ತು ಡಿಪೋಕ್ಕು ಪ್ರತ್ಯೇಕವಾಗಿ ನಮೂದಿಸತಕ್ಕದ್ದು ಚೌಬೀನೆಗಳಿಗೆ ಸಲೆ ಅಡಿ 1ಕ್ಕೆ ಇಷ್ಟೆಂದು ನಮೂದಿಸಬೇಕು.

(5) ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರು ಕಮ್ಮಿ ದರದ ಅಥವಾ ಇತರ ಯಾವ ದರಖಾಸ್ತುಗಳನ್ನು ಅಂಗೀಕರಿಸುವದಕ್ಕೆ ಬದ್ಧರಾಗಿರುವದಿಲ್ಲ. ಮತ್ತು ಅಂಥ ಅಂಗೀಕಾರವು ಫಾರೆಸ್ಟ್ ಕನ್‌ಸರ್ವೇಟರಿ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರುತ್ತೆ.

(6) ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ತನ್ನ ಡಿಪಾಜಿಟ್ಟು ಹಣವನ್ನ ಪ್ರತಿ ಒಂದು ಫಾರೆಸ್ಟಿಗೆ 200 ರೂಪಾಯಿಗೆ ಭರ್ತಿ ಮಾಡಬೇಕು. ಮತ್ತು ಅವನ ದರಖಾಸ್ತನ್ನ ಮಂಜೂರ ಮಾಡಿದ್ದನ್ನ ತಿಳಿಸಿದ ತಾರೀಖು ಲಾಗಾಯಿತು ಒಂದು ವಾರದಲ್ಲಿ ಕಂಟ್ರಾಕ್ಟು ಷರತ್ತುಗಳ ಮೇರೆ ಸರಿಯಾಗಿ ನಡದುಕೊಳ್ಳತಕ್ಕದ್ದೆಂತ್ಹ ಒಂದು ಕರಾರು ಬರದು ಕೊಡಬೇಕು. ದರಖಾಸ್ತು ಮಾಡಲು ಇಚ್ಛೆಯುಳ್ಳವರು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರವರಿಗೆ ಅಪ್ಲಿಕೇಷನ್ ಕೊಟ್ಟರೆ ಕರಾರು ನಕಲು ಕೊಡಲ್ಪಡುತ್ತೆ.

ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಮೇಲಿನ ಪ್ಯಾರಾದಲ್ಲಿ ನಮೂದಿರುವ ಷರತ್ತುಗಳ ಮೇರೆ ನಡಿಯದೆ ಅಪ್ಲಿಹೋದರೆ ಅವನ ಕಂಟ್ರಾಕ್ಟು ರದ್ದುಮಾಡಿ ದುಸರ ಕಂಟ್ರಾಕ್ಟು ಕೊಡಲ್ಪಡುತ್ತೆ. ಆದರಿಂದ ಉಂಟಾಗುವ ನಷ್ಟಕ್ಕೆ ಅವಲ್ ಕಂಟ್ರಾಕ್ಟುದಾರನನ್ನು ಗುರಿಪಡಿಸುವದಲ್ಲದೆ ಅವನಿಂದ ಇಡಲ್ಪಟ್ಟ ಇರುವ ಡಿಪಾಜಿಟ್ಟು ಮೊಲಗನ್ನ ಸರಕಾರಕ್ಕೆ ದಂಡವಾಗಿ ಸೇರಿಸಿಕೊಳ್ಳುತ್ತೆ.

(7) 500 ನಾಟಗಳಿಗಿಂತ ಕಮ್ಮಿಯಾಗಿ ಜವಾಬಣಿ ಮಾಡಲು ಕೊಡುವ ದರಖಾಸ್ತುಗಳನ್ನ ಅಂಗೀಕರಿಸುವದಿಲ್ಲ. ಕಂಟ್ರಾಕ್ಟುದಾರುಗಳು ಈ ಮೊತ್ತಕ್ಕೆ ಮೇಲ್ಪಟ್ಟ ಚೌಬೀನೆಯನ್ನ ಜವಾಯಿಸಲು ದರಖಾಸ್ತುಗಳನ್ನ ಕೊಡಲು ಸ್ವತಂತ್ರರಾಗಿದ್ದಾರೆ. ಅಂದರೆ ಕತ್ರಾಯಿಶಿ ತಯಾರಿಯಿಂದ ಲದ್ದೆ ಮಾಡುವದಕ್ಕೆ ಮತ್ತು ಲದ್ದು ಮಾಡುವದಕ್ಕೆ ಬೆಟ್ಟಿಗೆ ಬೇರೆಬೇರೆ ದರ ನಮೂದಿಸಬೇಕು.

ಜೆ. ಮಾಟ್ಟೈರೋ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ.

ಸ್ಥಿರಸ್ವತ್ತಿನ ಹರಾಜ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧಪತ್ರಿಕೆ.

ತಾರೀಖು 1ನೆ ಸಪ್ಟೆಂಬರ 1904.

1. ಕಂದಾಯದ ಬಾಕೀದಾರರಾದ ಜೋಡಿ ವೀರಶೆಟ್ಟಿಹಳ್ಳಿ ಗ್ರಾಮದ, ನರಸರಾಮಯ್ಯ ವಗೈರೇರಿಂದ ಬರಬೇಕಾದ ಜಮೀನ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ ಮುಳಬಾಗಲು ತಾಲ್ಲೂಕು ಕಛೇರಿದುಲ್ಲಿ 1904ನೆ ಇಸವಿ ಅಕ್ಟೋಬರು ಮಾಹೆ 31ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜ ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903-04ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ವಾರಿಗೆ ರೂಪಾಯಿ 18—8—1 ಆಗಿರುತ್ತೆ.

3. ಹರಾಜ ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಇದು ಜಾತಾ ಹರಾಜ ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊಬಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟರು ಯಾ ಮುಖ್ತಾರೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುಖ್ತಾರೀಕರಾಗಿ ಸವಾಲ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಅತನ ತರಫಿನವನಾಗಿ ಪ್ರಾರ್ಥಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜ ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟು ಕೂಡಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರಿ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈ ಮೊಹರಿ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನಮೆಂಟುವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮೀಷನರವರಿಗೆ ಅಪ್ಪೀಲ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟುವರಿಗೆ ಅಪ್ಪೀಲ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಿನ ಕಿಮ್ಮತ್ತು.	ಜಮೀನು. ಸರ್ವೆ ನಂಬರಿ ಜಮೀನಿನ ಹೆಸರು.	ಮಿಸಲ್ ನಂ. ಹಾಗೂ ಖಾತಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಅಕಾರ. ರೂ. ಆ. ಪೈ.	ಸದರಿ ಹರಾಜ ಎರಡೂಕಾಲ ಸೇರಿದ ಸೈ ಮೊಹರಿನ ಸಹಿತವಾದ ಬಾಕೀ ಮೊಬಲಗು ರೂ.	ಆ.	ಪೈ.	ಕೈಫಿಯತ.
ಮುಳಬಾಗಲು	ಅಡಗಲ	ಜೋಡಿ ವೀರಶೆಟ್ಟಿಹಳ್ಳಿ	ನರಸರಾಮಯ್ಯ ವಗೈರೆ	..	...	...	ಪಾಂಬೋಕು	42	34	192 2 0	17	8	1	ಶೋಭಕ್ಕತು
							ಖುಷ್ಕಿ	142	13		1	0	0	ಪ್ರೊಸೆಸ್ ಫೀ
							ತರಿ	12	28					
							ಬಾಗಾಯತು.	4	26					
								202	21		18	8	1	

ಚಕ್ಕುಬಂದಿ.

ಪೂರ್ವಕ್ಕೆ—ಅಂಗೊಂಡಹಳ್ಳಿ ಸರಹದ್ದು.
ಪಶ್ಚಿಮಕ್ಕೆ—ನಾಗಸಂದ್ರ ಸರಹದ್ದು.
ಉತ್ತರಕ್ಕೆ—ಬಂಡಹಳ್ಳಿ ಸರಹದ್ದು.
ದಕ್ಷಿಣಕ್ಕೆ—ಕುರುಬರಹಳ್ಳಿ ಸರಹದ್ದು.
(ಪೂರಾ ಗ್ರಾಮ ಜಾರೀಲಿ ಇರುವ ಚಿಲ್ಲರೆ ಇನಾಂತಿ ವಿನಹ)

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 7ನೆ ಸೆಪ್ಟೆಂಬರ್ 1904.

1. ಕಂದಾಯದ ಬಾಕೀದಾರರಾದ ಖಾಯಂಗುತ್ತು ಬೈರಸಂದ್ರದ ಗುರುರಾಯಾಚಾರ್ರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ಅಕ್ಟೋಬರ್ ಮಾಹೆ 31ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—04ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 77—7—1 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತೀ ಮಾಡಲ್ಪಡದೇ ಹೋದ್ಯಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟು ಕೂಡಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿದೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು ;—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಿನ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಷುಷ್ಕ, ತರಿ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ. ಎ.	ಜಮೀನು. ವಿಸ್ತೀರ್ಣ. ಗು.	ಜಮೀನು. ಆಕಾರ. ರೂ.	ಜಮೀನು. ಆಕಾರ. ಆ.	ಜಮೀನು. ಆಕಾರ. ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ.	ಆ.	ಪೈ.	
				ರೂ. ಆ. ಪೈ.												
ಮಾಲೂರು.	ನರಸಾಪುರ.	ಖಾಯಂಗುತ್ತು ಬೈರಸಂದ್ರ.	ಗುರುರಾಯಾಚಾರ್ರು.	..	....	..	ಪರಂಪೋಕು	66	6	2	0	0				
							ಖುಷ್ಕಿ ...	114	16	86	8	0	76	7	1	ಕೋಭಕೃತು.
							ತರಿ ...	28	31	56	12	0	1	0	0	ಪ್ರೊಸೆಸ್ ಫೀ.
							ಬಾಗಾಯತು	5	1	24	0	0				
								214	14	169	4	0	77	7	1	

ಚಕ್ಕುಬಂದಿ.

ಪೂರ್ವಕ್ಕೆ—ಜೋಡಿ ಬೆಳ್ಳೂರು ಸರಹದ್ದು.
ಪಶ್ಚಿಮಕ್ಕೆ—ಚಾಕರಸನಹಳ್ಳಿ ಸರಹದ್ದು.
ಉತ್ತರಕ್ಕೆ—ಸೊಂನೇನಹಳ್ಳಿ ಸರಹದ್ದು.
ದಕ್ಷಿಣಕ್ಕೆ—ಜೋಡಿ ಬೆಳ್ಳೂರು.

(ಪೂರಾಗ್ರಾಮ.)

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 7ನೆ ಸೆಪ್ಟೆಂಬರ್ 1904.

1. ಕಂದಾಯದ ಬಾಕೀದಾರರಾದ ಕುಮ್ಮರಕುಂಟೆ ಗ್ರಾಮದ ಕೃಷ್ಣರಾವು ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಮುಳಬಾಗಲು ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ಅಕ್ಟೋಬರ್ ಮಾಹೆ 31ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಪ್ತಿದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903ನೆ-04 ಸಾಲಿಗೆ * ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 18—12—0 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಕಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಜೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಗೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುಖ್ತಾರೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುಖ್ತಾರೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಏಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಅತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರಿ ಮಾಡಲ್ಪಟ್ಟು ಡೆಪ್ಯೂಟಿ ಕಮೀಷನರವರಿಂದ ಸೈನ್ ಮೊಹರಿ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಶಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟಿರುವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:

| ಸ್ವತ್ತಿನ ತಪ್ಸೀಲ. | | |

ತುಮಕೂರು ಡಿಸ್ಟ್ರಿಕ್ಟ್.

ಇನ್ಸ್ಟ್ರುಮೆಂಟ್ ಹಾರ್ನಾಮೊ.

ತಾರೀಖು 25ನೆ ಜುಲೈ 1904.

ಇದರಿಂದ ತಿಳಿಯಪಡಿಸುವುದೇನಂದರೆ, ಈ ಕೆಳಗೆ ವಿವರಿಸಿರುವ ರಿಜಿಸ್ಟ್ರಿದ ದಸ್ತೈವಜುಗಳು ಎರಡು ವರುಷಗಳಿಗೆ ಮೇಲ್ಪಟ್ಟು ಈ ಕೆಳಗೆ ನಮೂದಾಗುವ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ವಾರಸುದಾರರು ಹಾಜರಾಗಿ ವಾಪಸು ಪಡಿಯದೆ ನಿಂತಿರುತ್ತವೆ. ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಸದರಿ ದಸ್ತೈವಜು ಹಾಜರ್ಮಾಡಿದವರಾಗಲಿ ಅವರ ಪ್ರತಿನಿಧಿಗಳಾಗಲಿ ಅಥವಾ ದಸ್ತೈವಜುಗಳಿಗೆ ಬಾಧ್ಯತವುಳ್ಳವರಾಗಲಿ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಹಾಜರಾಗಿ ತಮ್ಮ ದಸ್ತೈವಜುಗಳನ್ನು ವಾಪಸುಪಡಿಯಬೇಕು. ತಪ್ಪಿದರೆ ರಿಜಿಸ್ಟ್ರೇಷನ್ ರೆಗ್ಯುಲೇಷನ್ 85ನೆ ಸೆಕ್ಷನ್ ಮೇರೆಗೆ ಸದರಿ ದಸ್ತೈವಜುಗಳು ನಾಶಪಡಿಸಲ್ಪಡುತ್ತವೆ :—

ಸಬ್ ರಿಜಿಸ್ಟ್ರಿ ಆಫೀಸು ಹೆಸರು.	ಬುಕ್ಕು ನಂಬರು.	ದಸ್ತಾವೇಜುಗಳ ನಂಬರು ಮತ್ತು ಸಾಲ್.	ದಸ್ತಾವೇಜು ಬರಿಯಲ್ಪಟ್ಟ ತಾರೀಖು.	ದಸ್ತಾವೇಜು ರಿಜಿಸ್ಟರ್ ಮಾಡಿದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು.	ದಸ್ತಾವೇಜು ಬರಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
				ತುಮಕೂರು ಸಬ್ ರಿಜಿಸ್ಟ್ರಿ ಆಫೀಸು.			
ತುಮಕೂರು ...	I	756 / 1901—1902	28—2—1902	1—3—1902	1. ನರಚಲ .. 1. ಪುಟ್ಟಪ್ಪನುವು ..	ವಸಂತಮ್ಮ	80 ರೂಪಾಯಿನ ವ್ಯವಸ್ಥಾ ಪತ್ರ.
				ಶಿರಾ ಸಬ್ ರಿಜಿಸ್ಟ್ರಿ ಆಫೀಸು.			
ಶಿರಾ	I	304 / 1901—1902	12—12—1901	12—2—1902	ದೊಡ್ಡಗೂಳದ ಬಳೆ ನಂಜಪ್ಪನ ಹುಗ ನಂಜಪ್ಪ.	ದೊಡ್ಡಗೂಳದ ಗುರುಸಿದ್ದಪ್ಪನ ಮಗ ಸಿದ್ದಪ್ಪ.	25 ರೂಪಾಯಿನ ಕ್ರಯ.
				ಗುಬ್ಬಿ ಸಬ್ ರಿಜಿಸ್ಟ್ರಿ ಆಫೀಸು.			
ಗುಬ್ಬಿ ...	I	625 / 1901—1902	14—11—1901	5—3—1902	ಮುಗಳಿಕುಪ್ಪೆ ತಿಮ್ಮಪ್ಪನ ಮಗ ಜವರಗೌಡ.	ಲೋಕನಹಳ್ಳಿ ರಾಜಸೆಟ್ಟಿ ಮಗ ವೀರಂಣಸೆಟ್ಟಿ.	200 ರೂಪಾಯಿನ ಅಧಾರ.
...	II	13 / 1901—1902	9—2—1900	ತಿರಸ್ಕರಿಸಿದ ತಾರೀಖು 7—4—1902	ದೊಡ್ಡಗುಣಿ ನಂಜಪ್ಪನ ಮಗ ನೊಣವಿನಕೆರೆ ಪುಟ್ಟಯ್ಯ.	ದೊಡ್ಡಗುಣಿ ಮರಳಪ್ಪ, ಸಿದ್ದಯ್ಯ ಸಹ.	800 ರೂಪಾಯಿನ ವ್ಯವಸ್ಥಾ ಪತ್ರ.

ಬಿ. ಭೀಮರಾವ್, ಫಾರಿ ರಿಜಿಸ್ಟ್ರಾರ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ತಾರೀಖು 31ನೆ ಆಗಸ್ಟ್ 1904.

ಶಿವಮೊಗ್ಗ ಡಿಸ್ಟ್ರಿಕ್ಟ್ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ಈ ಕೆಳಗೆ ಕಾಣಿಸಿರುವ ದಸ್ತಾವೇಜುಗಳು ಎರಡು ವರುಷಗಳಿಗೆ ಮೇಲ್ಪಟ್ಟು ಬೇವಾರಸಾಗಿ ನಿಂತಿವೆ. ಈ ನೋಟಿಫಿಕೇಷನ್ ಪ್ರಕಾಶಪಡಿಸಿದ ಲಾಗಾಯಿತು ಒಂದು ತಿಂಗಳೊಳಗಾಗಿ ಅವುಗಳನ್ನು ಸಂಬಂಧಪಟ್ಟವರು ಆಯಾಯ ಸಬ್ ರಿಜಿಸ್ಟ್ರಾರುಗಳಿಂದ ವಾಪಸು ಪಡಿಯಬಹುದು. ಹಾಗೆ ಮಾಡದೆ ತಪ್ಪಿದರೆ ರಿಜಿಸ್ಟ್ರೇಷನ್ ರೆಗ್ಯುಲೇಷನ್ 45ನೆ ಸೆಕ್ಷನ್ ಅನುಸರಿಸಿ ದಸ್ತಾವೇಜುಗಳನ್ನು ನಾಶಪಡಿಸುತ್ತೆಯಾಗಿ ಇದರಿಂದ ತಿಳಿಯಪಡಿಸಿ ಇದೆ : —

ಡಂಬರಿ ನಂಬರು.	ಸಬ್ ರಿಜಿಸ್ಟ್ರಿ ಆಫೀಸಿನ ಹೆಸರು.	ಇನ್ಸ್ಪೆಕ್ಟರ್ ಜನರಲ್ ರಿಜಿಸ್ಟ್ರಾರರ ಹೆಸರು.	ದಸ್ತಾವೇಜಿನ ನಂಬರು.	ದಸ್ತಾವೇಜನ್ನು ಬರೆದ ತಾರೀಖು.	ರಿಜಿಸ್ಟರಾದ ಅಥವಾ ರಿಜಿಸ್ಟ್ರೇಷನ್ ನಿರಾಕರಿಸಿದ ತಾರೀಖು.	ಬರೆದುಕೊಟ್ಟವರ ಹೆಸರು ಮತ್ತು ವಿಳಾಸ.	ಬರೆಸಿಕೊಂಡವರ ಹೆಸರು ಮತ್ತು ವಿಳಾಸ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	ಜನ್ನಗಿರಿ ..	I	493/1901—02	11— 6—1902	11— 6—1902	ಹಾವನೂರ ಮುದಿಕೊಟ್ರಪ್ಪನ ಮಗ ಮುರಿಗೆಪ್ಪ, ಕರೆಕಟ್ಟೆವಾಸಿ	ಈರಭದ್ರಪ್ಪ, ಬಳ್ಳಾರಿ ಜಿಲ್ಲಾ, ರಾಯದುರ್ಗದ ವಾಸಿ.	400 ರೂಪಾಯಿನ ತೋರಡವು ಪತ್ರ.
2	ಹೊನ್ನಾಳಿ ...	I	275/1901—02	4— 4—1902	7— 4—1902	ಬಸಪ್ಪ	ಇಮಾಮಸಾಬ	ಸಾಗುವಳಿ ಕರಾರು 15 ರೂಪಾಯಿನಂತೆ
	ಡಿಟೋ	I	42/1902—03	7— 7—1902	21— 7—1902	ಮುದಿಯಜ್ಜನ ಮಗ ರೇವಣಪ್ಪ	ರೇವಣಪ್ಪ ಯಾನೆ ಕೊತವಾಲ್	40 ರೂಪಾಯಿನ ಕ್ರಯ ಪತ್ರ
3	ಶಿಕಾರಿಪುರ ..	I	154/1901—02	26—10—1901	10— 1—1902	ಸುಬ್ಬರಾವ್, ಸ್ಕೂಲ್ ಮಾಸ್ಟರ್, ಶಿರಾಳಕೊಪ್ಪದ ವಾಸಿ	ಷಡಾಕ್ಷರಪ್ಪ, ಸಂಗೂರು—ಶಿರಾಳಕೊಪ್ಪದ ವಾಸಿ.	50 ಡಿಟೋ
	ಡಿಟೋ ...	II	4/1900—01	25— 4—1900	23—12—1900	ಯಲ್ಲಾ ಬಿನ್ ಹುಚ್ಚಣ್ಣ, ನರಸಾಪುರದ ವಾಸಿ	ಮುರಿಗೆಪ್ಪ, ಚಿಕ್ಕೇರೂರು ವಾಸಿ	60 ರೂಪಾಯಿ ತೋರಡವು ಪತ್ರ
	ಡಿಟೋ ...	II	4/1901—02	25— 2—1901	2—11—1901	ಮಾಳಿ ಕೋಂ ನಿಂಗಕಟ್ಟಿ, ಅಮಟೆಕೊಪ್ಪದ ವಾಸಿ	ನಿಂಗಂಣ ಬಿನ್ ದೊಡ್ಡಪ್ಪ, ಯಲವಳ್ಳಿ ವಾಸಿ	100 ರೂಪಾಯಿ ಕ್ರಯಪತ್ರ
	ಡಿಟೋ ...	II	5/1900—01	25— 4—1900	28—12—1900	ಸಂಣಯಲ್ಲ ಬಿನ್ ಹುಚ್ಚಣ್ಣ, ನರಸಾಪುರದ ವಾಸಿ	ಮುರಿಗೆಪ್ಪ, ಚಿಕ್ಕೇರೂರ ವಾಸಿ	60 ರೂಪಾಯಿ ತೋರಡವು ಪತ್ರ
4	ಸಾಗರ ...	I	221/1901—02	2— 3—1902	5— 3—1902	ಗೋಪಾಲಪ್ಪ ಬಿನ್ ಲಿಂಗಪ್ಪ, ಕೆಳದಿ ವಾಸಿ	ಶಾಮರಾವ್ ಬಿನ್ ಸುಬ್ಬರಾವ್, ಕೆಳದಿ ವಾಸಿ	150 ರೂಪಾಯಿ ಆಧಾರ ಪತ್ರ
	ಡಿಟೋ .	IV	101/1901—02	19— 6—1902	19— 6—1902	ತಿಮ್ಮಾ ಬಿನ್ ಕೊಲ್ಲ, ಶಿಂಗಂದೂರು ಹಗ್ಗಿ ಬೈಲುವಾಸಿ	ಶೇಷಗಿರಿಯಪ್ಪ, ಗುಂಡಪ್ಪ ಬಿನ್ ಕೃಷ್ಣಯ್ಯ, ಬಾಳಮನೆ ವಾಸಿ	100 ರೂಪಾಯಿ ಸಾಲದ ಪತ್ರ
5	ನಗರ ..	I	126/1900—01	30— 3—1901	1— 4—1901	ರಾಮ ಬಿನ್ ತಿಮ್ಮಾ, ಹಿಲ್ಕುಂಜಿವಾಸಿ	ಬಡಗಿ ಲೋಕಾಚಾರಿ ಬಿನ್ ಈರಾಚಾರಿ, ಯಲಗಳಲ ವಾಸಿ	50 ರೂಪಾಯಿ ಕ್ರಯ ಪತ್ರ

	ಡಿಟೋ ..	I	6 / 1901—02	11—7—1901	13—7—1901	ಕಂಚಿಕೆರೆ ದೇವಪ್ಪ ಬಿನ್ ಅಪ್ಪಣ್ಣಯ್ಯ	ಸೂರಮ್ಮ, ಮಂಜಯ್ಯ ಬಿನ್ ಶೇಷಯ್ಯ	ಸಾಲಿಯಾನಾ 25 ರೂಪಾಯಿ ಗೇಣಿಕೊಡುವದಾಗಿ 12 ವರುಷದ ಕರಾರು.
	ಡಿಟೋ ..	IV	7 / 1900—01	14—4—1900	11—8—1900	ದೊಡ್ಡೀರ ಬಿನ್ ವೆಂಕಟ, ಹುಂಚದ ವಾಸಿ	ಧರಣಪ್ಪ ಬಿನ್ ಮಂಜಪ್ಪ, ಹುಂಚದ ವಾಸಿ	140 ರೂಪಾಯಿನ ಮೈಸಾಲದ ಪತ್ರ.
	ಡಿಟೋ ..	IV	24 / 1901—02	16-10—1899	29 1—1902	ಹನುಮ ಬಿನ್ ಹುಚ್ಚ, ಮಳಲಿಪೈಲು ವಾಸಿ	ಚೆನ್ನಬಸಪ್ಪಗೌಡ ಬಿನ್ ತಮ್ಮಣ್ಣಯ್ಯಗೌಡ, ಕೂಸಕೊಪ್ಪದ ವಾಸಿ	100 ರೂಪಾಯಿನ ಮೈಸಾಲದ ಪತ್ರ.
	ಡಿಟೋ ..	II	4 / 1901—02	30—7—1901	1—4—1902	ಚವಡಿಮಗಳು ತಿಪ್ಪಿ, ನೆಲಗಳಲೆ ವಾಸಿ	ಖುದ್ದಪಾಚ, ಮೆಲ್ಲದ ಪುಮ್ಮರಸಂಬ	60 ರೂಪಾಯಿನ ನವುಕರಿ ಕರಾರು.
6	ತೀರ್ಥಹಳ್ಳಿ ...	I	224	20—1—1902	21—1—1902	ರಾಮಚಂದ್ರಾಚಾರಿ	1. ಗಣೇಶರಾವ್, 2. ರಾಮರಾವ್	400 ರೂಪಾಯಿ ತೋರಡವು ಪತ್ರ.
	ಡಿಟೋ ..	I	239	3-12—1901	28—1—1902	ತಮ್ಮುಜೋಯಿಸ	ರಂಭಟ್ಟ	150 ರೂಪಾಯಿ ಕ್ರಯಪತ್ರ.
	ಡಿಟೋ ..	I	288	28—2—1902	28—2—1902	ರಾಮಾಜೋಯಿಸಯಾನೆ ರಾಮಣ	ದೊಡ್ಡ ಬಸಪ್ಪ	280 ರೂಪಾಯಿ ವೀಡುಪತ್ರ.
	ಡಿಟೋ	I I	329 389	3—3—1901 23-1—1902	3—4—1902 3—6—1902	ಪುಟ್ಟಪ್ಪಯಾನೆ ವೆಂಕಟರಮಣಯ್ಯ ಪಳಗೋಡು ಕೊಲ್ಲ	1. ಆಗುಂಬೆ ನಾಗೇಶರಾವ್, 2. ರಾಮರಾವ್ ಭೀಮನಕಟ್ಟೆ ನಾರಾಯಣಾಚಾರ್	1,800 ರೂಪಾಯಿ ವೀಡುಪತ್ರ. 25 ರೂಪಾಯಿ ಕ್ರಯಪತ್ರ.
	ಡಿಟೋ ...	I	418	10—4—1901	25—6—1902	ನಗರವಳ್ಳಿ ರಂಗಭಟ್ಟ	ಸಾವಿತ್ರಮ್ಮನ ತಾಯಿ ವೆಂಕಮ್ಮ	150 ರೂಪಾಯಿನ ಜೀವನಾಂಕದ ಪತ್ರ.
	ಡಿಟೋ ...	I	19	10—7—1902	10—7—1902	ರಂಗಣ	ವೀರ	199-9-9 ಸಂದದಕ್ಕೆ ಕೊಟ್ಟ ರಶೀತಿ.
	ಡಿಟೋ ...	I	21	22—1—1902	11—7—1902	1. ವೆಂಕಟಯ್ಯ 2. ಹಿರಿಯಣ್ಣಯ್ಯ	ಮುಳಬಾಗಲು ಮಠದ ಗೋಪಾಲ ಕೃಷ್ಣ ದೇವರು	ವರುಷ 1ರ 28 ಮಣ ಅಡಿಕೆ ಕೊಡುತ್ತಾ 25 ವರುಷ ಸಾಗುವಳಿ ಮಾಡುವದಾಗಿ ಗೇಣಿ ಕರಾರು.
7	ಕುಂಕಿ. ...	II	1 / 1899—00	31—7—1899	26—9—1899	ಹೋಳ್ಯ ಬಿನ್ ಧರ್ಮ	ರಂಗಣ	ನವುಕರಿ ಮಾಡುವದಾಗಿ 72 ರೂಪಾಯಿ ಮುಂಗಡ ತೆಗದುಕೊಂಡದ್ದು.
	ಡಿಟೋ ..	I	105 / 1899—00	14—4—1900	16—4—1900	ಕಾಳಕ್ಕ, ಕಮ್ಮಾರ ಲಿಂಗಣ್ಣನ ಹೆಂಡತಿ	ಗಣ್ಣಹನುಮ	120 ರೂಪಾಯಿ ತೋರಡವು ಪತ್ರ.
	ಡಿಟೋ ..	I	9 / 1901—02	26—7—1901	27—7—1901	ನಗರದ ರಾಮಾಚಾರ್ಯ	ಶ್ರೀನಿವಾಸಾಚಾರ್, ಅಯನೂರು ಸ್ಕೂಲ್ ಮಾಸ್ಟರ್	50 ರೂಪಾಯಿ ತೋರಡವು ಪತ್ರ.
	ಡಿಟೋ .	I	14 / 1901—02	5—8—1901	13—8—1901	1. ಕೆಂಚಕಂಣನ ಹೆಂಡತಿ ಹಳದಕ್ಕ ಈತನ ಮಗ ಮಂಜಾ 2. ಲಕ್ಷ್ಮಕ್ಕ, 3. ಕರಿಯ, 4. ಹಳದ		200 ರೂಪಾಯಿನ ವ್ಯವಸ್ಥಾಪತ್ರ.

ಎಂ. ಎಸ್. ನಾರಾಯಣರಾವ್,
ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಹಾಸನದ ಡಿಸ್ಟ್ರಿಕ್ಟ್.

ತಾರೀಖು 7ನೆ ಸೆಪ್ಟಂಬರ್ 1904.

2 ವರುಷಕ್ಕಿಂತಲೂ ಅಧಿಕಕಾಲ ಈ ಕೆಳಗೆ ನಮೂದಿಸಿರುವ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಜೇವಾಸ್ತಾಗಿರುವ ದಸ್ತಾವೇಜುಗಳನ್ನು ಹಾಜರು ಮಾಡಿದವರೆ ಆಗಲಿ ಅಥವಾ ಇವರಿಂದ ಅಧಿಕಾರ ಹೊಂದಿದ ಮುಖ್ತಾರೀಕರ ಆಗಲಿ ಈ ಕಸ್ತಿಹಾರ್ ತಾರೀಖು ಆಗಾಯಿತು ಒಂದು ತಿಂಗಳ ಒಳಗಾಗಿ ಆಯಾಯ ಸಬ್ ರಿಜಿಸ್ಟ್ರಾರ್ ರೂಬರೂಬ್ ಹಾಜರಾಗಿ ತೆಗದುಕೊಳ್ಳದಿದ್ದರೆ ಮೈಸೂರು ಸೀಮೆಯ ಹಿ॥ ಇನ್ಸ್ಪೆಕ್ಟರ್ ಜನರಲ್ ಸಾಹೇಬರವರ 27—8—1873ನೆ ಮಾರ್ಚು ೦ 66 114ನೆ ನಂ. ಸರ್ಕ್ಯೂಲರ್ ಆರ್ಡರ್ ಮೇರೆ ಈ ಕೆಳಗೆ ನಮೂದಾಗುವ ದಸ್ತಾವೇಜುಗಳನ್ನು ನಾಶಪಡಿಸುತ್ತೆ :—

ಕ್ರ. ಸಂ.	ಸಬ್ ರಿಜಿಸ್ಟ್ರಾರ್ ಆಫೀಸಿನ ಹೆಸರು.	ಬುಕ್ಕಿನ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟ್ರಾರ ತಾರೀಖು.	ಬರದುಕೊಟ್ಟವರ ಹೆಸರು.	ಬರಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	ಹಾಸನ .	I	602 1901-02	2—11—1899	2— 6—1902	ಕೃಷ್ಣಾಪುರಗುಳದ ಕೋನಪ್ಪನ ಮಗ ನಂ ಜೈಯ್ಯ	ಸೂಲಿಗ್ರಾಮದಲ್ಲಿ ವಾಸವಾಗಿರುವ ಕೃಷ್ಣಾಪುರಗುಳದ ತುಕ್ಕಣ್ಣನ ಮಗ ತುಕ್ಕಣ್ಣ	ದತ್ತುಸ್ವೀಕಾರ ಪತ್ರ
2	ಡಿಟೋ ...	I	649 1901—02	12— 6—190	18— 6—1902	ಕಂಚಿಕದ ತಿಮ್ಮಪ್ಪಾವಧಾನಿಗಳ ಮಗ ಚಿನ್ನಪ್ಪಾವಧಾನಿ	ಕಂಚಿಕದ ವೆಂಕಟಕೃಷ್ಣಯ್ಯನವರ ಮಗ ಅಪ್ಪಾಜೈಯ್ಯ	ಪಾಳ್ಯದ ಡಿರೀ ಮೊಬಲಗು ಪಾವತಿ ಮಾಡಿರುವದಾಗಿ ರೀತಿ
3	ಮಂಜರಾಬಾದು	IV	17 1901—02	2— 5—1902	6— 5—1902	ಉಮ್ಮರಸಾಬಿ ಮಗ ಹಯಾತ್‌ಸಾಬಿ ಉರಫ ಮಿಮ್ಮಾಸಾಬಿ	ಬ್ಯಾದನ ಎಸ್ಟೇಟಿ ಕಾಫೀಪ್ಲಾಂಟರು ಮೆ॥ ಬಿಟಿಕ್ ಸಾಹೇಬರು	150 ರೂಪಾಯಿನ ನವ್ಯರೀ ಕರಾರು
4	ಡಿಟೋ ..	I	238 1901—02	15— 8—1900	12— 2—1902	ಹಾನಬಾಳು ಈರೇಗೌಡನ ಮಗ ಚೆವಡೆಗೌಡ	ಕ್ಯಾಮನಹಳ್ಳಿಕರೆ ರಾಮೇಗೌಡರ ಮಗ ರಾಮೇಗೌಡ	120 ರೂಪಾಯಿನ ಕ್ರಯಪತ್ರ
5	ಡಿಟೋ ..	I	287 1901—02	14—11—1901	15— 3—1902	ಹೇರೂರು ನಂಜೇಗೌಡನ ಮಗ ನಿಂಗೇಗೌಡ	ಉಚ್ಚಂಗಿ ತಮ್ಮಯ್ಯನವರ ಮಗ ನರಸಿಂಹೈಯ್ಯ	90 ರೂಪಾಯಿನ ಕ್ರಯಪತ್ರ
6	ಡಿಟೋ ..	I	366 1901—02	10— 1—1902	10— 5 1902	ಕಾಡುದಲೆ ಮಹಮ್ಮದು ಇಸಬ್ ಉರಫ ಪೀರಾಸಾಬಿ	ಈತನ ಹೆಂಡತಿ ಫಾತ್ಮಾಬಿ	300 ರೂಪಾಯಿನ ವ್ಯವಸ್ಥಾಪತ್ರ
7	ಡಿಟೋ .	I	376 1901—02	19— 5 -1902	23— 5 —1902	ತೊಡ್ಡಹಳ್ಳಿ ಮರಿಶಿದ್ದನ ಹೆಂಡತಿ ನಿಂಗಿ	ಬೆಳಗೋಡು ಪ್ಯಾಟೆ ಪುಟ್ಟಪ್ಪ ಶೆಟ್ಟರ ಮಗ ಬಸೆಟ್ಟಪ್ಪ	100 ರೂಪಾಯಿನ ಆಧಾರ ಪತ್ರ
8	ಡಿಟೋ ...	II	8 1901—02	8— 7—1901	ತಿರಸ್ಕರಿಸಿದ ತಾರೀಖು 12— 3—1902	ಹಲ್ಸಲಿಗೆ ಚನ್ನವೀರಾಚಾರೀ ಮಗ ಹುಚ್ಚಾಚಾರಿ	ಹಲ್ಸಲಿಗೆ ಹನುಮೇಗೌಡನ ಮಗ ತಿರುಮಲೆಗೌಡ	12 ರೂಪಾಯಿನ ಕ್ರಯಪತ್ರ
9	ಡಿಟೋ ..	II	11 1901—02	25 - 8—1901	28— 4—1902	ಸಂತಹಳ್ಳಿ ಪಕ್ಕಲಿಗರ ಅಂಚೆಗೌಡನ ಮಗ ಕಾಳೇಗೌಡ	ನಂದಿಹಳ್ಳಿ ಪಕ್ಕಲಿಗರ ಸುಬ್ಬಗೌಡರ ಮಗ ಬಸವೆಗೌಡ	98 ರೂಪಾಯಿನ ಇಳಿಭೋಗ್ಯ
10	ಡಿಟೋ	II	16 1901—02	26—10—1901	30— 6—1902	ಬೀರೇಮಗ್ಗದ ಫಲಾರಜೆಟ್ಟಿ ಮಗ ತಿರುಮಲಜೆಟ್ಟಿ	ಬೆಡಗಿನ ಹುಲಗಳಲೆ ಚಿದ್ದಂಣನ ಮಗ ಚಿದ್ದಂಗಪ್ಪ ಯಾನೆ ದೊಡ್ಡಪ್ಪ	100 ರೂಪಾಯಿನ ಕ್ರಯಪತ್ರ
11	ಬೇಲೂರು	I	262 1901—02	..	30 -1 —1902	ಹೀರಗುಪ್ಪೆಯಲ್ಲಿರುವ ಈರೇಗೌಡನ ಮಗ ಮಾಳೇಗೌಡ	ಹೀರಗುಪ್ಪೆಯಲ್ಲಿರುವ ಪ್ಪಗೂರು ದೇವಪ್ಪೈಯ್ಯನವರ ಮಗ ಪುಟ್ಟಿಂಣ್ಣೈಯ	100 ರೂಪಾಯಿಗಳ ಭೋಗ್ಯಪತ್ರ
12	ಆರ್ಕಲಗೂಡು ..	I	874 1901—02	4— 4—1902	5 - 4 —1902	ಕಟ್ಟೆಪುರದಲ್ಲಿರುವ ಶಾ॥ ವೆಂಕಟನರಸೈಯ್ಯನವರ ಮಕ್ಕಳು 1. ನರಸಂಕೈಯ್ಯ, 2. ಸುಬ್ರಾಯ, 3. ಕಾಶಿಪತ್ರೈಯ್ಯ, 4. ನಾಬ್ರಾಯ ರಣಪ್ಪ	ಕಟ್ಟೆಪುರದಲ್ಲಿರುವ ಶಾ॥ ವೆಂಕಟನರಸೈಯ್ಯನವರ ಮಕ್ಕಳು 1. ನರಸಂಕೈಯ್ಯ, 2. ಸುಬ್ರಾಯ, 3. ಕಾಶೀಪತ್ರೈಯ್ಯ, 4. ನಾರಣಪ್ಪ	900 - 12 0 ಕಿಮ್ಮತ್ತಿನವುಳ್ಳ ವಿಭಾಗ ಸಾಧನ
13	ಡಿಟೋ ...	II	9 1901—02	14— 8—1901	17— 4 - 1902	ಕಣವಿನಕಾಪ್ಪಯಲ್ಲಿರುವ ಒಸವೆಗೌಡನ ಮಗ ಪುಟ್ಟೆಗೌಡ	ಮರೂರಲ್ಲಿರುವ ಶ್ರೀಕಂಠೈಯ್ಯನವರ ಮಗ ರಾಮಂಣ	150 ರೂಪಾಯಿನ ಆಧಾರ ಪತ್ರ

ಪಿ. ಆರ್. ಡಬ್ಲ್ಯೂ. ವೆಲಾಲ್, ರಿಜಿಸ್ಟ್ರಾರ್.

ಬೆಂಗಳೂರು ಡಿವೀಜನ್ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ. 1445

ಸನ್ 1904—1905ನೆ ಇಸವಿ ಅರ್ಜೀ ನಂಬರ್ 78.

ಮೃತಪಟ್ಟ ರಡ್ಡಿಗರ ಯರ್ರಪ್ಪನೆಂಬುವರ ಆಸ್ತೀ ವಿಷಯದಲ್ಲಿ--

ಅರ್ಜೀದಾರ್ರು ಬೆಂಗಳೂರು ತಾಲ್ಲೂಕು ಚಿಕ್ಕಬಾಣಸವಾಡಿಲಿರುವ ಮುನಿಹನುಮಕ್ಕನು, ಮೃತಪಟ್ಟ ಸದರೀ ರಡ್ಡಿಗರ ಯರ್ರಪ್ಪನವರಿಗೆ ಮಗಳು ಆಗಬೇಕೆಂಬ ಹಕ್ಕುದಾರಿಯು ಮೇಲೆ ಬೆಂಗಳೂರು ತಾಲ್ಲೂಕು ಚಿಕ್ಕಬಾಣಸವಾಡಿಯಲ್ಲಿ ವಾಸಸ್ಥರಾಗಿ ಮೃತಪಟ್ಟ ರಡ್ಡಿಗರ ಯರ್ರಪ್ಪನೆಂಬುವರ ಜೀಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮುನಿಹನುಮಕ್ಕನೆಂಬುವರ ಅರ್ಜಿಯನ್ನು ಸನ್ 1904ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ರಡ್ಡಿಗರ ಯರ್ರಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಸೆಪ್ಟಂಬರು ತಿಂಗಳು 17ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1904--1905ನೆ ಇಸವಿ ಅರ್ಜೀ ನಂಬರ್ 84.

ಮೃತಪಟ್ಟ ಸೈದಲ್ಲೀಷಾಖಾದ್ರಿ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಚನ್ನಪಟ್ಟಣದ ಹಳೇಮುಕಾನಿನಲ್ಲಿ ಇರುವ ಸಾಹೇಬ್‌ಪೀರಾ ಮೈನರ್, ಗಾರ್ಡಿಯನ್ ಹಯಾತುಪಾಳಾಖಾದ್ರಿ ಸಾಹೇಬರು, ಮೃತಪಟ್ಟ ಸದರೀ ಸೈದಲ್ಲೀಷಾಖಾದ್ರಿ ಸಾಹೇಬರಿಗೆ ಮುಖ್ಯ ವಾರಸುದಾರ್ರು ಆಗಬೇಕೆಂಬ ಹಕ್ಕುದಾರಿ ಮೇಲೆ ಚನ್ನಪಟ್ಟಣದಲ್ಲಿ ವಾಸಸ್ಥರಾಗಿ ಮೃತಪಟ್ಟ ಸೈದುಲ್ಲೀಷಾಖಾದ್ರಿಯವರ ಜೀಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸಾಹೇಬ್‌ಪೀರಾ ಮೈನರ್, ಗಾರ್ಡಿಯನ್ ಹಯಾತುಪಾಳಾಖಾದ್ರಿಯವರ ಅರ್ಜಿಯನ್ನು ಸನ್ 1904ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೈದಲ್ಲೀಷಾಖಾದ್ರಿಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಸೆಪ್ಟಂಬರ್ ತಿಂಗಳು 16ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1904—1905ನೆ ಇಸವಿ ಅರ್ಜೀ ನಂಬರ್ 86.

ಮೃತಪಟ್ಟ ಹೊನ್ನಪ್ಪ ಎಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ನೆಲವಂಗಲದ ತಾಲ್ಲೂಕು ಆಲೂರಲ್ಲಿರುವ ಪಾರ್ವತಮ್ಮ ಮೈನರ್, ಗಾರ್ಡಿಯನ್ ಲಕ್ಷ್ಮಿನಾರಣಪ್ಪ, ಮೃತಪಟ್ಟ ಸದರೀ ಹೊನ್ನಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿಮೇಲೆ ಬೆಂಗಳೂರು ಬಳ್ಳಾಪುರದ ಪ್ಯಾಟೇಲಿ ವಾಸಸ್ಥರಾಗಿ ಮೃತಪಟ್ಟ ಹೊನ್ನಪ್ಪನವರ ಜೀಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಪಾರ್ವತಮ್ಮ ಮೈನರ್, ಗಾರ್ಡಿಯನ್ ಲಕ್ಷ್ಮಿನಾರಣಪ್ಪನವರ ಅರ್ಜಿಯನ್ನು ಸನ್ 1904ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹೊನ್ನಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಸೆಪ್ಟಂಬರ್ ತಿಂಗಳು 16ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1904—1905ನೆ ಇಸವಿ ಅರ್ಜೀ ನಂಬರ್ 87.

ಮೃತಪಟ್ಟ ಶೀತಾರಾಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಜಗಲೂರಲ್ಲಿ ಇರುವ 1ನೆ ಶಿವರಾಮಯ್ಯ, 2ನೆ ವೆಂಕಟಸುಬ್ಬಯ್ಯ, 3ನೆ ನಾರಾಯಣ 2—3ನೆ ಮೈನರ್ ನಬಬು ಗಾರ್ಡಿಯನ್ 1ನೆ ಅರ್ಜಿದಾರ ಮೃತಪಟ್ಟ ಸದರೀ ಶೀತಾರಾಮಯ್ಯನವರಿಗೆ ಮುಖ್ಯವಾರಸುದಾರ್ರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಅರಳೇಪೇಟೇಲಿ ವಾಸಸ್ಥರಾಗಿ ಮೃತಪಟ್ಟ ಶೀತಾರಾಮಯ್ಯನವರ ಜೀಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಶಿವರಾಮಯ್ಯ, 2ನೆ ವೆಂಕಟಸುಬ್ಬಯ್ಯ, 3ನೆ ನಾರಾಯಣ, 2—3ನೆ ಮೈನರ್, ಗಾರ್ಡಿಯನ್ 1ನೆ ಅರ್ಜಿದಾರ್ರು ಅರ್ಜಿಯನ್ನು ಸನ್ 1904ನೆ ಇಸವಿ ಅಕ್ಟೋಬರ್ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶೀತಾರಾಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಸೆಪ್ಟಂಬರ್ ತಿಂಗಳು 16ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ 1904—1905ನೆ ಇಸವಿ ಅರ್ಜೀ ನಂಬರ 90.

ಮೃತಪಟ್ಟ ಕಿಚ್ಚಶೆಟ್ಟರ ಸುಬ್ಬಾಯಶೆಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಕಿಚ್ಚಶೆಟ್ಟರ ಸತ್ರದಲ್ಲಿರುವ ಸುಬ್ಬಮ್ಮ ನೆಂಬುವರು, ಮೃತಪಟ್ಟ ಸದರೀ ಕಿಚ್ಚಶೆಟ್ಟರ ಸುಬ್ಬಾಯಶೆಟ್ಟರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ಮೃತಪಟ್ಟ ಕಿಚ್ಚಶೆಟ್ಟರ ಸುಬ್ಬಾಯಶೆಟ್ಟರ ಜೆಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ ಒಗ್ಯೆ ಈ ಕೋರ್ಟಿಗೆ ಖಾಯಿಷ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸುಬ್ಬಮ್ಮನೆಂಬುವರ ಅರ್ಜಿಯನ್ನು ಸನ 1904ನೆ ಇಸವಿ ಅಕ್ಟೋಬರ ತಿಂಗಳು ತಾರೀಖು 31ರಲ್ಲು ಕೇಳಿ ಸರ್ಟಿಫಿಕೇಟ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಿಚ್ಚಶೆಟ್ಟರ ಸುಬ್ಬಾಯಶೆಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯ ಪಡಿಸಿ ಇದೆ.

ಸನ 1904ನೆ ಇಸವಿ ಸೆಪ್ಟೆಂಬರ ತಿಂಗಳು 16ನೆ ತಾರೀಖಿನಲ್ಲಿ ಕೋರ್ಟ ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಕೆ. ಎಸ್. ಚಂದ್ರಶೇಖರ ಅಯ್ಯರ್,
ಡಿಸ್ಟ್ರಿಕ್ಟ ಜಡ್ಜ.

ಚಿಕ್ಕಬಳ್ಳಾಪುರ ಮುನಸಿಫ್ ಕೋರ್ಟಿನಲ್ಲಿ.

ಸನ 1903-04ನೆ ಇಸವಿ ದಿವಾಳಿ ವ್ಯಾಜ್ಯದ ಮಿಸಲೇನಿಯಸ್ ನಂ. 457.

ಚಿಕ್ಕಬಳ್ಳಾಪುರದಲ್ಲಿರುವ ದಿವಾಳಿಯಾದ ಡಿಕ್ರಿ ದೇಣೀದಾರ ಚಿಕ್ಕಬಳ್ಳಾಪುರದ ಮುನಸೀಫ್‌ಕೋರ್ಟ ಅಮೀನಾ ನಾರಣಪ್ಪನವರ ವಿಷಯದಲ್ಲಿ—

4	ಸಾಗರ ..	I	221 1901—02	2— 3—1902	5— 3—1902	ಗೋಪಾಲಪ್ಪ ಬಿನ್ ಲಿಂಗಪ್ಪ, ಕೆಳದಿ ವಾಸಿ	ಶಾಮರಾವ್ ಬಿನ್ ಸುಬ್ಬರಾವ್, ಕೆಳದಿ ವಾಸಿ	150 ರೂಪಾಯಿ ಆಧಾರ ಪತ್ರ
	ಡಿಟೋ .	IV	191 1901—02	19— 6—1902	19— 6—1902	ತಿಮ್ಮಾ ಬಿನ್ ಕೊಲ್ಲ, ಶಿಂಗಂದೂರು ಹಗ್ಗಿ ಬೈಲುವಾಸಿ	ಶೇಷಗಿರಿಯಪ್ಪ, ಗುಂಡಪ್ಪ ಬಿನ್ ಕೃಷ್ಣಯ್ಯ, ಬಾಳಮನೆ ವಾಸಿ	100 ರೂಪಾಯಿ ಸಾಲದ ಪತ್ರ
5	ಸಗರ ..	I	126 1900—01	30— 3—1901	1— 4—1901	ರಾಮ ಬಿನ್ ತಿಮ್ಮಾ, ಹಿಲ್ಕುಂಜಿವಾಸಿ	ಬಡಗಿ ಲೋಕಾಚಾರಿ ಬಿನ್ ಈರಾಚಾರಿ, ಯಲಗಳಲ ವಾಸಿ	50 ರೂಪಾಯಿ ಕ್ರಯ ಪತ್ರ

1465

ನೋಟಿಸ.

ತಾರೀಖು 14ನೆ ಸೆಪ್ಟಂಬರ್ 1904.

ಮೈಸೂರು ಡಿಸ್ಟ್ರಿಕ್ಟ್ ತಾಲ್ಲೂಕುಗಳ ಸ್ಟೇಟ್ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್‌ಗಳ ಪಸಾರೆ ಜಿನಸಿ ಜಮಾವಣಿ ಹಕ್ಕನ್ನು ಆಯಾಯ ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರು ಮತ್ತು ಫಾರೆಸ್ಟ್ ರೇಂಜ್ ಆಫಿಸರವರು ಸಹಾ ಶೇರಿ ಹರಾಜು ಮಾಡಿಸುತ್ತಾರೆಂಬ ವಿಷಯದಲ್ಲಿ 8—9—1904ನೆ ಮುರ್ಕುಂ 36ನೆ ನಂ. ಮೈಸೂರು ಗೆಜೆಟಿನ IIನೆ ಭಾಗದ 519ನೆ ಪುಟದಲ್ಲಿ ಪ್ರಾಯಿಷ್ ಮಾಡಿರುವ 2—9—1904ನೆ ತಾರೀಖಿನ ನೋಟಿಫಿಕೇಷನನ್ನು ನೋಡಿ.

ತಾರೀಖು 15ನೆ ಸೆಪ್ಟಂಬರ್ 1904.

ಮೈಸೂರು ಡಿಸ್ಟ್ರಿಕ್ಟ್ ಮೈಸೂರು ವುಡ್‌ಯಾರ್ಡ್‌ನಲ್ಲು ಮತ್ತು ನಂಜನಗೂಡು ಡಿಪೋದಲ್ಲು ಸಹಾ ಚೌಬೀನೆ ಸಾಮಾನುಗಳು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹರಾಜು ಮಾಡಿಸುತ್ತಾರೆಂಬ ವಿಷಯದಲ್ಲಿ 1904ನೆ ಮುರ್ಕುಂ 38ನೆ ನಂಬರು ಮೈಸೂರು ಗೆಜೆಟ್ಟಿನ IIನೆ ಭಾಗದ 543ನೆ ಪುಟದಲ್ಲಿ ಪ್ರಾಯಿಷ್ ಮಾಡಿರುವ 15—9—1904ನೆ ಮುರ್ಕುಂ ನೋಟಿಫಿಕೇಷನ್ನು ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 7ನೆ ಸೆಪ್ಟಂಬರು 1904ನೆ ಇಸವಿ.

* ಮಾರ್ಜಿನ್ನಲ್ಲಿ ನಮೂದುಮಾಡಿ ಇರತಕ್ಕ ಇನಾಂ ಗ್ರಾಮಗಳು, ಸರ್ಕಾರಕ್ಕೆ ಬರಬೇಕಾದ ಬಾಕಿ ವೊಬಲಗಿಗೋಸ್ಕರವಾಗಿ

* 1. ಜೋಡಿ ವೀರಶೆಟ್ಟಿ ಹಳ್ಳಿ 2. ಖಾಯಂಗುತ್ತಾ ಕುಂಮರಕುಂಟೆ 3. ಡಿಟೋ ಬೈರಸಂದ್ರ	... } ಆವನಿ ಹೋಬಳಿ ಮುಳಬಾಗಲ್ ತಾ॥ .. } ನರಸಾಪುರದ ಹೋಬಳಿ ಮಾಲೂರು ತಾ॥	ತಾಲ್ಲೂಕ್ ಅಮಲ್‌ದಾರ್ರ ಕಛೇರಿಯಲ್ಲಿ 1904ನೆ ಇಸವಿ ಅಕ್ಟೋಬರು ಮಾಹೆ 31ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

(ಹೆಚ್ಚು ತಪಶೀಲ್ ಬಗ್ಯೆ 1904ನೆ ಮುರ್ಕುಂ 38ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 546, 548, 547ನೆ ನಂಬರ್ ಪೇಜು ನೋಡತಕ್ಕದ್ದು.)

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧಪತ್ರಿಕೆ.

ತಾರೀಖು 16ನೆ ಸೆಪ್ಟಂಬರ್ 1904.

1. ಕಂದಾಯದ ಬಾಕೀದಾರರಾದ ಖಾಯಂಗುತ್ತಾ ಗಿರಿಜಂಪ್ಯಾಟೆ ಗ್ರಾಮದ ಶೀನಪ್ಪ, ಗೋವಿಂದಪ್ಪ ಇವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟ್ ಕೋಲಾರ ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ನವಂಬರು ಮಾಸ 1ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—04ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ವೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 65—10—10 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ವೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಆದು ಜಾತಾ ಹರಾಜು ಬಾಬತು ಬಾಕೀ ವೊಬಲಗು ಹರಾಜ್ ತಾರೀಖು ಲಾಗಾಯುತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ವೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ವೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ವೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ವೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುಖ್ತಾರೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುಖ್ತಾರೀಕರಾಗಿ

ಸವಾಲ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರಿ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರಿ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ ಮೊಹರಿ ಮಾಡಲ್ಪಟ್ಟ ಒಂದು ಹರಾಜ ಸರಟಿಫಿಕೇಟ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ಪಟ್ಟೀಗಳಲ್ಲಿಯೂ ಇರುವ ಸ್ಕ್ಯಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲಿ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು	ಸ್ವತ್ತಿನ ತಪ್ಪೀಲ. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಿನ ಕಿಮ್ಮತ್ತು.	ಜಮೀನು. ನಂಬರ ಆಥವಾ ಜಮೀನಿನ ಹೆಸರು.	ಮೊತ್ತ ಸರ್ಕಾರ ಪೂರಾ ಬಾಗಾಯಿತು.	ವಿಸ್ತೀರ್ಣ.	ಆಕಾರ.	ಸರ್ಕಾರಕ್ಕೆ ಬರಬೇಕಾದ ಸೋಟಿನ ಮೇಲೆ ದಗ್ಗರ ಸಹಿತವಾದ ಬಾಕೀ ಸೋಟುಗಳು
								ಎ. ಗು.	ರೂ. ಆ. ಪೈ.	ರೂ. ಆ. ಪೈ.
ಕೋಲಾರ	ಸೇವಂಗಲ್ಲು	ಬಾಯಾಂಗುತ್ತಾ	ಗಿರಿಯಂಪೈಟೆ	..	...	...	ಪಂಬೋಕು	107 6	...	
							ಖುಷ್ಕಿ	131 28	198 2 0	64 10 10 ಶೋಭಕೃತು
			ಕೀನಪ್ಪ, ಗೋವಿಂದಪ್ಪ				ತರಿ	15 9	49 4 0	1 0 0 ಪ್ರೊಸೆಸ ಫೀ
							ಬಾಗಾಯಿತು.	6 31	21 0 0	65 10 10
								260 34	268 6 0	

ಚಕ್ತುಬಂದಿ.
ಪೂರ್ವಕ್ಕೆ—ಕಟ್ಟೆಹಳ್ಳಿ ಸರಹದ್ದು.
ಪಶ್ಚಿಮಕ್ಕೆ — ತೂಕಲಗಟ್ಟ ಸರಹದ್ದು.
ಉತ್ತರಕ್ಕೆ —ತೂಕಲಗಟ್ಟ.
ದಕ್ಷಿಣಕ್ಕೆ — ನಾಗನಾಳ.
(ಪೂರಾ ಗ್ರಾಮ)

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧಪತ್ರಿಕೆ.

ತಾರೀಖು 16ನೆ ಸೆಪ್ಟಂಬರ 1904.

1. ಕಂದಾಯದ ಬಾಕೀದಾರರಾದ ಬಾಯಾಂಗುತ್ತಾ ಬಾಲನಾಗೇನಹಳ್ಳಿ ಗ್ರಾಮದ ಕೀನಪ್ಪ, ಗೋವಿಂದಪ್ಪ ಇವರಿಂದ ಬರಬೇಕಾದ ಜಮೀನ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ನವಂಬರ ಮಾಹೆ 1ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಬಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903-04ನೆ ಸಾಲಿಗೆ * ಪೂರ್ತಿಯಾಗಿ ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಖ್ಮೀನಿ ಮೇರಿಗೆ ರೂಪಾಯಿ 78—1—1 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅವರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುಖ್ತಾರೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುಖ್ತಾರೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಅತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಎಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಿ ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಮುಟ್ಟಳೆ, ತರೀ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಲಿಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ.	ಆ.	ಪೈ.	
ಕೋಲಾರ	ಶೇನಗಲ್ಲು	ಖಾಯಗುಂಟಾ ಖಾಲಾಗೇನಹಳ್ಳಿ	ಶೀನಪ್ಪನ್, ಗೋವಿಂದಪ್ಪ	...	ರೂ. ಆ. ಪೈ.	...	ಪರಂಪೋಕು.	33	36	...	...	...	77	1	1	ಶೋಭಕೃತು
							ಖುಷ್ಕಿ ..	235	20	198	4	0	1	0	0	ಪ್ರೊಸೆಸ್ ಫೀ
							ತರಿ	52	39	138	0	0				
													78	1	1	
								322	15	336	4	0				

ಚಕ್ಕುಬಂದಿ.
ಪೂರ್ವಕ್ಕೆ—ಕಾವಾಂತಹಳ್ಳಿ ಸರಹದ್ದು.
ಪಶ್ಚಿಮಕ್ಕೆ—ಹೊಸಕೋಟೆ ತಾ॥ ಸರಹದ್ದು.
ಉತ್ತರಕ್ಕೆ— ಡಿಟೋ
ದಕ್ಷಿಣಕ್ಕೆ—ಮಡಿವಾಳ ಸರಹದ್ದು.
(ಪೂರಾ ಗ್ರಾಮ)

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 16ನೆ ಸೆಪ್ಟೆಂಬರ್ 1904.

1. ಕಂದಾಯದ ಬಾಕೀದಾರರಾದ ಜೋಡಿ ಪಾಪನಹಳ್ಳಿ ಗ್ರಾಮದ ಮಹಮ್ಮದ್ ಫಕರುದ್ದೀನ್‌ರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ನವಂಬರ್ ಮಾಹೆ 1ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—04ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 123—6—6 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತೀ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟು ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟು ಕೂಡಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟು ಬಂದು ಹರಾಜ್ ಸರಟಿಫಿಕೇಟು ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಶಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಕಟ್ಟಡಗಳು. ಕಟ್ಟಡದ ಹೆಸರು.	ಕಂದಾಯದ ಕಿಸ್ತು.	ಸ್ವತ್ತಿನ ತಪ್ಸೀಲ್. ಸ್ವತ್ತಿನ ಹೆಸರು.	ಮುಷ್ಟಿ ತರಿ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ. ಎ.	ಗು.	ರೂ. ಆ. ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ.	ಆ.	ಪೈ.	
ಕೋಲಾರ.	ಜಿಲ್ಲೆ ಕೋಲಾರ.	ಜೋಡಿ ಪಾಪನಹಳ್ಳಿ.	ಮಹಮ್ಮದ್ ಫಕರ್ ಸಾಹೆಬ್.	....	..	ರೂ. ಆ. ಪೈ.	ಪರಂಪೋಕು	34	19	1 0 0					
							ಮುಷ್ಟಿ ...	129	9	65 0 0	94	7	7	ಹಿಂದಣಸಾಲ್ ಬಾಕಿ.	
							ತರಿ ...			....	27	14	11	ಕೋಭಕ್ಕೆತು.	
							ಬಾಗಾಯತು	9	15	28 0 0	1	0	0	ಪ್ರೊಸೆಸ್ ಫೀ.	
								173	3	94 0 0	123	6	6		

ಚಕ್ಕುಬಂದಿ.
ಪೂರ್ವಕ್ಕೆ — ಮೂಗೂರಿ ಸರಹದ್ದು.
ಪಶ್ಚಿಮಕ್ಕೆ — ಪೂರ್ಣಗಾನಹಳ್ಳಿ ಸರಹದ್ದು.
ಉತ್ತರಕ್ಕೆ — ಮುದವತ್ತಿ ಸರಹದ್ದು.
ದಕ್ಷಿಣಕ್ಕೆ — ವಡಿಗೆರೆ ಸರಹದ್ದು.
(ಪೂರಾ ಗ್ರಾಮ.)

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಕೆ. ಪಿ. ಪುಟ್ಟಣ್ಣಯ್ಯ ಚೆಟ್ಟಿ, ಡೆಪ್ಯೂಟಿ ಕಮೀಷನರ.

8. ಯಾವ ಮನುಷ್ಯನಿಂದಲಾಗಲೀ, ಯಾವ ಮನುಷ್ಯನಮೇಲಾಗಲೀ ಯಾವ ಸಿವಿಲ್ ಕೋರ್ಟ್‌ನಲ್ಲಿ ತರಲ್ಪಟ್ಟ ಅಥವಾ ನಡಿಯುತ್ತಲಿರುವ ದಾವೆಯು, ಅಂಥಾ ಮನುಷ್ಯನು ಸಾಯುವುದರಿಂದಲಾದರೂ, ಅಥವಾ ಯಾವ ಉದ್ಯೋಗದ ಹೆಸರಿನಲ್ಲಿ ಅವನು ದಾವೆ ಮಾಡಿದನೋ ಅಥವಾ ಪ್ರತಿವಾದಿಯಾಗಿರುತ್ತಾನೋ ಆ ಉದ್ಯೋಗವನ್ನು ಬಿಡುವುದರಿಂದಲಾದರೂ, ಕಡಮೆಯಾಗತಕ್ಕದ್ದಲ್ಲ ಅಥವಾ ನಿಂತುಹೋಗತಕ್ಕದ್ದಲ್ಲ; ಪರಂತು ಅದೇ ದಾವೆಯು ಅಂಥಾ ಮನುಷ್ಯನ ಉತ್ತರಾಧಿಕಾರಿಯ ಹೆಸರಿನಲ್ಲಾಗಲೀ, ಉತ್ತರಾಧಿಕಾರಿಯಮೇಲಾಗಲೀ ನಡೆಯತಕ್ಕದ್ದು.

ದಾವೆಗಳು ನಿಂತುಹೋಗಕೂಡದು.

9. ಸಂಘದಪರವಾಗಿ ನೋಮಿಸಲ್ಪಟ್ಟ ಮನುಷ್ಯನಮೇಲಾಗಲೀ ಉದ್ಯೋಗಸ್ಥನಮೇಲಾಗಲೀ ಆಗಿರುವ ತೀರ್ಪಿನ ಅಮಲ್ಜಾರಿಯು, ಅಂಥಾ ಮನುಷ್ಯನ ಅಥವಾ ಉದ್ಯೋಗಸ್ಥನ ಚರ ಅಥವಾ ಸ್ಥಿರ ಸೊತ್ತಿನಮೇಲಾದರೂ ಅಥವಾ ಅವನ ದೇಹದಮೇಲಾದರೂ ಆಗಕೂಡದು, ಪರಂತು ಆ ಸಂಘದ ಸೊತ್ತಿನಮೇಲೆ ಆಗತಕ್ಕದ್ದು.

ಸಂಘದಮೇಲಾದ ತೀರ್ಪುಗಳ ಅಮಲ್ಜಾರಿ.

ಅಮಲ್ಜಾರಿಯ ಬಗ್ಗೆ ಕೊಡಲ್ಪಟ್ಟ ಅಜೆಸಿಯಲ್ಲಿ—ತೀರ್ಪು, ಯಾರಮೇಲೆ ಅದರ ಅಮಲ್ಜಾರಿ ಆಗಬೇಕೊ ಆ ಕಕ್ಷಿಗಾರನು ಸಂಘದಪರವಾಗಿ ಮಾತ್ರವೇ ದಾವೆ ಮಾಡಿರೋಣ ಅಥವಾ ಪ್ರತಿವಾದಿಯಾಗಿರೋಣ (ಸಂದರ್ಭಾನುಸಾರವಾಗಿ); ಮತ್ತು ಸಂಘದ ಸೊತ್ತಿನಮೇಲೆ ಅಮಲ್ಜಾರಿಯಾಗಬೇಕೆಂದು ಅಪೇಕ್ಷಿಸೋಣ, ಈ ಸಂಗತಿಗಳು ಬರಿಯಲ್ಪಟ್ಟಿರಬೇಕು.

10. ಸಂಘದ ನಿಬಂಧನೆಗಳಿಗೂ ಖಾನೂನುಗಳಿಗೂ ಅನುಸಾರವಾಗಿ ಮಾಡಲ್ಪಟ್ಟ ಯಾವ ಒಳ ನಿಬಂಧನೆಯಿಂದಲಾದರೂ; ಅಥವಾ, ಒಳ ನಿಬಂಧನೆಗಳನ್ನು ಮಾಡಲು ನಿಬಂಧನೆಗಳಲ್ಲಿ ಅವಕಾಶವಿಲ್ಲದಿರುವ ಪಕ್ಷದಲ್ಲಿ, ಯಾವ ಒಳ ನಿಬಂಧನೆ, ಅದನ್ನು ಮಾಡುವುದಕ್ಕಾಗಿಯೇ ಕೂಡಿದ ಸಂಘದ ಸಾಮಾಜಿಕರ ಸಾಮಾನ್ಯಕೂಟದಲ್ಲಿ ಮಾಡಲ್ಪಟ್ಟ ಯಾವ ಒಳ ನಿಬಂಧನೆಯಿಂದಲಾದರೂ (ಇಂಥಾ ಒಳ ನಿಂಧನೆಯನ್ನು ಮಾಡುವುದಕ್ಕೆ ಹಾಜರಿದ್ದವರ ಪೈಕಿ ಐದು ಭಾಗದಲ್ಲಿ ಮೂರುಭಾಗದವರು ಏಕೀಭವಿಸಿ ಸಮ್ಮತಿಸುವುದು ಅವಶ್ಯವಾಗಿರತಕ್ಕದ್ದು.) ಅಂಥಾ ಸಂಘದ ಯಾವ ನಿಬಂಧನೆಯ ಅಥವಾ ಒಳನಿಬಂಧನೆಯ ಉಲ್ಲಂಘನೆಯ ಬಗ್ಗೆಯಾಗಿ, ಹಾಕಲ್ಪಟ್ಟ ದ್ರವ್ಯರೂಪವಾದ ದಂಡವು, ಉಂಟಾದಾಗ್ಯೆ, ಯಾವ ಕೋರ್ಟ್‌ನ ಅಧಿಕಾರ ಸರಹದ್ದಿನೊಳಗೆ ಪ್ರತಿವಾದಿಯು ವಾಸಿಸುತ್ತಾನೋ ಅಥವಾ ಸಂಘವು ಇರುತ್ತದೆಯೋ, ಹ್ಯಾಗೆ ಆ ಸಂಘದ ಕಾರ್ಯನಿರ್ವಾಹ ಸಭೆಯವರು ಯುಕ್ತವೆಂದು ಎಣಿಸುತ್ತಾರೋ ಹಾಗೆ, ಅಂಥಾ ಕೋರ್ಟ್‌ನಲ್ಲಿ ವಸೂಲ್ಮಾಡಲ್ಪಡಬಹುದು.

ಒಳ ನಿಬಂಧನೆಯಂತೆ ಉಂಟಾಗುವ ಜುರ್ಮಾನೆಯ ವಸೂಲಾತಿ.

11. ಸಂಘದ ನಿಬಂಧನೆಗಳಿಗೆ ಅನುಸಾರವಾಗಿ ತಾನು ಕೊಡುವುದಕ್ಕೆ ಬದ್ಧನಾಗಿರುವ ಚಂದಾವನ್ನು ಕೊಡದೆ ಬಾಕಿಯಲ್ಲಿಟ್ಟುಕೊಂಡಿರುವ, ಅಥವಾ ಅಂಥಾ ನಿಬಂಧನೆಗಳಿಗೆ ವಿರೋಧವಾಗಿರುವ, ಯಾವ ಕಾಲದವರೆಗಾಗಲೀ ಯಾವ ರೀತಿಯಲ್ಲಾಗಲೀ ಸಂಘದ ಯಾವ ಸೊತ್ತನ್ನಾದರೂ ತಾನೇ ಇಟ್ಟುಕೊಳ್ಳುವ, ಅಥವಾ ತಡದಿಟ್ಟುಕೊಳ್ಳುವ, ಅಥವಾ ಸಂಘದ ಯಾವ ಸೊತ್ತನ್ನಾದರೂ ನಷ್ಟಪಡಿಸುವ, ಅಥವಾ ನಾಶಪಡಿಸುವ ಸಾಮಾಜಿಕನ ಮೇಲೆ, ಅಂಥಾ ಬಾಕಿಗಾಗಲೀ ಅಥವಾ ಹಾಗೆ ಸೊತ್ತನ್ನು ತಡದು ಇಟ್ಟುಕೊಳ್ಳುವುದರಿಂದಲೂ ನಷ್ಟಪಡಿಸುವುದರಿಂದಲೂ ಅಥವಾ ನಾಶ ಮಾಡುವುದರಿಂದಲೂ ಸಂಭವಿಸುವ ನಷ್ಟಕ್ಕಾಗಲೀ ಮೇಲ್ಕಂಡ ರೀತಿಯಲ್ಲಿ ದಾವೆ ಮಾಡಲ್ಪಡಬಹುದು.

ಸಾಮಾಜಿಕರು ಪರಕೀಯರಂತೆ ಪ್ರತಿವಾದಿಗಳಾಗುವದಕ್ಕೆ ಗುರಿಯಾಗಿರೋಣ.

ಸಂಘದಪರವಾಗಿ ತರಲ್ಪಟ್ಟ ಯಾವ ದಾವೆಯಲ್ಲಿ ಅಥವಾ ವ್ಯವಹಾರದಲ್ಲಾದರೂ ಪ್ರತಿವಾದಿಯುಪಕ್ಷದಲ್ಲಿ ತೀರ್ಪು ಆಗಿ ಆತನ ಕರ್ಚುಗಳನ್ನು ಪಡಕೊಳ್ಳುವಂತೆ ತೀರ್ಪಾಗಿರುವ ಸಂದರ್ಭದಲ್ಲಿ, ಆ ಮೊಬಲಗನ್ನು ಅವನು ಯಾವ ಉದ್ಯೋಗಸ್ಥನ ಹೆಸರಿನಲ್ಲಿ ದಾವೆ ಮಾಡಲ್ಪಟ್ಟಿತೋ ಅವನಿಂದ ಆಗಲೀ ಅಥವಾ ಸಂಘದಿಂದಾಗಲೀ ವಸೂಲು ಮಾಡಿಕೊಳ್ಳಬಹುದು. ಸಂಘದಿಂದ ವಸೂಲು ಮಾಡಿಕೊಳ್ಳುವ ಸಂದರ್ಭದಲ್ಲಿ, ಮೇಲೆ ವಿವರಿಸಲ್ಪಟ್ಟ ರೀತಿಗೆ ಅನುಸಾರವಾಗಿ ಅಂಥಾ ಸಂಘದ ಸೊತ್ತಿನಮೇಲೆ ಅಮಲ್ಜಾರಿ ಮಾಡತಕ್ಕದ್ದು.

ಜಯಿಸುವ ಪ್ರತಿವಾದಿಯು ನಿರ್ಣಯಿಸಲ್ಪಟ್ಟ ತನ್ನ ಕರ್ಚನ್ನು ವಸೂಲ್ಮಾಡೋಣ.

12. ಸಂಘದ ಯಾವ ಹಣವನ್ನಾದರೂ ಅಥವಾ ಸೊತ್ತನ್ನಾದರೂ ಕದ್ದುಕೊಳ್ಳುವ ಅಥವಾ ಚಾರ್ಯ ಮಾಡುವ ಅಥವಾ ಅಪಹರಿಸುವ; ಅಥವಾ ಅಂಥಾ ಸಂಘದ ಯಾವ ಸೊತ್ತನ್ನಾದರೂ ಜೇಕೆಂದು ಮತ್ತು ಮತ್ಸರವಾಗಿ ನಾಶಪಡಿಸುವ ಅಥವಾ ಕೆಡಿಸುವ, ಅಥವಾ ಅಂಥಾ ಸಂಘದ ಬಂಡವಾಳವನ್ನು ನಷ್ಟಕ್ಕೆ ಗುರಿಮಾಡಬಹುದಾದಂಥಾ ಯಾವ ಪತ್ರವನ್ನಾದರೂ ಬಾಂಡನ್ನಾದರೂ ಹಣದ ಬಗ್ಗೆ ಆಧಾರ ಪತ್ರವನ್ನಾದರೂ ರಸೀತಿಯನ್ನಾದರೂ ಅಥವಾ ಇತರ ದಸ್ತೈವಜನ್ನಾದರೂ ಕಲ್ಪಿಸುವ ಸಂಘದ ಯಾವ ಸಾಮಾಜಿಕನಾದರೂ ಸಾಮಾಜಿಕನಲ್ಲದೆ ಇರುವ ಯಾವ ಮನುಷ್ಯನಾಗಲಿ ಇಂಥಾ ಅಪರಾಧವನ್ನು ಮಾಡಿದರೆ ಯಾವ ವ್ಯಾಜ್ಯಕ್ಕೆ ಒಳಪಡುತ್ತಾನೋ ಮತ್ತು ತಪ್ಪು ಸಾಬೀತಾದರೆ ಯಾವ ದಂಡನೆಗೆ ಗುರಿಯಾಗುತ್ತಾನೋ, ಅದೇ ವ್ಯಾಜ್ಯಕ್ಕೆ ಆ ಸಾಮಾಜಿಕನು ಒಳಪಡುವನಲ್ಲದೆ ತಪ್ಪು ಸಾಬೀತಾದರೆ ಅದೇ ದಂಡನೆಗೆ ಗುರಿಯಾಗತಕ್ಕದ್ದು.

ಅಪರಾಧವನ್ನು ಮಾಡಿದ ಸಾಮಾಜಿಕರು ಪರಕೀಯರಂತೆ ದಂಡನೆಗೆ ಗುರಿಯಾಗಿರತಕ್ಕದ್ದು.

13. ಯಾವ ಪ್ರತ್ಯೇಕವಾದ ಉದ್ದೇಶಕ್ಕೋಸ್ಕರ ಅಥವಾ ಉದ್ದೇಶಗಳಿಗೋಸ್ಕರವಾದರೂ ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಟ್ಟ ಯಾವ ಸಂಘದ ಕಾರ್ಯನಿರ್ವಾಹ ಸಭೆಯವರಿಗೆ, ಅಂಥಾ ಉದ್ದೇಶವನ್ನು ಈ ರೆಗ್ಯುಲೇಷನಿನ ಅರ್ಥದಲ್ಲಿರುವ ಇತರ ಉದ್ದೇಶಕ್ಕೆ ಅಥವಾ ಇತರ ಉದ್ದೇಶಗಳಿಗೆ ಬದಲಾಯಿಸುವುದು, ವಿಸ್ತರಿಸುವದು ಅಥವಾ ಸಂಕ್ಷೇಪಿಸುವುದು; ಅಥವಾ ಅಂಥಾ ಸಂಘವನ್ನು ಇತರ ಸಂಘದೊಡನೆ ಸ್ವಲ್ಪಮಟ್ಟಿಗೆ ಅಥವಾ ಸಂಪೂರ್ಣವಾಗಿ ಕೂಡಿಸುವುದು ಉಚಿತವೆಂದು ತೋರಿಬರುವುದಾದರೆ, ಅಂಥಾ ಕಾರ್ಯನಿರ್ವಾಹ ಸಭೆಯವರು ಬರಹದಲ್ಲಿರುವ ಅಥವಾ ಛಾಪಿಸಿರುವ ಒಂದು ರಿಪೋರ್ಟಿನಲ್ಲಿ ಆ ಪ್ರಮೇಯವನ್ನು ನಮೂದ್ಮಾಡಿ ಸಂಘದ ಸಾಮಾಜಿಕರಿಗೆ ಕಳುಹಿಸಬಹುದು ಮತ್ತು ಸಂಘದ ನಿಬಂಧನೆಗಳಿಗೆ ಅನುಸಾರವಾಗಿ ಅದನ್ನು ಆಲೋಚಿಸುವುದಕ್ಕೋಸ್ಕರ ಒಂದು ಪ್ರತ್ಯೇಕವಾದ ಸಾಮಾಜಿಕರ ಕೂಟವನ್ನು ಕೂಡಿಸಬಹುದು;

ಸಂಘಗಳು ತಮ್ಮ ಉದ್ದೇಶಗಳನ್ನು ಬದಲಾಯಿಸಲು ವಿಸ್ತರಿಸಲು ಅಥವಾ ಸಂಕ್ಷೇಪಿಸಲು ಅಧಿಕಾರ ಉಂಟಾಗಿರೋಣ.

ಆದರೆ ಆ ಪ್ರಮೇಯದ ಆಲೋಚನೆಯು ಬಗ್ಗೆಯಾಗಿ ಕಾರ್ಯನಿರ್ವಾಹ ಸಭೆಯವರಿಂದ ಕೂಡಿಸಲ್ಪಟ್ಟ ಪ್ರತ್ಯೇಕವಾದ ಕೂಟ ಕೂಡುವುದಕ್ಕೆ ಹತ್ತು ದಿನಗಳಿಗೆ ಪೂರ್ವ ಅಂಥಾ ಸಂಘದ ಪ್ರತಿ ಸಾಮಾಜಿಕನಿಗೂ ಅಂಥಾ ರಿಪೋರ್ಟು ಟಪಾಲು ದ್ವಾರಾ ಅಥವಾ ಇತರ ವಿಧದಲ್ಲಿ ಕಳುಹಿಸಲ್ಪಟ್ಟಿದ್ದಹೊರ್ತು, ಅಂಥಾ ಪ್ರಮೇಯವು ಜಾರಿಗೆ ಬರತಕ್ಕದ್ದಲ್ಲ.

ಅಥವಾ, ಖುದ್ದಾಗಿ ಯಾ ಪ್ರತಿನಿಧಿಯ ದ್ವಾರ ಸಾಮಾಜಿಕರಿಂದ ಕೊಡಲ್ಪಟ್ಟ ಸಂಮತಿಗಳ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳಿಂದ ಅಂಗೀಕರಿಸಲ್ಪಟ್ಟು, ಹೊಸಲನೆಯ ಕೂಟವು ಆಗಿ ಒಂದು ತಿಂಗಳಾದ ಬಳಿಕ ಕಾರ್ಯನಿರ್ವಾಹ ಸಭೆಯವರಿಂದ ಕೂಡಿಸಲ್ಪಟ್ಟ ಎರಡನೆಯ ಪ್ರತ್ಯೇಕ ಕೂಟದಲ್ಲಿ ಹಾಜರಿದ್ದ ಸಾಮಾಜಿಕರ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳ ಸಾಮಾಜಿಕರ ಸಂಮತಿಗಳಿಂದ ಸ್ಥಾಪಿಸಲ್ಪಟ್ಟಹೊರ್ತು, ಅಂಥಾ ಪ್ರಮೇಯವು ಜಾರಿಗೆ ತರಲ್ಪಡತಕ್ಕದ್ದಲ್ಲ.

14. ಯಾವ ಸಂಘದ ಸಾಮಾಜಿಕರ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳಿಗೆ ಕಡಮೆ ಇಲ್ಲದ ಸಂಖ್ಯೆಯವರಾದರೂ ಅದು ಅಗಲತಕ್ಕದ್ದೆಂದು ತೀರ್ಮಾನ ಮಾಡಬಹುದು; ಮತ್ತು ಆ ಬಳಿಕ ಅದು, ಕೂಡ್ಲೆಯಾಗಲೀ ಅಥವಾ ಒಪ್ಪಲ್ಪಟ್ಟ ಬೇರೆ ಕಾಲದಲ್ಲಾಗಲೀ ಅಗಲಿಸಲ್ಪಡತಕ್ಕದ್ದು; ಮತ್ತು ಸಂಘದ ಸೊತ್ತು ಅದರ ಹಕ್ಕುಗಳು, ಮತ್ತು ಸಾಲಗಳು, ತತ್ಸಂಬಂಧವಾದ ಸದರೀ ಸಂಘದ ನಿಬಂಧನೆಗಳಿಗೆ, ಅಂಥಾ ನಿಬಂಧನೆಗಳು ಏನಾದರೂ ಇದ್ದರೆ, ಅನುಸಾರವಾಗಿ, ಮತ್ತು ಅಂಥಾ ನಿಬಂಧನೆಗಳು ಇಲ್ಲದಿರುವ ಸಂದರ್ಭದಲ್ಲಿ ಕಾರ್ಯನಿರ್ವಾಹ ಸಭೆಯವರು ಯುಕ್ತವೆಂದು ಎಣಿಸುವಂತೆ, ವಿಲೇವಾರಿ ಮತ್ತು ವ್ಯವಸ್ಥೆ ಆಗುವ ಬಗ್ಗೆ ಎಲ್ಲಾ ಅವಶ್ಯವಾದ ಪ್ರಯತ್ನಗಳು ಮಾಡಲ್ಪಡತಕ್ಕದ್ದು: ಪರಂತು ಆ ಸಂಘದ ಕಾರ್ಯನಿರ್ವಾಹ ಸಭೆಯವರಲ್ಲಿ ಆಗಲಿ ಸಾಮಾಜಿಕರಲ್ಲಿ ಆಗಲಿ ಯಾವ ವಿವಾದವಾದರೂ ಹುಟ್ಟುವ ಪಕ್ಷಕ್ಕೆ ಅದರ ಆಡಳಿತದ ವ್ಯವಸ್ಥೆಯು, ಆ ಸಂಘದ ಮುಖ್ಯ ಕಟ್ಟಡವಿರುವ ಡಿಸ್ಟ್ರಿಕ್ಟಿನ ಪ್ರಥಮ ಸಿವಿಲ್ ಅಧಿಕಾರವುಳ್ಳ ಮುಖ್ಯ ಕೋರ್ಟಿನಲ್ಲಿ ನಡೆಸಲ್ಪಡತಕ್ಕದ್ದು; ಮತ್ತು ಆ ಕೋರ್ಟಿನವರು ಆ ವಿಷಯದಲ್ಲಿ ಅವಶ್ಯವೆಂದು ತಾವು ಎಣಿಸುವ ಆಜ್ಞೆಯನ್ನು ಮಾಡತಕ್ಕದ್ದು.

ಸಂಘಗಳ ಆಗಲುವಿಕೆಯ ಬಗ್ಗೆ ಮತ್ತು ಅವರ ಆಡಳಿತಗಳ ವ್ಯವಸ್ಥೆಯ ಬಗ್ಗೆ ನಿಯಮಗಳು.

1429

ಪರಂತು ಆ ಉದ್ದೇಶದ ಬಗ್ಯೆ ಕೊಡಿಸಲ್ಪಟ್ಟ ಸಾಮಾಜಿಕರ ಒಂದು ಸಾಮಾನ್ಯ ಕೂಟದಲ್ಲಿ ಸಾಮಾಜಿಕರ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳವರು ಅಂಥಾ ಸಮ್ಮತಿ ಅವಶ್ಯಕ.

ಅಗಲುವಿಕೆ ಬಗ್ಯೆ ಅಪೇಕ್ಷೆಯನ್ನು ಖುದ್ದಾಗಿ ಅಥವಾ ಪ್ರತಿನಿಧಿಯ ದ್ವಾರಾ ಕೊಡಲ್ಪಟ್ಟ ತಮ್ಮ ಸಂಮತಿಗಳಿಂದ ಸೂಚಿಸಿದ್ದರೆ ಹೊರತು, ಯಾವ ಸಂಘವಾದರೂ ಅಗಲಿಸಲ್ಪಡತಕ್ಕದ್ದಲ್ಲ.

ಗವರ್ನಮೆಂಟಿನವರ ಅನುಮತಿ.

ಪರಂತು, ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಟ್ಟ ಯಾವ ಸಂಘದಲ್ಲಾಗಲಿ ಗವರನ್ಮೆಂಟಿನವರು ಸಾಮಾಜಿಕರಾಗಿ ಅಥವಾ ಚಂದಾದಾರರಾಗಿ ಅಥವಾ ಇತರ ವಿಧದಲ್ಲಿ ಸಂಬಂಧವುಳ್ಳವರಾಗಿರುವಾಗ, ಗವರನ್ಮೆಂಟಿನವರ ಅನುಮತಿ ವಿನಾ ಅಂಥಾ ಸಂಘವು ಅಗಲಿಸಲ್ಪಡತಕ್ಕದ್ದಲ್ಲ.

15. ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಟ್ಟ ಯಾವ ಸಂಘವಾದರೂ ಅಗಲಿಸಲ್ಪಟ್ಟ ಬಳಿಕ ಅದರ ಎಲ್ಲಾ ಸಾಲಗಳು ಮತ್ತು ದೇಣಿಗೆಗಳು ವ್ಯವಸ್ಥೆಯಾದ ನಂತರ ಯಾವ ಸೊತ್ತಾಗಲೀ ಉಳಿದಿರುವ ಸಂದರ್ಭದಲ್ಲಿ, ಆ ಸಂಘದ ಸಾಮಾಜಿಕರಿಗಾದರೂ ಅಥವಾ ಅವರುಗಳ ಪೈಕಿ ಕೆಲವರುಗಳಿಗಾದರೂ ಆ ಸೊತ್ತನ್ನು ಕೊಡಲೂ ಅಥವಾ ಹಂಚಲೂ ಕೂಡದು; ಆದರೆ, ಅಗಲುವಿಕೆಯ ಕಾಲದಲ್ಲಿ ಖುದ್ದಾಗಿ ಅಥವಾ ಪ್ರತಿನಿಧಿಯದ್ವಾರ ಹಾಜರಿದ್ದ ಸಾಮಾಜಿಕರ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳಿಗೆ ಕಡಮೆ ಇಲ್ಲದವರುಗಳ ಸಂಮತಿಗಳಿಂದಾದರೂ, ಅಥವಾ ಅದಿಲ್ಲದಪಕ್ಷಕ್ಕೆ ಮೇಲೆ ಹೇಳಲ್ಪಟ್ಟ ಅಂಥಾ ಕೋಟಿ ನವರಿಂದಾದರೂ ತೀರ್ಮಾನ ಮಾಡಲ್ಪಟ್ಟ ಇತರ ಯಾವ ಸಂಘಕ್ಕೆ ಆಗಲಿ ಕೊಡಲ್ಪಡತಕ್ಕದ್ದು.

ಅಗಲುವಿಕೆಯ ತರುವಾಯ ಯಾವ ಸಾಮಾಜಿಕನೂ ಆದಾಯ ಹೊಂದಕೂಡದು.

ಜಾಯಿಂಟ್ ಸ್ಟಾಕ್ ಕಂಪನಿಗಳಿಗೆ ಈ ಕಲಮು ಅನ್ವಯಿಸಕೂಡದು.

ಪರಂತು, ಈ ಕಲಮು, ಒಂದು ಜಾಯಿಂಟ್ ಸ್ಟಾಕ್ ಕಂಪನಿಯ ಸ್ವಭಾವವುಳ್ಳದ್ದಾಗಿ ಪಾಲುದಾರರ ಚಂದಾಗಳಿಂದ ಸ್ಥಾಪಿಸಲ್ಪಟ್ಟ ಯಾವ ಸಂಘಕ್ಕಾದರೂ ಪ್ರಯೋಗಿಸಲ್ಪಡತಕ್ಕದ್ದಲ್ಲ.

16. ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ, ಒಂದು ಸಂಘದ ನಿಬಂಧನೆಗಳ ಮತ್ತು ಖಾನೂನುಗಳ ಪ್ರಕಾರ ಅದರ ಸಾಮಾಜಿಕನಾಗಿ ಸೇರಿಸಲ್ಪಟ್ಟಿರುವ, ಚಂದಾವನ್ನು ಕೊಟ್ಟು ಇರುವ ಅಥವಾ ಅದರ ಸಾಮಾಜಿಕರ ಪಟ್ಟಿಗೆ ರುಜು ಮಾಡಿರುವ, ಅಂಥಾ ನಿಬಂಧನೆಗಳಿಗೆ ಮತ್ತು ಖಾನೂನುಗಳಿಗೆ ಅನುಸಾರವಾಗಿ ರಾಜೀನಾಮೇ ಕೊಡದೆ ಇರುವ ಮನುಷ್ಯನು ಆ ಸಂಘದ ಸಾಮಾಜಿಕನಾಗಿರತಕ್ಕದ್ದು; ಆದರೆ ಈ ರೆಗ್ಯುಲೇಷನಿನ ಪ್ರಕಾರವಾದ ಎಲ್ಲಾ ನಡವಳಿಕೆಗಳಲ್ಲಿಯೂ, ತತ್ಕಾಲದಲ್ಲಿ ಮೂರು ತಿಂಗಳುಗಳಿಗೆ ಹೆಚ್ಚಿದ ಕಾಲದವರೆಗೂ ಚಂದಾವನ್ನು ಬಾಕಿಯಲ್ಲಿಟ್ಟುಕೊಂಡಿರುವ ಯಾವ ಮನುಷ್ಯನೂ ಸಂಮತಿಯನ್ನು ಕೊಡುವುದಕ್ಕಾಗಲೀ, ಅಥವಾ ಸಾಮಾಜಿಕನೆಂದು ಎಣಿಸಲ್ಪಡುವುದಕ್ಕಾಗಲೀ ಹಕ್ಕುಳ್ಳವನಾಗಿರತಕ್ಕದ್ದಲ್ಲ.

ಸಾಮಾಜಿಕನ ವಿವರಣೆ. ಅನರ್ಹರಾಗಿ ಮಾಡಲ್ಪಟ್ಟ ಸಾಮಾಜಿಕರು.

17. ಒಂದು ಸಂಘದ ನಿಬಂಧನೆಗಳ ಮತ್ತು ಖಾನೂನುಗಳ ಪ್ರಕಾರ ಅದರ ಆಡಳಿತಗಳ ನಿರ್ವಾಹವನ್ನು ವಹಿಸಿರುವ ಅಧಿಕಾರಿ (ಗವರ್ನರ್) ಗಳು, ಆಲೋಚನಾ ಸಭೆ (ಕೌನ್ಸಿಲ್), ಆಡಳಿತಗಾರರು (ಡೈರೆಕ್ಟರುಗಳು), ಅಧಿಕಾರ ಸಭೆ (ಕಮ್ಮಿಟಿ) ಯವರು, ನಿಕ್ಷೇಪಧಾರಿ (ಟ್ರಸ್ಟೀ) ಗಳು ಅಥವಾ ಇತರ ಸಭೆಯು, ಅದರ ಕಾರ್ಯ ನಿರ್ವಾಹಕ ಸಭೆಯಾಗಿರತಕ್ಕದ್ದು.

ಕಾರ್ಯ ನಿರ್ವಾಹ ಸಭೆಯ ವಿವರಣೆ.

18. ಈ ರೆಗ್ಯುಲೇಷನು ಜಾರಿಗೆ ಬರುವದಕ್ಕೆ ಪೂರ್ವ, ಸಾಹಿತ್ಯಕ್ಕೆ ಶಾಸ್ತ್ರಕ್ಕೆ, ಅಥವಾ ಧರ್ಮಕಾರ್ಯಕ್ಕೆ ಸಂಬಂಧಪಟ್ಟ ಉದ್ದೇಶದ ಬಗ್ಯೆ ಸ್ಥಾಪಿಸಲ್ಪಟ್ಟು ಏರ್ಪಡಿಸೋಣಾದ ಯಾವ ಸಂಘವಾಗಲೀ ಇತರಪರ ಯಾವ ಕಾಲದಲ್ಲಾದರೂ, ಈ ರೆಗ್ಯುಲೇಷನಿನ ಪ್ರಕಾರವಾದ ಒಂದು ಸಂಘದಂತೆ ರಿಜಿಸ್ಟರ್ಮಾಡಲ್ಪಡಬಹುದು; ಪರಂತು ಈ ಕೆಳಗೆ ಬರುವ ನಿಯಮಕ್ಕೆ ಹಾಗೆ ಮಾಡೋಣವು ಒಳಪಟ್ಟಿರತಕ್ಕದ್ದು— ಅದೇನಂದರೆ :—

ರೆಗ್ಯುಲೇಷನಿಗೆ ಪೂರ್ವ ಆದ ಸಂಘಗಳ ರಿಜಿಸ್ಟ್ರೇಷನ್.

ಕಾರ್ಯನಿರ್ವಾಹ ಸಭೆಯವರಿಂದ ಆ ಉದ್ದೇಶದ ಬಗ್ಗೆ ಕೊಡಿಸಲ್ಪಟ್ಟ ಯಾವದಾದರೂ ಸಾಮಾಜಿಕರ ಸಾಮಾನ್ಯಕೂಟದಲ್ಲಿ ಮುದ್ದಾಗಿ ಅಥವಾ ಪ್ರತಿನಿಧಿದ್ವಾರ ಹಾಜರಿದ್ದ ಸಾಮಾಜಿಕರ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳವರ ಸಂಮತಿಯು ಹಾಗೆ ರಿಜಿಸ್ಟರ್ಮಾಡಲು ಕೊಡಲ್ಪಟ್ಟಿದ್ದರೆ ಹೊರ್ತು ಅಂಥಾ ಯಾವ ಸಂಘವಾದರೂ ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಡತಕ್ಕದ್ದಲ್ಲ.

ಸಂಮತಿಯು ಅವಶ್ಯ.

ಅಂಥಾ ಸಂಘ ಏರ್ಪಟ್ಟಾಗ ಕಾರ್ಯನಿರ್ವಾಹ ಸಭೆಯನ್ನು ಏರ್ಪಡಿಸದೇ ಇರುವ ಪಕ್ಷಕ್ಕೆ, ಮುಂದೆ ಸಂಘದಪರವಾಗಿ ನಡೆಯುವ ಬಗ್ಗೆ, ಒಂದು ಕಾರ್ಯನಿರ್ವಾಹ ಸಭೆಯನ್ನು ತಕ್ಕ ನೋಟಿಸ್ ಸಾದರಾದ ಬಳಿಕ ಏರ್ಪಡಿಸಲು ಅದರ ಸಾಮಾಜಿಕರಿಗೆ ನ್ಯಾಯವಾಗಿ ಇರತಕ್ಕದ್ದು.

19. ಹಿಂದಿನ ಕಡೇ ಪ್ರಕರಣದಲ್ಲಿ ನಮೂದಾದ ಅಂಥಾ ಯಾವ ಸಂಘವಾದರೂ ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಡುವ ಬಗ್ಗೆ, ಸಂಘದ ಹೆಸರು, ಅದರ ಉದ್ದೇಶಗಳು ಮತ್ತು ಕಾರ್ಯ ನಿರ್ವಾಹ ಸಭೆಯವರ ಹೆಸರುಗಳು, ವಿಳಾಸಗಳು ಉದ್ಯೋಗಗಳು ಇವುಗಳನ್ನು ತೋರಿಸುವ ಒಂದು ಮೆಮೋರಾಂಡಮ್ ಮಾ ಪಟ್ಟಿಯನ್ನು, ಅದರೊಂದಿಗೆ 3ನೇ ಪ್ರಕರಣದಲ್ಲಿ ವಿಧಿಸಿರುವಂತೆ ಸರ್ಟಿಫೈ ಮಾಡಲ್ಪಟ್ಟ ಆ ಸಂಘದ ನಿಬಂಧನೆಗಳ ಮತ್ತು ಕಾನೂನುಗಳ ಒಂದು ನಕಲನ್ನು ಮತ್ತು ರಿಜಿಸ್ಟ್ರೇಷನ್ ಆಗಬೇಕೆಂದು ತೀರ್ವಾನ ಮಾಡಿದ ಸಾಮಾಜಿಕರ ಸಾಮಾನ್ಯ ಕೂಟದಲ್ಲಿ ನಡೆದಂಥಾ ನಡವಳಿಕೆಗಳ ರಿಪೋರ್ಟಿನ ಒಂದು ನಕಲನ್ನು ಜಾಯಿಂಟ ಸ್ಟಾಕ ಕಂಪನಿಗಳ ರಿಜಿಸ್ಟ್ರಾರರವರಲ್ಲಿ ಕಾರ್ಯನಿರ್ವಾಹ ಸಭೆಯವರು ದಾಖಲ್ಮಾಡಿದರೆ ಸಾಕಾಗಿರುತ್ತದೆ.

ಅಂಥಾ ಸಂಘಗಳು ರಿಜಿಸ್ಟ್ರಾರ್ ಆಫ್ ಜಾಯಿಂಟ್ ಸ್ಟಾಕ ಕಂಪನಿಯವರಲ್ಲಿ ಮೆಮೋರಾಂಡಂ ಮಾ ಸಂಘದ ಪತ್ರ ಮುಂತಾದ್ದನ್ನು ದಾಖಲ್ ಮಾಡತಕ್ಕದ್ದು.

20 ಯಾವ ಮನುಷ್ಯನಾಗಲೀ, ಜಾಯಿಂಟ ಸ್ಟಾಕ ಕಂಪನಿಗಳ ರಿಜಿಸ್ಟ್ರಾರರವರಲ್ಲಿ ದಾಖಲ್ಮಾಡಲ್ಪಟ್ಟ ಎಲ್ಲಾ ದಸ್ತೈವೆಜುಗಳನ್ನು, ಪ್ರತಿ ಅಜಮಾಯಿಷಿಗೆ ಒಂದು ರೂಪಾಯಿ ಫೀ ಕೊಟ್ಟ ನಂತರ ಅಜಮಾಯಿಷಿ ಮಾಡಬಹುದು; ಮತ್ತು ಯಾವ ಮನುಷ್ಯನಾಗಲೀ ಯಾವ ದಸ್ತೈವೆಜಿನ ಅಥವಾ ಯಾವ ದಸ್ತೈವೆಜಿನಿಂದ ಎತ್ತಿ ಬರೆದ ಭಾಗದ ಅಥವಾ ಯಾವ ದಸ್ತೈವೆಜಿನ ಯಾವ ಭಾಗದ ರಿಜಿಸ್ಟ್ರಾರಿಂದ ಸರ್ಟಿಫೈ ಮಾಡಲ್ಪಟ್ಟ ನಕಲನ್ನಾಗಲಿ ಅಂಥಾ ನಕಲಿನ ಅಥವಾ ಪ್ರತಿ ನೂರು ಮಾತುಗಳಿಗೆ ಎರಡು ಆಣೆಯ ಪ್ರಕಾರ ಫೀ ಸಾವತಿ ಮಾಡಿದ ತರುವಾಯ, ಕೋರಿಕೊಳ್ಳಬಹುದು; ಮತ್ತು ಯಾವ ಕೋರ್ಟಿನ ವ್ಯವಹಾರಗಳಲ್ಲಿಯಾದರೂ ಹಾಗೆ ಸರ್ಟಿಫೈ ಮಾಡಲ್ಪಟ್ಟ ನಕಲು ಅದರಲ್ಲಿರುವ ವಿಷಯಗಳನ್ನು ಸ್ಥಾಪಿಸುವುದಕ್ಕೆ, ಅನ್ಯಥಾ ಕೇಂಡಿಸಲ್ಪಟ್ಟ ಹೊರ್ತು, ಸಾಕಾದಷ್ಟು ಸಾಕ್ಷ್ಯವಾಗಿರತಕ್ಕದ್ದು.

ದಸ್ತೈವೆಜುಗಳ ಅಜಮಾಯಿಷಿ.

21. ಈ ರೆಗ್ಯುಲೇಷನಿನ ಪ್ರಕಾರ ಈ ಕೆಳಗಿನ ಸಂಘಗಳು ರಿಜಿಸ್ಟರ್ಮಾಡಲ್ಪಡಬಹುದು ಅವು ಯಾವವೆಂದರೆ:—ಧರ್ಮ ಕಾರ್ಯಗಳ ಸಂಘಗಳು, ಶಾಸ್ತ್ರವನ್ನು, ಗ್ರಂಥ ಸಮುದಾಯವನ್ನು ಅಥವಾ ಕಲೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ, ಉಪದೇಶದ ಬಗ್ಗೆ, ಉಪಯುಕ್ತವಾದ ಜ್ಞಾನಪ್ರಸರಣದ ಬಗ್ಗೆ, ಎಲ್ಲರ ಅಥವಾ ಸಾಮಾಜಿಕರ ಉಪಯೋಗಾರ್ಥವಾಗಿ ಪುಸ್ತಕಶಾಲೆಗಳನ್ನು ಅಥವಾ ವಾಚಕಶಾಲೆಗಳನ್ನು ಚಿತ್ರಲೇಖನ ಮುಂತಾದ ಕಲೆಗಳ ಸಂಬಂಧವಾದ ಕೆಲಸಗಳ, ಮತ್ತು ಸ್ಥಾವರ ಜಂಗಮಶಾಸ್ತ್ರ ಸಂಬಂಧವಾದ ಪದಾರ್ಥಗಳ, ಯಾಂತ್ರಿಕ ಮತ್ತು ಪದಾರ್ಥ ವಿಜ್ಞಾನಸಂಬಂಧವಾದ ನವಕಲ್ಪನೆಗಳ, ಉಪಕರಣಗಳ ಅಥವಾ ಉಪಾಯಗಳ ಸಂಗ್ರಹಗಳ ಸರ್ವಜನೋಪಯುಕ್ತವಾದ ವಿಚಿತ್ರವಸ್ತು ಪ್ರದರ್ಶನ ಶಾಲೆಗಳನ್ನು ಸ್ಥಾಪಿಸುವ ಅಥವಾ ಕಾಪಾಡುವ ಬಗ್ಗೆ ಏರ್ಪಡಿಸಲ್ಪಟ್ಟ ಸಂಘಗಳು.

ಯಾವ ಸಂಘಗಳಿಗೆ ರೆಗ್ಯುಲೇಷನ್ ಪ್ರಯೋಗಿಸಲ್ಪಡತಕ್ಕದ್ದು.

ಪಿ. ಎನ್. ಕೃಷ್ಣಮೂರ್ತಿ,
ಮೈಸೂರು ದಿವಾನ.

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 40.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 6, ಸನ 1904.

ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ನಂಬರ್ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರ್ಗು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ಕಂಟ್ರೋಲ್ಲರವರು, ಪಬ್ಲಿಕ್‌ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡ್ ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು ; ಪೋಸ್ಟ್ಆಫೀಸ್ ನೋಟಿಸ್‌ಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು—ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 24—26ನೆ ಸೆಪ್ಟಂಬರ್ 1904.

ನಂ. (2581)—93-2—ಸ್ಯಾನಿಟೇಷನ್, ಕೊಡಗುದೇಶದ ಪಡಿನಾಲ್ಕನಾಡು ತಾಲ್ಲೂಕಿನ ತಾವುನಾಡು—ಸಂಪಾಜೆನಾಡು ಭಾಗಮಂಡಲದಲ್ಲಿ ನಡೆಯುವ ತಲಕಾವೇರಿ ಉತ್ಸವದ ಸಂದರ್ಭದಲ್ಲಿ 1904ನೆ ಅಕ್ಟೋಬರ್ 7ರ ಲಾಗಾಯತು ನವಂಬರ್ 15ರ ವರಿವಿಗೆ ಮೈಸೂರು ಸಂಸ್ಥಾನದಿಂದಲೂ ಮತ್ತು ರೋಗ ತಗಲಿದ ಇತರ ಪ್ರದೇಶಗಳಿಂದಲೂ ಜನಗಳು ಬರುವದನ್ನು ನಿರೋಧಿಸುವ ಕೊಡಗುದೇಶದ ಚೀಫ್ ಕಮಿಷನರವರಿಂದ ಕೊಡಲ್ಪಟ್ಟ 1904ನೆ ಸೆಪ್ಟಂಬರ್ 14ನೆ ಮುರ್ತುಂ 55ನೆ ನಂಬರ್ ಇದರಡೀ ಕಂಡ ಇಸ್ತಿಹಾರ್ನಾಮೆಯು ತಿಳುವಳಿಕೆ ಬಗ್ಯೆ ಪುನಃ ಫಾಯಿಷ್ಮಾಡಲ್ಪಟ್ಟಿರುತ್ತೆ :—

ಕೊಡಗು ದೇಶದ ಹಜರತ್ ಚೀಫ್ ಕಮಿಷನರ್ ಸಾಹೇಬರವರು.

ಇಸ್ತಿಹಾರ್ನಾಮೆ.

ತಾರೀಖು 14ನೆ ಸೆಪ್ಟಂಬರ್ ಸನ 1904ನೆ ಇಸವಿ.

ನಂಬರ್ 55, ಕೊಡಗು ದೇಶದ ಪಡಿನಾಲ್ಕನಾಡು ತಾಲ್ಲೂಕು ತಾವುನಾಡು—ಸಂಪಾಜೆನಾಡು ಭಾಗಮಂಡಲ ಗ್ರಾಮದಲ್ಲಿ ಬರುವ ತುಲಾಸಂಕ್ರಮಣದ ಸಮಯದಲ್ಲಿ ನಡೆಯುವ ತಲಕಾವೇರಿ ಜಾತ್ರೆಗೆ ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಪ್ಲೇಗ್ ರೋಗ ತಗಲಿದ ಇತರ ಪ್ರದೇಶಗಳಿಂದಲೂ ಬರುವ ಜನರನ್ನು ಸದರೀ ಸ್ಥಳದಲ್ಲಿ ಕೇರಲು ಬಿಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಹಜರತ್ ಅಫಿಷಿಯೇಟಿಂಗ್ ಚೀಫ್ ಕಮಿಷನರ್ ಸಾಹೇಬರವರು ತಿಳಿಯುವದ್ದರಿಂದ, ಸನ 1897ನೆ ಇಸವಿ ಸಾಂಕ್ರಾಮಿಕ ರೋಗಗಳ ಆಕ್ಟ್ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಚಲಾವಣೆಯಲ್ಲಿ, ಸನ 1904ನೆ ಇಸವಿ ಅಕ್ಟೋಬರ್ ತಾರೀಖು 7ರಿಂದ ನವಂಬರ್ 15ರ ವರಿಗೆ ಸದರೀ ಜಾತ್ರೆಗೆ ಮೈಸೂರು, ದಕ್ಷಿಣ ಕನ್ನಡಜಿಲ್ಲೆ ಮತ್ತು ಪ್ಲೇಗ್ ತಗಲಿದ ಇತರ ಪ್ರದೇಶಗಳಿಂದಲೂ ಜನರು ಬರುವದನ್ನು ಈ ಮೂಲಕ ನಿರೋಧಪಡಿಸಿ ಇದೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರೀ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥಾವರೆಲ್ಲರನ್ನು ಹಿಂದಕ್ಕೆ ಕಳುಹಿಸಲಾದೀತು.

ಆರ್. ಸಿ. ಎಚ್. ಎಂ. ಕೀಂಗ್,
ಚೀಫ್ ಕಮಿಷನರವರ ಸೆಕ್ರಿಟೆರಿಯವರು.

ತಾರೀಖು 16–17ನೆ ಸೆಪ್ಟಂಬರ್ 1904.

ನಂ (2206)—58–4—ಸ್ಯಾನಿಟೇರ್ಷ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕ್ಕಂ 9383—ಮಿ. ಫೈ. 21—96 ವ 9384—ಮಿ. ಫೈ. 21—96ನೆ ನಂಬರುಗಳ ಇಸ್ತಿಹಾರ್ನಾಮೆಗಳೊಂದಿಗೆ ಕೊಡಲ್ಪಟ್ಟ ರೆಗ್ಯುಲೇರ್ಷಗಳ ಉದ್ದೇಶಗಳಿಗೋಸ್ಕರ ಮೈಸೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.			ತಾಲ್ಲೂಕು.
1. ಹೊಂಗನೂರು	..	..	ಚಾಮರಾಜನಗರ.
2. ಶಟ್ಟಿಹಳ್ಳಿ	..	...	ಗುಂಡ್ಲುಪೇಟೆ.
3. ಸೋಮಹಳ್ಳಿ	...	..	.. ಡಿಟೋ
4. ಅಂಕನಳ್ಳಿ	...	...	.... ಕೃಷ್ಣರಾಜಪೇಟೆ.
5. ಲಿಂಗರಾಜ ಛತ್ರ	...	..	... ಮಂಡ್ಯ.
6. ಮದ್ರಹಳ್ಳಿ	..	...	... ಮಳವಳ್ಳಿ.
7. ಕನ್ನಘಟ್ಟ	..	..	... ನಾಗಮಂಗಲ.
8. ಕವಡಹಳ್ಳಿ	...	..	.. ಡಿಟೋ
9. ಕೆಬ್ಬೆ ಕೊಪ್ಪಲು	..	..	.. ಡಿಟೋ
10. ಮಲ್ಲೇಗೌಡನಹಳ್ಳಿ	...	..	... ಡಿಟೋ

ತಾರೀಖು 17–19ನೆ ಸೆಪ್ಟಂಬರ್ 1904.

ನಂ. 2278—17–15—ಸ್ಯಾನಿಟೇರ್ಷ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕ್ಕಂ 9383—ಮಿ. ಫೈ. 21–96 ವ 9384—ಮಿ. ಫೈ. 21–96ನೆ ನಂಬರುಗಳ ಇಸ್ತಿಹಾರ್ನಾಮೆಗಳೊಂದಿಗೆ ಕೊಡಲ್ಪಟ್ಟ ರೆಗ್ಯುಲೇರ್ಷಗಳ ಉದ್ದೇಶಗಳಿಗೋಸ್ಕರ ತುಮಕೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
1. ಚಿಕ್ಕಹೊನ್ನಡಿಕೆ	...	ತುಮಕೂರು.	5. ಗುರುಗದಹಳ್ಳಿ	..	ತಿಪಟೂರು.
2. ವಡ್ರಹಳ್ಳಿ	..	ಡಿಟೋ	6. ಮಾದೆನೂರು	...	ಡಿಟೋ
3. ಕಡಬಕಾಪ್ಪೆ	..	ಗುಬ್ಬಿ.	7. ಕಲ್ಲಸೆಟ್ಟಿಹಳ್ಳಿ	..	ಡಿಟೋ
4. ಬೆಲಗೆರೆ	..	ಡಿಟೋ			

ತಾರೀಖು 17–19ನೆ ಸೆಪ್ಟಂಬರ್ 1904.

ನಂ. 2276—16–6—ಸ್ಯಾನಿಟೇರ್ಷ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕ್ಕಂ 9383—ಮಿ. ಫೈ. 21–96 ವ 9384—ಮಿ. ಫೈ. 21–96ನೆ ನಂಬರುಗಳ ಇಸ್ತಿಹಾರ್ನಾಮೆಗಳೊಂದಿಗೆ ಕೊಡಲ್ಪಟ್ಟ ರೆಗ್ಯುಲೇರ್ಷಗಳ ಉದ್ದೇಶಗಳಿಗೋಸ್ಕರ ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
1. ಶಟ್ಟಿಹಳ್ಳಿ	...	ಹಾಸನ.	12. ಸೂರಪುರ	..	ಬೇಲೂರು.
2. ಗೊಂಬೂರು	..	ಡಿಟೋ	13. ಚಿಕ್ಕೀರಯ್ಯನ ಕೊಪ್ಪಲು	..	ಡಿಟೋ
3. ಮುದುಗೆರೆ	..	ಡಿಟೋ	14. ಲಕ್ಷ್ಮೀಪುರ	..	ಡಿಟೋ
4. ದುದ್ದ	..	ಡಿಟೋ	15. ಕಿರಗಡ್ಲು	..	ಡಿಟೋ
5. ತೊರಗರವಳ್ಳಿ	..	ಆಲೂರು (ಸಬ್ ತಾಲ್ಲೂಕು.)	16. ಕೋಡಿಹಳ್ಳಿ (ಹಾರ್ನಹಳ್ಳಿ ಹೋಬಳಿ.	..	ಅರಸೀಕೆರೆ.
6. ಮಾವನೂರು		ಡಿಟೋ	17. ಹಾರನಹಳ್ಳಿ	..	ಡಿಟೋ
7. ಕನತೂರು	..	ಡಿಟೋ	18. ಜೋಡಿಮಲ್ಲಾಪುರ	...	ಡಿಟೋ
8. ಕಿಗಟ್ಟು	...	ಡಿಟೋ	19. ಗೊಲ್ಲರಹಟ್ಟಿ	..	ಡಿಟೋ
9. ಸೇಲಿಕೆರೆ	..	ಡಿಟೋ	20. ಕೋಡಿಹಳ್ಳಿ (ಕಸಬಾ ಹೋಬಳಿ)		ಡಿಟೋ
10. ಓತಪಾತನಹಳ್ಳಿ	..	ಬೇಲೂರು.	21. ಮಾರಡಿ	...	ಅಂಕಲಗೂಡು.
11. ಬಿಟ್ಟುವಳ್ಳಿ	..	ಡಿಟೋ			

ತಾರೀಖು 28—29ನೆ ಸೆಪ್ಟಂಬರ್ 1904.

ನಂ. 2718–35–8—ಸ್ಯಾನಿಟೇರ್ಷ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕ್ಕಂ 9383—ಮಿ. ಫೈ. 21–96ನೆ ಮತ್ತು 9384—ಮಿ. ಫೈ. 21–96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇರ್ಷಗಳ ಉದ್ದೇಶಗಳಿಗೋಸ್ಕರ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ್ದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
ಚಿತ್ರದುರ್ಗ	...	ಚಿತ್ರದುರ್ಗ	ಲಕ್ಷ್ಮಿಸಾಗರ	...	ಚಿತ್ರದುರ್ಗ
ತುರುವನೂರು	..	ಡಿಟೋ	ಚಿಕ್ಕಾಗಟ್ಟಿ	...	ಹೊಸದುರ್ಗ

1483

ತಾರೀಖು 29—30ನೆ ಸೆಪ್ಟಂಬರ್ 1904.

ನಂ. 2750-17-17—ಸ್ಯಾನಿಟೇರ್ಷ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕ್ಕಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇರ್ಷಗಳ ಉದ್ದೇಶಗಳಿಗೋಸ್ಕರ ತುಮಕೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
ತುಮಕೂರ ಟರ್ವ	...	ತುಮಕೂರು	ನಾರಣಕೆರೆ	...	ತುಮಕೂರು
ಲಕ್ಕವಾಗೊಂಡನಹಳ್ಳಿ	...	ಚಿಕ್ಕನಾಯಿಕನಹಳ್ಳಿ	ಕುರುಗುಂಡೆ	...	ಡಿಟೋ
ಕೈದಳ	...	ತುಮಕೂರು	ಕೋಣನಕಲ್ಲು	...	ಗುಬ್ಬಿ
ಸಂಗಲಾಪುರ	..	ಡಿಟೋ			

ತಾರೀಖು 29—30ನೆ ಸೆಪ್ಟಂಬರ್ 1904.

ನಂ. 2752—34-8—ಸ್ಯಾನಿಟೇರ್ಷ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕ್ಕಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇರ್ಷಗಳ ಉದ್ದೇಶಗಳಿಗೋಸ್ಕರ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

	ಸ್ಥಳ.		ತಾಲ್ಲೂಕು.		ಸ್ಥಳ.		ತಾಲ್ಲೂಕು.
1.	ಕರ್ತಿಕೆರೆ	..	ಚಿಕ್ಕಮಗಳೂರು.	20.	ಮೆಲ್ಲೇಶ್ವರ	..	ಕಡೂರು
2.	ದೊಡ್ಡಕುರುಬರಹಳ್ಳಿ	...	ಡಿಟೋ	21.	ದೊಡ್ಡಘಟ್ಟ	..	ಡಿಟೋ
3.	ಕಬ್ಬಿಗೆರೆ	..	ಡಿಟೋ	22.	ಹುಲಿಕೆರೆ	...	ಡಿಟೋ
4.	ಹಂಪಾಪುರ	...	ಡಿಟೋ	23.	ಗರ್ಗೆ	..	ಡಿಟೋ
5.	ದ್ಯಾವರಹಳ್ಳಿ	...	ಡಿಟೋ	24.	ಹಡಿಕೆರೆ	...	ತರೀಕೆರೆ
6.	ಬನಕನಹಳ್ಳಿ	...	ಡಿಟೋ	25.	ಹೆಬ್ಬೂರು	...	ಡಿಟೋ
7.	ಕುರಿಚಿಕ್ಕನಹಳ್ಳಿ	...	ಡಿಟೋ	26.	ಮೂನೊಪೆ	...	ಡಿಟೋ
8.	ಮಂಗತ್ತಿಹಳ್ಳಿ	..	ಡಿಟೋ	27.	ಅತ್ತಿಗಟ್ಟ	...	ಡಿಟೋ
9.	ಮಾಗಡಿ	...	ಡಿಟೋ	28.	ಲಕ್ಕವಳ್ಳಿ	...	ಡಿಟೋ
10.	ಕೂಳರಹಳ್ಳಿ	..	ಡಿಟೋ	29.	ಅಜ್ಜಂಪುರ	..	ಡಿಟೋ
11.	ತಡಚೇನಹಳ್ಳಿ	..	ಡಿಟೋ	30.	ಚನ್ನಾಪುರ	..	ಡಿಟೋ
12.	ಬೀರೂರು	...	ಕಡೂರು.	31.	ಜಾವೂರು	...	ಡಿಟೋ
13.	ಕೋಡಿಹಳ್ಳಿ	..	ಡಿಟೋ	32.	ಹಿರಿಕಣವಂಗಲ	..	ಡಿಟೋ
14.	ಮಲ್ಲಾಪುರ	....	ಡಿಟೋ	33.	ಸಿದ್ದಾಪುರ	....	ಡಿಟೋ
15.	ಮಾವಿನಹಳ್ಳಿ		ಡಿಟೋ	34.	ದೋರನಹಾಳ್	..	ಡಿಟೋ
16.	ಬ್ಯಾಡರಹಳ್ಳಿ	...	ಡಿಟೋ	35.	ಕೆಂಚಾಪುರ	..	ಡಿಟೋ
17.	ಪಟ್ನಗೆರೆ	...	ಡಿಟೋ	36.	ಯಡಹಳ್ಳಿ	...	ಯಡಹಳ್ಳಿ ಸಬ್ ತಾ॥
18.	ನಾಗೊಂಡನಹಳ್ಳಿ	..	ಡಿಟೋ	37.	ಹಿಲುವಳ್ಳಿ	..	ಡಿಟೋ
19.	ಬಳ್ಳಿಗನೂರು	..	ಡಿಟೋ				

ತಾರೀಖು 29—30ನೆ ಸೆಪ್ಟಂಬರ್ 1904.

ನಂ. 2772—42-31—ಸ್ಯಾನಿಟೇರ್ಷ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕ್ಕಂ 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಕೊಡಲ್ಪಟ್ಟ ರೆಗ್ಯುಲೇರ್ಷಗಳ ನಿಯಮಗಳಲ್ಲಿ ವಿಧಿಸಲ್ಪಟ್ಟ ಮೇರೆ ಮೈಸೂರ ಷಹರಿನಲ್ಲಿ ಅಜಮಾಯಿಷಿ ಪದ್ಧತಿಯ ಉದ್ದೇಶಗಳಿಗೋಸ್ಕರ ವಿಶಿಷ್ಟ ಮೈಸೂರ ಸೀಮೆಯು "ರೋಗ ತಗಲಿದ ಪ್ರದೇಶವಾಗಿ" ಎಣಿಸಲ್ಪಡತಕ್ಕದ್ದು.

ತಾರೀಖು 30ನೆ ಸೆಪ್ಟಂಬರ್—1ನೆ ಅಕ್ಟೋಬರ್ 1904.

ನಂ. 2839—48-5—ಸ್ಯಾನಿಟೇರ್ಷ, ಸಂ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನಿನ 2ನೆ ಸೆಕ್ಷನ್ ಅನುಸರಿಸಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಾಹಾರಾಜರವರ ಗವರ್ನ್ಮೆಂಟಿನವರು, 1903ನೆ ಡಿಸೆಂಬರ್ 10ನೆ ಮಾರ್ಕ್ಕಂ ಲೋ. ಬೋ. ಪಿ. 759ನೆ ನಂಬರ್ ಇಸ್ತಿಹಾರ್ನಾಮೆಯಿಂದ ತಿದ್ದುಪಾಟಾದ ಮೇರೆ ಮೇಲ್ವಿಚಾರಣೆ ಕ್ರಮವೆಂದು ಗೊತ್ತಾದ ಮನೆಮನೆಯ ಅಜಮಾಯಿಷಿ ಕ್ರಮವನ್ನು ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಸಕ್ಲೇಶಪುರ, ಅರಕಲಗೂಡು, ಅರಸೀಕೆರೆ, ಚನ್ನರಾಯಪಟ್ಟಣ ಹೊಳೆನರಸೀಪುರ ಪಟ್ಟಣಗಳಿಗೆ ಲಗಾವು ಮಾಡತಕ್ಕದ್ದೆಂದು ಅಪ್ಪಣೆ ಕೊಡುವದಲ್ಲದೆ ಹಾಸನದ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರಿಗೆ ಸದರೀ ಕ್ರಮವನ್ನು ಸರಿಯಾಗಿ ಜಾರೀಲಿ ತರಲಿಕ್ಕೆ ಯುಕ್ತವೆಂದು ಅವರಿಗೆ ತೋರಬರುವಂತಾ ಸನ್ನಾಹಗಳನ್ನು ಮಾಡುವ ಬಗ್ಯೆ ಅಧಿಕಾರವನ್ನು ಕೊಟ್ಟಿರುತ್ತಾರೆ.

ತಾರೀಖು 27ನೆ ಸೆಪ್ಟಂಬರ 1904.

ನಂ. ಜ. 1699—11-2, ಡಿಸ್ಟ್ರಿಕ್ಟ್ ಬೋರ್ಡಿನಿಂದಲೂ, ಹಾಸನ ಡಿಸ್ಟ್ರಿಕ್ಟಿನ ಮ್ಯುನಿಸಿಪಾಲಿಟಿಗಳಿಂದಲೂ ಮತ್ತು ದಕ್ಷಿಣ ಮೈಸೂರು ಯ್ಯುರೋಪಿಯರ್ ಪ್ಲಾಂಟರುಗಳ ವ ನೇಟಿವ್ ಪ್ಲಾಂಟರುಗಳ ಸಂಘದಿಂದಲೂ 1904ನೆ ಇಸವಿಯ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ ಇದರಡೀ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತದೆ :—

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಹಾಸನ ಮ್ಯುನಿಸಿಪಾಲಿಟಿ ...	1. ರೆವರೆಂಡ್ ಮೆ|| ಎಚ್. ಎಚ್. ನ್ಯೂಹ್ಯಾಂಯವರು .	ವೆಸ್ಲಿಯರ್ ಮಿಷನರಿ.
	2. ಮೆ|| ವೆಂಕಟರಂಗಯ್ಯನವರು ..	ಬ್ಯಾಂಕ್ ಏಜಂಟರು ಮತ್ತು ಜಮೀನ್ದಾರು.
ಹೊಳೆನರಸೀಪುರ ಮ್ಯುನಿಸಿಪಾಲಿಟಿ .	1. ,, ವೆಂಕಟರಾಮಯ್ಯನವರು ..	ಪ್ಲೀಡರು.
ಡಿಸ್ಟ್ರಿಕ್ಟ್ ಫಂಡ್ ಬೋರ್ಡು ...	1. ,, ಲಕ್ಷ್ಮಿನರಸಿಂಹಾಚಾರ್ರು ..	ಡಿಟೋ
ದಕ್ಷಿಣ ಮೈಸೂರು ಯ್ಯುರೋಪಿಯರ್ ಪ್ಲಾಂಟರುಗಳ ಸಂಘ.	1. ,, ಗ್ರೇಹ್ಯಾಂ ಅಂಡರ್ಸನ್, ಸಿ. ಐ. ಇ., ಯವರು.	ಕಾಫಿಪ್ಲಾಂಟರು.
ದಕ್ಷಿಣ ಮೈಸೂರು ನೇಟಿವ್ ಪ್ಲಾಂಟರುಗಳ ಸಂಘ.	1. ,, ಬೊಮ್ಮನಕೆರೆ ಮಲ್ಲೆಗೌಡರು ...	ಮಂಡೇ ಪಟೇಲರು ವ ಜಮೀನ್ದಾರ್ರು

ತಾರೀಖು 27ನೆ ಸೆಪ್ಟಂಬರ 1904.

ನಂ. ಜ. 1700—14-2, ಡಿಸ್ಟ್ರಿಕ್ಟ್ ಬೋರ್ಡಿನಿಂದಲೂ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟಿನ ಮ್ಯುನಿಸಿಪಾಲಿಟಿಗಳಿಂದಲೂ 1904ನೆ ಇಸವಿಯ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ ಇದರಡೀ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತದೆ :—

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಚಿತ್ರದುರ್ಗ ಮ್ಯುನಿಸಿಪಾಲಿಟಿ ...	1. ಮೆ|| ಮಹಮದ್ ದಸ್ತಗೀರಿಸಾಬರು	ಪೆನ್ಷನರು ಮತ್ತು ಸ್ಟ್ಯಾಂಪ್‌ವೆಂಡರು
	2. ,, ಬಿ. ಲಕ್ಷ್ಮಿನಾರಣಪ್ಪನವರು ...	ಪ್ಲೀಡರು.
ದಾವಣಗೆರೆ ಮ್ಯುನಿಸಿಪಾಲಿ ...	1. ,, ರೊಜೇರಿಯೋಯವರು ..	ಮದರಾಸು ಮೆಸರ್ಸ್ ಬಿನ್ನಿ ಅಂಡ್ ಕೋ ಯವರ ಏಜಂಟರು.
ಹರಿಹರ ಮ್ಯುನಿಸಿಪಾಲಿಟಿ ..	1. ,, ಕೇಶವನಾಯಿಕರು ..	ಸಾಹುಕಾರ್ರು ಮತ್ತು ಜಮೀನ್ದಾರ್ರು
ಡಿಸ್ಟ್ರಿಕ್ಟ್ ಫಂಡ್ ಬೋರ್ಡು .	1. ,, ಭಾರಿ ಸಂಣಪ್ಪನವರು ...	ವರ್ತಕರು, ಮೊಳಕಾಲಮೂರು.
	2. ,, ಗೌಂಡೇರಿ ಗೋಪಾಲಯ್ಯನವರು ..	ಜಮೀನ್ದಾರ್ರು ಮತ್ತು ಶಾನಭೋಗರು, ಹೊಳಲಕೆರೆ.

ತಾರೀಖು 27ನೆ ಸೆಪ್ಟಂಬರ 1904.

ನಂ. ಜ. 1701—9—6, ಡಿಸ್ಟ್ರಿಕ್ಟ್ ಬೋರ್ಡಿನಿಂದಲೂ, ಕಡೂರು ಡಿಸ್ಟ್ರಿಕ್ಟಿನ ಮ್ಯುನಿಸಿಪಾಲಿಟಿಗಳಿಂದಲೂ ಮತ್ತು ಉತ್ತರ ಮೈಸೂರು ಪ್ಲಾಂಟರುಗಳ ಸಂಘದಿಂದಲೂ 1904ನೆ ಇಸವಿಯ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ ಇದರಡೀ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತದೆ :—

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಚಿಕ್ಕಮಗಳೂರು ಟವರ್ ಮ್ಯುನಿಸಿಪಾಲಿಟಿ.	1. ಮೆ|| ಎ. ನರಸಿಂಹಾಚಾರ್ರು ...	ಪ್ಲೀಡರು.
	2. ,, ಜೆ. ಅಬ್ದುಲ್‌ಖಲೀಕ್ ಯವರು ..	ಕಾಫಿ ಪ್ಲಾಂಟರು.
ತರೀಕೆರೆ ಮುನಿಸಿಪಾಲಿಟಿ ..	1. ,, ಶಿವಪ್ಪಗೌಡರು ..	ಪಟೇಲರು.
ಕಡೂರು ಡಿಸ್ಟ್ರಿಕ್ಟ್ ಫಂಡ್ ಬೋರ್ಡು.	1. ,, ಎಂ. ಗಣೇಶರಾಮರು ..	ಕಾಫಿ ಪ್ಲಾಂಟರು.
	2. ,, ಎಸ್. ಪಾರ್ವತಪ್ಪನವರು ...	ವರ್ತಕರು.
ಉತ್ತರ ಮೈಸೂರು ಪ್ಲಾಂಟರುಗಳ ಸಂಘ.	1. ,, ಸಿ. ಡಾವರ್ಸ್ ಯವರು ...	ಕಾಫಿ ಪ್ಲಾಂಟರು, ಕೆಳಗೂರು ಎಸ್ಟೇಟು, ಮೂಡಗೆರೆ ತಾಲ್ಲೂಕು.

1485

ತಾರೀಖು 27ನೆ ಸೆಪ್ಟಂಬರ್ 1904.

ನಂ. ಜ. 1706—5—8, ಮೈಸೂರು ಡಿಸ್ಟ್ರಿಕ್ಟಿನ ಲೋಕಲ್ ಬೋರ್ಡಿನಿಂದಲೂ ಮತ್ತು ಮ್ಯೂನಿಸಿಪಾಲಿಟಿಗಳಿಂದಲೂ 1904ನೆ ಇಸವಿಯ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ ಇದರಡೀ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತದೆ :—

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಡಿಸ್ಟ್ರಿಕ್ಟ್ ಫಂಡು ಬೋರ್ಡು ..	1. ಮೆ॥ ಅಂಬೈ ಅಣ್ಣಯ್ಯಪಂಡಿತರು ...	ಜಮೀನ್ದಾರ್ರು.
	2. ,, ಎ. ರಾಮಣ್ಣನವರು ...	ಅಡ್ವೋಕೇಟರು ವ ಜಮೀನ್ದಾರ್ರು.
ಮೈಸೂರು ಸಿಟಿ ಮ್ಯೂನಿಸಿಪಾಲಿಟಿ ..	1. ,, ಅನಂತರಾಜಯ್ಯನವರು ..	ಸಾಹುಕಾರ್ರು.
	2. ,, ಫಾದಪ್ಪನವರು ..	ಡಿಟೋ
	3. ,, ಸಿ. ರಂಗಯ್ಯಂಗಾರ್ರು ...	ಅಡ್ವೋಕೇಟರು.
	4. ,, ಎಂ. ವೆಂಕಟಕೃಷ್ಣಯ್ಯನವರು ...	ಸ್ಕೂಲ್ ಮಾಸ್ಟರು.
ಹುಣಸೂರ ಮ್ಯೂನಿಸಿಪಾಲಿಟಿ ..	1. ,, ನಾರಣಪ್ಪನವರು ..	ಜಮೀನ್ದಾರ್ರು.
ನಂಜನಗೂಡು ಮ್ಯೂನಿಸಿಪಾಲಿಟಿ ...	1. ,, ವೆಂಕಟಸುಬ್ಬಯ್ಯನವರು ...	ಪ್ಲೀಡರು ಮತ್ತು ಜಮೀನ್ದಾರ್ರು.
ಶ್ರೀರಂಗಪಟ್ಟಣ ಮ್ಯೂನಿಸಿಪಾಲಿಟಿ ...	1. ,, ರಾಮಣ್ಣನವರು ...	ಅಡ್ವೋಕೇಟರು.
ಮಳವಳ್ಳಿ ಮ್ಯೂನಿಸಿಪಾಲಿಟಿ ...	1. ,, ಸುಬ್ಬಣ್ಣನವರು ...	ವರ್ತಕರು.

ತಾರೀಖು 27ನೆ ಸೆಪ್ಟಂಬರ್ 1904.

ನಂ. ಜ. 1707—8—3, ಶಿವಮೊಗ್ಗ ಡಿಸ್ಟ್ರಿಕ್ಟಿನ ಲೋಕಲ್ ಬೋರ್ಡಿನಿಂದಲೂ ಮತ್ತು ಮ್ಯೂನಿಸಿಪಾಲಿಟಿಗಳಿಂದಲೂ 1904ನೆ ಇಸವಿಯ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ ಇದರಡೀ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತದೆ :—

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಶಿವಮೊಗ್ಗ ಮ್ಯೂನಿಸಿಪಾಲಿಟಿ ...	1. ಮೆ॥ ಎಸ್. ಆರ್. ಬಾಲಕೃಷ್ಣರಾವ್, ಬಿ. ಎ., ಎಲ್. ಎಲ್. ಬಿ., ಯವರು.	ಅಡ್ವೋಕೇಟರು.
	2. ,, ಸೈಯದ್ ಮೊಹಿದ್ದೀನ್ ಸಾಬರು ...	ಪೇಷ್ಕರ್ ಪೊಲೀಸ್ ಇನ್ಸ್ಪೆಕ್ಟರು.
	3. ,, ರೆವರೆಂಡ್ ಮೆ॥ ಎ. ಇ. ನೈಟಿಂಗೇಲರವರು.	ವೆಸ್ಲಿಯನ್ ಮಿಷನೆರಿ ಯವರು.
ಷಿಕಾರಿಪುರ ಡಿಟೋ ...	1. ,, ದೀಕ್ಷಿತರ ಶಿವಪ್ಪನವರು ...	ಜಮೀನ್ದಾರ್ರು.
ಡಿಸ್ಟ್ರಿಕ್ಟ್ ಫಂಡ್ ಬೋರ್ಡು ..	1. ,, ತೀರ್ಥಹಳ್ಳಿ ಭೀಮರಾಯರು ...	ಪ್ಲೀಡರು, ಶಿವಮೊಗ್ಗ.
	2. ,, ಲಾಡಿ ಅಬ್ದುಲ್ ಕರೀಂ ಸಾಬರು ..	ಜಮೀನ್ದಾರ್ರು, ಕುಂಸಿ ಸಬ್ ತಾ॥
ನಗರ ಸಭೆ ..	1. ,, ಸಿ. ಸುಬ್ಬರಾವ್, ಬಿ. ಎ., ಬಿ. ಎಲ್., ಯವರು.	ಅಡ್ವೋಕೇಟರು, ಶಿವಮೊಗ್ಗ.

ತಾರೀಖು 27ನೆ ಸೆಪ್ಟಂಬರ್ 1904.

ನಂ. ಜ. 1708—13—3, ತುಮಕೂರ ಡಿಸ್ಟ್ರಿಕ್ಟಿನ ಲೋಕಲ್ ಬೋರ್ಡಿನಿಂದಲೂ ಮತ್ತು ಮ್ಯೂನಿಸಿಪಾಲಿಟಿಗಳಿಂದಲೂ 1904ನೆ ಇಸವಿಯ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ ಇದರಡೀ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತದೆ :—

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಡಿಸ್ಟ್ರಿಕ್ಟ್ ಫಂಡ್ ಬೋರ್ಡು ...	1. ಮೆ॥ ತುರುವೇಕೆರೆ ನಾರಣಪ್ಪನವರು ...	ಮೆಂಬರು.
	2. ,, ಪಾವಗಡದ ವೆಂಬೂರು ವೆಂಕಟನರಸಿಂಹಾಚಾರ್ರು.	ಜಮೀನ್ದಾರ್ರು.
ತುಮಕೂರ ಟವನ್ ಮ್ಯೂನಿಸಿಪಾಲಿಟಿ.	1. ರೆವರೆಂಡ್ ಮೆ॥ ಎಡ್ವರ್ಡ್ಸ್‌ಯವರು ...	ವೆಸ್ಲಿಯನ್ ಮಿಷನೆರಿಯವರು.
	2. ಮೆ॥ ವೈ. ರಾಮರಾವ್, ಬಿ. ಎ., ಯವರು ..	ಫಸ್ಟ್‌ಗ್ರೇಡ್ ಪ್ಲೀಡರು.
	3. ,, ಕೆ. ನಲ್ಲಪ್ಪನವರು ..	ಜಮೀನ್ದಾರ್ರು

ತಾರೀಖು 28ನೆ ಸೆಪ್ಟಂಬರ 1904.

ನಂ 2689-ಲೋ. ಫಂ. 106–83, ಸನ್1903ನೆ ಇಸವಿದು III ನೆ ನಂಬರ ಮೈಸೂರು ಸಿಟಿ ಇಂಪ್ರೂವಮೆಂಟ್ ರೆಗ್ಯುಲೇಷನಿನ 18 (1) (a)ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಮೈಸೂರ ಪಟ್ಟಣದಲ್ಲಿರುವ ವೀರಣ್ಣನವರ ನೇಯಿಗೆಯ ಲೈನುಗಳ ದಕ್ಷಿಣ ದಿಕ್ಕಿಗೆ ಹೊಸ ದೊಡ್ಡ ಹೊಲಗೆರೆಯನ್ನುಂಟುಮಾಡಲಿಕ್ಕೆ ಬೇಕಾಗಿರುತ್ತವೆ. ಇದರ ಪ್ರಾಜೆಕ್ಟು 1904ನೆ ಜೂನ 18ನೆ ಮುಕ್ತಂ 4938-9—ಲೋ. ಫಂ. 106–03ನೆ ನಂಬರ ಗವರ್ನಮೆಂಟನ ಪ್ರೊಸೀಡಿಂಗ್ಸಿನಲ್ಲಿ ಮಂಜೂರ್ಮಾಡಲ್ಪಟ್ಟಿರುತ್ತೆ ;—

ಜಂಜರ ನಂ.	ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಸರ್ವೆ ನಂ.	ಮಾಲೀಕರ ಹೆಸರು.	ವಿವರ.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1				370	ಚೌಡ್ಕ ಬಸವ ಮತ್ತು ಚೌಡ ...	ಖುಷ್ಕಿ ...	7	34	8	0	0	ಸರ್ವೆ ನಂ. 350 ವ 351 ಮತ್ತು ಗಲ್ಲಿ	ಸರ್ವೆ ನಂ. 381,369 ವ 368	ಸರ್ವೆ ನಂ. 372	ಸರ್ವೆ ನಂ. 367 ವ 351
2				350	ಹೊಸ ಸಿದ್ದಣ್ಣ ಕಾಳೆಗೌಡ ..	ಡಿಟೋ .	9	18	9	0	0	ಡಿಟೋ ನಂ. 349	ಗಲ್ಲಿ ಮತ್ತು ಸರ್ವೆ ನಂ. 370 ವ 371	ಡಿಟೋ ನಂ. 371,375 ವ 348	ಗಲ್ಲಿ ಮತ್ತು ಸರ್ವೆ ನಂ. 352 ವ 353
3				349	ಕೆಂಪಶಿದ್ದ .	ಡಿಟೋ ..	5	16	5	0	0	ಗಲ್ಲಿ	ಡಿಟೋ ನಂ. 350	ಡಿಟೋ ನಂ. 348 ವ 347	ಡಿಟೋ ನಂ. 353,354 ಮತ್ತು ಗಲ್ಲಿ
					ಕುರ್ಕ ಕಾಳ ..	ಡಿಟೋ ..	1	26	1	8	0				
4				367	ತೋಟ ಮಂಗ ...	ಡಿಟೋ (ಇನಾಂ)	5	23	5	0	0	ಸರ್ವೆ ನಂ. 351 ವ 352	ಡಿಟೋ ನಂ. 368	ಡಿಟೋ ನಂ. 370 ವ 351	ಸರ್ವೆ ನಂ. 364 ವ 366
5	ಮೈಸೂರು	ಡಿಟೋ	ಡಿಟೋ	352	ಮರಿ ಉಜ್ಜಿಚೌಡ ...	ಖುಷ್ಕಿ ...	3	19	3	4	0	ಡಿಟೋ ನಂ. 353	ಡಿಟೋ ನಂ. 367 ವ 366	ಗಲ್ಲಿ ಮತ್ತು ಸರ್ವೆ ನಂ. 351	ಡಿಟೋ ನಂ. 360
					ಈರಿ ಸಿದ್ದಣ್ಣ ಬೋರ ..	ಡಿಟೋ ..	2	1	1	12	0				
6				353	ನಾಚಾರಿ ಅಂಕನ ಅಂಕ ...	ಡಿಟೋ ...	6	6	6	0	0	ಗಲ್ಲಿ ಮತ್ತು ಸರ್ವೆ ನಂ. 354 ವ 357	ಡಿಟೋ ನಂ. 352 ವ 366	ಗಲ್ಲಿ	ಡಿಟೋ ನಂ. 358,351 ವ 356
7				354	(ಸರ್ಕಾರ ಬಂಜರ್) ...	ಬಂಜರ ..	0	15		...		ಗಲ್ಲಿ	ಡಿಟೋ ನಂ. 353	ಡಿಟೋ	ಡಿಟೋ ನಂ. 356 ವ 355
8				368	ದೊಡ್ಡಬೋರ, ಕಾಳ ವ ಚಿಕ್ಕಬೋರ ...	ಖುಷ್ಕಿ ..	5	18	5	0	0	ಸರ್ವೆ ನಂ. 367 ವ 370	ಗಲ್ಲಿ	ಸರ್ವೆ ನಂ. 369	ಡಿಟೋ ನಂ. 364
9				355	ಹೊನ್ನ ಬೆಟ್ಟ .	ಡಿಟೋ ..	3	11	3	8	0	ಗಲ್ಲಿ	ಸರ್ವೆ ನಂ. 356	ಡಿಟೋ ನಂ. 353 ವ 354	ಗಲ್ಲಿ
10				356	ಅಂದೂರ ಸಿದ್ದನ ಹಲಣ ಹೊನ್ನ ಬೆಟ್ಟ..	ಡಿಟೋ ..	3	22	3	4	0	ಸರ್ವೆ ನಂ. 355	ಡಿಟೋ ನಂ. 357	ಡಿಟೋ ನಂ. 353 ವ 354	ಡಿಟೋ

11			357	ಅಂದೂರ್ ಸಿದ್ದನ ಹೆಲಣ ..	ಡಿಟೋ ..	4	8	3	8	0	ಸರ್ವೆ ನಂ. 356	ಡಿಟೋ ನಂ. 353 ವ 358	ಡಿಟೋ ನಂ. 353	ಡಿಟೋ
12			358	ಬಂಡಿ ಲಿಂಗೆಗೌಡ ..	ಡಿಟೋ ..	4	20	3	8	0	ಡಿಟೋ ನಂ. 357	ಡಿಟೋ ನಂ. 366 ವ 365	ಡಿಟೋ ನಂ. 366	ಸರ್ವೆ ನಂ. 359
				ಮರಿಉಜ್ಜಿ ಚೌಡ ...	ಡಿಟೋ	2	15	2	0	0				
13			366	ಬೋರಲಿಂಗಯ್ಯನ ಮರಿಲಿಂಗ ..	ಡಿಟೋ ..	9	28	8	0	0	ಡಿಟೋ ನಂ. 358 ವ 353	ಡಿಟೋ ನಂ. 364	ಡಿಟೋ ನಂ. 367 ವ 352	ಡಿಟೋ ನಂ. 358 ವ 365
14			364	ದೊಡ್ಡಬೋರ, ಕಾಳ ವ ಚಿಕ್ಕಬೋರ	ಡಿಟೋ ..	4	31	3	8	0	ಡಿಟೋ ನಂ. 366	ಗಲ್ಲಿ ಮತ್ತು ಸರ್ವೆ ನಂ. 363	ಡಿಟೋ ನಂ. 368 ವ 367	ಡಿಟೋ ನಂ. 365
				ಬೋರಮ್ಮನ ಮಗ ದೊಡ್ಡಬೋರ ...	ಡಿಟೋ ...	3	10	2	8	0				
15			359	ಚಕ್ಕಮಾಸ್ತಿ ಬೋರ ..	ಡಿಟೋ ...	4	24	3	8	0	ಗಲ್ಲಿ	ಸರ್ವೆ ನಂ. 360	ಸರ್ವೆ ನಂ. 358	ಗಲ್ಲಿ
16			360	ದೇವಗೌಡನ ಸಿದ್ದಗೊಂಡನ ಬಸವಲಿಂಗಯ್ಯ.	ಡಿಟೋ	7	14	6	0	0	ಸರ್ವೆ ನಂ. 359	ಗಲ್ಲಿ	ಡಿಟೋ ನಂ. 365	ಡಿಟೋ
17			365	ಸಿದ್ದನ ಲಿಂಗಯ್ಯ ...	ಡಿಟೋ .	3	19	2	12	0	ಡಿಟೋ ನಂ. 358	ಡಿಟೋ	ಡಿಟೋ ನಂ. 364 ವ 366	ಸರ್ವೆ ನಂ. 360
18	ಡಿಟೋ	ಡಿಟೋ	ಡಿಟೋ	335	ಸಿದ್ದನ ಮಗ ಸಿದ್ದ ...	ಡಿಟೋ ...	4	16	4	8	0	ಗಲ್ಲಿ	ಡಿಟೋ	ಗಲ್ಲಿ	ಡಿಟೋ ನಂ. 334
19				334	ಬಾಳಾಜಿಚಾಮನ ಬೆಟ್ಟ	ಡಿಟೋ .	5	9	4	0	0	ಡಿಟೋ	ಡಿಟೋ	ಸರ್ವೆ ನಂ. 335	ಡಿಟೋ ನಂ. 333
20				333	ಡಿಟೋ ಜೋಗಿ ಮರಿತಂಡ ..	ಡಿಟೋ .	8	12	7	8	0	ಡಿಟೋ	ಗಲ್ಲಿ ಮತ್ತು ಸರ್ವೆ ನಂ. 332	ಡಿಟೋ ನಂ. 334	ಡಿಟೋ ನಂ. 326
21				329	ಜವರೆಗೌಡನ ಮಗ ಹೊನ್ನ ..	ಡಿಟೋ ..	5	33	4	8	0	ಗಲ್ಲಿ ಮತ್ತು ಸರ್ವೆ ನಂ. 328 ವ 327	ಗಲ್ಲಿ	ಗಲ್ಲಿ	ಸರ್ಕಾರ ಜಮೀನು
22				332	ಕೆಂಚ .	ಡಿಟೋ ..	3	9	2	12	0	ಸರ್ವೆ ನಂ. 333 ವ ವ 326	ಡಿಟೋ	ಡಿಟೋ	ಸರ್ವೆ ನಂ. 331 ಮತ್ತು ಗಲ್ಲಿ
				ಬೋರಿ ಸಿದ್ದನ ಕರಿಸಿದ್ದ ...	ಡಿಟೋ ..	3	13	2	12	0				
23				331	(ಕಟ್ಟೆ) .	...	1	12		...		ಗಲ್ಲಿ	ಸರ್ವೆ ನಂ. 330	ರಸ್ತೆ ಮತ್ತು ಸರ್ವೆ ನಂ. 332	ಗಲ್ಲಿ ಮತ್ತು ಸರ್ವೆ ನಂ. 330
24				330	ಸುಬ್ರಾಯಯ್ಯ, ನರಸಿಂಹಯ್ಯ ಮತ್ತು ಕೃಷ್ಣಪ್ಪ.	ಖುಷ್ಕಿ ...	5	1	4	0	0	ಗಲ್ಲಿ ಮತ್ತು ಸರ್ವೆ ನಂ 331	ಗಲ್ಲಿ	ಗಲ್ಲಿ	ಸರ್ಕಾರ ಜಮೀನು
25				326	ಚಲುವನ ಮಗ ವೆಂಕಟ ಮತ್ತು ದ್ಯಾವರೆಗೌಡನ ಬೋರ.	ಡಿಟೋ ...	2	28	2	8	0	ಗಲ್ಲಿ	ಸರ್ವೆ ನಂ. 332	ಸರ್ವೆ ನಂ. 333	ಗಲ್ಲಿ

ತಾರೀಖು 27ನೆ ಸೆಪ್ಟಂಬರ್ 1904.

ನಂ. ಜ. 1705—4—2, ಕೋಲಾರ ಡಿಸ್ಟ್ರಿಕ್ಟಿನ ಲೋಕಲ್ ಬೋರ್ಡಿನಿಂದಲೂ ಮತ್ತು ಮ್ಯೂನಿಸಿಪಾಲಿಟಿಗಳಿಂದಲೂ 1904ನೆ ಇಸವಿಯ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಲ್ಪಟ್ಟ ದೊಡ್ಡ ಮನುಷ್ಯರುಗಳ ಇದರಡಿ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತದೆ:—

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಸಿಡ್ಲಘಟ್ಟ ಮ್ಯೂನಿಸಿಪಾಲಿಟಿ	1. ಮೆ॥ ಪಣಿಯಾಳೆ ಬಸಪ್ಪನವರು	.... ವರ್ತಕರು.
ಚಿಕ್ಕಬಳ್ಳಾಪುರ ಡಿಟೋ ..	1. ,, ಟಿ. ಸುಬ್ಬರಾಯಪ್ಪನವರು	.. ಡಿಟೋ
ಮುಳಬಾಗಲ ಡಿಟೋ	1. ,, ಪಾಚಾಮಿಯ್ಯಾ ಸಾಬರು	... ಪಟೇಲರು ವ ಜಮೀನ್ದಾರರು.
ಕೋಲಾರ ಡಿಟೋ ..	1. ,, ಸಿ. ಬಿ. ಗೋಪಾಲರಾಯರು	.. ಪ್ಲೀಡರು.
	2. ,, ಮುದ್ದಾಚಪ್ಪನವರು	... ವರ್ತಕರು.
	3. ,, ಮೀರ್ ಹಸೇನ್ ಅಲಿಸಾಬರು	... ಕೋಲಾರ ಮೂಕ್ಕರವಿನ ನಜೀಮರು ಮತ್ತು ವರ್ತಕರು, ಕೋಲಾರ.
ಡಿಸ್ಟ್ರಿಕ್ಟ್ ಫಂಡ್ ಬೋರ್ಡು ..	1. ,, ಪಿ. ಶ್ರೀನಿವಾಸಾಚಾರ್ರು	.. ಜೋಡಿದಾರರು, ಸಿಡ್ಲಘಟ್ಟ.
	2. ,, ಕೆ. ವೊಮ್ಮಂಣಯ್ಯನವರು	... ಜೋಡಿದಾರರು, ಬೌರಿಂಗಪೇಟೆ.
ಕೋಲಾರ ಗೋಲ್ಡ್‌ಫೀಲ್ಡ್ಸ್ ಮೈನಿಂಗ್ ಬೋರ್ಡು.	1. ,, ಎಡ್ವರ್ಡ್ ಆರ್. ಜಾರ್ಜ್ ಯವರು	.. ಗೋಲ್ಡ್ ಫೀಲ್ಡ್ಸ್ ಓರಿಯಂಟಲ್, ನೈನ್ ರೀಫ್ಸ್ ವ ರೋಡ್‌ಬ್ಯಾಕ್ ಗೋಲ್ಡ್ ಮೈನಿಂಗ್ ಕಂಪನಿಗಳ ಸೂಪರಿಂಟೆಂಡೆಂಟರು.

ತಾರೀಖು 28--29ನೆ ಸೆಪ್ಟಂಬರ್ 1904.

ನಂ. 2715-65-2—ಮೆ., ಎರಡು ವ ಮೂರನೇ ಕ್ಲಾಸಿನ ಇದರಡಿ ಕಂಡ ಆಸ್ಪಿಟಲ್ ಅಸಿಸ್ಟೆಂಟರುಗಳು ಯೋಗ್ಯತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವದ್ದರಿಂದಲೂ ಮತ್ತು ಅವರವರ ಹಾಲಿ ಕ್ಲಾಸುಗಳಲ್ಲಿ ನೌಕರಿಯ ಕ್ಲಿಪ್ತವಾದ ಕಾಲವು ಪೂರೈಸಿರುವದ್ದರಿಂದಲೂ ಅವರವರ ಹೆಸರುಗಳ ಎದುರಾಗಿ ನಮೂದಿಸಲ್ಪಟ್ಟ ತಾರೀಖುಗಳಾರಭ್ಯ ಮುಂದಿನ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ:—

ನಂ.	ದರ್ಜೆ.	ಹೆಸರು.	ಬಡ್ತಿ ಮಾಡಲ್ಪಟ್ಟ ಕ್ಲಾಸು.	ಬಡ್ತಿಯ ತಾರೀಖು.
1	ಎರಡನೇ ಕ್ಲಾಸಿನ ಆಸ್ಪಿಟಲ್ ಅಸಿಸ್ಟೆಂಟರು.	ಪಿ. ಎಸ್. ರಾಮಚಂದ್ರ ಅಯ್ಯರವರು.	ಮೊದಲನೇ ಕ್ಲಾಸು.	25ನೆ ಜೂನ್ 1904.
2	ಡಿಟೋ ...	ಕೆ. ಅಬ್ದುಲ್ ಕುದುಸ್ ಯುವರು.	ಡಿಟೋ	ಡಿಟೋ
3	ಡಿಟೋ ..	ಜೆ. ಎಂ. ಬಿ. ಮರಿಯ ಪಿಳ್ಳೆ ಯವರು.	ಡಿಟೋ	23ನೆ ಜುಲೈ 1904.
4	ಡಿಟೋ ..	ಎಂ. ಗುಂಡಪ್ಪನವರು.	ಡಿಟೋ	25ನೆ ಜೂನ್ 1904.
5	ಮೂರನೇ ಕ್ಲಾಸಿನ ಆಸ್ಪಿಟಲ್ ಅಸಿಸ್ಟೆಂಟರು.	ಬಿ. ಆರ್. ಶ್ರೀನಿವಾಸಯ್ಯಂಗಾರ್ರು.	ಎರಡನೇ ಕ್ಲಾಸು.	29ನೆ ಜುಲೈ 1904.
6	ಡಿಟೋ ..	ಬಿ. ಎಸ್. ರಾಮಸ್ವಾಮಿ ಪಿಳ್ಳೆ ಯವರು.	ಡಿಟೋ	5ನೆ ಆಗಸ್ಟ್ 1904.

ತಾರೀಖು 30ನೆ ಸೆಪ್ಟಂಬರ್ 1ನೆ ಅಕ್ಟೋಬರ್ 1904.

ನಂ. 2814 - 67 — 6—ಮ್ಯೂ., ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಬೆಂಗಳೂರ ಪಟ್ಟಣದ ಹೆಲ್ತ್ ಆಫಿಸರಾದ ಮೆ॥ ಪಲ್ಪುಯವರಿಗೆ ಮೂಹೆ ಮಜಕೂರು 20ನೆ ತಾರೀಖಿನ ಲಾಗಾಯಿತು ಯೂ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಮೆಟ್ರಾಟಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಲಿರುವ ಅಸಿಸ್ಟೆಂಟ್ ಸರ್ಜನ್‌ರಾದ ಮೆ॥ ಲಕ್ಷ್ಮಣಸ್ವಾಮಿ ಯವರು, ಮೆ॥ ಪಲ್ಪುಯವರು ರಜಾದಲ್ಲಿರುವ ಕಾಲದಲ್ಲಿ ಯೂ ಮತ್ತೊಂದು ಹುಕುಂ ಕೊಡುವ ಪರಿಯಂತ, ಪಟ್ಟಣದ ಪ್ಲೇಗ್ ಕೆಲಸವನ್ನು ನೋಡತಕ್ಕದ್ದು.

ತಾರೀಖು 1ನೆ ಅಕ್ಟೋಬರ್ 1904.

ನಂ. ಜ. 1831, ಈ ವರುಷದ ದಸರಾ ರಜಾ ದಿನಗಳು 1904ನೆ ಅಕ್ಟೋಬರ್ 15ನೆ ತಾರೀಖು ಶನಿವಾರದ ಲಾಗಾಯುತ್ತು 27ನೆ ತಾರೀಖು ಗುರುವಾರದ ವರಿವಿಗೂ ಉಭಯ ದಿನಗಳು ಸೇರಿ ಇರತಕ್ಕದ್ದು.

2. ಜರೂರಿಯಾತ್ ಕೆಲಸವನ್ನು ನಡಿಸುವ ಬಗ್ಯೆ ಇಲಾಖೆಗಳ ಮೊಖ್ತೇಸರುಗಳಿಂದ ಮತ್ತು ಡಿಸ್ಟ್ರಿಕ್ಟು ಡೆಪ್ಯುಟಿ ಕಮೀಷನರುಗಳಿಂದ ಏರ್ಪಾಡುಗಳು ಮಾಡಲ್ಪಡುವವು.

ತಾರೀಖು 1ನೆ ಅಕ್ಟೋಬರ್ 1904.

ನಂ. ಜ. 1832-15-4, ಬೆಂಗಳೂರ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟು ಫಂಡ್ ವ ಮ್ಯೂನಿಸಿಪಲ್ ಬೋರ್ಡುಗಳಿಂದಲೂ ಮತ್ತು ಲಾ ಸಂಘದಿಂದಲೂ 1904ನೆ ಇಸವಿಯ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ ಇದರ ಡೀ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತೆ :—

ಚುನಾಯಿಸಿದವರ ಹೆಸರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಬೆಂಗಳೂರ ಸಿಟಿ ಮ್ಯೂನಿಸಿಪಲ್ ಬೋರ್ಡು.	1. ಮೆ॥ ಬಿ. ಗಂಗಯ್ಯನವರು ...	ಪೆರ್ಷ್ ಸಬ್ ರಿಜಿಸ್ಟ್ರಾರ್ರು ಮತ್ತು ಜಮೀನ್‌ದಾರ್ರು.
	2. ,, ಬಿ. ಕೆ. ಗರುಡಾಚಾರ್ರು ..	ವರ್ತಕರು ಮತ್ತು ಜಮೀನ್‌ದಾರ್ರು.
	3. ,, ಬಿ. ರಾಮಭದ್ರಯ್ಯನವರು ..	ವರ್ತಕರು.
	4. ,, ಬಿ. ಅಪ್ಪಾಜಯ್ಯನವರು ...	ಡಿಟೋ
ಡಿಸ್ಟ್ರಿಕ್ಟು ಫಂಡು ಬೋರ್ಡು ..	1. ,, ಮಸ್ತ್ಯಾನ್‌ಸಾಬರು ..	ಜಮೀನ್‌ದಾರ್ರು, ಚೆನ್ನಪಟ್ಟಣ.
	2. ,, ರಾಮಚಂದ್ರಪ್ಪನವರು ..	ಡಿಟೋ ದೇವನಹಳ್ಳಿ.
ಆನೆಕಲ್ ಮ್ಯೂನಿಸಿಪಾಲಿಟಿ ...	1. ,, ಚಿಕ್ಕ ನಂಜುಂಡಣನವರು ...	ಸಾಹುಕಾರ್ರು.
ದೇವನಹಳ್ಳಿ ಡಿಟೋ ..	1. ,, ಡಿ. ಶ್ರೀನಿವಾಸ ಗೋಪಾಲಾಚಾರ್ರು ...	ಮ್ಯೂನಿಸಿಪಲ್ ಮೆಂಬರು.
ಕೋಲಾರಪೇಟೆ ಡಿಟೋ ..	1. ,, ನೇಮ ವರದಯ್ಯನವರು ..	ಡಿಟೋ
ಚನ್ನಪಟ್ಟಣ ಡಿಟೋ ..	1. ,, ಯಜಮಾನ್ ನರಸಿಂಹಯ್ಯನವರು	ಡಿಟೋ
ಬೆಂಗಳೂರ ಲಾ ಸಂಘ ..	1. ,, ಜೆ. ಸಿ. ಎಸ್. ಲಾರೆನ್ಸ್, ಬಿ. ಎ., ಎಲ್. ಎಲ್. ಬಿ., ಯವರು.	ಅಡ್ವೋಕೇಟರು.

ತಾರೀಖು 1—8ನೆ ಅಕ್ಟೋಬರ್ 1904.

ನಂ. (2852)—91—2—ಎಜ್ಯು., ಕೋಲಾರದಲ್ಲಿರುವ ಗೌರ್ನಮೆಂಟ್ ಕನ್ನಡ ಬಾಲಿಕಾ ಪಾಠಶಾಲೆಯ ಆಡಳಿತಕ್ಕೋಸ್ಕರ 1903ನೆ ಏಪ್ರಿಲ್ 15ನೆ ಮಾರ್ಕು ಂ 14934—ಎಜ್ಯು. 293ನೆ ನಂಬರ್ ಗೌರ್ನಮೆಂಟಿನ ಆಜ್ಞಾಹಾರ್ನಾಮೆಯಲ್ಲಿ ಮೊಕರರ್ ಮಾಡಲ್ಪಟ್ಟಿದ್ದ ಕಮಿಟಿಯು ಇದರಡೀ ಕಂಡಂತೆ ಪುನಃ ಉಂಟಾಗಿರತಕ್ಕದ್ದು :—

ಪ್ರೆಸಿಡೆಂಟರು.

ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರವರು.

ಮೆಂಬರುಗಳು.

1. ಅಸಿಸ್ಟೆಂಟ್ ಕಮೀಷನರಾದ ಮೆ॥ ಕೆ. ಆರ್. ಶ್ರೀನಿವಾಸಯ್ಯಂಗಾರ್, ಎಂ. ಎ., ಯವರು.
2. ಕೋಲಾರದ ಹೈಸ್ಕೂಲಿನ ಹೆಡ್ ಮಾಸ್ಟರವರು.
3. ಕೋಲಾರ ಡಿವೀಜನಿನ ಎಕ್ಸಿಕ್ಯೂಟಿವ್ ಇಂಜನಿಯರು.
4. ಕೋಲಾರ ತಾಲ್ಲೂಕಿನ ಅಮಲ್‌ದಾರ್ರವರು.
5. ಆನೊರರಿ ಸಬ್ ಅಸಿಸ್ಟೆಂಟ್ ಸರ್ಜನರವರು.
6. ಹೈಸ್ಕೂಲಿನ ಅಸಿಸ್ಟೆಂಟ್ ಮಾಸ್ಟರಾದ ಮೆ॥ ಎಸ್. ವೆಂಕಟರಮಣಾಚಾರ್, ಬಿ. ಎ., ಯವರು.
7. ಡಿಟೋ ಮೆ॥ ಆರ್. ವಿ. ಕೃಷ್ಣಸ್ವಾಮಿ ಅಯ್ಯರ್, ಬಿ. ಎ., ಯವರು.
8. ಅಡ್ವೋಕೇಟರಾದ ಮೆ॥ ಎಂ. ಬಾಪುರಾಯರವರು.
9. ಪ್ಲೀಡರಾದ ಮೆ॥ ಸಿ. ಎಂ. ಗೋಪಾಲರಾಯರವರು.
10. ಕನ್ನಡ ಬಾಲಿಕಾ ಪಾಠಶಾಲೆಯ ಹೆಡ್ ಮಾಸ್ಟರಾದ ಮೆ॥ ಸಿ. ಸುಬ್ಬರಾಯರವರು.
11. ಮೆ॥ ಬೊಗ್ಗರಂ ಮುನಿಸಾಮಿ ನಾರಾಯಣ ಸೆಟ್ಟರವರು.
12. ,, ಸೆಟ್ಟಿ ಬುಚ್ಚಯ್ಯ ಉರಫ್ ವೆಂಕಟರಾಮಯ್ಯ ಸೆಟ್ಟರವರು.
13. ,, ಬಂದರಿ ಮುನಿಸಾಮಯ್ಯನವರು.
14. ,, ಯಜಮಾನ್ ಸಿದ್ದಪ್ಪನವರು.
15. ,, ಡಿಸ್ಟ್ರಿಕ್ಟಿನ ಪಾಠಶಾಲೆಗಳ ಡೆಪ್ಯುಟಿ ಇನ್‌ಸ್ಪೆಕ್ಟರವರು.

ತಾರೀಖು 1—3ನೆ ಅಕ್ಟೋಬರ 1904.

ನಂ. 2860—188--2—ಮ್ಯು., ಅರಹಳ್ಳಿ ಹೋಬಳೀಗೆ ವರ್ಗ ಮಾಡಲ್ಪಟ್ಟ ಷೇಕದಾರ ಮೆ॥ ತಿಮ್ಮಪ್ಪಯ್ಯನವರಿಗೆ ಬದಲಾಗಿ ಆಲೂರಿನ ಮೆ॥ ಅಬ್ದುಲ್‌ಖಲೀಕ್‌ಸಾಬರು ಆಲೂರ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ನೊಕರಮಾಡಲ್ಪಟ್ಟಿರುತ್ತಾರೆ.

ತಾರೀಖು 4ನೆ ಅಕ್ಟೋಬರ 1904ನೆ.

ನಂ. ಜ್ಯು. 870—ಸಿ. 58--4, ಚಿಕ್ಕಬಳ್ಳಾಪುರದ ಮುನಸೀಫರಾದ ಮೆ॥ ಎ. ನರಸಿಂಹಯ್ಯಂಗಾರ್, ಬಿ. ಎ., ಬಿ. ಎಲ್., ಯವರಿಗೆ 1904ನೆ ಆಗಸ್ಟ 22ನೆ ಮಾರ್ಕಂ 511—ಸಿ. 58—2ನೆ ನಂಬರ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 25 ದಿನಗಳ ಪ್ರಿವಿಲೇಜ್ ರಜಾವನ್ನು ಅವರು ಅದೇ ತಿಂಗಳು 26ನೆ ತಾರೀಖಿನಾರಭ್ಯ ಉಪಯೋಗಿಸಿಕೊಂಡು 1904ನೆ ಸೆಪ್ಟಂಬರ 17ನೆ ತಾರೀಖಿನ ಮಧ್ಯಾಹ್ನಾತ್ಪರ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗವಂದರೆ ಎರಡು ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 4—5ನೆ ಅಕ್ಟೋಬರ 1904.

ನಂ. (2927)—178—2—ಮ್ಯು., ಮೃತಪಟ್ಟ ಮೆ॥ ಹನುಮಂತಯ್ಯನವರಿಗೆ ಬದಲಾಗಿ ವರ್ತಕರಾದ ಮೆ॥ ನಾರಾಯಣಸೆಟ್ಟರವರು ಮಾಲೂರು ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ನೊಕರಮಾಡಲ್ಪಟ್ಟಿರುತ್ತಾರೆ.

ತಾರೀಖು 19ನೆ ಸೆಪ್ಟಂಬರ 1904.

ನಂ. ರೆ. 2500—ಮಿ. 248—04—3, ಸನ 1894ನೆ ಇಸವಿಯ 7ನೆ ನಂಬರ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಸ್ಮಶಾನ ಕ್ಕೋಸ್ಕರ ಬೇಕಾಗಿರುತ್ತೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್ಷನ್‌ಗಳನುಸರಿಸಿ ಶಿವಮೊಗ್ಗಾ ಡಿವಿಜನಿನ ಅಸಿಸ್ಟೆಂಟ್ ಕಮೀಷನರು ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರರ ಹೆಸರು.	ಸರ್ವೆ ನಂಬರ.	ತಪಶೀಲ್.	ಜಮೀನಿನ ತಪಶೀಲು.			ಚಕ್ಕುಬಂದಿ.			
							ಖೀಲ್ದಾರಿ.	ಬೇರೀಜು.	ಬೇಕಾಗಿರುವ ವಿಸ್ತೀರ್ಣ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಶಿವಮೊಗ್ಗ	ಶಿವಮೊಗ್ಗ	ಹೊಳೆಹೊನ್ನೂರು	ಕೊಪ್ಪ	ಖಾಜೆದಾರ ಅಬ್ದುಲ್ ರಹಿಮಸಾಹೇಬರು	25	ಮುಸ್ಲಿಂ	ಗುಂಟೆಗಳು. 9	ಗುಂ. ಟಿ. ಪೈ. 2 8 0	ಗುಂಟೆಗಳು. 9	ಸರ್ವೆ ನಂ. 26	ಸರ್ವೆ ನಂ. 24	ಜಂಬುರಗಟ್ಟೆ ಸರ್ವೆ ನಂ. 27 ಪ 28	ಚನ್ನಗಿರಿ ಹೋಗುವ ರಸ್ತೆ

ತಾರೀಖು 29ನೆ ಸೆಪ್ಟಂಬರ 1904.

ನಂ. ಕ. 2884—ಲ್ಯಾ. ರೆ. 165—04-2, ಶಿವಮೊಗ್ಗ ಡಿಸ್ಟ್ರಿಕ್ಟಿನ ಆಕ್ಟಿಂಗ್ ಎಕ್ಸಟ್ರಾ ಅಸಿಸ್ಟೆಂಟ್ ಕಮೀಷನರಾದ ಮೆ॥ ಪಿ. ಸುಬ್ರಾಯಲು ನಾಯಿಡು ಯವರು ಡಿಸ್ಟ್ರಿಕ್ಟು ಟ್ರೆಜರಿಯ ಚಾರ್ಜನಲ್ಲಿರಲಿಕ್ಕೆ ಚಿತ್ರದುರ್ಗ ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತಾರೆ. ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಚಾರ್ಜ ವಪ್ಪಿಸಿದನಂತರ ಕೆಲಸಕ್ಕೆ ದಾಖಲಾಗತಕ್ಕದ್ದು.

2. ಮೈಸೂರ ತಾಲ್ಲೂಕಿನ ಅಮಲ್ದಾರರಾದ ಮೆ॥ ಟಿ. ಕೆ. ಸುಂದರರಾಜಯ್ಯಂಗಾರ್ರು ಎಕ್ಸಟ್ರಾ ಅಸಿಸ್ಟೆಂಟ್ ಕಮೀಷನರಾಗಿ ಆಕ್ಟಿಂಗ್ ತರೀಕು ನೊಕರಮಾಡಲ್ಪಟ್ಟು ಡಿಸ್ಟ್ರಿಕ್ಟು ಟ್ರೆಜರಿಯ ಚಾರ್ಜನಲ್ಲಿರಲಿಕ್ಕೆ ಕೋಲಾರ ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತಾರೆ.

ತಾರೀಖು 30ನೆ ಸೆಪ್ಟಂಬರ 1904.

ನಂ. ಫೈ. 2072—ಜ. ಫೈ. 42—04-8, ಕಂಟ್ರೋಲರವರ ಚೀಫ್ ಅಸಿಸ್ಟೆಂಟರಾದ ಮೆ॥ ಟಿ. ವೈಯ್ಯಾಪುರಿ ಚೆಟ್ಟಿಯವರಿಗೆ 1904ನೆ ಜುಲೈ 18ನೆ ಮಾರ್ಕಂ ಫೈ. 320—ರೆ. ಫೈ. 142—96ನೆ, 1904ನೆ ಆಗಸ್ಟ ಗುರ್ರ ಮಾರ್ಕಂ ಫೈ. 697—ಜ. ಫೈ. 42—04ನೆ ಮತ್ತು 1904ನೆ ಸೆಪ್ಟಂಬರ 3ನೆ ಮಾರ್ಕಂ ಫೈ. 1350—ಜ. ಫೈ. 42—04-6ನೆ ನಂಬರ ಇಸ್ತಿಹಾರ್ನಾಮೆಗಳಲ್ಲಿ ಮಂಜೂರಾಮಾಡಲ್ಪಟ್ಟಿದ್ದ 3 ತಿಂಗಳುಗಳ ರಜಾದೊಂದಿಗೆ ಇನ್ನೂ 3 ವಾರಗಳ ರಜಾ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 218ನೆ ಆರ್ಟಿಕಲ್ ಅನುಸರಿಸಿ ಕೊಡಲ್ಪಟ್ಟಿರುತ್ತೆ.

ತಾರೀಖು 17ನೆ ಸೆಪ್ಟಂಬರ್ 1904.

ನಂ. ರೆ. 2486 – ಮಿ. 249—04–3, ಸನ್ 1894ನೆ ಇಸವೀದು 7ನೆ ನಂಬರಿ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಬೌರಿಂಗ್‌ಪೇಟೆ ತಾಲ್ಲೂಕು ರಾಮಸಾಗರ ಕೆರೆಯ ನಾಲಾ ಯಡಬಾಗದ ಕಟ್ಟೆಯನ್ನು ಬಡಾಯಿಸುವ ಬಗ್ಯೆ ಬೇಕಾಗಿರುತ್ತವೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರವರು ಸದರಿ ಜಮೀನುಗಳೆನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರ್ರ ಹೆಸರು.	ತಪಶೀಲ್. ಸರ್ವೇ ನಂ.	ವಿವರ.	ಕ್ಷೇತ್ರ ಎ.	ಗು.	ರೂ.	ಆ.	ಪೈ.	ಬೇಕಾಗಿರುವ ಜಮೀನು. ವಿಸ್ತೀರ್ಣ ಎ.	ಗು.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	ಷರಾ.
			ವೆಂಗಸಂದ್ರ ...	ಚಿಕ್ಕಮುನಿವೆಂಕಟಪ್ಪ ...	134	ತರಿ	0	24	4	0	0	0	12	ಸ. ನಂ. 132	ನಾಲಾ	ಸ. ನಂ. 132ರ ಭಾಗ	ಸ. ನಂ. 132ರ ಭಾಗ	
					135	ಡಿಟೋ	1	32	11	4	0	0	11	ನಾಲಾ	ಸ. ನಂ. 138	ಸ. ನಂ. 135ರ ಭಾಗ	ಸ. ನಂ. 135ರ ಭಾಗ	
					1/141	ಡಿಟೋ	0	26	4	0	0	0	2	ಸ. ನಂ. 142	ಸ. ನಂ. 135	ಸ. ನಂ. 141ರ ಭಾಗ	ನಾಲಾ	
					50	ಖುಷ್ಕಿ	2	9	4	4	0	0	3½	ಸ. ನಂ. 50ರ ಭಾಗ	ಸ. ನಂ. 171	ಸ. ನಂ. 50ರ ಭಾಗ	ಸ. ನಂ. 50ರ ಭಾಗ	
							5	14	23	8	0	0	28½					
ಕೋಲಾರ.	ಬೌರಿಂಗ್‌ಪೇಟೆ.	ರಾಮಸಾಗರ.		ರಾಮಚಂದ್ರರಾವ್ ...	163	ತರಿ	2	17	14	0	0	0	11	ನಾಲಾ	ಸ. ನಂ. 162	ನಾಲಾ	ಸ. ನಂ. 163ರ ಭಾಗ	
				ಶ್ರೀಲಕ್ಷ್ಮಿನಾರಾಯಣಸ್ವಾಮಿ	162	ತರಿ	2	4	13	0	0	0	11	ಸ. ನಂ. 163	ನಾಲಾ	ಡಿಟೋ	ಸ. ನಂ. 162ರ ಭಾಗ	ಇನಾಂ
			ಅನ್ನಸಾಗರ ...	ಶೀನಪ್ಪ ...	7/2	ಬಾಗಾಯತು	1	8	3	12	0	0	14	ನಾಲಾ	ಸ. ನಂ. 8	ಸ. ನಂ. 7ರ ಭಾಗ	ನಾಲಾ	
			ರಾಮಸಾಗರ ...	ಗಂಗಲಗ ...	74/1	ತರಿ	1	35	11	4	0	0	2	ಸ. ನಂ. 65	ಸ. ನಂ. 71 ವ 73	ಸ. ನಂ. 74ರ ಭಾಗ	ಸ. ನಂ. 74ರ ಭಾಗ	
			ಸರ್ವೆ ಇನಾಂ ರಾಯಸಂದ್ರ.	ಜೋಡಿದಾರ್ ...	...	ತರಿ						0	3	ಸುತ್ತಲೂ ಇನಾಂ ಗ್ರಾಮ.				
				ಒಟ್ಟು ಜುಮ್ಲಾ ...			..		..			1	25½					

ತಾರೀಖು 20ನೆ ಸೆಪ್ಟಂಬರ 1904.

ನಂ. ರೆ. 2576—ವಿ. 268—04-3, ಸನ್ 1894ನೆ ಆಕ್ಟಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸಂಸಿ ಇದರಿಂದ ಪ್ರಸಿದ್ಧಪಡಿಸುವದೇನಂದರ ಇದರಡೀ ಕಂಡ ಜಮೀನುಗಳು ಸರ್ಕಾರ ಕಲಸಕ್ಕೆ ಅಂದರೆ, ಬೊರಿಂಗ್ ಪೇಟೆ ತಾಲ್ಲೂಕಿನಲ್ಲಿರುವ ಬೇತಮಂಗಲ ಹೊಸಗ್ರಾಮ ನಿವೇಶನವನ್ನು ಬಡಾಯಿಸುವ ಬಗ್ಯೆ ಬೇಕಾಗಿರುತ್ತವೆ. ಮತ್ತು ಬೇತಮಂಗಲದಲ್ಲಿರುವ ಸೈಷಿಯಲ್ ಅಸಿಸ್ಟೆಂಟ್ ಸೆಟ್ಲಮಂಟ ಆಫಿಸರಾದ ಮೆ॥ ಎಸ್. ನಾರಾಯಣರಾಯರು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್ಷನಗಳನುಸರಿಸಿ ಸದರಿ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ನಂಬರ್ ನಂ.	ಹೋಬಳಿದು ಹೆಸರು.	ಗ್ರಾಮದ ಹೆಸರು.	ಖಾತೆದಾರ್ರ ಹೆಸರು.	ಜಮೀನು. ಸರ್ವೆ ನಂ.	ವಿವರ.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ತಗದುಕೊಳ್ಳಬೇಕಾಗಿರುವ ಜಮೀನು. ವಿಸ್ತೀರ್ಣ. ಎ.	ಗು.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1	ಬೇತಮಂಗಲ	ಬೇತಮಂಗಲ	ಪಾಪ ಬಿನ್ ರಾಮ ..	542/1	ಖುಷ್ಕಿ ...	2	22	4	4	0	..	4	ಸರ್ವೆ ನಂ. 543ರ ಭಾಗ	ಸರ್ವೆ ನಂ. 542ರ ಭಾಗ	ಸರ್ವೆ ನಂ. 542ರ ಭಾಗ	ಸರ್ವೆ ನಂ. 542ರ ಭಾಗ
2			ರಾಣೋಜಿ ಬಿನ್ ರಾಮೋಜಿ ಗುರುವನಅನುಭವದಲ್ಲಿದೆ.	542/2	ಡಿಟೋ ...	2	21	4	4	0	1	3	ಡಿಟೋ	ಡಿಟೋ	ಡಿಟೋ	ಡಿಟೋ
3			ಸಿಲೆಮಾನ್ ಖಾನ್ ..	542/3	ಡಿಟೋ ...	2	12	3	8	0	1	2	ಡಿಟೋ	ಡಿಟೋ	ಸರ್ವೆ ನಂ. 543ರ ಭಾಗ	ಡಿಟೋ
4			ಬೆಲುವನಹಳ್ಳಿ ವೆಂಕಟಸ್ವಾಮಿ (ಧೋಬಿ ಮುನಿಸ್ವಾಮಿಯ ಅನುಭವದಲ್ಲಿದೆ).	543/1	ಡಿಟೋ ..	2	4	3	4	0	...	3	ಡಿಟೋ	ಸರ್ವೆ ನಂ. 542	ಡಿಟೋ	ಡಿಟೋ
5			ಕೋಡಿಹಳ್ಳಿ ಹನುಮಯ್ಯ ..	543/2	ಡಿಟೋ ...	1	23	2	4	0	1	9	ಡಿಟೋ	ಸರ್ವೆ ನಂ. 550ರ ಭಾಗ	ಸರ್ವೆ ನಂ. 544	ಸರ್ವೆ ನಂ. 542
6			ಮೂರ್ತಿಗನ ಮುನಿವೆಂಕಟ ..	548/1	ಡಿಟೋ ...	2	35	4	4	0	1	6	ಸರ್ವೆ ನಂ. 547	ಸರ್ವೆ ನಂ. 548ರ ಭಾಗ	ಸರ್ವೆ ನಂ. 548ರ ಭಾಗ	ಸರ್ವೆ ನಂ. 549
7			ಮುನಿಗ ಬಿನ್ ತಿಪ್ಪಣ್ಣ .	551/1	ಡಿಟೋ ...	5	...	7	8	0	...	17	ಸರ್ವೆ ನಂ. 550 ವ 549	ಸರ್ವೆ ನಂ. 551ರ ಭಾಗ	ಸರ್ವೆ ನಂ. 548	ಸರ್ವೆ ನಂ. 551ರ ಭಾಗ
8			ಸುಬ್ಬರಾಜು ಬಿನ್ ಅಕ್ಕಲರಾಜು (ನೀರಗಂಟಿ ವೆಂಕಟ್ರಾಮನ ಅನುಭವದಲ್ಲಿದೆ).	551/2	ಡಿಟೋ ..	...	24	1	0	0	..	14	ಸರ್ವೆ ನಂ. 550	ಡಿಟೋ	ಸರ್ವೆ ನಂ. 551ರ ಭಾಗ	ಸರ್ವೆ ನಂ. 551ರ ಭಾಗ
				ಜುಮ್ಲಾ ...		19	21	30	4	0	5	18				

1493

ತಾರೀಖು 30ನೆ ಸೆಪ್ಟಂಬರ್ 1904.

ನಂ. ರೆ. 2992—ಲ್ಯಾ. ರೆ. 164-04-3, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಕಡೂರು ತಾಲ್ಲೂಕಿನ ಅಮಲ್‌ದಾರ್ರಾದ ಮೆ॥ ಇ. ಸಿ. ಸದಾಶಿವಪಿಳ್ಳೆ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಮೇಲ್ಕಂಡ ರಜಾ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಯಡಪಳ್ಳಿಯ ಡೆಪ್ಯುಟಿ ಅಮಲ್‌ದಾರ್ರಾದ ಮೆ॥ ಬಿ. ಜಗನ್ನಾಥರಾಯರು ಕಡೂರು ತಾಲ್ಲೂಕಿನ ಅಮಲ್‌ದಾರ್ ಆ ಮೂರನೇ ಕ್ಲಾಸಿನ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕು ಮೊಕರರ್ರಾಡಲ್ಪಟ್ಟಿರುತ್ತಾರೆ. ಸದರೀ ಕಾಲದಲ್ಲಿ ಕೊಪ್ಪದ ಅಮಲ್ದಾರ್ರು ಎಡಹಳ್ಳಿ ಸಬ್ ತಾಲ್ಲೂಕಿನ ಚಾರ್ಜ್‌ನಲ್ಲಿರತಕ್ಕದ್ದು.

ತಾರೀಖು 1ನೆ ಅಕ್ಟೋಬರ್ 1904.

ನಂ. ರೆ. 3000—ಫಾ. 62--04—6, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 218ನೆ ಆರ್ಟಿಕಲ್ ಅನುಸರಿಸಿ ಶಿವಮೊಗ್ಗ ಡಿಸ್ಟ್ರಿಕ್ಟಿನ ಫಾರೆಸ್ಟು ಸಬ್ ಅಸಿಸ್ಟೆಂಟ್ ಕಂಸರ್ವೇಟರಾದ ಮೆ॥ ವಿ. ನರಸಿಂಹಮೂರ್ತಿರಾಯರಿಗೆ 1904ನೆ ಆಗಸ್ಟ್ 8ನೆ ತಾರೀಖಿನಾರಭ್ಯ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ 26 ದಿನಗಳ ರಜಾ ಕೊಡಲ್ಪಟ್ಟಿತ್ತು.

ತಾರೀಖು 3ನೆ ಅಕ್ಟೋಬರ್ 1904.

ನಂ. ರೆ. 3062—ಲ್ಯಾ. ರೆ. 136—04—6, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಕಡೂರು ಡಿಸ್ಟ್ರಿಕ್ಟು ತರೀಕೆರೆ ತಾಲ್ಲೂಕಿನ ಅಮಲ್‌ದಾರ್ರಾದ ಮೆ॥ ಜೆ. ಶ್ರೀನಿವಾಸರಾಯರಿಗೆ, ಅವರು ಕೆಲಸದಿಂದ ನಿವೃತ್ತರಾಗುವದಕ್ಕೆ ಮೊದಲು, 1904ನೆ ಆಗಸ್ಟು 16ನೆ ತಾರೀಖಿನಾರಭ್ಯ 2 ತಿಂಗಳು 13 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 4ನೆ ಅಕ್ಟೋಬರ್ 1904.

ನಂ. ರೆ. 3162—ಲ್ಯಾ. ರೆ. 172-04—3, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ತುಮಕೂರ ಡಿಸ್ಟ್ರಿಕ್ಟು ತುರುವೇಕೆರೆ ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್‌ದಾರ್ರಾದ ಕೆ. ಕೇಶವಾಚಾರ್ರಿಗೆ 1904ನೆ ಸೆಪ್ಟಂಬರ್ 14ನೆ ತಾರೀಖಿನ ಲಾಗಾಯಿತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಮೇಲ್ಕಂಡ ರಜಾ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ತಿಪಟೂರ ತಾಲ್ಲೂಕಿನ ಅಮಲ್‌ದಾರ್ರು ಸದರೀ ಸಬ್ ತಾಲ್ಲೂಕಿನ ಚಾರ್ಜ್‌ನಲ್ಲಿ ಸಹಾ ಇರತಕ್ಕದ್ದು.

(ಸಪ್ಲಿಮೆಂಟ್) ನಂ. G. 1891—11—5, 5ನೆ ಅಕ್ಟೋಬರ್ 1904.

ಹಾಸನ ಡಿಸ್ಟ್ರಿಕ್ಟು.

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಡಿಸ್ಟ್ರಿಕ್ಟು ಫಂಡ್ ಬೋರ್ಡ್ ...	1. ಮೆ॥ ಕೆ. ತಮ್ಮಯ್ಯನವರು ...	ಜಮೀನ್‌ದಾರ್ರು ಮತ್ತು ಕಾಫಿ ಪ್ಲಾಂಟರು.

ಹುಕುಂ ಬಮೋಜಿಬ್,
ಬಿ. ಕೆ. ವೆಂಕಟವರದಯ್ಯಂಗಾರ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 1ನೆ ಅಕ್ಟೋಬರ್ 1904.

ನಂ. 1119—5983, ಮೈಸೂರ ಪ್ಯಾಲೇಸ್ ಡಿವೀಜನಿನ ಎಕ್ಜಿಕ್ಯೂಟಿವ್ ಇಂಜನಿಯರಾದ ಮೆ॥ ಬಿ. ಪಿ. ರಾಘವಲು ನಾಯಿಡು ಯವರಿಗೆ 1904ನೆ ಆಗಸ್ಟ್ 17ನೆ ಮುಕ್ತುಂ 907—4891ನೆ ನಂಬರ್ ಈ ಆಫೀಸಿನ ಇಸ್ತಿಹಾರ್ನಾಮೆಯಲ್ಲಿ ಅದೇ ತಿಂಗಳು 8ನೆ ತಾರೀಖಿನಾರಭ್ಯ ಕೊಟ್ಟದ್ದ 2 ತಿಂಗಳ ಪ್ರಿವಿಲೇಜ್ ರಜಾ ಇನ್ನೂ 7 ದಿನಗಳು ಇದರಿಂದ ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 1ನೆ ಅಕ್ಟೋಬರ್ 1904.

ನಂ. 1122—5986, ಹಾಸನದ ಡಿವೀಜನಿಗೆ ಸೇರಿದ ಅಸಿಸ್ಟೆಂಟ್ ಇಂಜನಿಯರ್ ಮೆ॥ ವೆಂಕಟರಾವ್ ನಿಜಗಲ್ ಯವರಿಗೆ ಮಾಡಿ ಮಾಜಕೂರು 28ನೆ ತಾರೀಖಿನ ಲಾಗಾಯಿತು ಯಾ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 8 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ಡಬ್ಲ್ಯೂ. ಮೆಕಹರ್ಗ್,
ಪಬ್ಲಿಕ್ ವರ್ಕ್ಸ್ ಇಲಾಖಾ, ಮೈಸೂರು ಗವರ್ನಮೆಂಟ್ ಸೆಕ್ರಿಟರಿ.

1495

63

ಮೈಸೂರ ಗೆಜಿಟ್.

ಸಂ. 39.] ಸರ್ಕಾರದಿಂದ ಛಾಪಿಸಿ ಆದ್ದು. [ನಂ. 40.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 6, ಸನ್ 1904.

IIನೆ ಭಾಗ.

ಇಂಡ್ಯಗವರ್ನಮೆಂಟ, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ವಿದ್ಯಾಭ್ಯಾಸದ ಇಲಾಖಾ.

ಪ್ರಕಟನ ಪತ್ರಿಕೆ.

ಮೈಸೂರು ದೇಶೀಯ ಪರೀಕ್ಷೆಗಳು.

ಸನ್ 1904ನೆ ಇಸವಿ ಸೆಪ್ಟಂಬರ್ ತಾರೀಖು 17ನೆ ಡಿ. ನಂಬರು 13.

ಸನ್ 1904ನೆಯ ಇಸವಿ ಸೆಪ್ಟಂಬರ್ 8ನೆಯ ಮತ್ತು 15ನೆಯ ತಾರೀಖುಗಳ ಮೈಸೂರು ಗೆಜೆಟಿನ IIನೆಯ ಭಾಗದಲ್ಲಿ ಪ್ರಕಟಿಸಲ್ಪಟ್ಟಿರುವ ಸೆಪ್ಟಂಬರ್ 2ನೆಯ ತಾರೀಖಿನ ಡಿ. ನಂಬರು 10ನೆಯ ಪ್ರಕಟನ ಪತ್ರಿಕೆಯು ರದ್ದು ಮಾಡಲ್ಪಟ್ಟಿರುತ್ತದೆ. ಮುಂದೆ ನಡೆಯುವ ಮೈಸೂರು ದೇಶೀಯ ಪರೀಕ್ಷೆಗಳು ಸನ್ 1904ನೆ ಇಸವಿ ನವಂಬರು ತಿಂಗಳು ಶನಿವಾರ 19ನೆಯ ತಾರೀಖಿನಿಂದ ಆರಂಭವಾಗಿ ಪ್ರತಿ ಡಿಸ್ಟ್ರಿಕ್ಟಿನ ಮುಖ್ಯಸ್ಥಳ (Head-quarters) ದಲ್ಲಿಯೂ ಮತ್ತು ಚಿಕ್ಕಬಳ್ಳಾಪುರದಲ್ಲಿಯೂ, ಚನ್ನಪಟ್ಟಣದಲ್ಲಿಯೂ ನಡೆಯಿಸಲ್ಪಡುವವು :—

ಪರೀಕ್ಷೆಗಳು ಇದರಡೀ ಕಂಡ ಕಾಲ ಮತ್ತು ವಿಷಯಗಳ ಕ್ರಮಗಳನ್ನನುಸರಿಸಿ ನಡೆಯಿಸಲ್ಪಡುವವು :—

ಮೈಸೂರು ಲೋವರ್ ಸೆಕಂಡರಿ ಪರೀಕ್ಷೆ.

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಮಂಗಳವಾರ 22ನೆಯ ನವಂಬರ	10ರಿಂದ 12—30 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಇಂಗ್ಲಿಷ್ ವ್ಯಾಕರಣ ಮತ್ತು ಭಾಷಾಗ್ರಂಥ.	60
		ಸಂಸ್ಕೃತದ ಮತ್ತು ಫಾರಸಿಯ ವ್ಯಾಕರಣ ಮತ್ತು ಭಾಷಾ ಗ್ರಂಥಗಳು	65
	1—30ರಿಂದ 2—30ರ ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಭಾಷಾಂತರೀಕರಣ—ಇಂಗ್ಲಿಷ್, ಸಂಸ್ಕೃತ, ಫಾರಸಿ	
		ಇಂಗ್ಲಿಷ್ ಪ್ರಬಂಧರಚನೆ, ಇಂಗ್ಲೀಷನ್ನು ದೇಶಭಾಷೆಯಾಗಿ ಉಳ್ಳಂಥಾವರಿಗೆ	35
	2—35ರಿಂದ 3—5 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಉಕ್ತಲೇಖನ—ಇಂಗ್ಲೀಷ್ ...	15
		ಸಂಸ್ಕೃತ ; ಫಾರಸಿ ...	10
	3—10ರಿಂದ 3—40 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಕೈಬರವಣಿಗೆ—ಇಂಗ್ಲೀಷ್ ; ಸಂಸ್ಕೃತ ; ಫಾರಸಿ	10
	3—45ರಿಂದ 4—15 ವರೆಗೆ	ಉರ್ದು ಉಕ್ತಲೇಖನ ...	10
	4—20ರಿಂದ 4—50 ವರೆಗೆ	ಉರ್ದು ಕೈಬರವಣಿಗೆ ...	10

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಬುಧವಾರ 23ನೆಯ ನವಂಬರ	10ರಿಂದ 1ರ ವರೆಗೆ	ಕನ್ನಡ ಪ್ರಥಮ ಅಥವಾ ದ್ವಿತೀಯ ಭಾಷೆ—	
		ಕನ್ನಡ ವ್ಯಾಕರಣ, ಭಾಷಾಗ್ರಂಥ ಮತ್ತು ಪ್ರಬಂಧರಚನೆ .	100
		ಫಾರಸಿ ದ್ವಿತೀಯ ಭಾಷೆ —	
		ಫಾರಸಿ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ...	100
	2ರಿಂದ 5ರ ವರೆಗೆ	ಸಂಸ್ಕೃತ ದ್ವಿತೀಯ ಭಾಷೆ—	
		ಸಂಸ್ಕೃತ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	100
		ಲಾಟಿನ್ ದ್ವಿತೀಯ ಭಾಷೆ—	
		ಲಾಟಿನ್ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ .	120
		ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ—	
		ತೆಲುಗು, ಮತ್ತು ಉರ್ದು, ವ್ಯಾಕರಣ, ಭಾಷಾಗ್ರಂಥಗಳು ಮತ್ತು ಪ್ರಬಂಧರಚನೆ	100
ಗುರುವಾರ 24ನೆಯ ನವಂಬರ	10ರಿಂದ 12 ವರೆಗೆ	ಅಂಕಗಣಿತ .. .	100
	12–5ರಿಂದ 12–35 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ—	
		ಕನ್ನಡ ಮತ್ತು ತೆಲುಗು ಅಕ್ಷರ ಸಂಯೋಜನ	10
	12–40ರಿಂದ 1–10ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ—	
		ಕನ್ನಡ ಮತ್ತು ತೆಲುಗು ಕೈ ಬರವಣಿಗೆ	10
	2ರಿಂದ 3–30ವರೆಗೆ	ಆರೋಗ್ಯ ಶಾಸ್ತ್ರ	100
	3–45ರಿಂದ 4–15 ವರೆಗೆ	ಐಚ್ಛಿಕ ದ್ವಿತೀಯ ಭಾಷೆ—	
		ಸಂಸ್ಕೃತ ಮತ್ತು ಫಾರಸಿ ಅಕ್ಷರ ಸಂಯೋಜನ	10
	4–20ರಿಂದ 4–50 ವರೆಗೆ	ಐಚ್ಛಿಕ ದ್ವಿತೀಯ ಭಾಷೆ —	
		ಸಂಸ್ಕೃತ ಮತ್ತು ಫಾರಸಿ ಕೈ ಬರವಣಿಗೆ	10
ಶುಕ್ರವಾರ 25ನೆಯ ನವಂಬರ	10ರಿಂದ 1ರ ವರೆಗೆ	ಚರಿತ್ರೆ, ಭೂಗೋಳಶಾಸ್ತ್ರ ಮತ್ತು ಭೂಪಠ ಬರೆಯುವುದು	120
	2ರಿಂದ 3–35 ವರೆಗೆ	ವ್ಯವಸಾಯ ಶಾಸ್ತ್ರ	100
ಶನಿವಾರ 26ನೆಯ ನವಂಬರ	10ರಿಂದ 11–30 ವರೆಗೆ	ಕ್ಷೇತ್ರಗಣಿತ	100
	11–35ರಿಂದ 1–5 ವರೆಗೆ	ಪ್ರಾಕೃತಿಕ ಭೂಗೋಳ ಶಾಸ್ತ್ರ	100
	2 ರಿಂದ 3—30 ವರೆಗೆ	ಹೊಲಿಗೆ	50
		ಆಂಗ್ಲೇಯರ ಚರಿತ್ರೆ	100
	3—35ರಿಂದ 5—5ವರೆಗೆ	ಪಾಕಶಾಸ್ತ್ರ	50
		ಗೃಹಕೃತ್ಯ ನಡೆಯಿಸುವ ಕ್ರಮ	100

ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆ.

ದಿನ.	ಘಂಟೆ.	ವಿಷಯಗಳು.	ಅಂಕಗಳು.
ಶನಿವಾರ 19ನೆಯ ನವಂಬರ	10 – 1	ಪ್ರಥಮ ಭಾಷೆ—ಕನ್ನಡ ಅಥವಾ ಉರ್ದು ಗ್ರಂಥಗಳು	60 } 130
	2—4	ಅದೇ ಡಿಟೋ ಛಾಂದಸ್ಸ್ವ್ಯಾಕರಣ	40 }
	4·5—5·5	ಅದೇ ಡಿಟೋ ಪ್ರಬಂಧರಚನೆ	30 }
ಮಂಗಳವಾರ 22ನೆಯ ನವಂಬರ	10—1	ಪ್ರಥಮ ಅಥವಾ ದ್ವಿತೀಯ ಭಾಷೆ—ಪರ್ಷಿಯನ್ ಗ್ರಂಥಗಳು	60 } 130
	2—4	ಡಿಟೋ ಡಿಟೋ ವ್ಯಾಕರಣ	40 }
	4·5—5·5	ಡಿಟೋ ಡಿಟೋ ಪರ್ಷಿಯನ್ ಭಾಷೆಗೆ ಭಾಷಾಂತರೀಕರಣ	30 }
ಬುಧವಾರ 23ನೆಯ ನವಂಬರ	10—1	ದ್ವಿತೀಯ ಭಾಷೆ—ಸಂಸ್ಕೃತ ಅಥವಾ ಅರಾಬಿಕ್, ಗ್ರಂಥಗಳು, ವ್ಯಾಕರಣ, ಪದವಿನ್ಯಾಸ, ಭಾಷಾ ಶೈಲಿ	60 } 130
	2—5	ಭಾಷಾಂತರೀಕರಣ ...	70 }

ದಿನ.	ಘಂಟೆ.	ವಿಷಯಗಳು.	ಅಂಕಗಳು.	
ಗುರುವಾರ 24ನೆಯ ನವಂಬರ್	10—12	ರೇಖಾಗಣಿತ, ಕ್ಷೇತ್ರಗಣಿತ ...	40	120
	1—3·30	ಅಂಕಗಣಿತ	50	
	3·35—5·5	ಬೀಜಗಣಿತ	30	
ಶುಕ್ರವಾರ 25ನೆಯ ನವಂಬರ್	10—12	ಪ್ರಾಕೃತಿಕ ಶಾಸ್ತ್ರ (Physical science) .	40	120
	1—3	ಆರೋಗ್ಯಶಾಸ್ತ್ರ	40	
	3·5—5·5	ಕೃಷಿಶಾಸ್ತ್ರ	40	
ಶನಿವಾರ 26ನೆಯ ನವಂಬರ್	10—1	ಚರಿತೆ	50	100
	2—5	ಭೂಗೋಳ ಶಾಸ್ತ್ರ	50	
			ಜುಮ್ಲಾ	600

ಪರೀಕ್ಷೆಯರಿಗೆ ಹೊಲಿಗೆಯಲ್ಲಿಯೂ ಸಂಗೀತದಲ್ಲಿಯೂ ಪರೀಕ್ಷೆಯು ಏಳನೇದಿನ ತತ್ಪೂರ್ವ ಪ್ರಕಟಿಸಲ್ಪಡುವ ಸ್ಥಳ, ಕಾಲಗಳಲ್ಲಿ ನಡೆಯುವುದು.

ಕರ್ನಾಟಕ ಪಂಡಿತ ಪರೀಕ್ಷೆ.

ದಿನ.	ಘಂಟೆ.	ವಿಷಯಗಳು.	ಅಂಕಗಳು.	
ಶನಿವಾರ 19ನೆಯ ನವಂಬರ್	10—1	ಕನ್ನಡ ವ್ಯಾಕರಣ	120	200
	2—5	ಕನ್ನಡ ಛಂದಸ್ಸು ಮತ್ತು ಅಲಂಕಾರ ...	80	
ಮಂಗಳವಾರ 22ನೆಯ ನವಂಬರ್	10—1	ಕನ್ನಡ ಗ್ರಂಥಗಳು ಮೊದಲನೇ ಪತ್ರಿಕೆ	100	400
	2—5	ಅದೇ ಎರಡನೇ ಪತ್ರಿಕೆ	100	
ಬುಧವಾರ 23ನೆಯ ನವಂಬರ್	10—1	ಅದೇ ಮೂರನೇ ಪತ್ರಿಕೆ	100	
	2—5	ಅದೇ ನಾಲ್ಕನೇ ಪತ್ರಿಕೆ	100	
ಗುರುವಾರ 24ನೆಯ ನವಂಬರ್	10—1	ಕನ್ನಡ ಪ್ರಬಂಧರಚನೆ	100	
	2—5	ಭಾಷಾಂತರೀಕರಣ	100	
ಶುಕ್ರವಾರ 25ನೆಯ ನವಂಬರ್	10—1	ಸಂಸ್ಕೃತ ವ್ಯಾಕರಣ	80	200
	2—5	ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ	120	
ಶನಿವಾರ 26ನೆಯ ನವಂಬರ್	10—1	ಸಂಸ್ಕೃತ ಗ್ರಂಥಗಳು ಮೊದಲನೇ ಪತ್ರಿಕೆ	100	200
	2—5	ಅದೇ ಎರಡನೇ ಪತ್ರಿಕೆ ..	100	

ಇದರಡಿ ಕಂಡ ನಿಬಂಧನೆಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು:—

(1) ಪರೀಕ್ಷೆಯು ಆರಂಭಿಸುವದಕ್ಕೆ ಕ್ಲಿಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರೆಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡುವದಿಲ್ಲವು. ಮತ್ತು ಅಂಥಾ ಅರ್ಧ ಘಂಟೆ ಕಳದೆ ಮೇಲೆ ಬರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಬಂದಾವರ್ತಿ ಬಿಟ್ಟುಬಂದನಂತರ ಪುನಹ ಪ್ರವೇಶಿಸಲು ಯಾವ ವಿದ್ಯಾರ್ಥಿಗೂ ಅವಕಾಶ ಉಂಟಾಗಲಾರದು, ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟುಬರುವದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ಯಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡುಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡ್ಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರೀ ಸಂಗತಿಯು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವುದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ಯಾವ ವಿಧವಾದ ಕಾಗದ ಪತ್ರಗಳನ್ನಾಗಲಿ, ತೆಗೆದುಕೊಂಡು ಹೋಗಲು ಯಾವ ವಿದ್ಯಾರ್ಥಿಗಳಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡಲ್ಪಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವದಾಗಿಯಾಗಲಿ ಅಥವಾ ಇನ್ಯಾವ ಅಕೃತ್ಯಗಳನ್ನು ನಡೆಸುತ್ತಿರುವದಾಗಿಯಾಗಲಿ ಕಂಡುಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರೀ ನಡವಳಿತವು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವದು.

(5) ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರಿಂಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರೆಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡೆಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ವಿದ್ಯಾರ್ಥಿಯ ಹೆಸರು, ರಿಜಿಸ್ಟರ್ ನಂಬರಿ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡುವದಿಲ್ಲವು.

(8) ವಿದ್ಯಾರ್ಥಿಗಳು ಕಾಗದಗಳನ್ನ ಹರಿಯದಂತೆಯೂ ಮತ್ತು ನೆಲದಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕೆಟ್ಟುಹೋದ ವಿಸಿಷ್ಟ ಕಾಗದಗಳೂ ವಿದ್ಯಾರ್ಥಿಯು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಎಚ್. ಜೆ. ಖಾಖಾ,
ಇನ್‌ಸ್ಪೆಕ್ಟರ ಜನರಲ್ ಆಫ್ ಎಡ್ಯುಕೇಷನ್.

ಫಾರೆಸ್ಟ್ ಇಲಾಖಾ.

ಸಂದಲ್ ಹರಾಜು ನೋಟಿಫಿಕೇಷನ್.

ತಾರೀಖು 18ನೆ ಆಗಸ್ಟ್ 1904ನೆ ಇಸವಿ.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲೆಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಶಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿಶಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಶನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು :—

ಡಿಸ್ಟ್ರಿಕ್ಟ್.	ಕೋಠಿ.	ಹರಾಜು ತಾರೀಖು.			ಸಂದಲ್ ಟನ್‌ಗಳು ಮೊತ್ತ ಹೆಚ್ಚು ಕಡಿಮೆ.	ಷರಾ.
ಮೈಸೂರು ...	ಹುಣಸೂರು ...	1904ನೆ ಇಸವಿ ನವಂಬರ್ ತಾರೀಖು		19	500	
ಡಿಟೋ	ಶ್ರೀರಂಗಪಟ್ಣ	ಡಿಟೋ	ಡಿಟೋ	23	240	
ಬೆಂಗಳೂರು ...	ಬೆಂಗಳೂರು ..	ಡಿಟೋ	ಡಿಟೋ	26	120	ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.
ಹಾಸನ ...	ಹಾಸನ ..	1904ನೆ ಇಸವಿ ಡಿಶಂಬರ್ ತಾರೀಖು		1	200	
ಕಡೂರು ..	ಚಿಕ್ಕಮಗಳೂರು ..	ಡಿಟೋ	ಡಿಟೋ	5	200	
ಡಿಟೋ ..	ತರೀಕೆರೆ ..	ಡಿಟೋ	ಡಿಟೊ	8	250	
ಶಿವಮೊಗ್ಗ ...	ಶಿವಮೊಗ್ಗ ...	ಡಿಟೋ	ಡಿಟೋ	12	440	ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.
ಡಿಟೋ ..	ಸಾಗರ ..	ಡಿಟೋ	ಡಿಟೋ	15	175	
ಡಿಟೋ ..	ತೀರ್ಥಹಳ್ಳಿ ..	ಡಿಟೋ	ಡಿಟೋ	19	175	ಕಡೂರು ಡಿಸ್ಟ್ರಿಕ್ಟ್ ಸಂದಲ್ ಕೇರಿರುತ್ತೆ.

2. ಪ್ರತಿಒಂದು ಕೋಠಿಯಲ್ಲಿಯು ಹರಾಜು ಮಾಡಲ್ಪಡುವ ಸಂದಲ್ ಲಾಟು ಮತ್ತು ಮೊತ್ತ ವಗೈರೆ ತಪಶೀಲು ಐಯಿಂದ ಇದೇ ಸಾಲ್ ಅಕ್ಟೋಬರು ಆಖೈರು ವಳಗಾಗಿ ಫಾಯಿಷ ಮಾಡಲ್ಪಡುತ್ತದೆ.

ಎಂ. ಮುತ್ತಣ್ಣ,
ಕನ್‌ಸರ್ವೇಟರ್ ಆಫ್ ಫಾರೆಸ್ಟ್ಸ್ ಇನ್ ಮೈಸೂರು.

ತಾರೀಖು 15ನೆ ಸೆಪ್ಟಂಬರ್ 1904.

ಮೈಸೂರು ಡಿಸ್ಟ್ರಿಕ್ಟ್ ಮೈಸೂರು ವುಡ್‌ಯಾರ್ಡ್‌ನಲ್ಲು ಮತ್ತು ನಂಜನಗೂಡು ಡಿಪೋದಲ್ಲು ಸಹಾ ಚೌಬೀನೆ ಸಾಮಾನುಗಳು ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹರಾಜು ಮಾಡಿಸುತ್ತಾರೆಂಬ ವಿಷಯದಲ್ಲಿ 1904ನೆ ಮುರ್ತ್ಯಂ 38ನೆ ನಂಬರು ಮೈಸೂರು ಗೆಜೆಟ್ಟಿನ 11ನೆ ಭಾಗದ 543ನೆ ಪುಟದಲ್ಲಿ ಫಾಯಿಷ್ ಮಾಡಿರುವ 15—9—1904ನೆ ಮುರ್ತ್ಯಂ ನೋಟಿಫಿಕೇಷನ್ನು ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟ್.

67

1499

ಕೋಲಾರ ಡಿಸ್ಟ್ರಿಕ್ಟು:

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 22ನೆ ಸೆಪ್ಟಂಬರ 1904.

1. ಕಂದಾಯದ ಬಾಕೀದಾರರಾದ ಖಾಯಂಗುತ್ತಾ ಪಾರೇಕೊಸಹಳ್ಳಿ ಗ್ರಾಮದ ನಾರಾಯಣಶಾಸ್ತ್ರಿ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ನವಂಬರ ಮಾಹೆ 10ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903–04ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡವೇಕಾದ ಕಂದಾಯದ ಮೊಬಲಗು ಇದರಡಿ ಕೊಟ್ಟಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 442—5—8 ಆಗಿರುತ್ತೆ.

3. ಹರಾಜ್ ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ [illegible] ಹರಾಜ್ ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೆ [illegible] ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. [illegible] ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜ್ ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜ್ ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುಖ್ತಾರೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುಖ್ತಾರೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಏಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜ್ ನಿಲ್ಲಿಸಲ್ಪಡುತ್ತೆ.

7. ಹರಾಜ್ ಡೆಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜ್ ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರವರಿಂದ ಹರಾಜ್ ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಸರ್ವೆ ನಂಬರ್ ಅಥವಾ ಬಾಗಾಯತು.	ಎಕರೆ.	ಗುಂಟೆ.	ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.	
ಕೋಲಾರ	ಹುತ್ತೂರ	ಖಾಯಂಗುತ್ತಾ ಪಾರೇಕೊಸಹಳ್ಳಿ	ನಾರಾಯಣಶಾಸ್ತ್ರಿ ವಗೈರೇರು	...	ರೂ. ಆ. ಪೈ.	...	ಪದಂಪೋಕು.	340	26	...	...	...	441 5 8	ಕೋಭಕ್ಕತು
							ಖುಷ್ಕಿ	230	6	349	4	0	1 0 0	ಪ್ರೊಸೆಸ್ ಫೀ
							ತರಿ	90	20	363	6	0		
							ಬಾಗಾಯತು	6	24	27	0	0	442 5 8	
								667	36	739	10	0		

ಚೆಕ್ಕುಬಂದಿ.
ಪೂರ್ವಕ್ಕೆ—ಇರಗಸಂದ್ರ ಸರಹದ್ದು.
ಪಶ್ಚಿಮಕ್ಕೆ—ಕಾಮದೇನಹಳ್ಳಿ ಸರಹದ್ದು.
ಉತ್ತರಕ್ಕೆ—ಬಸ್ತನಹಳ್ಳಿ ಸರಹದ್ದು.
ದಕ್ಷಿಣಕ್ಕೆ—ವರದೇನಹಳ್ಳಿ
(ಪೂರಾ ಗ್ರಾಮ)

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧಪತ್ರಿಕೆ.

ತಾರೀಖು 22ನೆ ಸೆಪ್ಟಂಬರ 1904.

1. ಕಂದಾಯದ ಬಾಕೀದಾರರಾದ ಖಾಯಂಗುತ್ತಾ ಚೊಕ್ಕಹಳ್ಳಿ ಗ್ರಾಮದ ಶೀತಾರಾಮಯ್ಯನವರಿಂದ ಬರಬೇಕಾದ ಜಮೀನ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ನವಂಬರು ಮಾಹೆ 10ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903–04ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 289—8—11 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತ್ತು 15 [illegible]ಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊ[illegible] ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂ[illegible]ಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ [illegible]ಯೇ ಯಾ ಪ್ರಿಂಟು ಯಾ ಮುಖ್ತಾರೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗ[illegible] ಮುಖ್ತಾರೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಎಜಮಾನರಿಂದ ಸಹಿ ಮಾಡಲ್ಪಟ್ಟು ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವನು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈನ್ ಮೊಹರ ಮಾಡಲ್ಪಟ್ಟು ಒಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ಏನಾದರೂ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತ್ತು 30 ದಿವಸಗಳಲ್ಲಿ ಡೆಪ್ಯುಟಿ ಕಮೀಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ ಹೆಸರು.	ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಿ ಕಿಮ್ಮತ್ತು.	ಜಮೀನು. ನಂಬರ ಉಪನಂಬರ ಜಮೀನಿನ ಹೆಸರು.	ಜಮೀನು. ಖುಷ್ಕಿ ತರೀ ಉಪನಂಬರಗಳು.	ಜಮೀನು. ವಿಸ್ತೀರ್ಣ. ಎ. ಗು.	ಜಮೀನು. ಅಂದಾಜು. ರೂ. ಆ. ಪೈ.	ಸದರಿ ರಕ್ಕೆ ಬರಬೇಕಾದ ನೋಟಿಸ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ. ಆ. ಪೈ.	
ಕೋಲಾರ	ನಂಗಲಿ	ಖಾಯಂಗುತ್ತಾ ಚೊಕ್ಕಹಳ್ಳಿ	ಶೀತಾರಾಮಯ್ಯ	...	...	...	ಪರಂಬೋಕು	139 39	4 4 0		
							ಖುಷ್ಕಿ	215 12	304 4 0	288 8 11	ಶೋಭಕೃತು
							ತರಿ	5 6	17 8 0	1 0 0	ಪ್ರೊಸೆಸ್ ಫೀ
							ಬಾಗಾಯತು.	1 31	6 0 0		
								362 8	332 0 0	289 8 11	

ಚಕ್ಕುಬಂದಿ.
ಪೂರ್ವಕ್ಕೆ—ಶೀಪೂರ ಸರಹದ್ದು.
ಪಶ್ಚಿಮಕ್ಕೆ — ತಲಗುಂದ.
ಉತ್ತರಕ್ಕೆ—ಬೈಯಪಲ್ಲಿ ಸರಹದ್ದು.
ದಕ್ಷಿಣಕ್ಕೆ—ಗರಡನಹಳ್ಳಿ ಸರಹದ್ದು.
(ಪೂರಾ ಗ್ರಾಮ)

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 22ನೆ ಸೆಪ್ಟಂಬರ್ 1904.

1. ಕಂದಾಯದ ಬಾಕೀದಾರರಾದ ಜೋಡಿ ತಲಗುಂದ ಗ್ರಾಮದ ವೆಂಕಟರಾಮಯ್ಯ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ನವಂಬರ್ ಮಾಹೆ 10ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—04ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರ[illegible]ಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ ಮೇರಿಗೆ ರೂಪಾಯಿ 219—1—2 ಆಗಿರುತ್ತೆ.

3. [illegible] ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. [illegible]ಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋ[illegible]ಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ [illegible]ಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತೀ ಮಾಡಲ್ಪಡದೆ ಹೋದ[illegible] ಸ[illegible] ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟು ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟು ಕೂಡಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮೀಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಇಂದಾಜಿನ ಕಿಮತ್ತು.	ಜಮೀನು. ನಂಬರಿ ಅಥವಾ ಜಮೀನಿನ ಹೆಸರು.	ಮುಟ್ಟಳೆ ತರೀ ಅಥವಾ ಬಾಗಾಯತು.	ಎಕರೆ.	ಗುಂಟೆ.	ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.			
					ರೂ. ಆ. ಪೈ.											
ಕೋಲಾರ.	ಕೆ ಹೊಳೆ.	ಜೋಡಿ ತಲಗುಂದ.	ಹಿಂಕಡುರಯ್ಯ ವಗೈರೆರು.	....	..		ಪರಂಪೋಕು	294	7	...						
							ಖುಷ್ಕಿ ...	188	22	262	12	0	218	1	2	ಶೋಧಕೃತು.
							ತರಿ ...	113	2	371	12	0	1	0	0	ಪ್ರೊಸೆಸ್ ಫೀ.
							ಬಾಗಾಯತು	4	10	22	0	0				
								600	1	656	8	0	219	1	2	

ಚಕ್ಕುಬಂದಿ.
ಪೂರ್ವಕ್ಕೆ — ಗರಡನಹಳ್ಳಿ.
ಪಶ್ಚಿಮಕ್ಕೆ — ದನಮಟ್ಟಹಳ್ಳಿ.
ಉತ್ತರಕ್ಕೆ — ಬುಸನಹಳ್ಳಿ ಸರಹದ್ದು.
ದಕ್ಷಿಣಕ್ಕೆ — ಚಳಹಳ್ಳಿ.
(ವೃತ್ತಿವಾರಾಗಿ ಹರಾಜು ಮಾಡಿಸಲ್ಪಡುತ್ತೆ.)

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ತಾರೀಖು 7ನೆ ಸೆಪ್ಟಂಬರು 1904ನೆ ಇಸವಿ.

* ಮಾರ್ಜಿನ್ನಲ್ಲಿ ನಮೂದುಮಾಡಿ ಇರತಕ್ಕ ಇನಾಂ ಗ್ರಾಮಗಳು, ಸರ್ಕಾರಕ್ಕೆ ಬರಬೇಕಾದ ಬಾಕಿ ವೊಬಲಗಿಗೋಸ್ಕರವಾಗಿ ತಾಲ್ಲೂಕ್ ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ಅಕ್ಟೋಬರು ಮಾಹೆ 31ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

* 1. ಜೋಡಿ ವೀರಶೆಟ್ಟಿ ಹಳ್ಳಿ	...	ಆಪನಿ ಹೋಬಳಿ ಮುಳಬಾಗಲ್ ತಾ॥
2. ಖಾಯಂಗುತ್ತಾ ಕುಂಮುರಕುಂಟೆ	..	
3. ಡಿಟೋ ಬೈರಸಂದ್ರ		ನರಸಾಪುರದ ಹೋಬಳಿ ಮಾಲೂರು ತಾ॥

(ಹೆಚ್ಚು ತಪಶೀಲ್ ಬಗ್ಗೆ 1904ನೆ ಮುಕ್ತಂ 38ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 5[illegible] 547ನೆ ನಂಬರ್ ಪೇಜು ನೋಡತಕ್ಕದ್ದು.)

ತಾರೀಖು 16ನೆ ಸೆಪ್ಟಂಬರ್ 1904ನೆ ಇಸವಿ.

* ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಕೋಲಾರ ತಾಲ್ಲೂಕಿಗೆ ಸೇರಿದ ಇನಾಂ ಗ್ರಾಮಗಳು [illegible]ರಕ್ಕೆ ಬರಬೇಕಾದ ಬಾಕಿ ವೊಬಲಗಿಗೋಸ್ಕರವಾಗಿ [illegible]ಲ್ಲೂ[illegible] ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ನವಂಬರ್ ಮಾಹೆ 1ನೆ ತಾ॥ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

1. ಖಾಯಂಗುತ್ತಾ ಗಿರಿಜಂಪ್ಯಾಟೆ	ವೇಮಗಲ್ ಹೋಬಳಿ.
2. ಖಾಯಂಗುತ್ತಾ ಬಾಲಸಾಗೇನಹಳ್ಳಿ	
3. ಜೋಡಿ ಪಾಪನಹಳ್ಳಿ	ವಕ್ಕಲೇರಿ ಹೋಬಳಿ.

(ಹೆಚ್ಚು ತಪಶೀಲ್ ಬಗ್ಗೆ 1904ನೆ ಮುಕ್ತಂ 39ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 560, 561, 562, 563ನೆ ನಂಬರ್ ಪೇಜು ನೋಡತಕ್ಕದ್ದು.)

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಶನರ್.

ಮೈಸೂರು ಡಿಸ್ಟ್ರಿಕ್ಟ್.

1904ನೆ ಇಸವಿ ಜುಲೈ ಮಾಹೆ 30ನೆ ತಾರೀಖು ಶನಿವಾರ ಮಧ್ಯಾಹ್ನ 2 ಘಂಟೆಯಲ್ಲಿ ಮೈಸೂರಲ್ಲಿ ನಡದ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಪ್ರೊಸೀಡಿಂಗ್ಸು.

ಹಾಜರು.

1. ಮೆ॥ ಎಂ. ಕಾಂತರಾಜ ಅರಸ್, ಬಿ. ಎ., ಪ್ರೆಸಿಡೆಂಟರು.

ಎಕ್ಸ್ ಅಫೀಷಿಯೋ ಮೆಂಬರುಗಳು.

2. ಮೈಸೂರು ಡಿವೀಜನ್ ಅಸಿಸ್ಟೆಂಟ್ ಕಮಿಶನರ್ ಮತ್ತು ವೈಸ್ ಪ್ರೆಸಿಡೆಂಟರು.
3. ನಂಜನಗೂಡು ಡಿವೀಜನ್ ಅಸಿಸ್ಟೆಂಟ್ ಕಮಿಶನರ್ರವರು.
4. ಹುಣಸೂರು ಡಿವೀಜನ್ ಅಸಿಸ್ಟೆಂಟ್ ಕಮಿಶನರವರು.
5. ಫ್ರೆಂಚ್‌ರಾಕ್ಸ್ ಡಿವೀಜನ್ ಅಸಿಸ್ಟೆಂಟ್ ಕಮಿಶನರವರು.
6. ಕೃಷ್ಣರಾಜಪೇಟೆ ಡಿವೀಜನ್ ಅಸಿಸ್ಟೆಂಟ್ ಕಮಿಶನರವರು.
7. ಮೈಸೂರು ಡಿವೀಜನ್ ಎಕ್ಸಿಕ್ಯೂಟಿವ್ ಇಂಜಿನಿಯರ್ರವರು.
8. ಫ್ರೆಂಚ್‌ರಾಕ್ಸ್ ಡಿವೀಜನ್ ಎಕ್ಸಿಕ್ಯೂಟಿವ್ ಇಂಜಿನಿಯರ್ರವರು.
9. ಮೈಸೂರು ಡಿಸ್ಟ್ರಿಕ್ಟ್ ಸಿವಿಲ್ ಸರ್ಜನ್‌ರವರು.
10. ಮೈಸೂರು ದಕ್ಷಿಣ ಸರ್ಕಲ್ ಸ್ಕೂಲುಗಳ ಡೆಪ್ಯುಟಿ ಇನ್‌ಸ್ಪೆಕ್ಟರು.

ಬೇರೋಜಗಾರ್ ಮೆಂಬರುಗಳು.

A. ತಾಲ್ಲೂಕುಗಳ ಪ್ರಜಾ ಪ್ರತಿನಿಧಿಗಳು.

11. ಮೆ॥ ಅಂಬ್ಲಿ ಅಣ್ಣಯ್ಯಪಂಡಿತರು, ಮೈಸೂರು.
12. ,, ಸಿದ್ದೋಜಿರಾಯರು, ಎಡತೊರೆ.
13. ,, ಸಿದ್ದಲಿಂಗಪ್ಪನವರು, ಗುಂಡ್ಲುಪೇಟೆ.
14. ,, ವಾಸುದೇವಯ್ಯನವರು, ಚಾಮರಾಜ ನಗರ.
15. ,, ಭೀಮರಾಯರು, ನಂಜನಗೂಡು.
16. ,, ತಲ್ಕಾಡು ಕೃಷ್ಣರಾಯರು, ಟಿ. ನರಶೀಪುರ.
17. ,, ನಾಡಿಗ್ ಕೃಷ್ಣಪ್ಪನವರು, ಕೃಷ್ಣರಾಜಪೇಟೆ.
18. ,, ವೈ. ರಾಮಣ್ಣನವರು, ಮಂಡ್ಯ.
19. ,, ಗೋವಿಂದಪ್ಪನವರು, ಮಳವಳ್ಳಿ.
20. ,, ಶ್ರೀಕಂಠಶೆಟ್ಟಿ, ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು.

E. ಕ್ಲಾಸಿ ಮೇರೆ ಇತರ ಪ್ರಜಾ ಪ್ರತಿನಿಧಿಗಳು.

21. ಮೆ॥ ಎ. ರಾಮಯ್ಯನವರು, ಅಡ್ವೋಕೇಟ್ ಮತ್ತು ಜಮೀನ್ದಾರ್ರು.
22. ,, ಮಾದಪ್ಪನವರು, ಇನಾಂದಾರ್ರು.
23. ,, ಎ. ಗೋವಿಂದಾಚಾರ್ಲು, ಪರ್ಷ ಎಕ್ಸಿಕ್ಯೂಟಿವ್ ಇಂಜಿನಿಯರ್.
24. ,, ತಾಯೂರು ಕೃಷ್ಣರಾಯರು, ಪರ್ಷ ಅಮಲ್ದಾರ್ ಮತ್ತು ಜಮೀನ್ದಾರ್ರು.
25. ,, ಉಂಡವಾಡಿ ನರಸಿಂಗರಾಯರು, ಶ್ಯಾನುಭೋಗರು ಮತ್ತು ಜಮೀನ್ದಾರ್ರು.

ಗೈರ್ ಹಾಜರು.

26. ಮೆ॥ ಅಂತಹಳ್ಳಿ ಮುದ್ದೆಗೌಡರು, ಹುಣಸೂರು.
27. ,, ದಾಸೆಗೌಡರು, ಹೆಗ್ಗಡದೇವನಕೋಟೆ.
28. ,, ಚಂದ್ರಶೇಖರಯ್ಯನವರು, ನಾಗಮಂಗಲ.
29. ,, ಹರ್ಷಅಲ್ಲಿ ಬೇಗರು, ಪರ್ಷ ಅಮಲ್ದಾರ್ರು ಮತ್ತು ಜಮೀನ್ದಾರ್ರು.
30. ,, N. ಸುಬ್ಬರಾಯರು, ಶ್ರೀರಂಗಪಟ್ಟಣದ ತಾಲ್ಲೂಕು.

I. ಈ ಕೆಳಗೆ ಕಂಡ ಗೌರ್ನಮೆಂಟು ನಡವಳಿಕೆಗಳು ಓದಿ ರಿಕಾರ್ಡು ಮಾಡಲ್ಪಟ್ಟವು.

ಹೊಸದಾಗಿ ಏರ್ಪಡಿಸುವ ವಿಲೇಜು ಯೂನಿಯನ್‌ಗಳಲ್ಲಿ ಸರ್ಕಾರಿ ನೌಕರಿ ಇಲ್ಲದೆ ಇರುವ ಮೆಂಬರುಗಳನ್ನು ಛೇರುಮೆನ್‌ಗಳಾಗಿ ನೇಮಿಸಲು ಮಂಜೂರ್ಮಾಡುವದಕ್ಕೆ ಆಗುವದಿಲ್ಲವೆಂದು ಗೌರ್ನಮೆಂಟಿನಿಂದ ಬಂದ 8—6—04ನೆ ಮರ್ಕುಂ 4819-26—L. F. 125—03ನೆ ನಂಬರು ಪ್ರೊಸಿಡಿಂಗ್ಸ್.

2. ವರ್ಕ್ ಇನ್‌ಸ್ಪೆಕ್ಟರುಗಳನ್ನು ಖಾಯಂಮಾಡಿ ಹಾಲಿ ಇರುವ ಮತ್ತು ಮುಂದೆ ನೇಮಿಸಲ್ಪಡುವ ವರ್ಕ್ ಇನ್‌ಸ್ಪೆಕ್ಟರುಗಳಿಗೆ ಬೇಕಾದ ಅರ್ಹತೆಗಳು ವಿಧಿಸಿ ಗೌರ್ನಮೆಂಟಿನಿಂದ ಬಂದಿರುವ 4—6—04ನೆ ಮರ್ಕುಂ 4711-19—L. F. 320-96ನೆ ನಂಬರು ಪ್ರೊಸೀಡಿಂಗ್ಸ್.

3. ವಿಲೇಜು ಯೂನಿಯನ್‌ಗಳಲ್ಲಿ ಖಾಲಿ ನಿವೇಶನಗಳ ಮೇಲೂ ಮತ್ತು ಮನೆಗಳಿಗೆ ಶೇರಿರುವ ಹಿತ್ತಲುಗಳಿಗೂ ದಾಖಲಾಗುವ ತೆರಿಗೆಯನ್ನು ಡಿಸ್ಟ್ರಿಕ್ಟ್ ಫಂಡ್ಸಿಗೆ ಶೇರಿಸುವ ವಿಷಯವು ತೀರ್ವಾನವಾಗುವ ವರಿವಿಗೂ ಸದರೀ ತೆರಿಗೆಯನ್ನು ರೆವಿನ್ಯೂ ಇಲಾಖೆಯವರೆ ವಸೂಲ್ಮಾಡಬೇಕೆಂದು ಗೌರ್ನಮೆಂಟಿನಿಂದ ಬಂದ 20—6—04ನೆ ಮರ್ಕುಂ 4963-5—L. F. 66-03ನೆ ನಂಬರು ಗೌರ್ನಮೆಂಟು ಪ್ರೊಸೀಡಿಂಗ್ಸ್.

II. ಕೆರೆಯೇರಿ ಮೇಲಿನ ಡಿಸ್ಟ್ರಿಕ್ಟ್ ಫಂಡು ರಸ್ತೆಗಳಿಗೆ ಜಲ್ಲಿಹಾಕುವ ವಿಚಾರದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಅಭಿಪ್ರಾಯವನ್ನು ಕೇಳಿ ಗೌರ್ನಮೆಂಟಿನಿಂದ ಬಂದ 19—7—04ನೆ ಮರ್ಕುಂ 457-65-16-3—L. B. Cir. 2ನೆ ನಂಬರು ಗೌರ್ನಮೆಂಟು ಪ್ರೊಸೀಡಿಂಗ್ಸ್ ವಿಚಾರದಲ್ಲಿ ಎಲ್ಲೆಲ್ಲಿ ಅತ್ಯಾವಶ್ಯಕವೋ ಅಲ್ಲಿ ಸದರೀ ರಸ್ತೆಗಳಿಗೆ ಜಲ್ಲಿ ಹಾಕಬಹುದೆಂದು ತೀರ್ವಾನ ಮಾಡಲ್ಪಟ್ಟಿತು.

III. ಡಿಸ್ಟ್ರಿಕ್ಟ್ ಫಂಡಿನಿಂದ ಮಾಡಿಸುವ ಕೆಲಸಗಳ ಖರ್ಚುಗೋಸ್ಕರ 50 ರೂಪಾಯಿ ಇಂಪ್ರೆಸ್ಟನ್ನು ಫ್ರೆಂಚ್‌ರಾಕ್ಸ್ ಸಬ್ ತಾಲ್ಲೂಕು ಡೆಪ್ಯುಟಿ ಅಮಲ್ದಾರ್ರಿಗೆ ಕೊಡುವ ಭಾಗದಲ್ಲಿ ಗೌರ್ನಮೆಂಟಿನಿಂದ ಆಖ್ಯೈರಿಗೆ ತಲಿಪಿದ 12—7—04ನೆ ಮರ್ಕುಂ 217—L. B. 1-2ನೆ ನಂಬರು ಡಾಕೆಟು ವಿಚಾರದಲ್ಲಿ ಡೆಪ್ಯುಟಿ ಅಮಲ್ದಾರ್ರಿಗೆ 50 ರೂಪಾಯಿ ಇಂಪ್ರೆಸ್ಟನ್ನು ಕೊಡಬೇಕೆಂದು ಇತ್ಯರ್ಥವಾಯಿತು.

IV. ಫ್ರೆಂಚ್‌ರಾಕ್ಸ್ ರೈಲ್ವೆ ಸ್ಟೇಷನ್‌ಬಳಿ ಒಂದು ಮೂರನೆ ತರಗತಿ ಟ್ರಾವಲರ್ಸ್ ಬಂಗ್ಲೆಯನ್ನು ಕಟ್ಟಲು ತಗಲುಬಹುದಾದ ಖರ್ಚನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಕೊಡಲು ಒಪ್ಪುತ್ತಾರೆಯೇ? ಹಾಗೆ ಒಪ್ಪಿದಲ್ಲಿ ಯಾತರಿಂದ ಈ ಖರ್ಚನ್ನು ಕೊಡುವದಕ್ಕೆ ಆಗುತ್ತೆಂದು ಗೌರ್ನಮೆಂಟಿನಿಂದ ಬಂದ 28—7—04ನೆ ಮರ್ಕುಂ 712-21-2—L. B. ನೆ ನಂಬರು ಡಾಕೆಟು ವಿಚಾರದಲ್ಲಿ ಚಾಲ್ತಿಸಾಲಿನಲ್ಲಿ ಡಿಸ್ಟ್ರಿಕ್ಟ್ ಫಂಡಿನಿಂದ 2,000 ರೂಪಾಯಿ ಕೊಡಬೇಕೆಂತಲೂ ಈ ಚಾರ್ಜನ್ನೆ ಸಾಲಾಖ್ಯೈರಿಗೆ ಹೆಚ್ಚಾಗಿ ಉಳಿಯುವ ಮೊಬಲಗಿನಿಂದ ಕೊಡಲು ಶಿಫಾರ್ಸು ಮಾಡಬೇಕೆಂತಲೂ ತೀರ್ಮಾನ ಮಾಡಲ್ಪಟ್ಟಿತು.

V. ಲೋಕಲ್ ಬೋರ್ಡು ರೂಲ್ಸಿನ 91ನೆ ಪ್ಯಾರಾ ಪ್ರಕಾರ ಅಂದಾಜುಗಳನ್ನು ಮೈಸೂರು ಮತ್ತು ಫ್ರೆಂಚ್‌ರಾಕ್ಸ್ ಡಿವೀಜನ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಂದ ಬಂದಿರುವ ರೇಟಿನ ಷೆಡ್ಯೂಲ್ ಅನುಸರಿಸಿ ಮಂಜೂರ್ ಮಾಡುವ ವಿಚಾರದಲ್ಲಿ 1904—05ನೆ ಸಾಲಿಗೆ ಮೇಲ್ಕಂಡ ದರಗಳನ್ನು ಅಂಗೀಕರಿಸಬೇಕೆಂತಲೂ ಈ ದರಗಳನ್ನು ಪುನರ್ವಿಮರ್ಶೆ ಮಾಡಲು ಆಗುತ್ತದೆಯೇ ಇಲ್ಲವೆ ಎಂಬುವದನ್ನು ನೋಡಲು ಮೆಂಬರುಗಳಿಗೆ ಮೇಲ್ಕಂಡ ಷೆಡ್ಯೂಲನ್ನು ಕಳುಹಿಸಬೇಕೆಂದು ತೀರ್ವಾನವಾಯಿತು.

VI. ಹಿಂದಿನ ಸಾಲುಗಳ ಅಪೂರ್ತಿ ಕಾಮಗಾರಿಗಳನ್ನು 1904—05ನೆ ಸಾಲಿನಲ್ಲಿ ರೆವಿನ್ಯೂ ಇಲಾಖೆಯಿಂದ ಪೂರ್ತಿಯಾಗಿ ಮಾಡಲು 27,664 ರೂಪಾಯಿ ವರಿಗೂ ಕೊಡಬಹುದೆಂದು ತೀರ್ವಾನವಾಯಿತು.

VII. ಹಿಂದಿನ ಸಾಲುಗಳ ಅಪೂರ್ತಿ ಕೆಲಸಗಳನ್ನು ಚಾಲ್ತಿ ಸಾಲಿನಲ್ಲಿ ಪೂರೈಸಲು ಬೇಕಾಗುವ ಹಣಕ್ಕೋಸ್ಕರ ಕೆಲಸಗಳ ಪಟ್ಟಿನಿ ಫ್ರೆಂಚರಾಕ್ಸ ಮತ್ತು ಮೈಸೂರು ಡಿವೀಜನ ಎಕ್ಸಿಕ್ಯೂಟಿವ ಇಂಜಿನಿಯರಗಳಿಂದ ತಲಪಿದ 1904ನೆ ಜುಲೈ ಮಾಹೆ 26 ಮತ್ತು 29ನೆ ಮರು ಂ 668 ಮತ್ತು 625ನೆ ನಂಬರು ಡಾಕೆಟುಗಳು ಓದಲ್ಪಟ್ಟವ.

ಈ ಲೀಸ್ಟುಗಳನ್ನು ಮಂಜೂರ್ಮಾಡಿರುವದಾಗಿಯೂ ಚಾಲ್ತಿ ಸಾಲಿನ ಬಡ್ಜೆಟ್ಟಿನಲ್ಲಿ "A–Reserve" ಗೋಸ್ಕರ ಇರುವ 4,750 ರೂಪಾಯಿ ಪೈಕಿ ಫ್ರೆಂಚರಾಕ್ಸ ಡಿವಿಜನಗೆ 394 ರೂಪಾಯಿ ಮೈಸೂರು ಡಿವಿಜನಗೆ 2,816 ರೂಪಾಯಿ ಜಾಮ್ಲಾ 3,210 ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನವಾಯಿತು.

VIII. ಮದ್ದೂರು ರೈಲ್ವೆ ಸ್ಟೇಷನಬಳಿ, "Cavery Power works" ಗೆ ಹೋಗುವ ದೊಡ್ಡ ಮನುಷ್ಯರುಗಳು ಇಳಿದುಕೊಳ್ಳಲು, ಒಂದು ಒಂದನೇ ಕ್ಲಾಸ ಮುಸಾಫರಖಾನೆಯನ್ನು ಕಟ್ಟಬೇಕೆಂತಲೂ, ಫ್ರೆಂಚರಾಕ್ಸ ಮುಸಾಫರಖಾನೆಗೂ ಮತ್ತು ಮೇಲ್ಕೋಟೆಯಲ್ಲಿರುವ 3ನೆ ಕ್ಲಾಸ ಟ್ರಾವಲರ್ಸ ಬಂಗ್ಲೆಗೂ ಸಹ ಅಡಿಗೆ ಪಾತ್ರೆಗಳನ್ನು ಕೊಡಬೇಕೆಂತಲೂ ಸಹ ಫ್ರೆಂಚರಾಕ್ಸ ಡಿವಿಜನ ಅಸಿಸ್ಟಂಟ ಕಮಿಷನರಿಂದ ತಲಪಿದ 14—7—04ನೆ ಮರ್ಕ್ಯಂ 28ನೆ ನಂಬರು ಡಾಕೆಟು ವಿಚಾರದಲ್ಲಿ.

(1) ಮದ್ದೂರು ರೈಲ್ವೆ ಸ್ಟೇಷನ ಬಳಿ ಒಂದು ಟ್ರಾವಲರ್ಸ ಬಂಗ್ಲೆಯನ್ನು ಕಟ್ಟಲು ಮಂಜೂರಿ ಬಗ್ಗೆ ಗೌರ್ನಮೆಂಟಿಗೆ ಬರಿಯಬೇಕೆಂತಲೂ ಸೋಮನಹಳ್ಳಿ ಬಂಗ್ಲೆಯಲ್ಲಿನ ಶಿಬ್ಬಂದಿಗಳೇ ಮೇಲ್ಕಂಡ ಬಂಗ್ಲೆಯ ಉಸ್ತುವಾರಿ ತೆಗದುಕೊಳ್ಳಬೇಕೆಂತಲೂ (2) ಚಾಲ್ತಿ ಸಾಲಿನ ಗ್ರಾಂಟಿನ ಪೈಕಿ ಮೇಲ್ಕಂಡ ಬಂಗ್ಲೆಗಳಿಗೆ ಮಂಜೂರಾಗಿರುವ ಸ್ಟೀಲ ಮೇರೆ ಪಾತ್ರೆಗಳನ್ನು ಕೊಂಡುಕೊಳ್ಳಬೇಕೆಂತಲೂ ಸಹ ತೀರ್ಮಾನವಾಯಿತು.

IX. ಡಿಸ್ಟ್ರಿಕ್ಟ ಮತ್ತು ಮುನಿಸಿಪಲ ಫಂಡುಗಳಿಂದ ಮಾಡಿಸತಕ್ಕ ಕೆಲಸಗಳನ್ನು ನೋಡಿಕೊಳ್ಳಲು 16 + 5 ರೂಪಾಯಿ ತಲಬಿನ ಮೇಲೆ ಒಬ್ಬ ವರ್ಕ ಇನ್ಸ್ಪೆಕ್ಟರನ್ನು ಇಟ್ಟುಕೊಳ್ಳಬೇಕೆಂದು ನಾಗಮಂಗಲದ ತಾಲ್ಲೂಕಿನಲ್ಲಿ 15—6—04ನೆ ಮರ್ಕ್ಯಂನಲ್ಲಿ ನಡೆದ ತಾಲ್ಲೂಕು ಬೋರ್ಡು ಮೀಟಿಂಗಿನ ಪ್ರಪೋಜಲ ಮತ್ತು ಮೇಲ್ಕಂಡ ಮೇರೆ ಒಬ್ಬ ವರ್ಕ ಇನ್ಸ್ಪೆಕ್ಟರನ್ನು ಮತ್ತು ತಾಲ್ಲೂಕು ಕಚೇರಿಯಲ್ಲಿ ಡಿಸ್ಟ್ರಿಕ್ಟ ಮತ್ತು ಮುನಿಸಿಪಲ ಫಂಡು ಕೆಲಸವನ್ನು ನೋಡಿಕೊಳ್ಳಲು ಮಾಹೆಯಾನಾ 15 ರೂಪಾಯಿನ ತಲಬಿನ ಮೇಲೆ ಒಬ್ಬ ಗುಮಾಸ್ತನನ್ನು ಇಟ್ಟುಕೊಳ್ಳಬೇಕೆಂತಲೂ ಸಹ 9—7—04ನೆ ಮರ್ಕ್ಯಂನಲ್ಲಿ ನಡೆದ ಫ್ರೆಂಚರಾಕ್ಸ ಸಬ ತಾಲ್ಲೂಕು ಬೋರ್ಡಿನ ಪ್ರಪೋಜಲ ಸಹ ಓದಲ್ಪಟ್ಟವು.

ಇರುವ ಮಾಹೆ ಗುರ್ತ್ರ ಲಾಗಾಯತು ಹಂಗಾಮಿಯಾಗಿ ಮಾಹೇಯಾನಾ 15 ರೂಪಾಯಿ ತಲಬು 6 ರೂಪಾಯಿ ಅಲೌಸು ಈಮೇರೆ ವರ್ಕ ಇನ್ಸ್ಪೆಕ್ಟರ್‌ಗಳನ್ನು ಇಟ್ಟುಕೊಳ್ಳಲು ಮಂಜೂರ್ಮಾಡಬೇಕೆಂತಲೂ ನಾಗಮಂಗ್ಲದ ಬೋರ್ಡಿನ ಪ್ರಪೋಜಲ ಪ್ರಕಾರ ಒಬ್ಬ ಗುಮಾಸ್ತನನ್ನು ಇಟ್ಟುಕೊಳ್ಳುವ ವಿಚಾರವನ್ನು ವಜಾ ಮಾಡಬೇಕೆಂತಲೂ ಸಹ ತೀರ್ಮಾನ ಮಾಡಲ್ಪಟ್ಟಿತು.

X. ಬೆಳ್ಳೂರು ಗ್ರಾಮದಲ್ಲಿ ಯೂನಿಯನ್ನು ಸ್ಥಾಪಿಸಬೇಕೆಂದು 15—6—04ನೆ ಮರ್ಕ್ಯಂನಲ್ಲಿ ನಡೆದ ನಾಗಮಂಗಲದ ಬೋರ್ಡಿನ ತೀರ್ಮಾನ ಮತ್ತು ಕ್ಯಾತ್ನಹಳ್ಳಿಯಲ್ಲಿ ಯೂನಿಯನ್ನು ಸ್ಥಾಪಿಸಬೇಕೆಂದು 9—7—04ನೆ ಮರ್ಕ್ಯಂನಲ್ಲಿ ನಡೆದ ಫ್ರೆಂಚರಾಕ್ಸ ಬೋರ್ಡಿನ ತೀರ್ಮಾನ ಇವುಗಳು ಓದಲ್ಪಟ್ಟವು.

ಸಂಬಂಧಪಟ್ಟ ತಾಲ್ಲೂಕುಗಳಿಂದ ಅವಶ್ಯಕವಾದ ಲೆಕ್ಕಗಳನ್ನು ತರಿಸಿಕೊಂಡು ಮೇಲ್ಕಂಡ ಎರಡು ಗ್ರಾಮಗಳಲ್ಲಿ ಯೂನಿಯನ್ನು ಸ್ಥಾಪಿಸಲು ಗೌರ್ನಮೆಂಟಿಗೆ ಬರೆಯಬೇಕೆಂದು ತೀರ್ಮಾನವಾಯಿತು.

XI. ಪ್ರಯಾಣೀಕರಿಗೆ ತುಂಬಾ ಹೇಸಿಗೆಯನ್ನು ಉಂಟುಮಾಡುತ್ತಿರುವ ಲೋಕಲ ಫಂಡ ಆಸ್ಪತ್ರೆಯಲ್ಲಿರುವ ಹೆಣ ಕುಯ್ಯುವ ಮನೆಯನ್ನು ಮತ್ತು ಕಕ್ಕಸ್ಸನ್ನು ಸಹ ಹಾಳಿ ಇರತಕ್ಕ ಸ್ಥಳದಿಂದ ತೆಗೆದುಹಾಕಬೇಕೆಂದು 15—6—04ನೆ ಮರ್ಕ್ಯಂನ ನಾಗಮಂಗಲದ ತಾಲ್ಲೂಕು ಬೋರ್ಡಿನ ತೀರ್ಮಾನವನ್ನು ಓದಲಾಯಿತು. ಸ್ಥಳ ಅಜಮಾಯಿಷಿಯಿಂದ ಸಿವಿಲ ಸರ್ಜನರವರು ಚುನಾಯಿಸುವ ಸ್ಥಳಗಳಲ್ಲಿ ಮೇಲ್ಕಂಡ ಕಟ್ಟಡಗಳನ್ನ ಕಟ್ಟಬೇಕೆಂದು ತೀರ್ಮಾನವಾಯಿತು.

XII. ಹುರಾ ಗ್ರಾಮಕ್ಕೆ ಹಂಗಾಮಿಯಾಗಿ ಮಂಜೂರಾಗಿರುವ ನೇಟಿವ ಪಂಡಿತರನ್ನು ಖಾಯಂ ಮಾಡಬೇಕೆಂತಲೂ, ಔಷಧಿ ಖರ್ಚಿಗೋಸ್ಕರ ಇವರಿಗೆ ಮಾಹೇಯಾನಾ 5 ರೂಪಾಯಿ ಕೊಡಬೇಕೆಂತಲೂ ಸಹ 28—6—04ನೆ ಮರ್ಕ್ಯಂನ ನಂಜನಗೂಡು ತಾಲ್ಲೂಕು ಬೋರ್ಡಿನ ತೀರ್ಮಾನ ಓದಲಾಯಿತು.

ಮೇಲ್ಕಂಡ ಏರ್ಪಾಡನ್ನು ಒಂದು ವರ್ಷ ಹಂಗಾಮಿಯಾಗಿ ಮಂಜೂರ್ಮಾಡಬೇಕೆಂತಲೂ ಮೈಸೂರು ಇಂಡಿಜನಿಸ ಆಸ್ಪತ್ರೆಯಲ್ಲಿ ತೇರ್ಗಡೆಯಾದವರ ಪೈಕಿ ಒಬ್ಬರನ್ನು ಮೇಲ್ಕಂಡ ಕೆಲಸಕ್ಕೆ ಚುನಾಯಿಸಬೇಕೆಂತಲೂ ಸಹ ತೀರ್ಮಾನವಾಯಿತು.

XIII. ಡಿಸ್ಟ್ರಿಕ್ಟ ಬೋರ್ಡು ಮೆಂಬರಗಳನ್ನು "Arms Regulation" ನಿಂದ ವಿನಾಯಿಸಬೇಕೆಂದು ಮಿ. ಎ. ಗೋವಿಂದಾಚಾರ್ಲುರವರಿಂದ ತಲಪಿದ 17—6—04ನೆ ಮರ್ಕ್ಯಂ 3ನೆ ನಂಬರ್ ಲೆಟರ್ ಓದಲಾಯಿತು.

ದಸರಾ ಪ್ರಜಾ ಪ್ರತಿನಿಧಿ ಸಂಘದ ಮೆಂಬರುಗಳಿಗೆ ಮೇಲ್ಕಂಡ ರಿಯಾಯತಿ ತೋರಿಸುವ ಮೇರೆ ಡಿಸ್ಟ್ರಿಕ್ಟ ಬೋರ್ಡು ಮೆಂಬರುಗಳಿಗೆ ತೋರಿಸಬೇಕೆಂದು ಗೌರ್ನಮೆಂಟಿಗೆ ಬರೆಯುವಂತೆ ತೀರ್ಮಾನವಾಯಿತು.

XIV. 1904—05ನೆ ಸಾಲಿಗೆ ಮೈಸೂರು ಡಿಸ್ಟ್ರಿಕ್ಟನ "District Fund Budget Estimates" ಮಂ ಜೂರ್ಮಾಡಿ ಗೌರ್ನಮೆಂಟಿನಿಂದ ಬಂದ. 21—7—04ನೆ ಮರ್ಕುಂ 528-40—L. B. 5-04ನೆ ನಂಬರ್ ಪ್ರೊಸೀಡಿಂಗ್ಸು ಓದಲಾಯಿತು. ಇದನ್ನೆ ರಿಕಾರ್ಡು ಮಾಡಬೇಕೆಂತಲೂ ಇದರ ಪ್ರತಿಗಳನ್ನು ಮೆಂಬರುಗಳಿಗೆ ಹಂಚಬೇಕೆಂತಲೂ ತೀರ್ಮಾನವಾಯಿತು.

XV. ಚಾಲ್ತಿ ಸಾಲ್ ಆಖೈರಿನಲ್ಲಿ ಖರ್ಚಾಗದೆ ಹೆಚ್ಚಾಗಿ ಉಳಿಯುವ ಹಣದ ಪೈಕಿ ಸೋಸಲೆ—ಶಿವಸಮುದ್ರದ ರಸ್ತೆಯನ್ನು ಮತ್ತು ಕಾಕಾಹಳ್ಳಿ ಮೂಲಕ ಮೈಸೂರು—ಬೆಂಗಳೂರು ರಸ್ತೆಯನ್ನು ಸಹ ರಿಪೇರಿ ಮಾಡಲು 2,000 ರೂಪಾಯಿ ಕೊಡಬೇಕೆಂದು ಮೈಸೂರು ಡಿಸ್ಟ್ರಿಕ್ಟ ಎಕ್ಜಿಕ್ಯೂಟಿವ್ ಇಂಜಿನಿಯರ್ ಪ್ರಪೋಜ್ ಮಾಡಿದಂತೆ ತೀರ್ಮಾನವಾಯಿತು.

XVI. 1904ನೆ ನವಂಬರ 12ನೆ ತಾರೀಖು ಶನಿವಾರ ಮುಂದಿನ ಮೀಟಿಂಗನ್ನು ಮಾಡಬೇಕೆಂದು ತೀರ್ಮಾನವಾಯಿತು.

XVII. ಗೈರ್‌ಹಾಜರು ಮೆಂಬರುಗಳ ಪೈಕಿ ಮೆ॥ ಚಂದ್ರಶೇಖರಯ್ಯನವರು ಮಾತ್ರ ಗೈರ್‌ಹಾಜರ್ ಆದ್ದಕ್ಕೆ ಸಮಜಾಯಿಷಿ ಕೊಟ್ಟಿದ್ದಾರೆ.

ಎಂ. ಕಾಂತರಾಜೆ ಅರಸ್,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ ಫಂಡ್ ಬೋರ್ಡು.

ಶಿವಮೊಗ್ಗಾ ಡಿಸ್ಟ್ರಿಕ್ಟ ಜಡ್ಜರವರ ಕೋರ್ಟನಲ್ಲಿ.

ಸನ 1904—1905ನೆ ಇಸವಿ ಮಿ॥ ಅರ್ಜೀ ನಂಬರ 87.

ಶಿವಮೊಗ್ಗದಲ್ಲಿದ್ದ ಮೃತಪಟ್ಟ ಕಿಳಂಕಿ ರಾಮಚಂದ್ರರಾಯರ ಆಸ್ತಿ ವಿಷಯದಲ್ಲಿ—

ಅರ್ಜೀದಾರರು 1ನೆ ಸಿ. ಕೃಷ್ಣರಾವ್, 2ನೆ ಸಿ. ರಂಗರಾವ್, 3ನೆ ಸಿ. ಮದ್ದುರಾವ್, 2—3ನೆ ಯವರು ಮೈನರು, ಗಾರ್ಡಿಯನ್ ಅಂಣ ಸಿ. ಕೃಷ್ಣರಾವ್ ಶಿವಮೊಗ್ಗಾ, ಮೃತಪಟ್ಟ ಸದರೀ ರಾಮಚಂದ್ರರಾಯರಿಗೆ ಖಾಸ ಮಕ್ಕಳು ಆಗಬೇಕೆಂಬ ಹಕ್ಕುದಾರಿದು ಮೇಲೆ ಶಿವಮೊಗ್ಗಾ ಸ್ಥಳದ 1ನೆ ಕೃಷ್ಣರಾವ್, 2ನೆ ರಂಗರಾವ್, 3ನೆ ಮದ್ದುರಾವ್ ಯವರು ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ರಾಮಚಂದ್ರರಾಯರ ಜೀಂದಗಿ ಬಗ್ಯಾಗಿ ಒರತಕ್ಕ (1,500—0—0) ರೂಪಾಯಿ ಸೂಲವನ್ನು ವಸೂಲ ಮಾಡುವದಕ್ಕೆ ಸನ 1901ನೆ ಇಸವಿ VIIನೆ ನಂಬರ ರೆಗ್ಯುಲೇಷನ ಮೇರಿಗೆ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಸಿ. ಕೃಷ್ಣರಾವ್, 2ನೆ ಸಿ. ರಂಗರಾವ್, 3ನೆ ಸಿ. ಮದ್ದುರಾವ್ ಯವರ ಅರ್ಜಿಯನ್ನು ಸನ 1904ನೆ ಇಸವಿ ನವಂಬರ ತಿಂಗಳು ತಾರೀಖು 11ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಚಾರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಿಳಂಕಿ ರಾಮಚಂದ್ರರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ 1904ನೆ ಇಸವಿ ಸೆಪ್ಟಂಬರು ತಿಂಗಳು 23ನೆ ತಾರೀಖಿನಲ್ಲಿ ಕೋರ್ಟ ಮೊಹರಿನಿಂದ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ವೆಂಕಟವರದ ಅಯ್ಯಂಗಾರ್,
ಡಿಸ್ಟ್ರಿಕ್ಟ ಜಡ್ಜ.

ಇಸ್ತಿಹಾರು.

ತಾರೀಖು 28ನೆ ಸೆಪ್ಟಂಬರ 1904ನೆ ಇಸವಿ.

ತುಮಕೂರು ಡಿಸ್ಟ್ರಿಕ್ಟ ಫಸ್ಟ ಜನೆರಲ್ ಅ॥ ಕ॥ ಮತ್ತು ಫಸ್ಟ್‌ಕ್ಲಾಸ ಮ್ಯಾಜಿಸ್ಟ್ರೇಟರವರ ಕೋರ್ಟನಿಂದ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಈ ಕೋರ್ಟು 1900—01ನೆ ಸಾಲ್ ಕ್ರಿಮಿನಲ್ 57ನೆ ನಂಬರು ಮೊಕದ್ದಮೆ 3ನೆ ಅಪರಾಧಿ ಕದರಿ ತಾಲ್ಲೂಕು ಬಾವೋಜಿಪಲ್ಲಿ ವಾಸಿ ವಡ್ಡರ ವೆಂಕಟಾಪೋಯಿ ಮಗ ಬಾಲಿಗ ನೆಂಬುವನು ಡಕಾಯಿತಿ ತಕ್ಸೀರಿಗೋಸ್ಕರ ನಂದಿದುರ್ಗದ ಡಿಪೀಜ್ ಸೆಷನ್‌ಸಿಗೆ ಕಮಿಟ ಮಾಡಲ್ಪಟ್ಟು ಆ ಕೋರ್ಟು 1901—02ನೆ ಸಾಲ್ 5ನೆ ನಂಬರು ತುಮಕೂರು ಸೆಷನ್ಸ ಕೇಸಿನಲ್ಲಿ 4 ವರುಷ ಕಠಿಣ ಸಜ ಹೊಂದಿ ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಸಜಾ ಅನುಭವಿಸುತ್ತಿದ್ದವನು 1903ನೆ ಇಸವಿ ಸೆಪ್ಟಂಬರು 4ರಲ್ಲಿ ಮೃತಪಟ್ಟಿರುತ್ತಾನೆಂದು ಇವನ ಬಾಬತು ಮಾರ್ಜಾನ್ನಲ್ಲಿ ಕಂಡ ಮಾಲುಗಳು ಇವನ ವಾರಸಿದಾರ್ರಿಗೆ ಪಾವತಿ ಬಗ್ಯೆ ಸೆಂಟ್ರಲ್ ಜೈಲ ಸೂಪರಿಂಟೆಂಡೆಂಟ ಸಾಹೇಬರವರಿಂದ ಡಿಸ್ಟ್ರಿಕ್ಟ ಮೆ॥ ಸಾ॥ ರವರ ದ್ವಾರಾ ಈ ಕೋರ್ಟಿಗೆ ತಲಪಿರುತ್ತವೆ.

ಮಾಲುಗಳ ತಪ್ಸೀಲು.
2 ಬೆಳ್ಳಿ ಬಳೆಗಳು.
2 ಬೆಳ್ಳಿ ಬಂದಿಗಳು.
1 ಭಂಗಾರದಹುವ್ವುಕೆತ್ತಿದ ಜಡೆಹುವ್ವು.
1 ಬೆಳ್ಳಿ ಲವಂಗದ ಹುವ್ವ.
1 ಬಿಳಿ ರುಮಾಲು.
1 ಪಂಚೆ.
1 ಲಂಗೋಟಿ.
ನಗದು 0—3—5.

ಮೇಲ್ಕಂಡ ಬಾಲಿಗನ ವಾರಸಿದಾರರು ಯಾರಾದರೂ ಇದ್ದಲ್ಲಿ ಈ ತಾರೀಖು ಲಾಗಾಯಿತು 6 ತಿಂಗಳ ವಳಗಾಗಿ ಈ ಕೋರ್ಟು ರೂಬರೂಬ್ ಹಾಜರಾಗಿ ತಕ್ಕ ದಾಖಲೆಗಳ ಸಮೇತ ತಮ್ಮ ವಾರಸ್ಸನ್ನು ದೃಢಪಡಿಸಿಕೊಟ್ಟು ಅಯಿರ್ಜ ಮಾಲುಗಳನ್ನು ಪಡಿಯಬಹುದು.

ತಪ್ಪಿದರೆ ಸದರಿ ಮಾಲುಗಳು ಹರಾಜು ಮೂಲಕ ಉತ್ಪತ್ತಿಯಾಗುವ ಮೊಬಲಗು ಸರ್ಕಾರಕ್ಕೆ ಜಮಾ ದಾಖಲ್ಮಾಡಿಕೊಳ್ಳಲ್ಪಡುತ್ತೆ.

ಸಿ. ಶೇಷಾದ್ರೈಯ್ಯಂಗಾರ್,
ಫಸ್ಟ್ ಕ್ಲಾಸ ಮ್ಯಾಜಿಸ್ಟ್ರೇಟ.

ಮೈಸೂರ ಗೆಜೆಟ್ ಚಂದಾದಾರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತೆ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.		ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.	
	ರೂ.	ಆ.	ರೂ.	ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3	8	1	12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7	0	3	8
ಚಿಷ್ ಮಾಹೇ ಯಾ ಕ್ವಾರ್ಟರಿಗೆ				

ದಾಮಾಷಾಯಿ ಪ್ರಕಾರ ದರಗಳು.

	ರೂ.	ಆ.
ಚಾಲತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇರ್ಷ್ ಯಾ ಆಕ್ಟ್‌ಗಳು ಯಾವದೂ ಇಲ್ಲದಿದ್ದರೆ.	0	8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜ್ ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮಾರ್ಕ್ಕಂ 155ನೆ ನಂಬರ್ ಉಳ್ಳ ಗವರ್ನಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿದ್ದಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಒಂದು ಸರಟಿಫಿಕೇಟನ್ನು ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮಾರ್ಕ್ಕಂ 24205—6—ಜಿ. 6200ನೆ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟ್‌ನಿಂದ ಕೊಡಲ್ಪಡುವ 1860ನೆ ಇಸವಿ XXVIIನೆ ಆಕ್ಟು ಅನುಸರಿಸಿ ಸರ್ಟಿಫಿಕೇಟ್ ಬಗ್ಯೆ ನೋಟಿಸ್‌ಗಳು :—

	ರೂ.	ಆ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ ..	2	8
ಎರಡನೇ ಸಲ ವ ಆತರುವಾಯ ಪ್ರತಿ ಆವರ್ತಿಗೂ ಡಿಟೋ ..	1	4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಯೆ ನೋಟಿಸ್‌ಗಳಿಗೆ :—

ಮೊದಲನೇ ಸಲಕ್ಕೆ	5	0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ ..	2	0

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಮುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.

ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸ್‌ಗಳಿಗೆ :—

ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10 0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ	,,	..	5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ :—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಟ್ಟಿ 1ಕ್ಕೆ	..	0 8
ಎರಡನೇ ದಫಾ ಡಿಟೋ	ಡಿಟೋ		0 6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ	..	..	0 4

ಷರಾ.—ಚಂದಾ ವಗೈರೆ ಬಗ್ಯೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ನಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ಮೊಬಲಗುಗಳೂ, ಪ್ರಕಟನೆ ಚಾರ್ಜ್‌ಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಯಾದ ದರಖಾಸ್ತುಗಳು ಮೈಸೂರ್ ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆ ಸೆಕ್ರಿಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದಿಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ತಾರೀಖು ಲಾಗಾಯತು ಒಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗೆಜೆಟ್‌ನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟಿನಲ್ಲಿ ಛಾಪಿಸಲ್ಪಡುತ್ತೆಂಬ ಖಾತರಿ ಇಲ್ಲ.

ಜಿ. ಹ್ಯೂಂ ರೈಟ್,
ಕಂಪೈಲರ್, ಮೈಸೂರ ಗೆಜೆಟ್.

ಮೈಸೂರ ಗೆಜೆಟ.

ನಂ. 39] ಸರ್ಕಾರದಿಂದ ಪ್ರಾಂಶುಷ ಆದ್ದು. [ನಂ. 40.

ಬೆಂಗಳೂರು, ಗುರುವಾರ, ಅಕ್ಟೋಬರ ತಾ॥ 6, ಸನ 1904.

IIIನೆ ಭಾಗ.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವ್ ಇಲಾಖೆ.

(1904ನೆಯ ವರ್ಷದ IIIನೆಯ ನಂಬರ್ ರೆಗ್ಯುಲೇಷನ್.)

(1904ನೆಯ ವರ್ಷದ ಮಾರ್ಚಿ 15ನೆಯ ತಾರೀಖಿನಲ್ಲಿ ಮಂಜೂರಾದ್ದು)

ಗ್ರಂಥ ಸಮುದಾಯಕ್ಕೂ, ಶಾಸ್ತ್ರಕ್ಕೂ, ಮತ್ತು ಧರ್ಮಕಾರ್ಯಕ್ಕೂ ಸಂಬಂಧಪಡುವ ಸಂಘಗಳ ರಿಜಿಸ್ಟ್ರೇಷನ್‌ಬಗ್ಗೆ ಆದ ರೆಗ್ಯುಲೇಷನ್.

ಪೀಠಿಕೆ.

ಸಾಹಿತ್ಯವನ್ನು, ಶಾಸ್ತ್ರವನ್ನು ಅಥವಾ ಕಲೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಅಥವಾ ಉಪಯುಕ್ತವಾದ ಜ್ಞಾನಪ್ರಸರಣಕ್ಕೋಸ್ಕರ ಅಥವಾ ಧರ್ಮಕಾರ್ಯಗಳಿಗಾಗಿ ಏರ್ಪಟ್ಟ ಸಂಘಗಳ ವ್ಯವಹಾರಾನುರೂಪವಾದ ಸ್ಥಿತಿಯನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಉಪಾಯ ಮಾಡುವುದು ಯುಕ್ತವಾದುದರಿಂದ ; ಶ್ರೀಮಾನ್ ಮಹಾರಾಜರವರು ಈ ಕೆಳಗಿನಂತೆ ವಿಧಿಸಲು ಅಪ್ಪಣೆ ದಯಪಾಲಿಸುತ್ತಾರೆ :—

ಚಿಕ್ಕ ಹೆಸರು, ವ್ಯಾಪ್ತಿ ಅಮಲ್ ಷುರು.

1. (1) ಈ ರೆಗ್ಯುಲೇಷನ್, "1904ನೆಯ ವರ್ಷದ ಸಂಘಗಳ ರಿಜಿಸ್ಟ್ರೇಷನ್ ರೆಗ್ಯುಲೇಷನ್" ಎಂದು ಕರಿಯಲ್ಪಡಬಹುದು.

(2) ಇದು ಮೈಸೂರಿಗೆಲ್ಲಾ ವ್ಯಾಪಿಸುತ್ತದೆ ; ಮತ್ತು

(3) ಇದು ಸರ್ಕಾರಿ ಗೆಜೆಟಿನಲ್ಲಿ ಮೊದಲು ಪ್ರಕಟಿಸಲ್ಪಡುವ ತಾರೀಖಿನಲ್ಲಿ* ಜಾರಿಗೆ ಬರತಕ್ಕದ್ದು.

ಮೆಮೊರಾಂಡಂ ಆಫ್ ಅಸೋಸಿಯೇಷನ್ ವಾ ಸಂಘದ ಪತ್ರ ಮತ್ತು ರಿಜಿಸ್ಟ್ರೇಷನ್ ಇವುಗಳಿಂದ ಸಂಘಗಳನ್ನು ಏರ್ಪಡಿಸೋಣ.

2. ಸಾಹಿತ್ಯಕ್ಕೂ, ಶಾಸ್ತ್ರಕ್ಕೂ ಅಥವಾ ಧರ್ಮಕಾರ್ಯಗಳಿಗೂ ಸಂಬಂಧಪಡುವ ಉದ್ದೇಶಕ್ಕಾಗಲೀ, ಅಥವಾ ಈ ರೆಗ್ಯುಲೇಷನಿನ 21ನೇ ಪ್ರಕರಣದಲ್ಲಿ ವಿವರಿಸಲ್ಪಟ್ಟಂತಿರುವ ಇತರ ಯಾವ ಉದ್ದೇಶಕ್ಕಾಗಲೀ ಕೂಡಲ್ಪಟ್ಟ ಯಾವ ಏಳು ಅಥವಾ ಅಧಿಕ ಸಂಖ್ಯೆಯುಳ್ಳ ಜನಗಳು, ಒಂದು ಮೆಮೊರಾಂಡಂ ಆಫ್ ಅಸೋಸಿಯೇಷನಿಗೆ ವಾ ಸಂಘದ ಪತ್ರಕ್ಕೆ ತಾವು ರುಜು ಮಾಡುವುದರಿಂದಲೂ ಮತ್ತು ಅದನ್ನು ರಿಜಿಸ್ಟ್ರಾರ್ ಆಫ್ ಜಾಯಿಂಟ್ ಸ್ಟಾಕ್ ಕಂಪನೀಸ್ ಯವರಲ್ಲಿ ದಾಖಲ್ಮಾಡುವದರಿಂದಲೂ, ಈ ರೆಗ್ಯುಲೇಷನಿನಂತೆ ಒಂದು ಸಂಘವನ್ನು ಏರ್ಪಡಿಸಿಕೊಳ್ಳಬಹುದು.

* ಮೊದಲನೆಯ ಪ್ರಕಟನದ ತಾರೀಖು 31ನೆ ಮಾರ್ಚ 1904.

ಮೆಮೊರಾಂಡಂ ಆಫ್ ಅಸೋಸಿಯೇಷನ್ ವಾ ಸಂಘದ ಪತ್ರ.

3. ಮೆಮೊರಾಂಡಂ ಆಫ್ ಅಸೋಸಿಯೇಷನ್ ಎಂಬ ಸಂಘದ ಪತ್ರದಲ್ಲಿ ಈ ಕೆಳಗೆ ಬರುವ ವಿಷಯಗಳು ಇರತಕ್ಕದ್ದು (ಅದೇನಂದರೆ,—

ಸಂಘದ ಹೆಸರು :

ಸಂಘದ ಉದ್ದೇಶಗಳು :

ಸಂಘದ ಕಾರ್ಯಗಳ ನಿರ್ವಾಹವು ಅದರ ನಿಬಂಧನೆಗಳಿಗೆ ಅನುಸಾರವಾಗಿ ಯಾರಿಗೆ ಒಪ್ಪಿಸಲ್ಪಟ್ಟಿರುತ್ತದೆಯೋ ಆ ಅಧಿಕಾರಿ (ಗವರ್ನರ್) ಗಳು, ಆಲೋಚನಾ ಸಭೆ (ಕೌನ್ಸಿಲ್), ಆಡಳಿತಗಾರರು (ಡೈರೆಕ್ಟರುಗಳು), ಅಧಿಕಾರ ಸಭೆ (ಕಮ್ಮಿಟಿ) ಅಥವಾ ಇತರ ಕಾರ್ಯ ನಿರ್ವಾಹ ಸಭೆ— ಇವರುಗಳ ಹೆಸರುಗಳು, ವಿಳಾಸಗಳು ಮತ್ತು ಉದ್ಯೋಗಗಳು.

ಸಂಘದ ನಿಬಂಧನೆಗಳ ಮತ್ತು ಖಾನೂನುಗಳ ಒಂದು ನಕಲು, ಕಾರ್ಯ ನಿರ್ವಾಹ ಸಭೆಯವರ ಪೈಕಿ ಮೂರಕ್ಕೆ ಕಡಮೆ ಇಲ್ಲದ ಸಂಖ್ಯೆಯುಳ್ಳ ಸಾಮಾಜಿಕರುಗಳಿಂದ ಸರಿಯಾದ ನಕಲೆಂದು ಸರ್ಟಿಫೈ ಮಾಡಲ್ಪಟ್ಟು, ಮೆಮೊರಾಂಡಂ ಆಫ್ ಅಸೋಸಿಯೇಷನ್ ವಾ ಸಂಘದ ಪತ್ರದೊಂದಿಗೆ ದಾಖಲಾಗತಕ್ಕದ್ದು.

ರಿಜಿಸ್ಟ್ರೇಷನ್ ಫೀಸ.

4. ಸದರೀ ಮೆಮೊರಾಂಡಂ ವಾ ಸಂಘದ ಪತ್ರ ಮತ್ತು ಸರ್ಟಿಫೈ ಮಾಡಲ್ಪಟ್ಟ ನಕಲು ದಾಖಲಾದ ಬಳಿಕ, ಈ ರೆಗ್ಯುಲೇಷನಿನ ಪ್ರಕಾರ ಸಂಘವು ರಿಜಿಸ್ಟರ್ ಮಾಡಲ್ಪಟ್ಟಿರುತ್ತೆಂದು ರಿಜಿಸ್ಟ್ರಾರು ತಮ್ಮ ಕೈಯಿಂದ ಸರ್ಟಿಫೈ ಮಾಡತಕ್ಕದ್ದು. ಅಂಥಾ ಪ್ರತಿ ರಿಜಿಸ್ಟ್ರೇಷನ್‌ಬಗ್ಗೆ ಇಪ್ಪತ್ತು ರೂಪಾಯಿ ಫೀಸ್ ಆಗಲೀ ಅಥವಾ ಆಗಿಂದಾಗ್ಯೆ ಗವರನ್ಮೆಂಟಿನವರು ವಿಧಿಸಬಹುದಾದ ಕಮ್ಮಿ ಫೀಸ್ ಆಗಲೀ ರಿಜಿಸ್ಟ್ರಾರಿಗೆ ಕೊಡಲ್ಪಡತಕ್ಕದ್ದು ; ಮತ್ತು ಹಾಗೆ ಪಾವತಿ ಮಾಡಲ್ಪಟ್ಟ ಎಲ್ಲಾ ಫೀಸುಗಳು ಗವರನ್ಮೆಂಟಿನವರಿಗೆ ಜಮೆಯಾಗತಕ್ಕದ್ದು.

ನಿರ್ವಾಹ ಸಭೆಯ ಪಟ್ಟಿಯನ್ನು ಪ್ರತಿವರ್ಷದಲ್ಲಿಯೂ ದಾಖಲು ಮಾಡತಕ್ಕದ್ದು.

5. ಪ್ರತಿ ವರ್ಷಕ್ಕೆ ಒಂದಾವರ್ತಿ, ಸಂಘದ ನಿಬಂಧನೆಗಳಿಗೆ ಅನುಸಾರವಾಗಿ ಮಾಡಲ್ಪಟ್ಟ ಸಾಮಾಜಿಕರ ವರ್ಷಗಟ್ಟಲೆಯ ಸಾಮಾನ್ಯ ಕೂಟದ ತಾರೀಖಿನಿಂದ ಹದಿನಾಲ್ಕು ದಿವಸಗಳಿಗೆ ಮುಂಚೆಯಾಗಲೀ ಅಥವಾ ಹದಿನಾಲ್ಕನೆಯ ದಿವಸದಲ್ಲಾಗಲೀ, ಅಥವಾ ಆ ನಿಬಂಧನೆಗಳಲ್ಲಿ ಒಂದು ವರ್ಷಗಟ್ಟಲೆಯ ಸಾಮಾಜಿಕರ ಸಾಮಾನ್ಯ ಕೂಟಕ್ಕೆ (ಜನರಲ್ ಮೀಟಿಂಗಿಗೆ) ಅವಕಾಶವಿಲ್ಲದಿರುವ ಪಕ್ಷದಲ್ಲಿ ಜನವರೀ ತಿಂಗಳಲ್ಲಿ, ಸಂಘದ ಕಾರ್ಯಗಳ ಆಡಳಿತೆಯನ್ನು ವಹಿಸಿರುವ ಅಧಿಕಾರಿ (ಗವರ್ನರ್) ಗಳು, ಆಲೋಚನಾ ಸಭೆ (ಕೌನ್ಸಿಲ್), ಆಡಳಿತಗಾರರು (ಡೈರೆಕ್ಟರ್ಸ್), ಅಧಿಕಾರ ಸಭೆ (ಕಮ್ಮಿಟಿ) ಅಥವಾ ಇತರ ಕಾರ್ಯ ನಿರ್ವಾಹ ಸಭೆ ಇವರುಗಳ ಹೆಸರುಗಳು, ವಿಳಾಸಗಳು, ಮತ್ತು ಉದ್ಯೋಗಗಳು ಇವುಗಳ ಒಂದು ಪಟ್ಟಿಯನ್ನು ರಿಜಿಸ್ಟ್ರಾರ್ ಆಫ್ ಜಾಯಿಂಟ್ ಸ್ಟಾಕ್ ಕಂಪೆನೀಸ್ ಯವರಲ್ಲಿ ದಾಖಲ್ ಮಾಡತಕ್ಕದ್ದು.

ಸಂಘದ ಸೊತ್ತನ್ನು ಹ್ಯಾಗೆ ವಶಮಾಡೋಣ.

6. ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟ ಸಂಘಕ್ಕೆ ಸೇರಿದ ಚರ ಮತ್ತು ಸ್ಥಿರ ಸೊತ್ತು, ನಿಕ್ಷೇಪಧಾರಿ (ಟ್ರಸ್ಟಿ) ಗಳ ವಶ ಮಾಡಲ್ಪಡದೆ ಇರುವ ಸಂದರ್ಭದಲ್ಲಿ, ಅಂಥಾ ಸಂಘದ ಕಾರ್ಯ ನಿರ್ವಾಹ ಸಭೆಯವರಿಗೆ ತಾತ್ಕಾಲಿಕವಾಗಿ ಕೊಡಲ್ಪಟ್ಟಿರುವುದಾಗಿ ಎಣಿಸತಕ್ಕದ್ದು ; ಮತ್ತು, ಎಲ್ಲಾ ಸಿವಿಲ್ ಮತ್ತು ಕ್ರಿಮಿನಲ್ ವಾಜ್ಯಗಳಲ್ಲಿ ಅಂಥಾ ಸಂಘದ ಕಾರ್ಯ ನಿರ್ವಾಹ ಸಭೆಯ ಸೊತ್ತೆಂದು ಅವರುಗಳ ಸರಿಯಾದ ವಿಳಾಸದೊಂದಿಗೆ ವಿವರಿಸಲ್ಪಡತಕ್ಕದ್ದು.

ಸಂಘಗಳಿಂದ ಮತ್ತು ಸಂಘಗಳ ಮೇಲೆ ದಾವೆಗಳು.

7. ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟ ಪ್ರತಿ ಸಂಘದ ಮೇಲೆ ಇತರರು ಮಾಡುವ ದಾವೆಗಳು ಮತ್ತು ಇತರರ ಮೇಲೆ ಅಂಥಾ ಸಂಘವು ಮಾಡುವ ದಾವೆಗಳು, ಅಂಥಾ ಸಂಘದ ನಿಬಂಧನೆಗಳಿಂದಾಗಲೂ ಖಾನೂನುಗಳಿಂದಲೂ ನಿಷ್ಕರ್ಷಿಸಲ್ಪಟ್ಟಂತೆ, ಅಧ್ಯಕ್ಷ, ಸಭಾಪತಿ ಅಥವಾ ಮುಖ್ಯ ಸೆಕ್ರಟೆರಿ ಅಥವಾ ನಿಕ್ಷೇಪಧಾರಿ (ಟ್ರಸ್ಟೀಸ್) ಗಳು—ಇವರುಗಳ ಹೆಸರಲ್ಲಿ ನಡಿಯತಕ್ಕದ್ದು ; ಮತ್ತು ಹಾಗೆ ನಿಷ್ಕರ್ಷೆಯಾಗದಿರುವ ಸಂದರ್ಭದಲ್ಲಿ, ಕಾರ್ಯ ನಿರ್ವಾಹ ಸಭೆಯವರಿಂದ ತತ್ಕಾಲದಲ್ಲಿ ಮೊಕರರ್ಮಾಡಲ್ಪಟ್ಟ ಮನುಷ್ಯನ ಹೆಸರಲ್ಲಿ ನಡಿಯತಕ್ಕದ್ದು :

ಆದರೆ ಕಾರ್ಯ ನಿರ್ವಾಹ ಸಭೆಯವರು ಕೋರಲ್ಪಟ್ಟಾಗ್ಯೆ ಬೇರೆ ಇತರ ಉದ್ಯೋಗಸ್ಥನ (ಆಫೀಸರ) ನ್ನಾಗಲೀ ಮನುಷ್ಯನನ್ನಾಗಲೀ ಪ್ರತಿವಾದಿಯಾಗಿ ಮೊಕರರ್ ಮಾಡದೆ ಇರುವ ಪಕ್ಷಕ್ಕೆ, ಅದರ ಅಧ್ಯಕ್ಷ, ಸಭಾಪತಿ, ಮುಖ್ಯ ಸೆಕ್ರಟೆರಿ ಅಥವಾ ನಿಕ್ಷೇಪಧಾರಿ (ಟ್ರಸ್ಟೀ) ಗಳು ಇವರಮೇಲೆ ದಾವೆಯನ್ನು ಮಾಡುವುದು, ಆ ಸಂಘದಮೇಲೆ ಹಕ್ಕು ಅಥವಾ ವರಾತ ಉಂಟಾಗಿರುವ ಯಾವ ಮನುಷ್ಯನಿಗಾದರೂ ನ್ಯಾಯವಾಗಿರತಕ್ಕದ್ದು.

8. ಯಾವ ಮನುಷ್ಯನಿಂದಲಾಗಲೀ, ಯಾವ ಮನುಷ್ಯನಮೇಲಾಗಲೀ ಯಾವ ಸಿವಿಲ್ ಕೋರ್ಟಿನಲ್ಲಿ ತರಲ್ಪಟ್ಟ ಅಥವಾ ನಡಿಯುತ್ತಿರುವ ದಾವೆಯು, ಅಂಥಾ ಮನುಷ್ಯನು ಸಾಯುವುದರಿಂದಲಾದರೂ, ಅಥವಾ ಯಾವ ಉದ್ಯೋಗದ ಹೆಸರಿನಲ್ಲಿ ಅವನು ದಾವೆ ಮಾಡಿದನೋ ಅಥವಾ ಪ್ರತಿವಾದಿಯಾಗಿರುತ್ತಾನೋ ಆ ಉದ್ಯೋಗವನ್ನು ಬಿಡುವುದರಿಂದಲಾದರೂ, ಕಡಮೆಯಾಗತಕ್ಕದ್ದಲ್ಲ ಅಥವಾ ನಿಂತುಹೋಗತಕ್ಕದ್ದಲ್ಲ; ಪರಂತು ಅದೇ ದಾವೆಯು ಅಂಥಾ ಮನುಷ್ಯನ ಉತ್ತರಾಧಿಕಾರಿಯ ಹೆಸರಿನಲ್ಲಾಗಲೀ, ಉತ್ತರಾಧಿಕಾರಿಯಮೇಲಾಗಲೀ ನಡೆಯತಕ್ಕದ್ದು.

ದಾವೆಗಳು ನಿಂತುಹೋಗಕೂಡದು.

9. ಸಂಘದಪರವಾಗಿ ನೇಮಿಸಲ್ಪಟ್ಟ ಮನುಷ್ಯನಮೇಲಾಗಲೀ ಉದ್ಯೋಗಸ್ಥನಮೇಲಾಗಲೀ ಆಗಿರುವ ತೀರ್ಪಿನ ಅಮಲ್ಜಾರಿಯು, ಅಂಥಾ ಮನುಷ್ಯನ ಅಥವಾ ಉದ್ಯೋಗಸ್ಥನ ಚರ ಅಥವಾ ಸ್ಥಿರ ಸೊತ್ತಿನಮೇಲಾದರೂ ಅಥವಾ ಅವನ ದೇಹದಮೇಲಾದರೂ ಆಗಕೂಡದು, ಪರಂತು ಆ ಸಂಘದ ಸೊತ್ತಿನಮೇಲೆ ಆಗತಕ್ಕದ್ದು.

ಸಂಘದಮೇಲಾದ ತೀರ್ಪುಗಳ ಅಮಲ್ಜಾರಿ.

ಅಮಲ್ಜಾರಿಯ ಬಗ್ಗೆ ಕೊಡಲ್ಪಟ್ಟ ಅರ್ಜಿಯಲ್ಲಿ—ತೀರ್ಪು, ಯಾರಮೇಲೆ ಅದರ ಅಮಲ್ಜಾರಿ ಆಗಬೇಕೊ ಆ ಕಕ್ಷಿಗಾರನು ಸಂಘದಪರವಾಗಿ ಮಾತ್ರವೇ ದಾವೆ ಮಾಡಿರೋಣ ಅಥವಾ ಪ್ರತಿವಾದಿಯಾಗಿರೋಣ (ಸಂದರ್ಭಾನುಸಾರವಾಗಿ), ಮತ್ತು ಸಂಘದ ಸೊತ್ತಿನಮೇಲೆ ಅಮಲ್ಜಾರಿಯಾಗಬೇಕೆಂದು ಅಪೇಕ್ಷಿಸೋಣ — ಈ ಸಂಗತಿಗಳು ಬರಿಯಲ್ಪಟ್ಟಿರಬೇಕು.

10. ಸಂಘದ ನಿಬಂಧನೆಗಳಿಗೂ ಕಾನೂನುಗಳಿಗೂ ಅನುಸಾರವಾಗಿ ಮಾಡಲ್ಪಟ್ಟ ಯಾವ ಒಳ ನಿಬಂಧನೆಯಿಂದಲಾದರೂ; ಅಥವಾ, ಒಳ ನಿಬಂಧನೆಗಳನ್ನು ಮಾಡಲು ನಿಬಂಧನೆಗಳಲ್ಲಿ ಅವಕಾಶವಿಲ್ಲದಿರುವ ಪಕ್ಷದಲ್ಲಿ, ಯಾವ ಒಳ ನಿಬಂಧನೆ, ಅದನ್ನು ಮಾಡುವುದಕ್ಕಾಗಿಯೇ ಕೂಡಿದ ಸಂಘದ ಸಾಮಾಜಿಕರ ಸಾಮಾನ್ಯಕೂಟದಲ್ಲಿ ಮಾಡಲ್ಪಟ್ಟ ಯಾವ ಒಳ ನಿಬಂಧನೆಯಿಂದಲಾದರೂ (ಇಂಥಾ ಒಳ ನಿಬಂಧನೆಯನ್ನು ಮಾಡುವುದಕ್ಕೆ ಹಾಜರಿದ್ದವರ ಪೈಕಿ ಐದು ಭಾಗದಲ್ಲಿ ಮೂರುಭಾಗದವರು ಏಕೀಭವಿಸಿ ಸಮ್ಮತಿಸುವುದು ಅವಶ್ಯವಾಗಿರತಕ್ಕದ್ದು.) ಅಂಥಾ ಸಂಘದ ಯಾವ ನಿಬಂಧನೆಯ ಅಥವಾ ಒಳನಿಬಂಧನೆಯ ಉಲ್ಲಂಘನೆಯ ಬಗ್ಗೆ, ಹಾಕಲ್ಪಟ್ಟ ದ್ರವ್ಯರೂಪವಾದ ದಂಡವು, ಉಂಟಾದಾಗ್ಯೆ, ಯಾವ ಕೋರ್ಟಿನ ಅಧಿಕಾರ ಸರಹದ್ದಿನೊಳಗೆ ಪ್ರತಿವಾದಿಯು ವಾಸಿಸುತ್ತಾನೋ ಅಥವಾ ಸಂಘವು ಇರುತ್ತದೆಯೋ, ಹ್ಯಾಗೆ ಆ ಸಂಘದ ಕಾರ್ಯನಿರ್ವಾಹ ಸಭೆಯವರು ಯುಕ್ತವೆಂದು ಎಣಿಸುತ್ತಾರೋ ಹಾಗೆ, ಅಂಥಾ ಕೋರ್ಟಿನಲ್ಲಿ ವಸೂಲ್ಮಾಡಲ್ಪಡಬಹುದು.

ಒಳ ನಿಬಂಧನೆಯಂತೆ ಉಂಟಾಗುವ ಜರ್ಮಾನೆಯ ವಸೂಲಾತಿ.

11. ಸಂಘದ ನಿಬಂಧನೆಗಳಿಗೆ ಅನುಸಾರವಾಗಿ ತಾನು ಕೊಡುವುದಕ್ಕೆ ಬದ್ಧನಾಗಿರುವ ಚಂದಾವನ್ನು ಕೊಡದೆ ಬಾಕಿಯಲ್ಲಿಟ್ಟುಕೊಂಡಿರುವ, ಅಥವಾ ಅಂಥಾ ನಿಬಂಧನೆಗಳಿಗೆ ವಿರೋಧವಾಗಿರುವ, ಯಾವ ಕಾಲದವರೆಗಾಗಲೀ ಯಾವ ರೀತಿಯಲ್ಲಾಗಲೀ ಸಂಘದ ಯಾವ ಸೊತ್ತನ್ನಾದರೂ ತಾನೇ ಇಟ್ಟುಕೊಳ್ಳುವ, ಅಥವಾ ತಡದಿಟ್ಟುಕೊಳ್ಳುವ, ಅಥವಾ ಸಂಘದ ಯಾವ ಸೊತ್ತನ್ನಾದರೂ ನಷ್ಟಪಡಿಸುವ, ಅಥವಾ ನಾಶಪಡಿಸುವ ಸಾಮಾಜಿಕನ ಮೇಲೆ, ಅಂಥಾ ಬಾಕಿಗಾಗಲೀ ಅಥವಾ ಹಾಗೆ ಸೊತ್ತನ್ನು ತಡದು ಇಟ್ಟುಕೊಳ್ಳುವುದರಿಂದಲೂ ನಷ್ಟಪಡಿಸುವುದರಿಂದಲೂ ಅಥವಾ ನಾಶ ಮಾಡುವುದರಿಂದಲೂ ಸಂಭವಿಸುವ ನಷ್ಟಕ್ಕಾಗಲೀ ಮೇಲ್ಕಂಡ ರೀತಿಯಲ್ಲಿ ದಾವೆ ಮಾಡಲ್ಪಡಬಹುದು.

ಸಾಮಾಜಿಕರು ಪರಕೀಯರಂತೆ ಪ್ರತಿವಾದಿಗಳಾಗುವದಕ್ಕೆ ಗುರಿಯಾಗಿರೋಣ.

ಸಂಘದಪರವಾಗಿ ತರಲ್ಪಟ್ಟ ಯಾವ ದಾವೆಯಲ್ಲಿ ಅಥವಾ ವ್ಯವಹಾರದಲ್ಲಾದರೂ ಪ್ರತಿವಾದಿಯಪಕ್ಷದಲ್ಲಿ ತೀರ್ಪು ಆಗಿ ಆತನ ಕರ್ಚುಗಳನ್ನು ಪಡಕೊಳ್ಳುವಂತೆ ತೀರ್ಪಾಗಿರುವ ಸಂದರ್ಭದಲ್ಲಿ, ಆ ಮೊಬಲಗನ್ನು ಅವನು ಯಾವ ಉದ್ಯೋಗಸ್ಥನ ಹೆಸರಿನಲ್ಲಿ ದಾವೆ ಮಾಡಲ್ಪಟ್ಟಿತೋ ಅವನಿಂದ ಆಗಲೀ ಅಥವಾ ಸಂಘದಿಂದಾಗಲೀ ವಸೂಲು ಮಾಡಿಕೊಳ್ಳಬಹುದು. ಸಂಘದಿಂದ ವಸೂಲು ಮಾಡಿಕೊಳ್ಳುವ ಸಂದರ್ಭದಲ್ಲಿ, ಮೇಲೆ ವಿವರಿಸಲ್ಪಟ್ಟ ರೀತಿಗೆ ಅನುಸಾರವಾಗಿ ಅಂಥಾ ಸಂಘದ ಸೊತ್ತಿನಮೇಲೆ ಅಮಲ್ಜಾರಿ ಮಾಡತಕ್ಕದ್ದು.

ಜಯಿಸುವ ಪ್ರತಿವಾದಿಯು ನಿರ್ಣಯಿಸಲ್ಪಟ್ಟ ತನ್ನ ಕರ್ಚನ್ನು ವಸೂಲ್ಮಾಡೋಣ.

12. ಸಂಘದ ಯಾವ ಹಣವನ್ನಾದರೂ ಅಥವಾ ಸೊತ್ತನ್ನಾದರೂ ಕದ್ದುಕೊಳ್ಳುವ ಅಥವಾ ಚಾರ್ಯ ಮಾಡುವ ಅಥವಾ ಅಪಹರಿಸುವ; ಅಥವಾ ಅಂಥಾ ಸಂಘದ ಯಾವ ಸೊತ್ತನ್ನಾದರೂ ಬೇಕೆಂದು ಮತ್ತು ಮತ್ಸರವಾಗಿ ನಾಶಪಡಿಸುವ ಅಥವಾ ಕೆಡಿಸುವ, ಅಥವಾ ಅಂಥಾ ಸಂಘದ ಬಂಡವಾಳವನ್ನು ನಷ್ಟಕ್ಕೆ ಗುರಿಮಾಡಬಹುದಾದಂಥಾ ಯಾವ ಪತ್ರವನ್ನಾದರೂ ಬಾಂಡನ್ನಾದರೂ ಹಣದ ಬಗ್ಗೆ ಆಧಾರ ಪತ್ರವನ್ನಾದರೂ ರಸೀತಿಯನ್ನಾದರೂ ಅಥವಾ ಇತರ ದಸ್ತೈವಜನ್ನಾದರೂ ಕಲ್ಪಿಸುವ ಸಂಘದ ಯಾವ ಸಾಮಾಜಿಕನಾದರೂ ಸಾಮಾಜಿಕನಲ್ಲದೆ ಇರುವ ಯಾವ ಮನುಷ್ಯನಾಗಲಿ ಇಂಥಾ ಅಪರಾಧವನ್ನು ಮಾಡಿದರೆ ಯಾವ ವ್ಯಾಜ್ಯಕ್ಕೆ ಒಳಪಡುತ್ತಾನೋ ಮತ್ತು ತಪ್ಪು ಸಾಬೀತಾದರೆ ಯಾವ ದಂಡನೆಗೆ ಗುರಿಯಾಗುತ್ತಾನೋ, ಅದೇ ವ್ಯಾಜ್ಯಕ್ಕೆ ಆ ಸಾಮಾಜಿಕನು ಒಳಪಡುವನಲ್ಲದೆ ತಪ್ಪು ಸಾಬೀತಾದರೆ ಅದೇ ದಂಡನೆಗೆ ಗುರಿಯಾಗತಕ್ಕದ್ದು.

ಅಪರಾಧವನ್ನು ಮಾಡಿದ ಸಾಮಾಜಿಕರು ಪಕೀಯರಂತೆ ದಂಡನೆಗೆ ಗುರಿಯಾಗತಕ್ಕದ್ದು.

13. ಯಾವ ಪ್ರತ್ಯೇಕವಾದ ಉದ್ದೇಶಕ್ಕೋಸ್ಕರ ಅಥವಾ ಉದ್ದೇಶಗಳಿಗೋಸ್ಕರವಾದರೂ ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಟ್ಟ ಯಾವ ಸಂಘದ ಕಾರ್ಯನಿರ್ವಾಹ ಸಭೆಯವರಿಗೆ, ಅಂಥಾ ಉದ್ದೇಶವನ್ನು ಈ ರೆಗ್ಯುಲೇಷನಿನ ಅರ್ಥದಲ್ಲಿರುವ ಇತರ ಉದ್ದೇಶಕ್ಕೆ ಅಥವಾ ಇತರ ಉದ್ದೇಶಗಳಿಗೆ ಬದಲಾಯಿಸುವುದು, ವಿಸ್ತರಿಸುವುದು ಅಥವಾ ಸಂಕ್ಷೇಪಿಸುವುದು; ಅಥವಾ ಅಂಥಾ ಸಂಘವನ್ನು ಇತರ ಸಂಘದೊಡನೆ ಸ್ವಲ್ಪಮಟ್ಟಿಗೆ ಅಥವಾ ಸಂಪೂರ್ಣವಾಗಿ ಕೂಡಿಸುವುದು ಉಚಿತವೆಂದು ತೋರಿಬರುವುದಾದರೆ, ಅಂಥಾ ಕಾರ್ಯನಿರ್ವಾಹ ಸಭೆಯವರು ಬರಹದಲ್ಲಿರುವ ಅಥವಾ ಛಾಪಿಸಿರುವ ಒಂದು ರಿಪೋರ್ಟನಲ್ಲಿ ಆ ಪ್ರಮೇಯವನ್ನು ನಮೂದ್ಮಾಡಿ ಸಂಘದ ಸಾಮಾಜಿಕರಿಗೆ ಕಳುಹಿಸಬಹುದು ಮತ್ತು ಸಂಘದ ನಿಬಂಧನೆಗಳಿಗೆ ಅನುಸಾರವಾಗಿ ಅದನ್ನು ಆಲೋಚಿಸುವುದಕ್ಕೋಸ್ಕರ ಒಂದು ಪ್ರತ್ಯೇಕವಾದ ಸಾಮಾಜಿಕರ ಕೂಟವನ್ನು ಕೂಡಿಸಬಹುದು;

ಸಂಘಗಳು ತಮ್ಮ ಉದ್ದೇಶಗಳನ್ನು ಬದಲಾಯಿಸಲು ವಿಸ್ತರಿಸಲು ಅಥವಾ ಸಂಕ್ಷೇಪಿಸಲು ಅಧಿಕಾರ ಉಂಟಾಗಿರೋಣ.

ಆದರೆ ಆ ಪ್ರಮೇಯದ ಆಲೋಚನೆಯ ಬಗ್ಗೆಯಾಗಿ ಕಾರ್ಯನಿರ್ವಾಹ ಸಭೆಯವರಿಂದ ಕೂಡಿಸಲ್ಪಟ್ಟ ಪ್ರತ್ಯೇಕವಾದ ಕೂಟ ಕೂಡುವುದಕ್ಕೆ ಹತ್ತು ದಿನಗಳಿಗೆ ಪೂರ್ವ ಅಂಥಾ ಸಂಘದ ಪ್ರತಿ ಸಾಮಾಜಿಕನಿಗೂ ಅಂಥಾ ರಿಪೋರ್ಟು ಟಪಾಲು ದ್ವಾರಾ ಅಥವಾ ಇತರ ವಿಧದಲ್ಲಿ ಕಳುಹಿಸಲ್ಪಟ್ಟಿದ್ದಹೊರ್ತು, ಅಂಥಾ ಪ್ರಮೇಯವು ಜಾರಿಗೆ ಬರತಕ್ಕದ್ದಲ್ಲ.

ಅಥವಾ, ಖುದ್ದಾಗಿ ಯಾ ಪ್ರತಿನಿಧಿಯ ದ್ವಾರ ಸಾಮಾಜಿಕರಿಂದ ಕೊಡಲ್ಪಟ್ಟ ಸಂಮತಿಗಳ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳಿಂದ ಅಂಗೀಕರಿಸಲ್ಪಟ್ಟು, ಮೊದಲನೆಯ ಕೂಟವು ಆಗಿ ಒಂದು ತಿಂಗಳಾದ ಬಳಿಕ ಕಾರ್ಯನಿರ್ವಾಹ ಸಭೆಯವರಿಂದ ಕೂಡಿಸಲ್ಪಟ್ಟ ಎರಡನೆಯ ಪ್ರತ್ಯೇಕ ಕೂಟದಲ್ಲಿ ಹಾಜರಿದ್ದ ಸಾಮಾಜಿಕರ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳ ಸಾಮಾಜಿಕರ ಸಂಮತಿಗಳಿಂದ ಸ್ಥಾಪಿಸಲ್ಪಟ್ಟಹೊರ್ತು, ಅಂಥಾ ಪ್ರಮೇಯವು ಜಾರಿಗೆ ತರಲ್ಪಡತಕ್ಕದ್ದಲ್ಲ.

14. ಯಾವ ಸಂಘದ ಸಾಮಾಜಿಕರ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳಿಗೆ ಕಡಮೆ ಇಲ್ಲದ ಸಂಖ್ಯೆಯವರಾದರೂ ಅದು ಅಗಲತಕ್ಕದ್ದೆಂದು ತೀರ್ಮಾನ ಮಾಡಬಹುದು; ಮತ್ತು ಆ ಬಳಿಕ ಅದು, ಕೂಡ್ಲೆಯಾಗಲೀ ಅಥವಾ ಒಪ್ಪಲ್ಪಟ್ಟ ಬೇರೆ ಕಾಲದಲ್ಲಾಗಲೀ ಅಗಲಿಸಲ್ಪಡತಕ್ಕದ್ದು; ಮತ್ತು ಸಂಘದ ಸೊತ್ತು ಅದರ ಹಕ್ಕುಗಳು, ಮತ್ತು ಸಾಲಗಳು, ತತ್ಪ್ರಯುಕ್ತವಾದ ಸದರೀ ಸಂಘದ ನಿಬಂಧನೆಗಳಿಗೆ, ಅಂಥಾ ನಿಬಂಧನೆಗಳು ಏನಾದರೂ ಇದ್ದರೆ, ಅನುಸಾರವಾಗಿ, ಮತ್ತು ಅಂಥಾ ನಿಬಂಧನೆಗಳು ಇಲ್ಲದಿರುವ ಸಂದರ್ಭದಲ್ಲಿ ಕಾರ್ಯನಿರ್ವಾಹ ಸಭೆಯವರು ಯುಕ್ತವೆಂದು ಎಣಿಸುವಂತೆ, ವಿಲೇವಾರಿ ಮತ್ತು ವ್ಯವಸ್ಥೆ ಆಗುವ ಬಗ್ಗೆ ಎಲ್ಲಾ ಅವಶ್ಯವಾದ ಪ್ರಯತ್ನಗಳು ಮಾಡಲ್ಪಡತಕ್ಕದ್ದು: ಪರಂತು ಆ ಸಂಘದ ಕಾರ್ಯನಿರ್ವಾಹ ಸಭೆಯವರಲ್ಲಿ ಆಗಲಿ ಸಾಮಾಜಿಕರಲ್ಲಿ ಆಗಲಿ ಯಾವ ವಿವಾದವಾದರೂ ಹುಟ್ಟುವ ಪಕ್ಷಕ್ಕೆ ಅದರ ಆಡಳಿತದ ವ್ಯವಸ್ಥೆಯು, ಆ ಸಂಘದ ಮುಖ್ಯ ಕಟ್ಟಡವಿರುವ ಡಿಸ್ಟ್ರಿಕ್ಟಿನ ಪ್ರಥಮ ಸಿವಿಲ್ ಅಧಿಕಾರವುಳ್ಳ ಮುಖ್ಯ ಕೋರ್ಟನಲ್ಲಿ ನಡೆಸಲ್ಪಡತಕ್ಕದ್ದು; ಮತ್ತು ಆ ಕೋರ್ಟನವರು ಆ ವಿಷಯದಲ್ಲಿ ಅವಶ್ಯವೆಂದು ತಾವು ಎಣಿಸುವ ಆಜ್ಞೆಯನ್ನು ಮಾಡತಕ್ಕದ್ದು.

ಸಂಘಗಳ ಅಗಲುವಿಕೆಯ ಬಗ್ಗೆ ಮತ್ತು ಅವರ ಆಡಳಿತಗಳ ವ್ಯವಸ್ಥೆಯ ಬಗ್ಗೆ ನಿಯಮಗಳು.

ಪರಂತು, ಆ ಉದ್ದೇಶದ ಬಗ್ಗೆ ಕೂಡಿಸಲ್ಪಟ್ಟ ಸಾಮಾಜಿಕರ ಒಂದು ಸಾಮಾನ್ಯ ಕೂಟದಲ್ಲಿ ಸಾಮಾಜಿಕರ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳವರು ಅಂಥಾ ಅಗಲುವಿಕೆಯ ಬಗ್ಗೆ ಅಪೇಕ್ಷೆಯನ್ನು ಖುದ್ದಾಗಿ ಅಥವಾ ಪ್ರತಿನಿಧಿಯ ದ್ವಾರಾ ಕೊಡಲ್ಪಟ್ಟ ತಮ್ಮ ಸಂಮತಿಗಳಿಂದ ಸೂಚಿಸಿದ್ದರೆ ಹೊರತು, ಯಾವ ಸಂಘವಾದರೂ ಅಗಲಿಸಲ್ಪಡತಕ್ಕದ್ದಲ್ಲ.

ಸಮ್ಮತಿ ಅವಶ್ಯಕ.

ಪರಂತು, ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಟ್ಟ ಯಾವ ಸಂಘದಲ್ಲಾಗಲಿ ಗವರ್ನ್ಮೆಂಟಿನವರು ಸಾಮಾಜಿಕರಾಗಿ ಅಥವಾ ಚಂದಾದಾರರಾಗಿ ಅಥವಾ ಇತರ ವಿಧದಲ್ಲಿ ಸಂಬಂಧವುಳ್ಳವರಾಗಿರುವಾಗ, ಗವರ್ನ್ಮೆಂಟಿನವರ ಅನುಮತಿ ವಿನಾ ಅಂಥಾ ಸಂಘವು ಅಗಲಿಸಲ್ಪಡತಕ್ಕದ್ದಲ್ಲ.

ಗವರ್ನ್ಮೆಂಟಿನವರ ಅನುಮತಿ.

15. ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಟ್ಟ ಯಾವ ಸಂಘವಾದರೂ ಅಗಲಿಸಲ್ಪಟ್ಟ ಬಳಿಕ ಅದರ ಎಲ್ಲಾ ಸಾಲಗಳು ಮತ್ತು ದೇಣಿಗೆಗಳು ವ್ಯವಸ್ಥೆಯಾದ ನಂತರ, ಯಾವ ಸೊತ್ತಾಗಲೀ ಉಳಿದಿರುವ ಸಂದರ್ಭದಲ್ಲಿ, ಆ ಸಂಘದ ಸಾಮಾಜಿಕರಿಗಾದರೂ ಅಥವಾ ಅವರುಗಳ ಪೈಕಿ ಕೆಲವರುಗಳಿಗಾದರೂ ಆ ಸೊತ್ತನ್ನು ಕೊಡಲೂ ಅಥವಾ ಹಂಚಲೂ ಕೂಡದು; ಆದರೆ, ಅಗಲುವಿಕೆಯ ಕಾಲದಲ್ಲಿ ಖುದ್ದಾಗಿ ಅಥವಾ ಪ್ರತಿನಿಧಿಯದ್ವಾರ ಹಾಜರಿದ್ದ ಸಾಮಾಜಿಕರ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳಿಗೆ ಕಡಮೆ ಇಲ್ಲದವರುಗಳ ಸಂಮತಿಗಳಿಂದಾದರೂ, ಅಥವಾ ಅದಿಲ್ಲದಪಕ್ಷಕ್ಕೆ ಮೇಲೆ ಹೇಳಲ್ಪಟ್ಟ ಅಂಥಾ ಕೋಟಿನವರಿಂದಾದರೂ ತೀರ್ಮಾನ ಮಾಡಲ್ಪಟ್ಟ ಇತರ ಯಾವ ಸಂಘಕ್ಕೆ ಆಗಲಿ ಕೊಡಲ್ಪಡತಕ್ಕದ್ದು.

ಅಗಲುವಿಕೆಯ ತರುವಾಯ ಯಾವ ಸಾಮಾಜಿಕನೂ ಆದಾಯ ಹೊಂದಕೂಡದು.

ಪರಂತು, ಈ ಕಲಮು, ಒಂದು ಜಾಯಿಂಟ್ ಸ್ಟಾಕ್ ಕಂಪೆನಿಯು ಸ್ವಂತ ಇವವುಳ್ಳದ್ದಾಗಿ ಪಾಲುದಾರರ ಚಂದಾಗಳಿಂದ ಸ್ಥಾಪಿಸಲ್ಪಟ್ಟ ಯಾವ ಸಂಘಕ್ಕಾದರೂ ಪ್ರಯೋಗಿಸಲ್ಪಡತಕ್ಕದ್ದಲ್ಲ.

ಜಾಯಿಂಟ್ ಸ್ಟಾಕ್ ಕಂಪೆನಿಗಳಿಗೆ ಈ ಕಲಮು ಅನ್ವಯಿಸಕೂಡದು.

16. ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ, ಒಂದು ಸಂಘದ ನಿಬಂಧನೆಗಳ ಮತ್ತು ಖಾನೂನುಗಳ ಪ್ರಕಾರ ಅದರ ಸಾಮಾಜಿಕನಾಗಿ ಸೇರಿಸಲ್ಪಟ್ಟಿರುವ, ಚಂದಾವನ್ನು ಕೊಟ್ಟು ಇರುವ ಅಥವಾ ಅದರ ಸಾಮಾಜಿಕರ ಪಟ್ಟಿಗೆ ರುಜು ಮಾಡಿರುವ, ಅಂಥಾ ನಿಬಂಧನೆಗಳಿಗೆ ಮತ್ತು ಖಾನೂನುಗಳಿಗೆ ಅನುಸಾರವಾಗಿ ರಾಜಿನಾಮೇ ಕೊಡದೆ ಇರುವ ಮನುಷ್ಯನು ಆ ಸಂಘದ ಸಾಮಾಜಿಕನಾಗಿರತಕ್ಕದ್ದು; ಆದರೆ ಈ ರೆಗ್ಯುಲೇಷನಿನ ಪ್ರಕಾರವಾದ ಎಲ್ಲಾ ನಡವಳಿಕೆಗಳಲ್ಲಿಯೂ, ತತ್ಕಾಲದಲ್ಲಿ ಮೂರು ತಿಂಗಳುಗಳಿಗೆ ಹೆಚ್ಚಿದ ಕಾಲದವರೆಗೂ ಚಂದಾವನ್ನು ಬಾಕಿಯಲ್ಲಿಟ್ಟುಕೊಂಡಿರುವ ಯಾವ ಮನುಷ್ಯನೂ ಸಂಮತಿಯನ್ನು ಕೊಡುವುದಕ್ಕಾಗಲೀ, ಅಥವಾ ಸಾಮಾಜಿಕನೆಂದು ಎಣಿಸಲ್ಪಡುವುದಕ್ಕಾಗಲೀ ಹಕ್ಕುಳ್ಳವನಾಗಿರತಕ್ಕದ್ದಲ್ಲ.

ಸಾಮಾಜಿಕನ ವಿವರಣೆ.
ಅನರ್ಹರಾಗಿ ಮಾಡಲ್ಪಟ್ಟ ಸಾಮಾಜಿಕರು.

17. ಒಂದು ಸಂಘದ ನಿಬಂಧನೆಗಳ ಮತ್ತು ಖಾನೂನುಗಳ ಪ್ರಕಾರ ಅದರ ಆಡಳಿತಗಳ ನಿರ್ವಾಹವನ್ನು ವಹಿಸಿರುವ ಅಧಿಕಾರಿ (ಗವರ್ನರ್) ಗಳು, ಆಲೋಚನಾ ಸಭೆ (ಕೌನ್ಸಿಲ್), ಆಡಳಿತಗಾರರು (ಡೈರೆಕ್ಟರುಗಳು), ಅಧಿಕಾರ ಸಭೆ (ಕಮ್ಮಿಟಿ) ಯವರು, ನಿಕ್ಷೇಪಧಾರಿ (ಟ್ರಸ್ಟೀ) ಗಳು ಅಥವಾ ಇತರ ಸಭೆಯು, ಅದರ ಕಾರ್ಯ ನಿರ್ವಾಹ ಸಭೆಯಾಗಿರತಕ್ಕದ್ದು.

ಕಾರ್ಯ ನಿರ್ವಾಹ ಸಭೆಯ ವಿವರಣೆ.

18. ಈ ರೆಗ್ಯುಲೇಷನು ಜಾರಿಗೆ ಬರುವದಕ್ಕೆ ಪೂರ್ವ, ಸಾಹಿತ್ಯಕ್ಕೆ ಶಾಸ್ತ್ರಕ್ಕೆ, ಅಥವಾ ಧರ್ಮಕಾರ್ಯಕ್ಕೆ ಸಂಬಂಧಪಟ್ಟ ಉದ್ದೇಶದ ಬಗ್ಗೆ ಸ್ಥಾಪಿಸಲ್ಪಟ್ಟ ಏರ್ಪಡಿಸೋಣಾದ ಯಾವ ಸಂಘವಾಗಲೀ ಇತರಪರ ಯಾವ ಕಾಲದಲ್ಲಾದರೂ, ಈ ರೆಗ್ಯುಲೇಷನಿನ ಪ್ರಕಾರವಾದ ಒಂದು ಸಂಘದಂತೆ ರಿಜಿಸ್ಟರ್ಮಾಡಲ್ಪಡಬಹುದು; ಪರಂತು ಈ ಕೆಳಗೆ ಬರುವ ನಿಯಮಕ್ಕೆ ಹಾಗೆ ಮಾಡೋಣವು ಒಳಪಟ್ಟಿರತಕ್ಕದ್ದು— ಅದೇನಂದರೆ :—

ರೆಗ್ಯುಲೇಷನಿಗೆ ಪೂರ್ವ ಆದ ಸಂಘಗಳ ರಿಜಿಸ್ಟ್ರೇಷನ್.

ಕಾರ್ಯನಿರ್ವಾಹ ಸಭೆಯವರಿಂದ ಆ ಉದ್ದೇಶದ ಬಗ್ಗೆ ಕೊಡಿಸಲ್ಪಟ್ಟ ಯಾವದಾದರೂ ಸಾಮಾಜಿಕರ ಸಾಮಾನ್ಯಕೂಟದಲ್ಲಿ ಮುದ್ದಾಗಿ ಅಥವಾ ಪ್ರತಿನಿಧಿದ್ವಾರ ಹಾಜರಿದ್ದ ಸಾಮಾಜಿಕರ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳವರ ಸಂಮತಿಯು ಹಾಗೆ ರಿಜಿಸ್ಟರ್ಮಾಡಲು ಕೊಡಲ್ಪಟ್ಟಿದ್ದರೆ ಹೊರ್ತು ಅಂಥಾ ಯಾವ ಸಂಘವಾದರೂ ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಡತಕ್ಕದ್ದಲ್ಲ.

ಸಂಮತಿಯು ಅವಶ್ಯ.

ಅಂಥಾ ಸಂಘೆ ಏರ್ಪಟ್ಟಾಗ ಕಾರ್ಯನಿರ್ವಾಹ ಸಭೆಯನ್ನು ಏರ್ಪಡಿಸದೇ ಇರುವ ಪಕ್ಷಕ್ಕೆ, ಮುಂದೆ ಸಂಘದಪರವಾಗಿ ನಡೆಯುವ ಬಗ್ಗೆ, ಒಂದು ಕಾರ್ಯನಿರ್ವಾಹ ಸಭೆಯನ್ನು ತಕ್ಕ ನೋಟಿಸ್ ಸಾದರಾದ ಬಳಿಕ ಏರ್ಪಡಿಸಲು ಅದರ ಸಾಮಾಜಿಕರಿಗೆ ನ್ಯಾಯವಾಗಿ ಇರತಕ್ಕದ್ದು.

19. ಹಿಂದಿನ ಕಡೇ ಪ್ರಕರಣದಲ್ಲಿ ನಮೂದಾದ ಅಂಥಾ ಯಾವ ಸಂಘವಾದರೂ ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಡುವ ಬಗ್ಗೆ, ಸಂಘದ ಹೆಸರು, ಅದರ ಉದ್ದೇಶಗಳು ಮತ್ತು ಕಾರ್ಯ ನಿರ್ವಾಹ ಸಭೆಯವರ ಹೆಸರುಗಳು, ವಿಳಾಸಗಳು ಉದ್ಯೋಗಗಳು ಇವುಗಳನ್ನು ತೋರಿಸುವ ಒಂದು ಮೆಮೋರಾಂಡಮ್ ಆ ಪಟ್ಟಿಯನ್ನು, ಅದರೊಂದಿಗೆ 3ನೇ ಪ್ರಕರಣದಲ್ಲಿ ವಿಧಿಸಿರುವಂತೆ ಸರ್ಟಿಫೈ ಮಾಡಲ್ಪಟ್ಟ ಆ ಸಂಘದ ನಿಬಂಧನೆಗಳ ಮತ್ತು ಖಾನೂನುಗಳ ಒಂದು ನಕಲನ್ನು ಮತ್ತು ರಿಜಿಸ್ಟ್ರೇಷನ್ ಆಗಬೇಕೆಂದು ತೀರ್ಮಾನ ಮಾಡಿದ ಸಾಮಾಜಿಕರ ಸಾಮಾನ್ಯ ಕೂಟದಲ್ಲಿ ನಡದಂಥಾ ನಡವಳಿಕೆಗಳ ರಿಪೋರ್ಟಿನ ಒಂದು ನಕಲನ್ನು ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರರವರಲ್ಲಿ ಕಾರ್ಯನಿರ್ವಾಹ ಸಭೆಯವರು ದಾಖಲ್ಮಾಡಿದರೆ ಸಾಕಾಗಿರುತ್ತದೆ.

ಅಂಥಾ ಸಂಘಗಳು ರಿಜಿಸ್ಟ್ರಾರ್ ಆಫ್ ಜಾಯಿಂಟ್ ಸ್ಟಾಕ್ ಕಂಪೆನಿಯವರಲ್ಲಿ ಮೆಮೋರಾಂಡಂ ಮತ್ತು ಸಂಘದ ಪತ್ರ ಮುಂತಾದ್ದನ್ನು ದಾಖಲ್ ಮಾಡತಕ್ಕದ್ದು.

20. ಯಾವ ಮನುಷ್ಯನಾಗಲೀ, ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಿಸ್ಟ್ರಾರರವರಲ್ಲಿ ದಾಖಲ್ಮಾಡಲ್ಪಟ್ಟ ಎಲ್ಲಾ ದಸ್ತೈವೆಜುಗಳನ್ನು, ಪ್ರತಿ ಅಜಮಾಯಿಷಿಗೆ ಒಂದು ರೂಪಾಯಿ ಫೀ ಕೊಟ್ಟ ನಂತರ ಅಜಮಾಯಿಷಿ ಮಾಡಬಹುದು ; ಮತ್ತು ಯಾವ ಮನುಷ್ಯನಾಗಲೀ ಯಾವ ದಸ್ತೈವೆಜಿನ ಅಥವಾ ಯಾವ ದಸ್ತೈವೆಜಿನಿಂದ ಎತ್ತಿ ಬರೆದ ಭಾಗದ ಅಥವಾ ಯಾವ ದಸ್ತೈವೆಜಿನ ಯಾವ ಭಾಗದ ರಿಜಿಸ್ಟ್ರಾರಿಂದ ಸರ್ಟಿಫೈ ಮಾಡಲ್ಪಟ್ಟ, ನಕಲನ್ನಾಗಲಿ ಅಂಥಾ ನಕಲಿನ ಅಥವಾ ಪ್ರತಿ ನೂರು ಮಾತುಗಳಿಗೆ ಎರಡು ಆಣೆಯ ಪ್ರಕಾರ ಫೀ ಪಾವತಿ ಮಾಡಿದ ತರುವಾಯ, ಕೋರಿಕೊಳ್ಳಬಹುದು ; ಮತ್ತು ಯಾವ ಕೋರ್ಟಿನ ವ್ಯವಹಾರಗಳಲ್ಲಿಯಾದರೂ ಹಾಗೆ ಸರ್ಟಿಫೈ ಮಾಡಲ್ಪಟ್ಟ ನಕಲು ಅದರಲ್ಲಿರುವ ವಿಷಯಗಳನ್ನು ಸ್ಥಾಪಿಸುವುದಕ್ಕೆ, ಅನ್ಯಥಾ ಖಂಡಿಸಲ್ಪಟ್ಟ ಹೊರ್ತು, ಸಾಕಾದಷ್ಟು ಸಾಕ್ಷ್ಯವಾಗಿರತಕ್ಕದ್ದು.

ದಸ್ತೈವೆಜುಗಳ ಅಜಮಾಯಿಷಿ.

21. ಈ ರೆಗ್ಯುಲೇಷನಿನ ಪ್ರಕಾರ ಈ ಕೆಳಗಿನ ಸಂಘಗಳು ರಿಜಿಸ್ಟರ್ಮಾಡಲ್ಪಡಬಹುದು ಅವು ಯಾವವೆಂದರೆ :—ಧರ್ಮ ಕಾರ್ಯಗಳ ಸಂಘಗಳು, ಶಾಸ್ತ್ರವನ್ನು, ಗ್ರಂಥ ಸಮುದಾಯವನ್ನು ಅಥವಾ ಕಲೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ, ಉಪದೇಶದ ಬಗ್ಗೆ, ಉಪಯುಕ್ತವಾದ ಜ್ಞಾನಪ್ರಸರಣದ ಬಗ್ಗೆ, ಎಲ್ಲರ ಅಥವಾ ಸಾಮಾಜಿಕರ ಉಪಯೋಗಾರ್ಥವಾಗಿ ಪುಸ್ತಕಶಾಲೆಗಳನ್ನು ಅಥವಾ ವಾಚಕಶಾಲೆಗಳನ್ನು ಚಿತ್ರಲೇಖನ ಮುಂತಾದ ಕಲೆಗಳ ಸಂಬಂಧವಾದ ಕೆಲಸಗಳ, ಮತ್ತು ಸ್ಥಾವರ ಜಂಗಮಶಾಸ್ತ್ರ ಸಂಬಂಧವಾದ ಪದಾರ್ಥಗಳ, ಯಾಂತ್ರಿಕ ಮತ್ತು ಪದಾರ್ಥ ವಿಜ್ಞಾನಸಂಬಂಧವಾದ ನವಕಲ್ಪನೆಗಳ, ಉಪಕರಣಗಳ ಅಥವಾ ಉಪಾಯಗಳ ಸಂಗ್ರಹಗಳ ಸರ್ವಜನೋಪಯುಕ್ತವಾದ ವಿಚಿತ್ರವಸ್ತು ಪ್ರದರ್ಶನ ಶಾಲೆಗಳನ್ನು ಸ್ಥಾಪಿಸುವ ಅಥವಾ ಕಾಪಾಡುವ ಬಗ್ಗೆ ಏರ್ಪಡಿಸಲ್ಪಟ್ಟ ಸಂಘಗಳು.

ಯಾವ ಸಂಘಗಳಿಗೆ ರೆಗ್ಯುಲೇಷನ್ ಪ್ರಯೋಗಿಸಲ್ಪಡತಕ್ಕದ್ದು.

ಪಿ. ಎನ್. ಕೃಷ್ಣಮೂರ್ತಿ,
ಮೈಸೂರು ದಿವಾನ್.

1513

81

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಘಾಯಿಷ್ ಆದ್ದು. [ನಂ. 41.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 13, ಸನ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ನಂಬರ್ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ಕಂಟ್ರೋಲರವರು, ಪಬ್ಲಿಕ್‌ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯೂಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸ್‌ಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು—ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 24—26ನೆ ಸೆಪ್ಟಂಬರ್ 1904.

ನಂ. (2581)—93-2 – ಸ್ಯಾನಿಟೇಷನ್, ಕೊಡಗುದೇಶದ ಪಡಿನಾಲ್ಕನಾಡು ತಾಲ್ಲೂಕಿನ ತಾವುನಾಡು—ಸಂಪಾಜೆನಾಡು ಭಾಗಮಂಡ್ಲದಲ್ಲಿ ನಡೆಯುವ ತಲಕಾವೇರಿ ಉತ್ಸವದ ಸಂದರ್ಭದಲ್ಲಿ 1904ನೆ ಅಕ್ಟೋಬರ್ 7ರ ಲಾಗಾಯ್ತು ನವಂಬರ್ 15ರ ವರಿವಿಗೆ ಮೈಸೂರು ಸಂಸ್ಥಾನದಿಂದಲೂ ಮತ್ತು ರೋಗ ತಗಲಿದ ಇತರ ಪ್ರದೇಶಗಳಿಂದಲೂ ಜನಗಳು ಬರುವದನ್ನು ನಿರೋಧಿಸುವ ಕೊಡಗುದೇಶದ ಚೀಫ್ ಕಮಿಷನರವರಿಂದ ಕೊಡಲ್ಪಟ್ಟ 1904ನೆ ಸೆಪ್ಟಂಬರ್ 14ನೆ ಮುರ್ತ್ತಂ 55ನೆ ನಂಬರ್ ಇದರಡೀ ಕಂಡ ಇಸ್ತಿಹಾರ್ನಾಮೆಯು ತಿಳುವಳಿಕೆ ಬಗ್ಯೆ ಪುನಃ ಘಾಯಿಷ್ಮಾಡಲ್ಪಟ್ಟಿರುತ್ತೆ :—

ಕೊಡಗು ದೇಶದ ಹಜರತ್ ಚೀಫ್ ಕಮಿಷನರ್ ಸಾಹೇಬರವರು.

ಇಸ್ತಿಹಾರ್ನಾಮೆ.

ತಾರೀಖು 14ನೆ ಸೆಪ್ಟಂಬರ್ ಸನ 1904ನೆ ಇಸವಿ.

ನಂಬರ್ 55, ಕೊಡಗು ದೇಶದ ಪಾಡಿನಾಲ್ಕನಾಡು ತಾಲ್ಲೂಕು ತಾವುನಾಡು—ಸಂಪಾಜೆನಾಡು ಭಾಗಮಂಡ್ಲ ಗ್ರಾಮದಲ್ಲಿ ಬರುವ ತುಲಾಸಂಕ್ರಮಣದ ಸಮಯದಲ್ಲಿ ನಡೆಯುವ ತಲಕಾವೇರಿ ಜಾತ್ರೆಗೆ ಮೈಸೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಮತ್ತು ಪ್ಲೇಗ್ ರೋಗ ತಗಲಿದ ಇತರ ಪ್ರದೇಶಗಳಿಂದಲೂ ಬರುವ ಜನರನ್ನು ಸದರೀ ಸ್ಥಳದಲ್ಲಿ ಶೇರಲು ಬಿಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಹಜರತ್ ಆಫಿಸಿಯೇಟಿಂಗ್ ಚೀಫ್ ಕಮಿಷನರ್ ಸಾಹೇಬರವರು ತಿಳಿಯುವದ್ದರಿಂದ, ಸನ 1897ನೆ ಇಸವಿ ಸಾಂಕ್ರಾಮಿಕ ರೋಗಗಳ ಆಕ್ಟ್ ಅನುಸರಿಸಿ ತಮಗೆ ಕೊಟ್ಟಿರುವ ಅಧಿಕಾರಗಳ ಜಲಾವಣೆಯಲ್ಲಿ, ಸನ 1904ನೆ ಇಸವಿ ಅಕ್ಟೋಬರ್ ತಾರೀಖು 7ರಿಂದ ನವಂಬರ್ 15ರ ವರಿಗೆ ಸದರೀ ಜಾತ್ರೆಗೆ ಮೈಸೂರು, ದಕ್ಷಿಣ ಕನ್ನಡಜಿಲ್ಲೆ ಮತ್ತು ಪ್ಲೇಗ್ ತಗಲಿದ ಇತರ ಪ್ರದೇಶಗಳಿಂದಲೂ ಜನರು ಬರುವದನ್ನು ಈ ಮೂಲಕ ನಿರೋಧಪಡಿಸಿ ಇದೆ.

ಈ ಇಸ್ತಿಹಾರ್ನಾಮೆಗೆ ವಿರೋಧವಾಗಿ ಸದರೀ ಜಾತ್ರೆಗೆ ಮೇಲೆ ನಮೂದಿಸಿದ ಪ್ರದೇಶಗಳಿಂದ ಜನರು ಬಂದಲ್ಲಿ ಅಂಥಾವರೆಲ್ಲರನ್ನು ಹಿಂದಕ್ಕೆ ಕಳುಹಿಸಲಾದೀತು.

ಆರ್. ಸಿ. ಎಚ್. ಎಂ. ಕಿಂಗ್,
ಚೀಫ್ ಕಮಿಷನರವರ ಸೆಕ್ರಿಟೆರಿಯುವರು.

ತಾರೀಖು 28—29ನೆ ಸೆಪ್ಟಂಬರ 1904.

ನಂ. 2718-35-8—ಸ್ಯಾನಿಟೇಷನ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರುವರಿ 10ನೆ ಮುಕ್ರಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನಗಳ ಉದ್ದೇಶಗಳಿಗೋಸ್ಕರ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
ಚಿತ್ರದುರ್ಗ	... ಚಿತ್ರದುರ್ಗ	ಲಕ್ಷ್ಮಿಸಾಗರ	... ಚಿತ್ರದುರ್ಗ
ತುರುವನೂರು	.. ಡಿಟೋ	ಚಿಕ್ಕಾಗಟ್ಟಿ	... ಹೊಸದುರ್ಗ

ತಾರೀಖು 29—30ನೆ ಸೆಪ್ಟಂಬರ 1904

ನಂ. 2750-17-17—ಸ್ಯಾನಿಟೇಷನ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ ಅನುಸರಿಸಿ 1898ನೆ ಫೆಬ್ರುವರಿ 10ನೆ ಮುಕ್ರಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನಗಳ ಉದ್ದೇಶಗಳಿಗೋಸ್ಕರ ತುಮಕೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
ತುಮಕೂರ ಟವನ	... ತುಮಕೂರು	ನಾರಣಕೆರೆ	... ತುಮಕೂರು
ಲಕ್ಕಮಗೊಂಡನಹಳ್ಳಿ	.. ಚಿಕ್ಕನಾಯಿಕನಹಳ್ಳಿ	ಕಾರುಗಂಡ	... ಡಿಟೋ
ಕೈದಳ	... ತುಮಕೂರು	ಕೋಣನಕಲ್ಲು	... ಗುಬ್ಬಿ
ಸಂಗಲಾಪುರ	.. ಡಿಟೋ		

ತಾರೀಖು 29—30ನೆ ಸೆಪ್ಟಂಬರ 1904.

ನಂ. 2752—34-8—ಸ್ಯಾನಿಟೇಷನ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ ಅನುಸರಿಸಿ 1898ನೆ ಫೆಬ್ರುವರಿ 10ನೆ ಮುಕ್ರಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನಗಳ ಉದ್ದೇಶಗಳಿಗೋಸ್ಕರ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

	ಸ್ಥಳ.		ತಾಲ್ಲೂಕು.		ಸ್ಥಳ.		ತಾಲ್ಲೂಕು.
1.	ಕರ್ತಿಕೆರೆ	..	ಚಿಕ್ಕಮಗಳೂರು.	20.	ಮೆಲ್ಲೇಶ್ವರ	..	ಕಡೂರು
2.	ದೊಡ್ಡಕಾರುಬರಹಳ್ಳಿ	...	ಡಿಟೋ	21.	ದೊಡ್ಡಘಟ್ಟ	..	ಡಿಟೋ
3.	ಕಬ್ಬಿಗೆರೆ	..	ಡಿಟೋ	22.	ಹುಲಿಕೆರೆ	...	ಡಿಟೋ
4.	ಹಂಪಾಪುರ	...	ಡಿಟೋ	23.	ಗರ್ಗೆ	.	ಡಿಟೋ
5.	ದ್ಯಾವರಹಳ್ಳಿ	...	ಡಿಟೋ	24.	ಹಡಿಕರೆ	...	ತರೀಕೆರೆ
6.	ಬನಕನಹಳ್ಳಿ	...	ಡಿಟೋ	25.	ಹೆಬ್ಬೂರು	...	ಡಿಟೋ
7.	ಕಾರಚಿಕ್ಕನಹಳ್ಳಿ	...	ಡಿಟೋ	26.	ಮೂಸೂಕೆ	..	ಡಿಟೋ
8.	ಮಂಗತ್ತಿಹಳ್ಳಿ	..	ಡಿಟೋ	27.	ಅತ್ತಿಗಟ್ಟ	...	ಡಿಟೋ
9.	ವಾಗಡಿ	...	ಡಿಟೋ	28.	ಲಕ್ಕವಳ್ಳಿ	...	ಡಿಟೋ
10.	ಕೂಳರಹಳ್ಳಿ	..	ಡಿಟೋ	29.	ಅಜ್ಜಂಪುರ	..	ಡಿಟೋ
11.	ತಡಸೀನಹಳ್ಳಿ	..	ಡಿಟೋ	30.	ಚನ್ನಾಪುರ		ಡಿಟೋ
12.	ಬೇಲೂರು	...	ಕಡೂರು.	31.	ಜಾವೂರು	...	ಡಿಟೋ
13.	ಕೋಡಿಹಳ್ಳಿ	..	ಡಿಟೋ	32.	ಹಿರಿಕಣವಂಗಲ	...	ಡಿಟೋ
14.	ಮಲ್ಲಾಪುರ	....	ಡಿಟೋ	33.	ಸಿದ್ದಾಪುರ	....	ಡಿಟೋ
15.	ಮಾವಿನಹಳ್ಳಿ		ಡಿಟೋ	34.	ದೋರನಹಾಳ್	..	ಡಿಟೋ
16.	ಬ್ಯಾಡರಹಳ್ಳಿ	...	ಡಿಟೋ	35.	ಕೆಂಚಾಪುರ	..	ಡಿಟೋ
17.	ಪಟ್ನಗೆರೆ	...	ಡಿಟೋ	36.	ಯಡಹಳ್ಳಿ	...	ಯಡಹಳ್ಳಿ ಸಬ್ ತಾ||
18.	ನಾಗೊಂಡನಹಳ್ಳಿ	..	ಡಿಟೋ	37.	ಹಿಲುವಳ್ಳಿ	..	ಡಿಟೋ
19.	ಬಳ್ಳಿಗನೂರು	..	ಡಿಟೋ				

ತಾರೀಖು 29—30ನೆ ಸೆಪ್ಟಂಬರ 1904.

ನಂ. 2772—42-31—ಸ್ಯಾನಿಟೇಷನ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ ಅನುಸರಿಸಿ 1898ನೆ ಫೆಬ್ರುವರಿ 10ನೆ ಮುಕ್ರಂ 9384—ಮಿ. ಫೈ. 21-96ನೆ ನಂಬರ ಇಸ್ತಿಹಾರ್ನಾಮೆಯೊಡನೆ ಕೊಡಲ್ಪಟ್ಟ ರೆಗ್ಯುಲೇಷನಗಳ ನಿಯಮಗಳಲ್ಲಿ ವಿಧಿಸಲ್ಪಟ್ಟ ಮೇರೆ ಮೈಸೂರ ಪಟ್ಟಣದಲ್ಲಿ ಅಜವಾಯಿಷಿ ಪದ್ಧತಿಯ ಉದ್ದೇಶಗಳಿಗೋಸ್ಕರ ವಿಷ್ಟ ಮೈಸೂರ ಸೀಮೆಯು "ರೋಗ ತಗಲಿದ ಪ್ರದೇಶವಾಗಿ" ಎಣಿಸಲ್ಪಡತಕ್ಕದ್ದು.

ತಾರೀಖು 30ನೆ ಸೆಪ್ಟಂಬರ—1ನೆ ಅಕ್ಟೋಬರ 1904.

ನಂ. 2839—48-5—ಸ್ಯಾನಿಟೇಷನ್, ಸಂ 18.7ನೆ ಇಸವಿಯ ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನಿನ 2ನೆ ಸೆಕ್ಷನ್ ಅನುಸರಿಸಿ ಮೈಸೂರು ಸೀಮೆಯ ಘನವೆನ್ನಿಸಿದ ಶ್ರೀಮನ್ ಮಹಾರಾಜರವರ ಗವರ್ನಮೆಂಟಿನವರು, 1903ನೆ ಡಿಸೆಂಬರ 10ನೆ ಮುಕ್ರಂ ಲೋ. ಪೋ. ಪಿ. 759ನೆ ನಂಬರ ಇಸ್ತಿಹಾರ್ನಾಮೆಯಿಂದ ತಿದ್ದುಪಾಟಾದ ಮೇರೆ ಮೇಲ್ವಿಚಾರಣೆ ಕ್ರಮವೆಂದು ಗೊತ್ತಾದ ಮನೆಮನೆಯ ಅಜವಾಯಿಷಿ ಕ್ರಮವನ್ನು ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಸಕ್ಲೇಶಪುರ, ಅರಕಲಗೂಡು, ಅರಸೀಕೆರೆ, ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರ ಪಟ್ಟಣಗಳಿಗೆ ಲಾಗುವು ಮಾಡತಕ್ಕದ್ದೆಂದು ಅಪ್ಪಣೆ ಕೊಡುವದಲ್ಲದೆ ಹಾಸನದ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರಿಗೆ ಸದರೀ ಕ್ರಮವನ್ನು ಸರಿಯಾಗಿ ಜಾರೀಲಿ ತರಲಿಕ್ಕೆ ಯುಕ್ತವೆಂದು ಅವರಿಗೆ ತೋರಬರುವಂತಾ ಸನ್ನಾಹಗಳನ್ನು ಮಾಡುವ ಬಗ್ಯೆ ಅಧಿಕಾರವನ್ನು ಕೊಟ್ಟಿರುತ್ತಾರೆ.

1515

ತಾರೀಖು 6—7ನೆ ಅಕ್ಟೋಬರ್ 1904.

ನಂ. (3019)—22-21—ಸ್ಯಾನಿಟೇರ್ಸ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಾತ್ರೆಗೆ ಯಾತ್ರಾರ್ಥವಾಗಿ ಹೋಗುವದನ್ನು ಮದರಾಸು ಗವರ್ನ್‌ಮೆಂಟನವರು ಅಡ್ಡೀಪಡಿಸುತ್ತಾರೆ:—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಧಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	
ಗೌರಮ್ಮಾಳ ಜಾತ್ರೆ.	ಗುಮ್ಮಳಾಪುರಂ.	ಹೊಸೂರು.	ಸೇಲಂ.	7—10—04	14—10—04	ಫಸ್ಟ್ ಅಸಿಸ್ಟೆಂಟ್ ರಸಿಡೆಂಟರವರ ಎಡ್ವರ್ಟಿಸ್‌ಮೆಂಟ್ ನಂ. 1231-ಪಿ., ತಾ॥ 4-10-04

ತಾರೀಖು 6—7ನೆ ಅಕ್ಟೋಬರ್ 1904.

ನಂ. (3030)—16-8—ಸ್ಯಾನಿಟೇರ್ಸ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕ್ಕಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21—96ನೆ ನಂಬರ್ ಇಸ್ತಿಹಾರ್‌ನ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಹಾಸನದ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಹೊಂಗನೂರು ..	ಅರಕಲಗೂಡು.	4. ತೆಷನಿ ..	ಅರಸೀಕೆರೆ.
2. ಹುಲ್ಲಕಲ ..	ಡಿಟೋ	5. ಹೊನ್ನಮ್ಮನ ಹಳ್ಳಿ ..	ಹಾಸನ.
3. ಬರಗೂರು ..	ಡಿಟೋ	6. ಹೊಸೂರು ...	ಆಲೂರು (ಸಬ್ ತಾ॥

ತಾರೀಖು 27ನೆ ಸೆಪ್ಟಂಬರ್ 1904.

ನಂ. ಜ. 1705—4—2, ಕೋಲಾರ ಡಿಸ್ಟ್ರಿಕ್ಟಿನ ಲೋಕಲ್ ಬೋರ್ಡಿನಿಂದಲೂ ಮತ್ತು ಮ್ಯೂನಿಸಿಪಾಲಿಟಿಗಳಿಂದಲೂ 1904ನೆ ಇಸವಿಯ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಲ್ಪಟ್ಟ ದೊಡ್ಡ ಮನುಷ್ಯರುಗಳ ಇದರಡೀ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತದೆ:—

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಸಿಡ್ಲಘಟ್ಟ ಮ್ಯೂನಿಸಿಪಾಲಿಟಿ ..	1. ಮೌ॥ ಪಡಿನಾಳ್ ಬಸಪ್ಪನವರು	ವರ್ತಕರು.
ಚಿಕ್ಕಬಳ್ಳಾಪುರ ಡಿಟೋ ..	1. ,, ಟಿ. ಸುಬ್ಬರಾಯಪ್ಪನವರು ..	ಡಿಟೋ
ಮುಳಬಾಗಲ ಡಿಟೋ	1. ,, ಪಾಚಾಮಿಯ್ಯಾ ಸಾಬರು ...	ಪಟೇಲರು ವ ಜಮೀನ್‌ದಾರ್ರು.
ಕೋಲಾರ ಡಿಟೋ ..	1. ,, ಸಿ. ಬಿ. ಗೋಪಾಲರಾಯರು ..	ಪ್ಲೀಡರು.
	2. ,, ಮುದ್ರಾಜಪ್ಪನವರು ...	ವರ್ತಕರು.
	3. ,, ಮೀರ್ ಹಸೇನ್ ಅಲಿಸಾಬರು ...	ಕೋಲಾರ ಮೂಕ್ಕುರವಿನ ನಜೀಮರು ಮತ್ತು ವರ್ತಕರು, ಕೋಲಾರ.
ಡಿಸ್ಟ್ರಿಕ್ಟು ಫಂಡ್ ಬೋರ್ಡು ..	1. ,, ಪಿ. ಶ್ರೀನಿವಾಸಾಚಾರ್ರು ...	ಜೋಡಿದಾರ್ರು, ಸಿಡ್ಲಘಟ್ಟ.
	2. ,, ಕೆ. ವೊನ್ನಮ್ಮಂಣಯ್ಯನವರು ...	ಜೋಡಿದಾರ್ರು, ಬೌರಿಂಗ್‌ಪೇಟೆ.
ಕೋಲಾರ ಗೋಲ್ಡ್‌ಫೀಲ್ಡ್ ಮೈನಿಂಗ್ ಬೋರ್ಡು.	1. ,, ಎಡ್ವರ್ಡ್ ಆರ್. ಜಾರ್ಜ್ ಯವರು ..	ಗೋಲ್ಡ್ ಫೀಲ್ಡ್ ಓರಿಯಂಟಲ್, ನೈನ್ ರೀಫ್ಸ್ ವ ರೋಡ್‌ಬ್ಯಾಕ್ ಗೋಲ್ಡ್ ಮೈನಿಂಗ್ ಕಂಪನಿಗಳ ಸೂಪರಿಟೆಂಡೆಂಟರು.

ತಾರೀಖು 27ನೆ ಸೆಪ್ಟಂಬರ್ 1904.

ನಂ. ಜ. 1699—11-2, ಡಿಸ್ಟ್ರಿಕ್ಟ್ ಬೋರ್ಡಿನಿಂದಲೂ, ಹಾಸನ ಡಿಸ್ಟ್ರಿಕ್ಟಿನ ಮ್ಯುನಿಸಿಪಾಲಿಟಿಗಳಿಂದಲೂ ಮತ್ತು ದಕ್ಷಿಣ ಮೈಸೂರು ಯ್ಯುರೋಪಿಯನ್ ಪ್ಲಾಂಟರುಗಳ ವ ನೇಟಿವ್ ಪ್ಲಾಂಟರುಗಳ ಸಂಘದಿಂದಲೂ 1904ನೆ ಇಸವಿಯ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ ಇದರಡೀ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತದೆ :—

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಹಾಸನ ಮ್ಯುನಿಸಿಪಾಲಿಟಿ ...	1. ರೆವರೆಂಡ್ ಮೆ॥ ಎಚ್. ಎಚ್. ಸ್ಯೂಹ್ಯಾಂಯವರು ..	ವೆಸ್ಲಿಯನ್ ಮಿಷನರಿ.
	2. ಮೆ॥ ವೆಂಕಟರಂಗಯ್ಯನವರು ..	ಬ್ಯಾಂಕ್ ಏಜಂಟರು ಮತ್ತು ಜಮೀನ್ದಾರು.
ಹೊಳೆನರಸೀಪುರ ಮ್ಯುನಿಸಿಪಾಲಿಟಿ .	1. ,, ವೆಂಕಟರಾಮಯ್ಯನವರು ..	ಪ್ಲೀಡರು.
ಡಿಸ್ಟ್ರಿಕ್ಟ್ ಫಂಡ್ ಬೋರ್ಡು ...	1. ,, ಲಕ್ಷ್ಮೀನರಸಿಂಹಾಚಾರ್ಯ ..	ಡಿಟೋ
ದಕ್ಷಿಣ ಮೈಸೂರು ಯ್ಯುರೋಪಿಯನ್ ಪ್ಲಾಂಟರುಗಳ ಸಂಘ.	1. ,, ಗ್ರೇಹ್ಯಾಂ ಅಂಡರ್ಸನ್, ಸಿ. ಐ. ಇ., ಯವರು.	ಕಾಫಿಪ್ಲಾಂಟರು.
ದಕ್ಷಿಣ ಮೈಸೂರು ನೇಟಿವ್ ಪ್ಲಾಂಟರುಗಳ ಸಂಘ.	1. ,, ಬೊಮ್ಮನಕೆರೆ ಮಲ್ಲೇಗೌಡರು ...	ಮಂಡೇ ಪಟೇಲರು ವ ಜಮೀನ್ದಾರು.

ತಾರೀಖು 27ನೆ ಸೆಪ್ಟಂಬರ್ 1904.

ನಂ. ಜ. 1700—14-2, ಡಿಸ್ಟ್ರಿಕ್ಟ್ ಬೋರ್ಡಿನಿಂದಲೂ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟಿನ ಮ್ಯುನಿಸಿಪಾಲಿಟಿಗಳಿಂದಲೂ 1904ನೆ ಇಸವಿಯ ಪ್ರಜಾಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ ಇದರಡೀ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತದೆ :—

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಚಿತ್ರದುರ್ಗ ಮ್ಯುನಿಸಿಪಾಲಿಟಿ ...	1. ಮೆ॥ ಮಹಮದ್ ದಸ್ತಗೀರಸಾಹಬರು	ಪೆನ್ಷನರು ಮತ್ತು ಸ್ಟ್ಯಾಂಪ್ ವೆಂಡರು
	2. ,, ಬಿ. ಲಕ್ಷ್ಮೀನಾರಣಪ್ಪನವರು ...	ಪ್ಲೀಡರು.
ದಾವಣಗೆರೆ ಮ್ಯುನಿಸಿಪಾಲಿ : ...	1. ,, ರೊಜೇರಿಯೋಯವರು ..	ಮದರಾಸು ಮೆಸರ್ಸ್ ಬಿನ್ನಿ ಅಂಡ್ ಕೋ ಯವರ ಏಜಂಟರು.
ಹರಿಹರ ಮ್ಯುನಿಸಿಪಾಲಿಟಿ .	1. ,, ಕೇಶವನಾಯಿಕರು ..	ಸಾಹುಕಾರ್ರು ಮತ್ತು ಜಮೀನ್ದಾರ್ರು
ಡಿಸ್ಟ್ರಿಕ್ಟ್ ಫಂಡ್ ಬೋರ್ಡು	1. ,, ಭೂರಿ ಸಂಣಪ್ಪನವರು ...	ವರ್ತಕರು, ಮೊಳಕಾಲ್ಮೂರು.
	2. ,, ಗುಂಡೇರಿ ಗೋಪಾಲಯ್ಯನವರು ..	ಜಮೀನ್ದಾರ್ರು ಮತ್ತು ಶಾನಭೋಗರು, ಹೊಳಲಕೆರೆ.

ತಾರೀಖು 27ನೆ ಸೆಪ್ಟಂಬರ್ 1904.

ನಂ. ಜ. 1701—9—6, ಡಿಸ್ಟ್ರಿಕ್ಟ್ ಬೋರ್ಡಿನಿಂದಲೂ, ಕಡೂರು ಡಿಸ್ಟ್ರಿಕ್ಟಿನ ಮ್ಯುನಿಸಿಪಾಲಿಟಿಗಳಿಂದಲೂ ಮತ್ತು ಉತ್ತರ ಮೈಸೂರು ಪ್ಲಾಂಟರುಗಳ ಸಂಘದಿಂದಲೂ 1904ನೆ ಇಸವಿಯ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ ಇದರಡೀ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತದೆ :—

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಚಿಕ್ಕಮಗಳೂರು ಟವನ್ ಮ್ಯುನಿಸಿಪಾಲಿಟಿ.	1. ಮೆ॥ ಎ. ನರಸಿಂಹಾಚಾರ್ರು ...	ಪ್ಲೀಡರು.
	2. ,, ಜೆ. ಅಬ್ದುಲ್ಖಲೀಕ್ ಯವರು ..	ಕಾಫಿ ಪ್ಲಾಂಟರು.
ತರೀಕೆರೆ ಮುನಿಸಿಪಾಲಿಟಿ ..	1. ,, ಶಿವಪ್ಪಗೌಡರು ..	ಪಟೇಲರು.
ಕಡೂರು ಡಿಸ್ಟ್ರಿಕ್ಟ್ ಫಂಡ್ ಬೋರ್ಡ್.	1. ,, ಎಂ. ಗಣೇಶರಾಯರು ..	ಕಾಫಿ ಪ್ಲಾಂಟರು.
	2. ,, ಎಸ್. ಪಾರ್ವತಪ್ಪನವರು ...	ವರ್ತಕರು.
ಉತ್ತರ ಮೈಸೂರು ಪ್ಲಾಂಟರುಗಳ ಸಂಘ.	1. ,, ಸಿ. ಡಾವರ್ಸ್ ಯವರು ...	ಕಾಫಿ ಪ್ಲಾಂಟರು, ಕೆಳಗೂರು ಎಸ್ಟೇಟು, ಮೂಡಗೆರೆ ತಾಲ್ಲೂಕು.

1572

ತಾರೀಖು 27ನೆ ಸೆಪ್ಟಂಬರ್ 1904.

ನಂ. ಜ. 1706—5—8, ಮೈಸೂರು ಡಿಸ್ಟ್ರಿಕ್ಟಿನ ಲೋಕಲ್ ಬೋರ್ಡಿನಿಂದಲೂ ಮತ್ತು ಮ್ಯುನಿಸಿಪಾಲಿಟಿಗಳಿಂದಲೂ 1904ನೆ ಇಸವಿಯ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ ಇದರಡೀ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತದೆ :—

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಡಿಸ್ಟ್ರಿಕ್ಟ್ ಫಂಡು ಬೋರ್ಡು ..	1. ಮೆ॥ ಅಂಬ್ಯ ಅಣಯ್ಯಪಂಡಿತರು ...	ಜಮೀನ್ದಾರ್ರು.
	2. ,, ಎ. ರಾಮಣ್ಣನವರು ...	ಅಡ್ವೋಕೇಟರು ವ ಜಮೀನ್ದಾರ್ರು.
ಮೈಸೂರು ಸಿಟಿ ಮ್ಯುನಿಸಿಪಾಲಿಟಿ ..	1. ,, ಅನಂತರಾಜಯ್ಯನವರು ..	ಸಾಹುಕಾರ್ರು.
	2. ,, ಮಾದಪ್ಪನವರು ..	ಡಿಟೋ
	3. ,, ಸಿ. ರಂಗಯ್ಯಂಗಾರ್ರು ...	ಅಡ್ವೋಕೇಟರು.
	4. ,, ಎಂ. ವೆಂಕಟಕೃಷ್ಣಯ್ಯನವರು ...	ಸ್ಕೂಲ್ ಮ್ಯಾಸ್ಟರು.
ಹುಣಸೂರ ಮ್ಯುನಿಸಿಪಾಲಿಟಿ ..	1. ,, ನಾರಣಪ್ಪನವರು ..	ಜಮೀನ್ದಾರ್ರು.
ನಂಜನಗೂಡು ಮ್ಯುನಿಸಿಪಾಲಿಟಿ ...	1. ,, ವೆಂಕಟಸುಬ್ಬಯ್ಯನವರು ...	ಪ್ಲೀಡರು ಮತ್ತು ಜಮೀನ್ದಾರ್ರು.
ಶ್ರೀರಂಗಪಟ್ಣ ಮ್ಯುನಿಸಿಪಾಲಿಟಿ ...	1. ,, ರಾಮಣ್ಣನವರು ...	ಅಡ್ವೋಕೇಟರು.
ಮಳವಳ್ಳಿ ಮ್ಯುನಿಸಿಪಾಲಿಟಿ ...	1. ,, ಸುಬ್ಬಣ್ಣನವರು ...	ವರ್ತಕರು.

ತಾರೀಖು 27ನೆ ಸೆಪ್ಟಂಬರ್ 1904.

ನಂ. ಜ. 1707—8—3, ಶಿವಮೊಗ್ಗ ಡಿಸ್ಟ್ರಿಕ್ಟಿನ ಲೋಕಲ್ ಬೋರ್ಡಿನಿಂದಲೂ ಮತ್ತು ಮ್ಯುನಿಸಿಪಾಲಿಟಿಗಳಿಂದಲೂ 1904ನೆ ಇಸವಿಯ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ ಇದರಡೀ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತದೆ :—

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಶಿವಮೊಗ್ಗ ಮ್ಯುನಿಸಿಪಾಲಿಟಿ ...	1. ಮೆ॥ ಎಸ್. ಆರ್. ಬಾಲಕೃಷ್ಣರಾವ್, ಬಿ. ಎ, ಎಲ್. ಎಲ್. ಬಿ., ಯವರು.	ಅಡ್ವೋಕೇಟರು.
	2. ,, ಸೈಯದ್ ಮೊಹಿದ್ದೀನ್ ಸಾಹೆಬರು ...	ಪರ್ಷಿಯನ್ ಪೋಲೀಸ್ ಇನ್ಸ್ಪೆಕ್ಟರು.
	3. ,, ರೆವರೆಂಡ್ ಮೆ॥ ಎ. ಇ. ನೈಟಿಂಗೇಲರವರು.	ವೆಸ್ಲಿಯನ್ ಮಿಷನೆರಿ ಯವರು.
ಶಿಕಾರಿಪುರ ಡಿಟೋ ...	1. ,, ದೀಕ್ಷಿತರ ಶಿವಪ್ಪನವರು ...	ಜಮೀನ್ದಾರ್ರು.
ಡಿಸ್ಟ್ರಿಕ್ಟ್ ಫಂಡ್ ಬೋರ್ಡು ..	1. ,, ತೀರ್ಥಹಳ್ಳಿ ಭೀಮರಾಯರು ...	ಪ್ಲೀಡರು, ಶಿವಮೊಗ್ಗ.
	2. ,, ಖಾಜಿ ಅಬ್ದುಲ್ ಕರೀಂ ಸಾಬರು ..	ಜಮೀನ್ದಾರ್ರು, ಕಾಂಸಿ ಸಬ್ ತಾ॥
ನಗರ ಸಭಾ ..	1. ,, ಸಿ. ಸುಬ್ಬರಾವ್, ಬಿ ಎ., ಬಿ. ಎಲ್., ಯವರು.	ಅಡ್ವೋಕೇಟರು, ಶಿವಮೊಗ್ಗ.

ತಾರೀಖು 27ನ ಸೆಪ್ಟಂಬರ್ 1904.

ನಂ. ಜ. 1708—13—3, ತುಮಕೂರ ಡಿಸ್ಟ್ರಿಕ್ಟಿನ ಲೋಕಲ್ ಬೋರ್ಡಿನಿಂದಲೂ ಮತ್ತು ಮ್ಯುನಿಸಿಪಾಲಿಟಿಗಳಿಂದಲೂ 1904ನೆ ಇಸವಿಯ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ ಇದರಡೀ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತದೆ :—

ಚುನಾಯಿಸಿದವರು.	ಚುನಾಯಿಸಲ್ಪಟ್ಟವರ ಹೆಸರು.	ಕಸಬು.
ಡಿಸ್ಟ್ರಿಕ್ಟ್ ಫಂಡ್ ಬೋರ್ಡ್ ...	1. ಮೆ॥ ತುರುವೇಕೆರೆ ನಾರಣಪ್ಪನವರು ...	ಮೆಂಬರು.
	2. ,, ಪಾವಗಡದ ವೆಂಬೂರು ವೆಂಕಟನರಸಿಂಹಾಚಾರ್ರು.	ಜಮೀನ್ದಾರ್ರು.
ತುಮಕೂರ ಟೌನ್ ಮ್ಯುನಿಸಿಪಾಲಿಟಿ.	1. ರೆವರೆಂಡ್ ಮೆ॥ ಎಡ್ವರ್ಡ್ಸ್‌ಯವರು ...	ವೆಸ್ಲಿಯನ್ ಮಿಷನೆರಿಯವರು.
	2. ಮೆ॥ ವೈ. ರಾಮರಾವ್, ಬಿ. ಎ., ಯವರು ..	ಫರ್ಸ್ಟ್‌ಗ್ರೇಡ್ ಪ್ಲೀಡರು.
	3. ,, ಕೆ. ನಲ್ಲಪ್ಪನವರು ..	ಜಮೀನ್ದಾರ್ರು

ತಾರೀಖು 1ನೆ ಅಕ್ಟೋಬರ 1904.

ನಂ. ಜ. 1832-15-4, ಬೆಂಗಳೂರ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟ್ ಫಂಡ್ ವ ಮ್ಯೂನಿಸಿಪಲ್ ಬೋರ್ಡುಗಳಿಂದಲೂ ಮತ್ತು ಲಾ ಸಂಘದಿಂದಲೂ 1901ನೆ ಇಸವಿಯ ಪ್ರಜಾ ಪ್ರತಿನಿಧಿ ಸಭೆಗೆ ಮೆಂಬರುಗಳಾಗಿ ಚುನಾಯಿಸಲ್ಪಟ್ಟ ದೊಡ್ಡ ಮನುಷ್ಯರುಗಳ ಇದರ ಡೀ ಕಂಡ ತಖ್ತೆಯು ಸಮಸ್ತ ಜನಗಳ ತಿಳುವಳಿಕೆ ಕ್ಯೆ ಇದರಿಂದ ಘೋಷಿಸಲ್ಪಟ್ಟಿರುತ್ತೆ :—

ಚುನಾಯಿಸಿದವರ ಹೆಸರು.	ಚುನಾಯಿಸಲ್ಪಟ್ಟವರ ಹೆಸರು	ಕಸಬು.
ಬೆಂಗಳೂರ ಸಿಟಿ ಮ್ಯೂನಿಸಿಪಲ್ ಬೋರ್ಡ್,	1. ಮೆ॥ ಬಿ. ಗಂಗಯ್ಯನವರು ...	ಪೇಷ್ಕರ್ ಸಬ್ ರಿಜಿಸ್ಟ್ರಾರ್ರು ಮತ್ತು ಜಮೀನ್ದಾರ್ರು.
	2. ,, ಬಿ. ಕೆ. ಗರುಡಾಚಾರ್ರು .	ವರ್ತಕರು ಮತ್ತು ಜಮೀನ್ದಾರ್ರು.
	3. ,, ಬಿ. ರಾಮಭದ್ರಯ್ಯನವರು	ವರ್ತಕರು.
	4. ,, ಬಿ. ಅಪ್ಪಾಜಯ್ಯನವರು ...	ಡಿಟೋ
ಡಿಸ್ಟ್ರಿಕ್ಟ್ ಫಂಡು ಬೋರ್ಡ್ ..	1. ,, ಮಸ್ತ್ಖಾನ್‌ಸಾಬರು .	ಜಮೀನ್ದಾರ್ರು, ಚನ್ನಪಟ್ಟಣ.
	2. ,, ರಾಮಚಂದ್ರಪ್ಪನವರು ..	ಡಿಟೋ ದೇವನಹಳ್ಳಿ.
ಆನೇಕಲ್ ಮ್ಯೂನಿಸಿಪಾಲಿಟಿ ..	1. ,, ಚಿಕ್ಕ ನಂಜುಂಡನವರು ...	ಸಾಹುಕಾರ್ರು.
ದೇವನಹಳ್ಳಿ ಡಿಟೋ ..	1. ,, ಡಿ. ಶ್ರೀನಿವಾಸ ಗೋಪಾಲಾಚಾರ್ರು ...	ಮ್ಯೂನಿಸಿಪಲ್ ಮೆಂಬರು.
ಕೆಂಗೇರಿಸುಪೇಟೆ ಡಿಟೋ ..	1. ,, ನೇಮಾ ವರದಯ್ಯನವರು ..	ಡಿಟೋ
ಚನ್ನಪಟ್ಟಣ ಡಿಟೋ .	1. ,, ಯಾಜಮಾನ್ ನರಸಿಂಹಯ್ಯನವರು	ಡಿಟೋ
ಬೆಂಗಳೂರ ಲಾ ಸಂಘ ..	1. ,, ಜೆ. ಸಿ. ಎಸ್. ಲಾರೆನ್ಸ್, ಬಿ. ಎ., ಎಲ್. ಎಲ್. ಬಿ., ಯವರು.	ಅಡ್ವೋಕೇಟರು.

ತಾರೀಖು 11ನೆ ಅಕ್ಟೋಬರ 1904.

ನಂ. ಜ. 2021 - ಜ. ಮಿ. 187—1, ಎಕ್ಸಸ್ಟ್ರಾ ಅಸಿಸ್ಟೆಂಟ್ ಕಮೀಷನರಾದ ಮೆ॥ ಬಿ. ರಾಮಕೃಷ್ಣರಾಯರು ಅರಮನೆ ಸಿಬ್ಬಂದಿಯ ಚಾರ್ಜನ ಆಫಿಸರಾಗಿರಲಿಕ್ಕೆ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 19ನೆ ಸೆಪ್ಟಂಬರ 1904.

ನಂ. ರೆ. 2500 - ಮಿ. 248—04 - 3, ಸಂ 1891ನೆ ಇಸವಿಯ 7ನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಶನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಸ್ಮಶಾನ ಕ್ಕೋಸ್ಕರ ಬೇಕಾಗಿರುತ್ತೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್ಷನ್‌ಗಳನುಸರಿಸಿ ಶಿವಮೊಗ್ಗಾ ಡಿವಿಜನಿನ ಅಸಿಸ್ಟೆಂಟ್ ಕಮೀಷನರು ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರ, ಹೆಸರು.	ಸರ್ವೆ ನಂಬರ.	ಎಕರೆ.	ಜಮೀನಿನ ತಪಶೀಲು. ಬೀಡಿದ ಜಮೀನು.	ಬೇರೇಜು.	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಶಿವಮೊಗ್ಗೆ	ಶಿವಮೊಗ್ಗೆ	ಹೊಳೆಹೊನ್ನೂರು	ಕೆಂಚಿಕ್ಕೆ	ಖಾಸಗಿಯವರು ಲಿಂಗಪ್ಪನವರ ಸಾಹೇಬರು	25	ಮಿಸಲ್	ಎಕರೆ. ಗುಂಟೆಗಳು. 3 9	ಎಕರೆ. ಗುಂಟೆಗಳು. 3 9	ಸರ್ವೆ ನಂ. 26	ಸರ್ವೆ ನಂ. 24	ಹಾಂಬಿದಗಡ್ಡೆ ಗಾಜನೂರ ಸರ್ವೆ ನಂ. 27 ಮ 28	ಬಸ್ತಿ ಗಂಗಾ ಹೊಳೆಗಾವ ಬಸ್ತಿ

ತಾರೀಖು 17ನೆ ಸೆಪ್ಟಂಬರ್ 1904.

ನಂ. ರೆ. 2486—ವಿ. 249—04-3, ಸನ್ 1894ನೆ ಇಸವಿಯ 7ನೆ ನಂಬರಿ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಬೌರಿಂಗ್‌ಪೇಟೆ ತಾಲ್ಲೂಕು ರಾಮಸಾಗರ ಕೆರೆಯ ನಾಲಾ ಯಡಭಾಗದ ಕಟ್ಟೆಯನ್ನು ಬಡಾಯಿಸುವ ಬಗ್ಗೆ ಬೇಕಾಗಿರುತ್ತವೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯೂಟಿ ಕಮೀಷನರವರು ಸದರಿ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರ್ರ ಹೆಸರು.	ತಪಶೀಲ್. ನಂಬರ್.	ವಿವರ.	ಬೆಲೆ ಎ.	ಗು.	ರೂ.	ಆ.	ಪೈ.	ಬೇಕಾಗಿರುವ ಜಮೀನು. ವಿಸ್ತೀರ್ಣ ಎ.	ಗು.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	ಪರಾ.
ಕೋಲಾರ	ಬೌರಿಂಗ್‌ಪೇಟೆ	ರಾಮಸಾಗರ	ವೆಂಗಸಂದ್ರ ...	ಚಿಕ್ಕಮುನಿವೆಂಕಟಪ್ಪ ...	134	ತರಿ	0	24	4	0	0	0	12	ಸ. ನಂ. 132	ನಾಲಾ	ಸ. ನಂ. 132ರ ಭಾಗ	ಸ. ನಂ. 132ರ ಭಾಗ	
					135	ಡಿಟೋ	1	32	11	4	0	0	11	ನಾಲಾ	ಸ. ನಂ. 138	ಸ. ನಂ. 135ರ ಭಾಗ	ಸ. ನಂ. 135ರ ಭಾಗ	
					1 141	ಡಿಟೋ	0	26	4	0	0	0	2	ಸ. ನಂ. 112	ಸ. ನಂ. 135	ಸ. ನಂ. 141ರ ಭಾಗ	ನಾಲಾ	
					50	ಖುಷ್ಕಿ	2	9	4	4	0	0	3½	ಸ. ನಂ. 50ರ ಭಾಗ	ಸ. ನಂ. 171	ಸ. ನಂ. 50ರ ಭಾಗ	ಸ. ನಂ. 50ರ ಭಾಗ	
							5	14	23	8	0	0	28½					
				ರಾಮಚಂದ್ರರಾವ ...	163	ತರಿ	2	17	14	0	0	0	11	ನಾಲಾ	ಸ. ನಂ. 162	ನಾಲಾ	ಸ. ನಂ. 163ರ ಭಾಗ	
				ಶ್ರೀಲಕ್ಷ್ಮೀನಾರಾಯಣಸ್ವಾಮಿ	162	ತರಿ	2	4	13	0	0	0	11	ಸ. ನಂ. 163	ನಾಲಾ	ಡಿಟೋ	ಸ. ನಂ. 162ರ ಭಾಗ	ಇನಾಂ
			ಅನ್ನಸಾಗರ ...	ಶೀನಪ್ಪ ...	7 2	ಬಾಗಾಯತು	1	8	3	12	0	0	14	ನಾಲಾ	ಸ. ನಂ. 8	ಸ. ನಂ. 7ರ ಭಾಗ	ನಾಲಾ	
			ರಾಮಸಾಗರ ...	ಗಂಗಲಗ ...	74 1	ತರಿ	1	35	11	4	0	0	2	ಸ. ನಂ. 65	ಸ. ನಂ. 71 ವ 73	ಸ. ನಂ. 74ರ ಭಾಗ	ಸ. ನಂ. 74ರ ಭಾಗ	
			ಸರ್ವೆ ಇನಾಂ ರಾಯಸಂದ್ರ.	ಜೋಡಿದಾರ್ ...	..	ತರಿ	..		..			0	3	ಸುತ್ತಲೂ ಇನಾಂ ಗ್ರಾಮ.				
				ಒಟ್ಟು ಜುಮ್ಲಾ ...			..					1	25½					

1549

ತಾರೀಖು 20ನೆ ಸೆಪ್ಟಂಬರ್ 1904.

ನಂ. ರೆ. 2576—ಮಿ. 268—01—3, ಸನ್ 1894ನೆ ಇಸವಿ ಸಂ VIIನೆ ನಂಬರಿ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸಂಧಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ ಇದರಡೀ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಬೋರಿಂಗ್ ಪೇಟೆ ತಾಲ್ಲೂಕಿನಲ್ಲಿರುವ ಬೇತಮಂಗಲ ಹೊಸಗ್ರಾಮ ನಿವೇಶನವನ್ನು ಬಡಾಯಿಸುವ ಬಗ್ಯೆ ಬೇಕಾಗಿರುತ್ತವೆ. ಮತ್ತು ಬೇತಮಂಗಲದಲ್ಲಿರುವ ಸ್ಪೆಷಿಯಲ್ ಅಸಿಸ್ಟೆಂಟ್ ಸೆಟ್ಲಮೆಂಟ್ ಆಫಿಸರಾದ ಮಿ॥ ಎಸ್. ನಾರಾಯಣರಾಯರು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ಮ 7ನೆ ಸೆಕ್ಷನ್‌ಗಳನುಸರಿಸಿ ಸದರಿ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಕೊಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಪಂಡರ ನಂ.	ಹೋಬಳಿಯ ಹೆಸರು.	ಗ್ರಾಮದ ಹೆಸರು.	ಖಾತೆದಾರ್ರ ಹೆಸರು.	ಜಮೀನು. ಸರ್ವೆ ನಂ.	ವಿವರ.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ತಗದುಕೊಳ್ಳಬೇಕಾಗಿರುವ ಜಮೀನು. ವಿಸ್ತೀರ್ಣ. ಎ.	ಗು.	ಚೆಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1			ಪಾಪ ಬಿನ್ ರಾಮ ..	542/1	ಖುಷ್ಕಿ ...	2	22	4	4	0	..	4	ಸರ್ವೆ ನಂ. 543ರ ಭಾಗ	ಸರ್ವೆ ನಂ. 542ರ ಭಾಗ	ಸರ್ವೆ ನಂ. 542ರ ಭಾಗ	ಸರ್ವೆ ನಂ. 542ರ ಭಾಗ
2			ರಾಣೋಜಿ ಬಿನ್ ರಾಮೋಜಿ ಗುರುವನ ಅನುಭವದಲ್ಲಿದೆ.	542/2	ಡಿಟೋ ...	2	21	4	4	0	1	3	ಡಿಟೋ	ಡಿಟೋ	ಡಿಟೋ	ಡಿಟೋ
3			ಸಿಲೆಪಾಷಾ ..	542/3	ಡಿಟೋ ...	2	12	3	8	0	1	2	ಡಿಟೋ	ಡಿಟೋ	ಸರ್ವೆ ನಂ. 543ರ ಭಾಗ	ಡಿಟೋ
4	ಬೇತಮಂಗಲ	ಬೇತಮಂಗಲ	ಬೆಲುವನಹಳ್ಳಿ ವೆಂಕಟಸ್ವಾಮಿ (ಧೋಬಿ ಮುನಿಸ್ವಾಮಿಯ ಅನುಭವದಲ್ಲಿದೆ).	543/1	ಡಿಟೋ ..	2	4	3	4	0	...	3	ಡಿಟೋ	ಸರ್ವೆ ನಂ. 543	ಡಿಟೋ	ಡಿಟೋ
5			ಕೋಡಿಹಳ್ಳಿ ಹನುಮಪ್ಪ ..	543/2	ಡಿಟೋ ...	1	23	2	4	0	1	9	ಡಿಟೋ	ಸರ್ವೆ ನಂ. 550ರ ಭಾಗ	ಸರ್ವೆ ನಂ. 544	ಸರ್ವೆ ನಂ. 542
6			ಮೂರ್ತಿಗನ ಮುನಿವೆಂಕಟ ..	548/1	ಡಿಟೋ ...	2	35	4	4	0	1	6	ಸರ್ವೆ ನಂ. 547	ಸರ್ವೆ ನಂ. 548ರ ಭಾಗ	ಸರ್ವೆ ನಂ 548ರ ಭಾಗ	ಸರ್ವೆ ನಂ. 549
7			ಮುನಿಗ ಬಿನ್ ತಿಪ್ಪಂಣ ..	551/1	ಡಿಟೋ ...	5	...	7	8	0	...	17	ಸರ್ವೆ ನಂ. 550 ಮ 549	ಸರ್ವೆ ನಂ. 551ರ ಭಾಗ	ಸರ್ವೆ ನಂ 548	ಸರ್ವೆ ನಂ. 551ರ ಭಾಗ
8			ಸಂಬ್ಬರಾಜು ಬಿನ್ ಅಕ್ಕಲರಾಜು (ನೀರಗಂಟಿ ವೆಂಕಟ್ರಾಮನ ಅನುಭವದಲ್ಲಿದೆ).	551/2	ಡಿಟೋ ..	..	24	1	0	0	..	14	ಸರ್ವೆ ನಂ. 550	ಡಿಟೋ	ಸರ್ವೆ ನಂ. 551ರ ಭಾಗ	ಸರ್ವೆ ನಂ. 551ರ ಭಾಗ
				ಜುಮ್ಲಾ ...		19	21	30	4	0	5	18				

ತಾರೀಖು 6ನೆ ಅಕ್ಟೋಬರ್ 1904.

ನಂ. ರೆ. 3268—ವಿ. 317-04-2, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರಗ್ಯುಲೇಷನಿನ 6ನೆಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಕುಣಿಗಲ್ ತಾಲ್ಲೂಕಿನಲ್ಲಿರುವ ತಂಕೆರೆ ಗ್ರಾಮ ನಿವೇಶನವನ್ನು ಬಡಾಯಿಸೋಣದರಿಂದ ಮನೆಗಳನ್ನು ಕಟ್ಟುವ ಬಗ್ಯೆ ಬೇಕಾಗಿರುತ್ತೆದೆ. ತುಮಕೂರ ಡಿಸ್ಟ್ರಿಕ್ಟಿನ ಎರಡನೇ ಜನರಲ್ ಅಸಿಸ್ಟೆಂಟ್ ಕಮೀಷನರಾದ ಮೌ॥ ಪಿ. ಶ್ರೀನಿವಾಸರಾಯರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ನಂಬರ್.	ಗ್ರಾಮದ ಹೆಸರು.	ಖಾತೇದಾರರ ಹೆಸರು.	ಸರ್ವೆ ನಂ.	ಆಕಾರ	ತೆಗೆದುಕೊಳ್ಳಬೇಕಾಗಿರುವ ಜಮೀನು.		ಚಕ್ಕುಬಂದಿ.			
					ವಿಸ್ತೀರ್ಣ.	ಆಕಾರ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			ಎ. ಗು.	ರೂ. ಆ. ಪೈ.	ಎ. ಗು.	ರೂ. ಆ. ಪೈ.				
1	ಕುಣಿಗಲ್ ತಾಲ್ಲೂಕಿನ ತಂಕೇಕೆರೆ ಗ್ರಾಮದ ಸರ್ವೆ ನಂ. ೩೯ ಘಟಕ ೩ರ ಪೈಕಿ	ಹನುಮಾಷೀ ಕರಿಯ	ಖುಷ್ಕಿ ಅನುಭವದಲ್ಲಿದೆ. ೨ ೮	೩ ೮ ೦	... 26	0 11 0	ಪೂರ್ವ ಘಟಕ ಜಮೀನಿನ ಸರ್ವೆ ನಂ. ೩೯	ಹಿಡುವೋ	ಪಶ್ಚಿಮ ಘಟಕ ಜಮೀನಿನ ಸರ್ವೆ ನಂ. ೩೯	ತಂಕೇಕೆರೆಯ ಗ್ರಾಮ ನಿವೇಶನ

ತಾರೀಖು 6ನೆ ಅಕ್ಟೋಬರ್ 1904.

ನಂ. ರೆ. 3270—ವಿ. 322—04-3, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನು ಚಾಮರಾಜನಗರ ತಾಲ್ಲೂಕಿನಲ್ಲಿರುವ ಕೂಡೇರು ಗ್ರಾಮದ ಗ್ರಾಮ ನಿವೇಶನಕ್ಕೋಸ್ಕರ ಬೇಕಾಗಿರುತ್ತದೆ ಮತ್ತು ಮೇಲ್ಕಂಡ ರಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಡೆಪ್ಯುಟಿ ಕಮೀಷನರವರು ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ : —

ಡಿಸ್ಟ್ರಿಕ್ಟು. ತಾಲ್ಲೂಕು.	ಗ್ರಾಮದ.	ಹಿಡುವಳಿದಾರರ ಹೆಸರು.	ಸರ್ವೆ ನಂ.			ತೆಗದುಕೊಳ್ಳಬೇಕಾಗಿರುವ ಸ್ವತ್ತಿನ ವಿವರ.		ಚಕ್ಕುಬಂದಿ.			
			ನಂ.	ಖುಷ್ಕಿ ಯಾ ತರಿ.	ವಿಸ್ತೀರ್ಣ ಮತ್ತು ಆಕಾರ.	ವಿಸ್ತೀರ್ಣ.	ಆಕಾರ.	ಪೂರ್ವ.	ಪಶ್ಚಿಮ.	ದಕ್ಷಿಣ.	ಉತ್ತರ.
ಮೈಸೂರು ಚಾಮರಾಜನಗರ ಸಂತೇಮಾದಹಳ್ಳಿ ಹೋಬಳಿಯಲ್ಲಿರುವ ಕೂಡೇರು.		ಸುಂಕದಮಾದನ ಮಗ ಘೋಗ.	ಸರ್ವೆ ನಂ. 275, ಸೆಟ್ ನಂ. 8	ಖುಷ್ಕಿ	ವಿಸ್ತೀರ್ಣ 10 ಗುಂಟೆಗಳು. ಆಕಾರ 4 ಅಣೆಗಳು.	10 ಗುಂಟೆಗಳು.	4 ಅಣೆಗಳು.	ಕೂಡೇರುವಿನ ಗಾಂತಾಣ.	ಕೂಡೇರುವಿನ ಗಾಂತಾಣ.	ಸರ್ವೆ ನಂ. 275.	ಕೂಡೇರುವಿನ ಗಾಂತಾಣ.

ತಾರೀಖು 7ನೆ ಅಕ್ಟೋಬರ್ 1904.

ನಂ. ರೆ. 3387—ಲ್ಯಾ. ರೆ 161—04—2, ಹೆಗ್ಗಡದೇವನಕೋಟೆ ತಾಲ್ಲೂಕಿನ ಅಮಲ್‌ದಾರ್ರಾದ ಮೌ॥ ಮಹಮ್ಮದ್ ಓಬೀದುಲ್ಲಾ ಯವರಿಗೆ 1904ನ ಮೇ 24ನೆ ಮಾಸ್ತಂ ರೆ. 3591—ರೆ. ಫೈ. 33—03ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 7 ದಿನಗಳ ಪ್ರಿವಿಲೇಜ್ ರಜಾ ರದ್ದು ಮಾಡಲ್ಪಟ್ಟು ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 25 ದಿನಗಳ ಪ್ರಿವಿಲೇಜ್ ರಜಾ ಈಗ ಕೊಡಲ್ಪಟ್ಟಿರುತ್ತೆ.

2. ಹೆಗ್ಗಡದೇವನಕೋಟೆಯ ತಾಲ್ಲೂಕು ಷಿರಿಸ್ತೇದಾರ್ರಾದ ಕೆ. ರಂಗಣ್ಣನವರು ಸದರೀ ಅಮಲ್‌ದಾರ್ರು ಮೇಲ್ಕಂಡ ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ತಾಲ್ಲೂಕಿನ ಚಾರ್ಜಿನಲ್ಲಿರತಕ್ಕದ್ದು ಮತ್ತು ಮೂರನೇ ಕ್ಲಾಸಿನ ಮ್ಯಾಜಿಸ್ಟ್ರೇಟರವರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

ತಾರೀಖು 7ನೆ ಅಕ್ಟೋಬರ 1904.

ನಂ. ರೆ. 3390—ಲ್ಯಾ ರೆ. 42-04—4, ಸಂಸ್ಥಾನ ಕೆಲಸಕ್ಕೋಸ್ಕರ ಅಮಲ್ದಾರ್ರುಗಳ ಇದರಡೀ ಕಂಡ ನೇಮಣೂಕಿಯು ಮತ್ತು ವರ್ಗಾವರ್ಗಿಗಳು ಹುಕುಂ ಮಾಡಲ್ಪಟ್ಟಿರುತ್ತವೆ :—

ಹೆಸರು.	ಎಲ್ಲಿಂದ.	ಎಲ್ಲಿಗೆ.	ಷರಾ.
1. ಮೆ॥ ವೆಂಕಟರಾಮಯ್ಯನವರು ..	ನಂಜನಗೂಡು	ಮೈಸೂರು	
2. ,, ಎ. ಕೃಷ್ಣಸ್ವಾಮಿ ಅಯ್ಯಂಗಾರ್, ಬಿ. ಎ., ಯವರು.	ಶ್ರೀರಂಗಪಟ್ಟಣ	ನಂಜನಗೂಡು	
3. ,, ಕೃಷ್ಣಾಜಿನಾರಾಯಣಯವರು ...	ಕೃಷ್ಣರಾಜಪೇಟೆ	ಶ್ರೀರಂಗಪಟ್ಟಣ	
4. ,, ಎಂ. ರಂಗನಾಥರಾವ್, ಬಿ. ಎ., ಯವರು.	ಅರಕಲಗೂಡು	ಕೃಷ್ಣರಾಜಪೇಟೆ	ರಜಾದಿಂದ ವಾಪಸು ಬಂದ ನಂತರ ಕೆಲಸಕ್ಕೆ ದಾಖಲಾಗತಕ್ಕದ್ದು.
5. ,, ಎ. ರಾಮರಾವ್, ಬಿ. ಎ., ಬಿ. ಎಲ್., ರೆವಿನ್ಯೂ ಪ್ರೊಬೇಷನರವರು.	...	ಡಿಟೋ	ಮೆ॥ ರಂಗನಾಥರಾಯರು ರಜಾದಲ್ಲಿರುವ ಕಾಲದಲ್ಲಿಯೂ ಮತ್ತೊಂದು ಹುಕುಂ ಕೊಡುವ ಪರಿಯಂತ ಆಕ್ಟಿಂಗ್ ತರೀಕು ಕೆಲಸ ನೋಡತಕ್ಕದ್ದು.

ತಾರೀಖು 9ನೆ ಅಕ್ಟೋಬರ 1904.

ನಂ. ರ. 3480—ಲ್ಯಾ. ರ. 185—04—2, ರೆವಿನ್ಯೂ ಕಮೀಷನರವರ ಆಫೀಸಿನ ಹೆಡ್ ಕ್ಲರ್ಕರಾದ ಕೆ. ಶ್ರೀನಿವಾಸರಾವ್, ಬಿ. ಎ., ಯವರು ತೀರ್ಥಹಳ್ಳಿ ತಾಲ್ಲೂಕಿನ ಅಮಲ್ದಾರ್ ವ ಮಾರನೇ ಕ್ಲಾಸಿನ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕು ಮೊಕರರ್ರಾಡಲ್ಪಟ್ಟಿರುತ್ತಾರೆ. ಕೂಡಲೆ ಕೆಲಸಕ್ಕೆ ದಾಖಲಾಗತಕ್ಕದ್ದು.

ತಾರೀಖು 12ನೆ ಅಕ್ಟೋಬರ 1904.

ನಂ. ಫೈ. 2310—ಸಾ. ರ. 32—04-3, ಮೈಸೂರ ಸರ್ವಿಸ್ ರೆಗ್ಯುಲೇಷನಗಳ 188ನೆ ಆರ್ಟಿಕಲ್ ಅನುಸರಿಸಿ ಶಿವಮೊಗ್ಗ ಡಿವೀಜನಿನ ಎಕ್ಸೈಜ್ ಅಸಿಸ್ಟಂಟ್ ಕಮೀಷನರಾದ ಮೆ॥ ಬಿ. ಶಾಮಣ್ಣ, ಬಿ. ಎ., ಎಲ್. ಸಿ. ಇ., ಯವರಿಗೆ ಅವರು ಉದ್ಯೋಗಿಸಿಕೊಳ್ಳುವ ತಾರೀಖಿನಾರಭ್ಯ 2 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಶಿವಮೊಗ್ಗ ಡಿಸ್ಟ್ರಿಕ್ಟಿನ ಪ್ರೊಬೇಷನರಿ ಎಕ್ಸೈಜ್ ಅಸಿಸ್ಟಂಟ್ ಕಮೀಷನರಾದ ಮೆ॥ ಹಸನ್ ಅಲಿಯವರ ನೌಕರಿಯು ಮೆ॥ ಬಿ. ಶಾಮಣ್ಣನವರಿಂದ ಚಾರ್ಜು ತೆಗದುಕೊಳ್ಳುವ ಬಗ್ಗೆ ಎಕ್ಸೈಜ್ ಇಲಾಖೆಯ ತಾಬೆದುಲ್ಲಿ ಇಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬೆ,

ಬಿ. ಕೆ. ವೆಂಕಟವರದಯ್ಯಂಗಾರ್,

ಜನರಲ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ ಸೆಕ್ರೆಟರಿ.

1523

91

ಮೈಸೂರ ಗೆಜೆಟ್.

ನಂ. 39.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 41.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 13, ಸಂ 1904.

IIನ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ಸಂದಲ್ ಹರಾಜು ನೋಟಿಫಿಕೇಷನ್.

ತಾರೀಖು 18ನೆ ಆಗಸ್ಟು 1904ನೆ ಇಸವಿ.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲೆಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಠಿಗಳಲ್ಲಿ ಆದರದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರುಗಳಿಂದ ನಡಿಸಲ್ಪಡುವದು :—

ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.			ಸೊಪ್ಪು ಪೆಗಳು ಸ್ಟೆಲ್ಲಾ ಕಡಿಗೆ.	ಷರಾ.
ಮೈಸೂರು ...	ಹುಣಸೂರು ...	1904ನೆ ಇಸವಿ ನವಂಬರ್ ತಾರೀಖು		19	500	
ಡಿಟೋ	ಶ್ರೀರಂಗಪಟ್ಟಣ	ಡಿಟೋ	ಡಿಟೋ	23	240	
ಬೆಂಗಳೂರು ...	ಬೆಂಗಳೂರು ..	ಡಿಟೋ	ಡಿಟೋ	26	120	ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟು ಸಂದಲ್ ಕೇರಿರುತ್ತೆ.
ಹಾಸನ ...	ಹಾಸನ ..	1904ನೆ ಇಸವಿ ಡಿಸೆಂಬರ್ ತಾರೀಖು		1	200	
ಕಡೂರು ..	ಚಿಕ್ಕಮಗಳೂರು ..	ಡಿಟೋ	ಡಿಟೋ	5	200	
ಡಿಟೋ ..	ತರೀಕೆರೆ ..	ಡಿಟೋ	ಡಿಟೋ	8	250	
ಶಿವಮೊಗ್ಗ ...	ಶಿವಮೊಗ್ಗ ...	ಡಿಟೋ	ಡಿಟೋ	12	440	ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟು ಸಂದಲ್ ಕೇರಿರುತ್ತೆ.
ಡಿಟೋ ..	ಸಾಗರ ..	ಡಿಟೋ	ಡಿಟೋ	15	175	
ಡಿಟೋ ..	ತೀರ್ಥಹಳ್ಳಿ ..	ಡಿಟೋ	ಡಿಟೋ	19	175	ಕಡೂರು ಡಿಸ್ಟ್ರಿಕ್ಟು ಸಂದಲ್ ಕೇರಿರುತ್ತೆ.

2. ಪ್ರತಿಬಂದು ಕೋಠಿಯಲ್ಲಿಯು ಹರಾಜು ಮಾಡಲ್ಪಡುವ ಸಂದಲ್ ಲಾಟು ಮತ್ತು ಮೊತ್ತ ವಗೈರೆ ತಪಶೀಲು ಐಯಿಂದ ಇದೇ ಸಾಲ್ ಅಕ್ಟೋಬರು ಆಖೈರು ವಳಗಾಗಿ ಪ್ರಾಯಿಷ್ ಮಾಡಲ್ಪಡುತ್ತದೆ.

ಎಂ. ಮುತ್ತಣ್ಣ,
ಕನ್‌ಸರ್ವೇಟರ್ ಆಫ್ ಫಾರೆಸ್ಟ್ಸ್ ಇನ್ ಮೈಸೂರು.

ನೋಟಿಸ.

1904ನೆ ಇಸವಿ ಸೆಪ್ಟಂಬರ ತಿಂಗಳು 22ನೆ ತಾರೀಖಿನ IIನೆ ಭಾಗದ 544ನೆ ಪುಟದಲ್ಲಿ ಮೈಸೂರು ಡಿಸ್ಟ್ರಿಕ್ಟ ಸ್ಟೇಟ ಮತ್ತು ಡಿಸ್ಟ್ರಿಕ್ಟ ಫಾರೆಸ್ಟುಗಳ ಪಸಾರೆ ಜಿನಸಿ ಜವಾಬಣೆ ಹಕ್ಕನ್ನು ಹರಾಜು ಮಾಡಲ್ಪಡುತ್ತದೆಂದು ಘೋಷಿಸಾಗಿರುವದು ಸರಿಯಾಷ್ಟೆ. ಆದರೆ ಅವುಗಳಲ್ಲಿ ಮಳವಳ್ಳಿ ತಾಲ್ಲೂಕಿನ ಪಸಾರೆ ಜಿನಸಿ ಜವಾಬಣೆ ಹಕ್ಕನ್ನು 1904ನೆ ಇಸವಿ ಅಕ್ಟೋಬರ 25ನೆ ತಾರೀಖಿನಲ್ಲಿ ಮಳವಳ್ಳಿ ತಾಲ್ಲೂಕು ಕಚೇರಿಯಲ್ಲಿ ಅಮಲ್ದಾರ್‌ರವರ ಮತ್ತು ರೇಂಜಾಫಿಸರವರ ರೂಬರೂ ಹರಾಜು ಹಾಕಲ್ಪಡುತ್ತಾಗಿ ಇದರಿಂದ ಎಲ್ಲರಿಗೂ ತಿಳಿಸಲ್ಪಟ್ಟಿದೆ.

ಷರತ್ತು :— 37ನೆ ನಂಬರ ಮೈಸೂರು ಗೆಜೆಟ IIನೆ ಭಾಗದ 533ನೆ ಪುಟದಲ್ಲಿ 1904ನೆ ಇಸವಿ ಸೆಪ್ಟಂಬರ 2ನೆ ಮಾರ್ಕುಂ ನೋಟಿಸನ್ನು ನೋಡಿ.

ಸಿ ಅಪ್ಪಯ್ಯ,
ಡಿಸ್ಟ್ರಿಕ್ಟ ಫಾರೆಸ್ಟ ಆಫಿಸರ, ಮೈಸೂರು ಡಿಸ್ಟ್ರಿಕ್ಟ.

ಕೋಲಾರ ಡಿಸ್ಟ್ರಿಕ್ಟ.

ತಾರೀಖು 7ನೆ ಸೆಪ್ಟಂಬರ 1904ನೆ ಇಸವಿ.

* ಮಾರ್ಜಿನ್ನಲ್ಲಿ ನಮೂದುಮಾಡಿ ಇರತಕ್ಕ ಇನಾಂ ಗ್ರಾಮಗಳು, ಸರ್ಕಾರಕ್ಕೆ ಬರಬೇಕಾದ ಬಾಕಿ ಮೊಬಲಗಿಗೋಸ್ಕರವಾಗಿ ತಾಲ್ಲೂಕ ಅಮಲ್ದಾರ್ ಕಛೇರಿಯಲ್ಲಿ 1904ನೆ ಇಸವಿ ಅಕ್ಟೋಬರ ಮಾಹೆ 31ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

* 1. ಜೋಡಿ ವೀರಶೆಟ್ಟಿ ಹಳ್ಳಿ	...	ಆವನಿ ಹೋಬಳಿ ಮುಳಬಾಗಲ ತಾ॥
2. ಬಾಯಂಗುತ್ತಾ ಕುಂಮರಕಂಟೆ	..	
3. ಕಟೇ ಸ್ವರಸಂದ್ರ		ನರಸಾಪುರದ ಹೋಬಳಿ ಮಾಲೂರು ತಾ॥

(ಹೆಚ್ಚು ಕಡಿಕೆಲ ಬಗ್ಗೆ 1904ನೆ ಮಾರ್ಕುಂ 38ನೆ ನಂಬರ ಮೈಸೂರ ಗೆಜೆಟ್ಟನ 2ನೆ ಭಾಗದ 546, 548, 547ನೆ ನಂಬರ ಪೇಜು ನೋಡತಕ್ಕದ್ದು.)

ತಾರೀಖು 16ನೆ ಸೆಪ್ಟಂಬರ 1904ನೆ ಇಸವಿ.

* ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಕೋಲಾರ ತಾಲ್ಲೂಕಿಗೆ ಸೇರಿದ ಇನಾಂ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಬಾಕಿ ಮೊಬಲಗಿಗೋಸ್ಕರವಾಗಿ ತಾಲ್ಲೂಕು ಅಮಲ್ದಾರ್ ಕಛೇರಿಯಲ್ಲಿ 1904ನೆ ಇಸವಿ ನವೆಂಬರ ಮಾಹೆ 1ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

* 1. ಬಾಯಂಗುತ್ತಾ ಗಿರದಂಪಾಟೆ	ಮೇವಾಗಲ್ ಹೋಬಳಿ.
2. ಬಾಯಂಗುತ್ತಾ ಬಾಲಮಾದೇನಹಳ್ಳಿ	
3. ಜೋಡಿ ಪಾಪನಹಳ್ಳಿ	ವಕ್ಕಲೇರಿ ಹೋಬಳಿ.

(ಹೆಚ್ಚು ಕಡಿಕೆಲ ಬಗ್ಗೆ 1904ನೆ ಮಾರ್ಕುಂ 39ನೆ ನಂಬರ ಮೈಸೂರ ಗೆಜೆಟ್ಟನ 2ನೆ ಭಾಗದ 560, 561, 562, 563ನೆ ನಂಬರ ಪೇಜು ನೋಡತಕ್ಕದ್ದು.)

ತಾರೀಖು 22ನೆ ಸೆಪ್ಟಂಬರ 1904ನೆ ಇಸವಿ.

ಕೋಲಾರ ತಾಲ್ಲೂಕಿಗೆ ಸೇರಿದ * ಮಾರ್ಜಿನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಬಾಕಿ ಮೊಬಲಗಿಗೋಸ್ಕರವಾಗಿ ತಾಲ್ಲೂಕು ಅಮಲ್ದಾರ್ ಕಛೇರಿಯಲ್ಲಿ 1904ನ ಇಸವಿ ನವೆಂಬರ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

* 1. ಬಾಯಾಂಗುತ್ತಾ ಜೊಕ್ಕಹಳ್ಳಿ	ವಕ್ಕಲೇರಿ ಹೋಬಳಿ.
2. ಜೋಡಿ ತಲಗುಂದ	
3. ಬಾಯಂಗುತ್ತಾ ಕಾರೇಹೊಸಹಳ್ಳಿ	ಹುತ್ತೂರ ಹೋಬಳಿ.

(ಹೆಚ್ಚು ಕಡಿಕೆಲ ಬಗ್ಗೆ 1904ನೆ ಮಾರ್ಕುಂ 40ನೆ ನಂಬರ ಮೈಸೂರ ಗೆಜೆಟ 2ನೆ ಭಾಗದ 575, 576, 574ನೆ ನಂಬರ ಪೇಜು ನೋಡತಕ್ಕದ್ದು.)

ನೋಟಿಸ.

ತಾರೀಖು 4ನೆ ಮಾಹೆ ನವೆಂಬರ 1904ನೆ ಇಸವಿ.

ಗವರ್ನಮೆಂಟ 1903ನೆ ಇಸವಿ ನವೆಂಬರ 13ನೆ ಮಾರ್ಕುಂ 1356—65ನೆ ನಂಬರ ಪ್ರೊಸಿಡಿಂಗ್ಸ ಪ್ರಕಾರ ತಾಲ್ಲೂಕು ಮತ್ತು ಡಿಸ್ಟ್ರಿಕ್ಟ ಆಫೀಸುಗಳಲ್ಲಿ ಬಿಲೆ ಇಟ್ಟಿರುವ ನಿಷ್ಪ್ರಯೋಜನವಾದ ಮತ್ತು ಅಮುಖ್ಯವಾದ ರೆವಿನ್ಯೂ ರಿಕಾರ್ಡುಗಳನ್ನು ನಾಶಪಡಿಸಲ್ಪಟ್ಟಿವೆ. ಯಾರಾದರು ದಸ್ತೈವಜುಗಳು ವಗೈರೆ ರಿಕಾರ್ಡುಗಳು ದಾಖಲೆ ಬಗ್ಗೆ ಹಾಜರ್ಮಾಡಿದ್ದರೆ ಅಂಥವುಗಳನ್ನು 1904ನೆ ಇಸವಿ ಡಿಸೆಂಬರ 31ನೆ ತಾರೀಖಿನ ಪ್ರೊಳಗಾಗಿ ಸಂಬಂಧಪಟ್ಟ ಆಫಿಸರಿಗೆ ಅಪ್ಲಿಕೇಷನ ಮಾಡಿ ಡಿಟೋ ದಸ್ತೈವಜುಗಳನ್ನು ವಾಪಸು ಪಡೆಯಬಹುದು. ಅಲ್ಲದೆ ಮೇಲ್ಕಂಡ ರಿಕಾರ್ಡಿನ ಈಪಿ ಬೇಕಾಗಿದ್ದರೂ ಡಿಟೋ ತಾರೀಖಿನ ಒಳಗಾಗಿ ಖಾಯಿಷ ಮಾಡಿ ಪಡೆಯಬಹುದು.

ಕೆ. ಪಿ. ಪುಟ್ಟಣ್ಣಚೆಟ್ಟಿ,
ಡೆಪ್ಯುಟಿ ಕಮಿಷನರ.

1525

ಹಾಸನ ಡಿಸ್ಟ್ರಿಕ್ಟ್.

ಇನಿ ಹಾರ್ನಾ ಮೆಂ.

ತಾರೀಖು 30ನೆ ಸೆಪ್ಟಂಬರ್ 1904.

ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಹಕ್ಕು ಕಳೆಯಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀಗ್ರಾಮವು ಇದರಡೀ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು ಮತ್ತು ಸದರೀ ತಾರೀಖಿನಲ್ಲಿ ಬೆಳಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯೂಟಿ ಕಮ್ಮಿಷನರವರು ತಮ್ಮ ಯಾಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನು ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ಲುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕು ಇಟ್ಟುಕೊಂಡ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಖರ್ಚು ಯಾ ಇತರ ಖರ್ಚುಗಳು ದೇಖೀಲಿ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜ್ ಮುಲ್ತವಿ ಮಾಡಲ್ಪಡತಕ್ಕದ್ದು.

7. ಡೆಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸದರಿ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿ, ಹರಾಜನ್ನು ಡೆಪ್ಯೂಟಿ ಕಮ್ಮಿಷನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಪರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ಲುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಗೌರ್ನಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಮವು ಒಳಪಟ್ಟಿರುತ್ತೆ.—

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರಿ.			ಅಂದಾಜಾ ಹುಲ್ಲಿನ ಗಣಿ ರೂ ಬೆಲೆ.			ಗ್ರಾಮದ ಸರಕಾರಿ ಕಂದಾಯ.			ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.				ಹರಾಜು ತಾರೀಖು ವಗೈರೆ.
					ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.		ರೂ.	ಆ.	ಪೈ.		
ಹಾಸನ	ಸಂದರಾಯಪಾಟ್ನ	ಜೋಡಿ ಅಲಗಣ್ಣ		ನಾರಾಯಣ ಭಟ್ಟ ವಗೈರೆ 9 ಜನಗಳು.	ಖುಷ್ಕಿ	134	8	21	4	0	ಜೋಡಿ		ವಿಕಾರಿ	121	13	6	ಸದರಿ ಗ್ರಾಮವು 1904ನೆ ಸನ್ ಅಕ್ಟೋಬರ್ ತಾ॥ 4ನೆ ತಾರೀಖು ಸ್ಥಾಪಿಸಲ್ಪಟ್ಟಿದೆ.
					ತರಿ	115	25	389	0	0	216	0	0	ಶಾರ್ವರಿ	241	12	6	
					ಬಾಗಾಯತು	1	11	0	4	0	ಲೋಕಲ್ ಸೆಸ್			ಪ್ರಮಥ	241	12	6	
				ಹಾಲಿ ಅನುಭವದಾರ 1. ಸಂಜಂಡಯ್ಯನವರ ಮಗ ಹಿರಿಯಂಣ್ಣಯ್ಯ. 2. ಪುಟ್ಟಯ್ಯನವರ ಮಗ ಹಿರಿಯಂಣ್ಣಯ್ಯ.	ಪರಂಪೋಕು	141	13	2	0	0	ಸ್ಸು			ಕ್ರೋಧಕೃತು	241	12	6	
											25	12	6					
					ಜುಮ್ಲಾ...	392	17	412	8	0				ನೋಟೀಸ್ ಫೀ.	2	0	0	
											241-12-6							
														ಜುಮ್ಲಾ...	849	3	0	

ಪಿ. ಆರ್. ಡಬ್ಲ್ಯೂ. ವೆದರಾಲ್,
ಅಕ್ಟಿಂಗ್ ಡೆಪ್ಯೂಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟನಲ್ಲಿ.

ಸಂ 1904—1905ನೆ ಇಸವಿ ಮಿ॥ ಅರ್ಜೀ ನಂಬರ 80.

ಶಿವಮೊಗ್ಗಾ ಡಿಸ್ಟ್ರಿಕ್ಟ 2ನೆ ಅಸಿಸ್ಟಂಟ್ ಕಮಿಶನರ ಕೋರ್ಟನಲ್ಲಿ ಹೆಡ್ ಮುನಷಿ ಆಗಿ ಮೃತಪಟ್ಟ ಅಜಂಪುರದ ನಾರಣಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ರಾಮಚಂದ್ರರಾವ್, 2ನೆ ಸೂರ್ಯನಾರಾಯಣರಾವ್ ಬಿ ನಾರಣಪ್ಪ ಮೈನರ್, ಗಾರ್ಡಿಯನ್ ತಾಯಿ ಮಲ್ಲಮ್ಮ ಯಾನೆ ಲಕ್ಷ್ಮಿದೇವಮ್ಮ, ಯಳ್ಳಂಬಳಸೆ, ಮೃತಪಟ್ಟ ಸದರೀ ಅಜಂಪುರದ ನಾರಣಪ್ಪನವರಿಗ 1-2ನೆ ಯವರು ಮಕ್ಕಳು ಇವರ ಗಾರ್ಡಿಯನ್ ತಾಯಿ ಲಕ್ಷ್ಮಿದೇವಮ್ಮ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಯಳ್ಳಂಬಳಸೆ ಸ್ಥಳದ 1ನೆ ರಾಮಚಂದ್ರ ರಾವ್, 2ನೆ ಸೂರ್ಯನಾರಾಯಣರಾವ್, ಮೈನರ್, ಗಾರ್ಡಿಯನ್ ತಾಯಿ ಲಕ್ಷ್ಮಿದೇವಮ್ಮನವರು, ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ನಾರಣಪ್ಪನವರ ಜಿಂದಿಗಿ ಬಗ್ಯಾಗಿ ಬರತಕ್ಕ ರೂಪಾಯಿ (1,932—14—9) ಸಾಲವನ್ನು ವಸೂಲ ಮಾಡುವದಕ್ಕೆ 1901ನೆ ಇಸವಿ VIIನೆ ನಂಬರ ರೆಗ್ಯುಲೇಷನ ಮೇರಿಗ ಸರ್ಟಿಫಿಕೇಟ ಒಗ್ಯ ಈ ಕೋರ್ಟಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸಂ 1904ನೆ ಇಸವಿ ನವಂಬರ ತಿಂಗಳು ತಾರೀಖು 11ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಣಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟನಲ್ಲಿ ಹಾಜರ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸಂ 1904ನೆ ಇಸವಿ ಸೆಪ್ಟಂಬರ ತಿಂಗಳು 26ನೆ ತಾರೀಖಿನಲ್ಲಿ ಕೋರ್ಟ ಮೊಹರಿನಿಂದ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ವೆಂಕಟವರದಯ್ಯಂಗಾರಿ,
ಡಿಸ್ಟ್ರಿಕ್ಟ ಜಡ್ಜ.

ಮೈಸೂರು ಸಬ್ ಜಡ್ಜರವರ ಕೋರ್ಟನಲ್ಲಿ.

ಸಂ 1904—1905ನೆ ಇಸವಿ ಅರ್ಜೀ ನಂಬರ 116.

ಮೃತಪಟ್ಟ ಹಲ್ಲೆಗೆರೆ ಸುಬ್ಬಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು 1ನೆ ಸುಬ್ಬಮ್ಮ, 2ನೆ ಗಂಗಮ್ಮ ಮೈನರ್, ಗಾರ್ಡಿಯನ್ ಗಂಡ ಮೈಸೂರು ಕಿಲ್ಲೆಯಲ್ಲಿರುವ ಶ್ರೀಕಂಠಯ್ಯ, ಮೃತಪಟ್ಟ ಸದರೀ ಹಲ್ಲೆಗೆರೆ ಸುಬ್ಬಾಯರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಹಲ್ಲೆಗೆರೆ ಸುಬ್ಬಾಯರ ಜಿಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸಂ 1901ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸಂ 1904ನೆ ಇಸವಿ ನವಂಬರ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹಲ್ಲೆಗೆರೆ ಸುಬ್ಬಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸಂ 1904ನೆ ಇಸವಿ ಅಕ್ಟೋಬರ ತಿಂಗಳು 5ನೆ ತಾರೀಖಿನಲ್ಲಿ ಕೋರ್ಟ ಮೊಹರಿನಿಂದ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸಂ 1904—1905ನೆ ಇಸವಿ ಅರ್ಜೀ ನಂಬರ 125.

ಮೃತಪಟ್ಟ ಮೀರಜಾಖೈನೆಲ್ಲಾಬೆರ್ದಿ ಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಮಂಡಿ ಮೊಹಲ್ಲಾದಲ್ಲಿರುವ ಮೀರಜಾಖೈನೆಲ್ಲಾಬೆರ್ದಿ ಸಾಹೇಬರ ಮಕ್ಕಳು 1. ಮೀರಜಾಖಾಜಿಂ ಹುಸೇನ, 2. ಮೀರಜಾನಿಸಾರ ಹುಸೇನ, 3. ಪುಮ್ಮರಬೀಗಂ ಮೈನರುಗಳು, ಗಾರ್ಡಿಯನ್ ತಾಯಿ ಅಜೀಜನ್ನಿಸಾಬೇಗಂ, ಮೃತಪಟ್ಟ ಸದರೀ ಮೀರಜಾಖೈನೆಲ್ಲಾಬೆರ್ದಿ ಸಾಹೇಬರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಮೀರಜಾಖೈನೆಲ್ಲಾಬೆರ್ದಿ ಸಾಹೇಬರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸಂ 1901ನೆ ಇಸವಿ 7ನೆ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ ಬಗ್ಯೆ ಈ ಕೋರ್ಟಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸಂ 1904ನೆ ಇಸವಿ ನವಂಬರ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೀರಜಾಖೈನೆಲ್ಲಾಬೆರ್ದಿರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸಂ 1904ನೆ ಇಸವಿ ಅಕ್ಟೋಬರ ತಿಂಗಳು 5ನೆ ತಾರೀಖಿನಲ್ಲಿ ಕೋರ್ಟ ಮೊಹರಿನಿಂದ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

1527

ಸನ 1904—1905ನೆ ಇಸವಿ ಅರ್ಜೀ ನಂಬರ್ 132.

ಮೃತಪಟ್ಟ ಗೌಸಸಾಹೇಬರ ಆಸ್ತೀ ವಿಷಯದಲ್ಲಿ —

ಅರ್ಜೀದಾರ್ರು ಯಡತೊರೆ ತಾಲ್ಲೂಕು ಬ್ಯಾಕೆರೆಹಳ್ಳಿ ಹೋಬಳಿ ಸರ್ವಮಾನ್ಯ ಹೊಸೂರು ಗ್ರಾಮದಲ್ಲಿರುವ ಗೌಸಸಾಹೇಬರ ಮಕ್ಕಳು 1ನೆ ಮಹಮದ್‌ಯಾಸೂಫ್, 2ನೆ ಹಸನಸಾಬಿ, 3ನೆ ಹಬೀಬಿ ಮೈನರುಗಳು, ಗಾರ್ಡಿಯನ್ ತಾಯಿ ಹಯಾತ್‌ಬೀ ಅಮ್ಮ, ಮೃತಪಟ್ಟ ಸದರೀ ಗೌಸಸಾಹೇಬರಿಗೆ ಮಕ್ಕಳು ಮತ್ತು ಹೆಂಡತಿ ಆಗಬೇಕೆಂಬ ಹಕ್ಕುದಾರಿಯ ಮೇಲೆ ಹೊಸೂರು ಗ್ರಾಮದಲ್ಲಿ ವಾಸಸ್ಥರಾಗಿ ಮೃತಪಟ್ಟ ಗೌಸಸಾಹೇಬರ ಜಿಂದಗಿ ಬಗ್ಯಾಗ್ಯಿಬರತಕ್ಕ ಸಾಲವನ್ನು ವಸೂಲ ಮಾಡುವದಕ್ಕೆ ಸನ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ 1904ನೆ ಇಸವಿ ನವಂಬರ್ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗೌಸಸಾಹೇಬರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ 1904ನೆ ಇಸವಿ ಸೆಪ್ಟಂಬರು ತಿಂಗಳು 28ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂದ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಬಿ. ಎಸ್. ಕ್ರಿಷ್ಣಸ್ವಾಮಿ ಅಯ್ಯಂಗಾರ್,
ಆಕ್ಟಿಂಗ್ ಸಬ್ ಜಡ್ಜ್.

ಚಿಕ್ಕಮಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ 1904—1905ನೆ ಇಸವಿ ಅರ್ಜೀ ನಂಬರ್ 73.

ಮೃತಪಟ್ಟ ದೇವೆಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಮಳಲೂರು ಮಾಗಣಿ ಕುಂದೂರುನಲ್ಲಿರುವ ಕಾಳೈಯ್ಯ ಮೈನರ್, ಗಾರ್ಡಿಯನ್ ತಾಯಿ ದೇವಮ್ಮ ಕೋಂ ದೇವೆಗೌಡ, ಮೃತಪಟ್ಟ ದೇವೆಗೌಡನವರಿಗೆ ಮಗ ಆಗಬೇಕೆಂಬ ಹಕ್ಕುದಾರಿಯ ಮೇಲೆ ಚಿಕ್ಕಮಗಳೂರು ತಾಲ್ಲೂಕು ಮಳಲೂರು ಮಾಗಣಿ ಕುಂದೂರುನಲ್ಲಿ ವಾಸಸ್ಥರಾಗಿ ಮೃತಪಟ್ಟ ದೇವೆಗೌಡನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕಾಳೈಯ್ಯ ಮೈನರ್, ಗಾರ್ಡಿಯನ್ ದೇವಮ್ಮನವರ ಅರ್ಜಿಯನ್ನು ಸನ 1904ನೆ ಇಸವಿ ನವಂಬರು ತಿಂಗಳು ತಾರೀಖು 21ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ದೇವೆಗೌಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ 1904ನೆ ಇಸವಿ ಸೆಪ್ಟಂಬರ್ 30ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಂದ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ 1904—1905ನೆ ಇಸವಿ ಅರ್ಜೀ ನಂಬರ್ 192.

ಮೃತಪಟ್ಟ ಶಾನಭೋಗ ಶೀತಾರಾಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕಡೂರು ಡಿಸ್ಟ್ರಿಕ್ಟು ಮೂಡಗೆರೆ ತಾಲ್ಲೂಕು ಗೋಣಿಬೀಡುನಲ್ಲಿರುವ ಸೂರಪ್ಪನ ಮಗ ಮೈಲಾರೈಯ್ಯ, ಮೃತಪಟ್ಟ ಶೀತಾರಾಮಯ್ಯನವರಿಗೆ ಸಹೋದರ ಆಗಬೇಕೆಂಬ ಹಕ್ಕುದಾರಿಯ ಮೇಲೆ ಮೂಡಗೆರೆ ತಾಲ್ಲೂಕು ಗೋಣಿಬೀಡುನಲ್ಲಿ ವಾಸಸ್ಥರಾಗಿ ಮೃತಪಟ್ಟ ಶೀತಾರಾಮಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಸೂರಪ್ಪನ ಮಗ ಮೈಲಾರಯ್ಯನವರ ಅರ್ಜಿಯನ್ನು ಸನ 1904ನೆ ಇಸವಿ ನವಂಬರ್ ತಿಂಗಳು 25ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶೀತಾರಾಮಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ 1904ನೆ ಇಸವಿ ಸೆಪ್ಟಂಬರ್ 29ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಂದ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಮ್. ಹಂಜಾಹುಸೇನ್,
ಸಬ್ ಜಡ್ಜ್.

ಇಸ್ತಿಹಾರ್.

ತಾರೀಖು 28ನೆ ಸೆಪ್ಟಂಬರ್ 1904ನೆ ಇಸವಿ.

ಬೆಂಗಳೂರು ಸೆಂಟ್ರಲ್ ಜೈಯಿಲ್‌ನಲ್ಲಿ ಫವತಿ ಆದ ಖೈದಿ ವಡ್ಡರ ಬಾಲಿಗನ ಬಾಬತು ಈ ಕೋರ್ಟಿನಲ್ಲಿ ಅವಾಜತ್ತು ಇರುವ ಸ್ವತ್ತುಗಳಿಗೆ ಬಾಧ್ಯತೆವುಳ್ಳವರು 6 ತಿಂಗಳ ಪಳಗಾಗಿ ಈ ಕೋರ್ಟು ರೂಬರೂ ಹಾಜರಾಗಿ ವಾರೆಸು ಸಂಗತಿಯನ್ನು ದೃಢಪಡಿಸಿ ಕೊಳ್ಳಬೇಕು. ಸ್ವತ್ತುಗಳ ವಿವರ ಮತ್ತು ಇತರೆ ತಪ್ಸೀಲು ವಿಷಯದಲ್ಲಿ ಮೈಸೂರು ಗೆಜೆಟ್ 2ನೆ ಭಾಗದ 580ನೆ ಪುಟದಲ್ಲಿ ಖಾಯಿಷಾಗಿರುವ ಇಸ್ತಿಹಾರ್ ನೋಡಬೇಕು.

ಸಿ. ಶೇಷಾದ್ರಯ್ಯಂಗಾರ್,
ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್.

ತಾರೀಖು 27ನೆ ಆಗಸ್ಟು 1904.

ತಿ. ನರಶೀಪುರದ ತಾಲ್ಲೂಕು ರಂಗಸಮುದ್ರದ ಗ್ರಾಮದಲ್ಲಿ ಇರುವ ಫವತಿ ಆದ ದೊಡ್ಡಹುಚ್ಚೆಗೌಡನ ರಖಾವುದಾರಳಾದ ಅಪುತ್ರವತಿಯಾದ ದೇವೀರಿ ಎಂಬುವಳು ಈ ಕೆಳಗೆ ನಮೂದಿಸುವ ಆಸ್ತಿಗಳನ್ನು ಇತರ ಪ್ರೇರಣೆಯಿಂದ ಆಧಾರ, ಕ್ರಯ, ವಗೈರೆ ಮಾಡುವದಾಗಿ ತಿಳಿಯಬರುತ್ತೆ. ಅವಳು ಮಾಡುವದಕ್ಕೆ ಹಕ್ಕಿರುವದಿಲ್ಲಾ ಅವಳಿಂದ ಕ್ರಯಕ್ಕೆ, ಭೋಗ್ಯಕ್ಕೆ ಪಡದವರಿಗೆ ಸದರಿ ಸ್ವತ್ತುಗಳ ಹಕ್ಕು ಸಲ್ಲಲಾರದು.

ಸ್ವತ್ತಿನ ತಪ್ಸೀಲ್.

ನನ್ನ ಪಿತರಾರ್ಜಿತವಾಗಿ ಬಂದಿರುವ ತಿ॥ ನರಶೀಪುರದ ತಾಲ್ಲೂಕು ರಂಗಸಮುದ್ರದ ಗ್ರಾಮದ ಮಲ್ಲೆಗೌಡನ ಮಗ ದೊಡ್ಡ ಹುಚ್ಚೆಗೌಡ, ಹುಚ್ಚ, ಮಾದ ಎಂಬ ಜಂಟಿ ಖಾತೆ ಪೈಕಿ ಪೂರ್ವಕ್ಕೆ-ಹಟ್ಟಿ ಚನ್ನೆಗೌಡನ ಹೊಲ, ಪಶ್ಚಿಮಕ್ಕೆ-ಹುಚ್ಚೆಗೌಡನ ಹೊಲ, ದಕ್ಷಿಣಕ್ಕೆ-ಟಣಿ, ಉತ್ತರಕ್ಕೆ-ಶೀಹಳ್ಳಿ ಶಿದ್ದ, ಪಟೇಲ ಲಿಂಗೇಗೌಡನ ಹೊಲ. ಈ ಮಧ್ಯೆ ಇರುವ ಸರ್ವೆ ನಂ. 76ನೆ ಕುಷ್ಕಿ ವಿಸ್ತೀರ್ಣ 2 ಎಕರೆ, 25 ಗುಂಟೆ, ಆಕಾರ 1—12—0 ವುಳ್ಳ ಹೊಲ ಒಂದು. ಪೂರ್ವಕ್ಕೆ-ಅರಕೆರೆ ಮಾದೆಗೌಡ ವಗೈರೇರ ಗದ್ದೆ. ಪಶ್ಚಿಮಕ್ಕೆ-ಹೊಂಸಗಂಟೆ ಮರಿಗೌಡ ವಗೈರೇರ ಗದ್ದೆ. ದಕ್ಷಿಣಕ್ಕೆ-ಹುಚ್ಚೆಗೌಡನ ಮಗ ಮಲ್ಲಯ್ಯನ ಪಟ್ಟೆ ಗದ್ದೆ. ಉತ್ತರಕ್ಕೆ-ಮರಿಬ್ಯಾವೆ ಗೌಡನ ಗದ್ದೆ. ಈ ಮಧ್ಯೆ ಇರುವ ಸರ್ವೆ ನಂಬರು 180ನೆ ತರಿ ವಿಸ್ತೀರ್ಣ 2 ಎಕರೆ, 31 ಗುಂಟೆ, ಆಕಾರ 18—0—0 ವುಳ್ಳ ಜಮೀನ್ ಪೈಕಿ ಮಧ್ಯಭಾಗದಲ್ಲಿ ನಾಲ್ಕನೆ ಒಂದು ಭಾಗ ಗದ್ದೆ ಒಂದು. ದೊಡ್ಡಹುಚ್ಚೆಗೌಡನ ಮಗ ಮಲ್ಲೈಯ್ಯನ ಹೆಸರಿನ ಪಟ್ಟೆ ಬಾಬತು. ಪೂರ್ವಕ್ಕೆ-ಅರಕೆರೆ ಮಾದೆಗೌಡನ ಗದ್ದೆ. ಪಶ್ಚಿಮಕ್ಕೆ-ಬೊಮ್ಮರನ ವಗೈರೇರ ಗದ್ದೆ. ದಕ್ಷಿಣಕ್ಕೆ-ಕಾಳೆಗೌಡ ಮತ್ತು ದಾಸ ಹೆಗ್ಗಡೆ ಗದ್ದೆ ಸಹಾ. ಉತ್ತರಕ್ಕೆ-180ನೆ ನಂಬರ್ ಗದ್ದೆ. ಈ ಮಧ್ಯೆ ಇರುವ ಸರ್ವೆ ನಂಬರ್ 179ನೆ ತರಿ ವಿಸ್ತೀರ್ಣ 0—31 ಗುಂಟೆ, ಆಕಾರ 5—0—0 ವುಳ್ಳ ಜಮೀನ್. ಒಟ್ಟು ಮೂರು ಜಮೀನುಗಳು.

ಸಿ ಈ ಗುರಿತಿನ ರುಜು ಚಿಕ್ಕಹುಚ್ಚೆಗೌಡ ಹಾಕಿದ್ದು.

1529

97

ಮೈಸೂರ ಗೆಜೆಟ್.

ನಂ. 39] ಸರ್ಕಾರದಿಂದ ಘೋಷಿಸಲ್ಪಟ್ಟದ್ದು. [ನಂ. 41.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ|| 13, ಸನ 1904.

IIIನೆ ಭಾಗ.

ಮೈಸೂರು ಮಹಾರಾಜರವರ ಗವರ್ನಮೆಂಟು.

ಲೆಜಿಸ್ಲೆಟಿವ್ ಇಲಾಖೆ.

(1904ನೆಯ ವರ್ಷದ IIIನೆಯ ನಂಬರ್ ರೆಗ್ಯುಲೇಷನ್.)

(1904ನೆಯ ವರ್ಷದ ಮಾರ್ಚಿ 15ನೆಯ ತಾರೀಖಿನಲ್ಲಿ ಮಂಜೂರಾದ್ದು)

ಗ್ರಂಥ ಸಮುದಾಯಕ್ಕೂ, ಶಾಸ್ತ್ರಕ್ಕೂ, ಮತ್ತು ಧರ್ಮಕಾರ್ಯಕ್ಕೂ ಸಂಬಂಧಪಡುವ ಸಂಘಗಳ ರಿಜಿಸ್ಟ್ರೇಷನ್‌ಬಗ್ಗೆ ಆದ ರೆಗ್ಯುಲೇಷನ್.

ಪೀಠಿಕೆ.

ಸಾಹಿತ್ಯವನ್ನು, ಶಾಸ್ತ್ರವನ್ನು ಅಥವಾ ಕಲೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಅಥವಾ ಉಪಯುಕ್ತವಾದ ಜ್ಞಾನಪ್ರಸರಣಕ್ಕೋಸ್ಕರ ಅಥವಾ ಧರ್ಮಕಾರ್ಯಗಳಿಗಾಗಿ ಏರ್ಪಟ್ಟ ಸಂಘಗಳ ವ್ಯವಹಾರಾನುರೂಪವಾದ ಸ್ಥಿತಿಯನ್ನು ಅಭಿವೃದ್ಧಿ ಪಡಿಸುವುದಕ್ಕೋಸ್ಕರ ಉಪಾಯ ಮಾಡುವುದು ಯುಕ್ತವಾದುದರಿಂದ; ಶ್ರೀಮನ್ ಮಹಾರಾಜರವರು ಈ ಕೆಳಗಿನಂತೆ ವಿಧಿಸಲು ಅಪ್ಪಣೆ ದಯಪಾಲಿಸುತ್ತಾರೆ:—

ಚಿಕ್ಕ ಹೆಸರು, ವ್ಯಾಪ್ತಿ ಅಮಲ್ ಷುರು.

1. (1) ಈ ರೆಗ್ಯುಲೇಷನ್, "1904ನೆಯ ವರ್ಷದ ಸಂಘಗಳ ರಿಜಿಸ್ಟ್ರೇಷನ್ ರೆಗ್ಯುಲೇಷನ್" ಎಂದು ಕರಿಯಲ್ಪಡಬಹುದು.

(2) ಇದು ಮೈಸೂರಿಗೆಲ್ಲಾ ವ್ಯಾಪಿಸುತ್ತದೆ; ಮತ್ತು

(3) ಇದು ಸರ್ಕಾರಿ ಗೆಜೆಟಿನಲ್ಲಿ ಮೊದಲು ಪ್ರಕಟಿಸಲ್ಪಡುವ ತಾರೀಖಿನಲ್ಲಿ* ಜಾರಿಗೆ ಬರತಕ್ಕದ್ದು.

ಮೆಮೊರಾಂಡಂ ಆಫ್ ಅಸೋಸಿಯೇಷನ್ ವಾ ಸಂಘದ ಪತ್ರ ಮತ್ತು ರಿಜಿಸ್ಟ್ರೇಷನ್ ಇವುಗಳಿಂದ ಸಂಘಗಳನ್ನು ಏರ್ಪಡಿಸೋಣ.

2. ಸಾಹಿತ್ಯಕ್ಕೂ, ಶಾಸ್ತ್ರಕ್ಕೂ ಅಥವಾ ಧರ್ಮಕಾರ್ಯಗಳಿಗೂ ಸಂಬಂಧಪಡುವ ಉದ್ದೇಶಕ್ಕಾಗಲೀ, ಅಥವಾ ಈ ರೆಗ್ಯುಲೇಷನಿನ 21ನೇ ಪ್ರಕರಣದಲ್ಲಿ ವಿವರಿಸಲ್ಪಟ್ಟಿರುವ ಇತರ ಯಾವ ಉದ್ದೇಶಕ್ಕಾಗಲೀ ಕೂಡಲ್ಪಟ್ಟ ಯಾವ ಏಳು ಅಥವಾ ಅಧಿಕ ಸಂಖ್ಯೆಯುಳ್ಳ ಜನಗಳು, ಒಂದು ಮೆಮೊರಾಂಡಂ ಆಫ್ ಅಸೋಸಿಯೇಷನಿಗೆ ವಾ ಸಂಘದ ಪತ್ರಕ್ಕೆ ತಾವು ರುಜು ಮಾಡುವುದರಿಂದಲೂ ಮತ್ತು ಅದನ್ನು ರಿಜಿಸ್ಟ್ರಾರ್ ಆಫ್ ಜಾಯಿಂಟ್ ಸ್ಟಾಕ್ ಕಂಪೆನೀಸ್ ಯವರಲ್ಲಿ ದಾಖಲ್ಮಾಡುವವರಿಂದಲೂ, ಈ ರೆಗ್ಯುಲೇಷನಿನಂತೆ ಒಂದು ಸಂಘವನ್ನು ಏರ್ಪಡಿಸಿಕೊಳ್ಳಬಹುದು.

---

* ಮೊದಲನೆಯ ಪ್ರಕಟನದ ತಾರೀಖು 31ನೆ ಮಾರ್ಚ 1904.

3. ಮೆಮೊರಾಂಡಂ ಆಫ್ ಅಸೋಸಿಯೇಷನ್ ಎಂಬ ಸಂಘದ ಪತ್ರದಲ್ಲಿ ಕಾಣಬರುವ ವಿಷಯಗಳು ಇರತಕ್ಕದ್ದು (ಅದೇನಂದರೆ, –

ಮೆಮೊರಾಂಡಂ ಆಫ್ ಅಸೋಸಿಯೇಷನ್ ವಾ ಸಂಘದ ಪತ್ರ.

ಸಂಘದ ಹೆಸರು :

ಸಂಘದ ಉದ್ದೇಶಗಳು :

ಸಂಘದ ಕಾರ್ಯಗಳ ನಿರ್ವಾಹವು ಅದರ ನಿಬಂಧನೆಗಳಿಗೆ ಅನುಸಾರವಾಗಿ ಯಾರಿಗೆ ಒಪ್ಪಿಸಲ್ಪಟ್ಟಿರುತ್ತದೆಯೋ ಆ ಅಧಿಕಾರಿ (ಗವರ್ನರ್) ಗಳು, ಆಲೋಚನಾ ಸಭೆ (ಕೌನ್ಸಿಲ್), ಆಡಳಿತಗಾರರು (ಡೈರೆಕ್ಟರುಗಳು), ಅಧಿಕಾರ ಸಭೆ (ಕಮ್ಮಿಟಿ) ಅಥವಾ ಇತರ ಕಾರ್ಯ ನಿರ್ವಾಹ ಸಭೆ - ಇವರುಗಳ ಹೆಸರುಗಳ, ವಿಳಾಸಗಳು ಮತ್ತು ಉದ್ಯೋಗಗಳು.

ಸಂಘದ ನಿಬಂಧನೆಗಳ ಮತ್ತು ಖಾನೂನುಗಳ ಒಂದು ನಕಲು, ಕಾರ್ಯ ನಿರ್ವಾಹ ಸಭೆಯವರ ಪೈಕಿ ಮೂರಕ್ಕೆ ಕಡಮೆ ಇಲ್ಲದ ಸಂತ್ಯೋಯುಳ್ಳ ಸಾಮಾಜಿಕರುಗಳಿಂದ ಸರಿಯಾದ ನಕಲೆಂದು ಸರ್ಟಿಫೈ ಮಾಡಲ್ಪಟ್ಟು, ಮೆಮೊರಾಂಡಂ ಆಫ್ ಅಸೋಸಿಯೇಷನ್ ವಾ ಸಂಘದ ಪತ್ರದೊಂದಿಗೆ ದಾಖಲ್ಮಾಡತಕ್ಕದ್ದು.

4. ಸದರೀ ಮೆಮೊರಾಂಡಂ ವಾ ಸಂಘದ ಪತ್ರ ಮತ್ತು ಸರ್ಟಿಫೈ ಮಾಡಲ್ಪಟ್ಟ ನಕಲು ದಾಖಲಾದ ಬಳಿಕ, ಈ ರೆಗ್ಯುಲೇಷನಿನ ಪ್ರಕಾರ ಸಂಘವು ರಿಜಿಸ್ಟರ್ ಮಾಡಲ್ಪಟ್ಟಿರುತ್ತೆಂದು ರಿಜಿಸ್ಟ್ರಾರು ತಮ್ಮ ಕೈಯಿಂದ ಸರ್ಟಿಫೈ ಮಾಡತಕ್ಕದ್ದು. ಅಂಥಾ ಪ್ರತಿ ರಿಜಿಸ್ಟ್ರೇಷನ್‌ಬಗ್ಗೆ ಇಪ್ಪತ್ತು ರೂಪಾಯಿ ಫೀಸ್ ಆಗಲೀ ಅಥವಾ ಆಗಿಂದಾಗ್ಯೆ ಗವರನ್ಮೆಂಟಿನವರು ವಿಧಿಸಬಹುದಾದ ಕಮ್ಮಿ ಫೀಸ್ ಆಗಲೀ ರಿಜಿಸ್ಟ್ರಾರಿಗೆ ಕೊಡಲ್ಪಡತಕ್ಕದ್ದು ; ಮತ್ತು ಹಾಗೆ ಪಾವತಿ ಮಾಡಲ್ಪಟ್ಟ ಎಲ್ಲಾ ಫೀಸುಗಳು ಗವರನ್ಮೆಂಟಿನವರಿಗೆ ಜಮೆಯಾಗತಕ್ಕದ್ದು.

ರಿಜಿಸ್ಟ್ರೇಷನ್ ಫೀಸು.

5. ಪ್ರತಿ ವರ್ಷಕ್ಕೆ ಒಂದಾವರ್ತಿ, ಸಂಘದ ನಿಬಂಧನೆಗಳಿಗೆ ಅನುಸಾರವಾಗಿ ಮಾಡಲ್ಪಟ್ಟ ಸಾಮಾಜಿಕರ ವರ್ಷಗಟ್ಟಲೆಯ ಸಾಮಾನ್ಯ ಕೂಟದ ತಾರೀಖಿನಿಂದ ಹದಿನಾಲ್ಕು ದಿವಸಗಳಿಗೆ ಮುಂಚೆಯಾಗಲೀ ಅಥವಾ ಹದಿನಾಲ್ಕನೆಯ ದಿವಸದಲ್ಲಾಗಲೀ, ಅಥವಾ ಆ ನಿಬಂಧನೆಗಳಲ್ಲಿ ಒಂದು ವರ್ಷಗಟ್ಟಲೆಯ ಸಾಮಾಜಿಕರ ಸಾಮಾನ್ಯ ಕೂಟಕ್ಕೆ (ಜನರಲ್ ಮೀಟಿಂಗಿಗೆ) ಅವಕಾಶವಿಲ್ಲದಿರುವ ಪಕ್ಷದಲ್ಲಿ ಜನವರೀ ತಿಂಗಳಲ್ಲಿ, ಸಂಘದ ಕಾರ್ಯಗಳ ಆಡಳಿತೆಯನ್ನು ವಹಿಸಿರುವ ಅಧಿಕಾರಿ (ಗವರ್ನರ್) ಗಳು, ಆಲೋಚನಾ ಸಭೆ (ಕೌನ್ಸಿಲ್), ಆಡಳಿತಗಾರರು (ಡೈರೆಕ್ಟರ್ಸ್), ಅಧಿಕಾರ ಸಭೆ (ಕಮ್ಮಿಟಿ) ಅಥವಾ ಇತರ ಕಾರ್ಯ ನಿರ್ವಾಹ ಸಭೆ ಇವರುಗಳ ಹೆಸರುಗಳು, ವಿಳಾಸಗಳು, ಮತ್ತು ಉದ್ಯೋಗಗಳು ಇವುಗಳ ಒಂದು ಪಟ್ಟಿಯನ್ನು ರಿಜಿಸ್ಟ್ರಾರ್ ಆಫ್ ಜಾಯಿಂಟ್ ಸ್ಟಾಕ್ ಕಂಪನೀಸ್ ಯವರಲ್ಲಿ ದಾಖಲ್ ಮಾಡತಕ್ಕದ್ದು.

ನಿರ್ವಾಹ ಸಭೆಯ ಪಟ್ಟಿಯನ್ನು ಪ್ರತಿವರ್ಷದಲ್ಲಿಯೂ ದಾಖಲು ಮಾಡತಕ್ಕದ್ದು.

6. ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟ ಸಂಘಕ್ಕೆ ಸೇರಿದ ಚರ ಮತ್ತು ಸ್ಥಿರ ಸೊತ್ತು, ನಿಕ್ಷೇಪಧಾರಿ (ಟ್ರಸ್ಟಿ) ಗಳ ವಶ ಮಾಡಲ್ಪಡದೆ ಇರುವ ಸಂದರ್ಭದಲ್ಲಿ, ಅಂಥಾ ಸಂಘದ ಕಾರ್ಯ ನಿರ್ವಾಹ ಸಭೆಯವರಿಗೆ ತಾತ್ಕಾಲಿಕವಾಗಿ ಕೊಡಲ್ಪಟ್ಟಿರುವುದಾಗಿ ಎಣಿಸತಕ್ಕದ್ದು ; ಮತ್ತು, ಎಲ್ಲಾ ಸಿವಿಲ್ ಮತ್ತು ಕ್ರಿಮಿನಲ್ ವಾಜ್ಯಗಳಲ್ಲಿ ಅಂಥಾ ಸಂಘದ ಕಾರ್ಯ ನಿರ್ವಾಹ ಸಭೆಯ ಸೊತ್ತೆಂದು ಅವರುಗಳ ಸರಿಯಾದ ವಿಳಾಸದೊಂದಿಗೆ ವಿವರಿಸಲ್ಪಡತಕ್ಕದ್ದು.

ಸಂಘದ ಸೊತ್ತನ್ನು ಹ್ಯಾಗೆ ವಶಮಾಡೋಣ.

7. ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟ ಪ್ರತಿ ಸಂಘದ ಮೇಲೆ ಇತರರು ಮಾಡುವ ದಾವೆಗಳು ಮತ್ತು ಇತರರ ಮೇಲೆ ಅಂಥಾ ಸಂಘವು ಮಾಡುವ ದಾವೆಗಳು, ಅಂಥಾ ಸಂಘದ ನಿಬಂಧನೆಗಳಿಂದಾಗಲೀ ಖಾನೂನುಗಳಿಂದಲೂ ನಿಷ್ಕರ್ಷಿಸಲ್ಪಟ್ಟಂತೆ, ಅಧ್ಯಕ್ಷ, ಸಭಾಪತಿ ಅಥವಾ ಮುಖ್ಯ ಸೆಕ್ರಟೆರಿ ಅಥವಾ ನಿಕ್ಷೇಪಧಾರಿ (ಟ್ರಸ್ಟೀಸ್) ಗಳು—ಇವರುಗಳ ಹೆಸರಲ್ಲಿ ನಡಿಯತಕ್ಕದ್ದು ; ಮತ್ತು ಹಾಗೆ ನಿಷ್ಕರ್ಷೆಯಾಗದಿರುವ ಸಂದರ್ಭದಲ್ಲಿ, ಕಾರ್ಯ ನಿರ್ವಾಹ ಸಭೆಯವರಿಂದ ತತ್ಕಾಲದಲ್ಲಿ ಮೊಕರರ್ಮಾಡಲ್ಪಟ್ಟ ಮನುಷ್ಯನ ಹೆಸರಲ್ಲಿ ನಡಿಯತಕ್ಕದ್ದು :

ಸಂಘಗಳಿಂದ ಮತ್ತು ಸಂಘಗಳ ಮೇಲೆ ದಾವೆಗಳು.

ಆದರೆ ಕಾರ್ಯ ನಿರ್ವಾಹ ಸಭೆಯವರು ಕೋರಲ್ಪಟ್ಟ್ಯಾ ಜೀರೆ ಇತರ ಉದ್ಯೋಗಸ್ಥನ (ಆಫೀಸರ) ನ್ನಾಗಲೀ ಮನುಷ್ಯನನ್ನಾಗಲೀ ಪ್ರತಿವಾದಿಯಾಗಿ ಮೊಕರರ್ ಮಾಡದೆ ಇರುವ ಪಕ್ಷಕ್ಕೆ, ಅದರ ಅಧ್ಯಕ್ಷ, ಸಭಾಪತಿ, ಮುಖ್ಯ ಸೆಕ್ರಟೆರಿ ಅಥವಾ ನಿಕ್ಷೇಪಧಾರಿ (ಟ್ರಸ್ಟೀ) ಗಳು ಇವರಮೇಲೆ ದಾವೆಯನ್ನು ಮಾಡುವುದು, ಆ ಸಂಘದಮೇಲೆ ಹಕ್ಕು ಅಥವಾ ವರಾತ ಉಂಟಾಗಿರುವ ಯಾವ ಮನುಷ್ಯನಿಗಾದರೂ ನ್ಯಾಯವಾಗಿರತಕ್ಕದ್ದು.

8. ಯಾವ ಮನುಷ್ಯನಿಂದಲಾಗಲೀ, ಯಾವ ಮನುಷ್ಯನಮೇಲಾಗಲೀ ಯಾವ ಸಿವಿಲ್ ಕೋರ್ಟ್‌ನಲ್ಲಿ ತರಲ್ಪಟ್ಟ ಅಥವಾ ನಡೆಯುತ್ತಿರುವ ದಾವೆಯು, ಅಂಥಾ ಮನುಷ್ಯನು ಸಾಯುವುದರಿಂದಲಾದರೂ, ಅಥವಾ ಯಾವ ಉದ್ಯೋಗದ ಹೆಸರಿನಲ್ಲಿ ಅವನು ದಾವೆ ಮಾಡಿದನೋ ಅಥವಾ ಪ್ರತಿವಾದಿಯಾಗಿರುತ್ತಾನೋ ಆ ಉದ್ಯೋಗವನ್ನು ಬಿಡುವುದರಿಂದಲಾದರೂ, ಕಡಮೆಯಾಗತಕ್ಕದ್ದಲ್ಲ ಅಥವಾ ನಿರ್ತುಹೋಗತಕ್ಕದ್ದಲ್ಲ; ಪರಂತು ಅದೇ ದಾವೆಯು ಅಂಥಾ ಮನುಷ್ಯನ ಉತ್ತರಾಧಿಕಾರಿಯ ಹೆಸರಿನಲ್ಲಾಗಲೀ, ಉತ್ತರಾಧಿಕಾರಿಯಮೇಲಾಗಲೀ ನಡೆಯತಕ್ಕದ್ದು.

ದಾವೆಗಳು ನಿಂತುಹೋಗಕೂಡದು.

9. ಸಂಘದಪರವಾಗಿ ನೇಮಿಸಲ್ಪಟ್ಟ ಮನುಷ್ಯನಮೇಲಾಗಲೀ ಉದ್ಯೋಗಸ್ಥನಮೇಲಾಗಲೀ ಆಗಿರುವ ತೀರ್ಪಿನ ಅಮಲ್ಜಾರಿಯು, ಅಂಥಾ ಮನುಷ್ಯನ ಅಥವಾ ಉದ್ಯೋಗಸ್ಥನ ಚರ ಅಥವಾ ಸ್ಥಿರ ಸೊತ್ತಿನಮೇಲಾದರೂ ಅಥವಾ ಅವನ ದೇಹದಮೇಲಾದರೂ ಆಗಕೂಡದು, ಪರಂತು ಆ ಸಂಘದ ಸೊತ್ತಿನಮೇಲೆ ಆಗತಕ್ಕದ್ದು.

ಸಂಘದಮೇಲಾದ ತೀರ್ಪುಗಳ ಅಮಲ್ಜಾರಿ.

ಅಮಲ್ಜಾರಿಯ ಬಗ್ಗೆ ಕೊಡಲ್ಪಟ್ಟ ಅಜಿಯಲ್ಲಿ ತೀರ್ಪು, ಯಾರಮೇಲೆ ಅದರ ಅಮಲ್ಜಾರಿ ಆಗಬೇಕೊ ಆ ಕಕ್ಷಿಗಾರನು ಸಂಘದಪರವಾಗಿ ಮಾತ್ರವೇ ದಾವೆ ಮಾಡಿರೋಣ ಅಥವಾ ಪ್ರತಿವಾದಿಯಾಗಿರೋಣ (ಸಂದರ್ಭಾನುಸಾರವಾಗಿ), ಮತ್ತು ಸಂಘದ ಸೊತ್ತಿನಮೇಲೆ ಅಮಲ್ಜಾರಿಯಾಗಬೇಕೆಂದು ಅಪೇಕ್ಷಿಸೋಣ — ಈ ಸಂಗತಿಗಳು ಬರಿಯಲ್ಪಟ್ಟಿರಬೇಕು.

10. ಸಂಘದ ನಿಬಂಧನೆಗಳಿಗೂ ಕಾನೂನುಗಳಿಗೂ ಅನುಸಾರವಾಗಿ ಮಾಡಲ್ಪಟ್ಟ ಯಾವ ಬಳಿ ನಿಬಂಧನೆಯಿಂದಲಾದರೂ, ಅಥವಾ, ಬಳಿ ನಿಬಂಧನೆಗಳನ್ನು ಮಾಡಲು ನಿಬಂಧನೆಗಳಲ್ಲಿ ಅವಕಾಶವಿಲ್ಲದಿರುವ ಪಕ್ಷದಲ್ಲಿ, ಯಾವ ಬಳಿ ನಿಬಂಧನೆ, ಅದನ್ನು ಮಾಡುವುದಕ್ಕಾಗಿಯೇ ಕೂಡಿದ ಸಂಘದ ಸಾಮಾಜಿಕರ ಸಾಮಾನ್ಯಕೂಟದಲ್ಲಿ ಮಾಡಲ್ಪಟ್ಟ ಯಾವ ಬಳಿ ನಿಬಂಧನೆಯಿಂದಲಾದರೂ, (ಇಂಥಾ ಬಳಿ ನಿಬಂಧನೆಯನ್ನು ಮಾಡುವುದಕ್ಕೆ ಹಾಜರಿದ್ದವರ ಪೈಕಿ ಐದು ಭಾಗದಲ್ಲಿ ಮೂರುಭಾಗದವರು ಏಕೀಭವಿಸಿ ಸಮ್ಮತಿಸುವುದು ಅವಶ್ಯವಾಗಿರತಕ್ಕದ್ದು), ಅಂಥಾ ಸಂಘದ ಯಾವ ನಿಬಂಧನೆಯ ಅಥವಾ ಬಳಿನಿಬಂಧನೆಯ ಉಲ್ಲಂಘನೆಯ ಬಗ್ಗೆಯಾಗಿ, ಹಾಕಲ್ಪಟ್ಟ ದ್ರವ್ಯರೂಪವಾದ ದಂಡವು, ಉಂಟಾದಾಗ್ಯೆ, ಯಾವ ಕೋರ್ಟಿನ ಅಧಿಕಾರ ಸರಹದ್ದಿನೊಳಗೆ ಪ್ರತಿವಾದಿಯು ವಾಸಿಸುತ್ತಾನೋ ಅಥವಾ ಸಂಘವು ಇರುತ್ತದೆಯೋ, ಹ್ಯಾಗೆ ಆ ಸಂಘದ ಕಾರ್ಯನಿರ್ವಾಹಕ ಸಭೆಯವರು ಯುಕ್ತವೆಂದು ಎಣಿಸುತ್ತಾರೋ ಹಾಗೆ, ಅಂಥಾ ಕೋರ್ಟಿನಲ್ಲಿ ವಸೂಲ್ಮಾಡಲ್ಪಡಬಹುದು.

ಬಳಿ ನಿಬಂಧನೆಯಂತೆ ಉಂಟಾಗುವ ಬಾಕಿಯನ್ನು ವಸೂಲಾತಿ.

11. ಸಂಘದ ನಿಬಂಧನೆಗಳಿಗೆ ಅನುಸಾರವಾಗಿ ತಾನು ಕೊಡುವುದಕ್ಕೆ ಬದ್ಧನಾಗಿರುವ ಚಂದಾವನ್ನು ಕೊಡದೆ ಬಾಕಿಯಲ್ಲಿಟ್ಟುಕೊಂಡಿರುವ, ಅಥವಾ ಅಂಥಾ ನಿಬಂಧನೆಗಳಿಗೆ ವಿರೋಧವಾಗಿರುವ, ಯಾವ ಕಾಲದವರೆಗಾಗಲೀ ಯಾವ ರೀತಿಯಲ್ಲಾಗಲೀ ಸಂಘದ ಯಾವ ಸೊತ್ತನ್ನಾದರೂ ತಾನೇ ಇಟ್ಟುಕೊಳ್ಳುವ, ಅಥವಾ ತಡದಿಟ್ಟುಕೊಳ್ಳುವ, ಅಥವಾ ಸಂಘದ ಯಾವ ಸೊತ್ತನ್ನಾದರೂ ನಷ್ಟಪಡಿಸುವ, ಅಥವಾ ನಾಶಪಡಿಸುವ ಸಾಮಾಜಿಕನ ಮೇಲೆ, ಅಂಥಾ ಬಾಕಿಗಾಗಲೀ ಅಥವಾ ಹಾಗೆ ಸೊತ್ತನ್ನು ತಡದು ಇಟ್ಟುಕೊಳ್ಳುವುದರಿಂದಲೂ, ನಷ್ಟಪಡಿಸುವುದರಿಂದಲೂ ಅಥವಾ ನಾಶ ಮಾಡುವುದರಿಂದಲೂ ಸಂಭವಿಸುವ ನಷ್ಟಕ್ಕಾಗಲೀ ಮೇಲ್ಕಂಡ ರೀತಿಯಲ್ಲಿ ದಾವೆ ಮಾಡಲ್ಪಡಬಹುದು.

ಸಾಮಾಜಿಕರು ಪರಕೀಯರಂತೆ ಪ್ರತಿವಾದಿಗಳಾಗುವದಕ್ಕೆ ಗುರಿಯಾಗಿರೋಣ.

ಸಂಘದಪರವಾಗಿ ತರಲ್ಪಟ್ಟ ಯಾವ ದಾವೆಯಲ್ಲಿ ಅಥವಾ ವ್ಯವಹಾರದಲ್ಲಾದರೂ ಪ್ರತಿವಾದಿಯುಪಕ್ಷದಲ್ಲಿ ತೀರ್ಪು ಆಗಿ ಆತನ ಕರ್ಚುಗಳನ್ನು ಪಡಕೊಳ್ಳುವಂತೆ ತೀರ್ಪಾಗಿರುವ ಸಂದರ್ಭದಲ್ಲಿ, ಆ ಮೊಬಲಗನ್ನು ಅವನು ಯಾವ ಉದ್ಯೋಗಸ್ಥನ ಹೆಸರಿನಲ್ಲಿ ದಾವೆ ಮಾಡಲ್ಪಟ್ಟಿತೋ ಅವನಿಂದ ಆಗಲೀ ಅಥವಾ ಸಂಘದಿಂದಾಗಲೀ ವಸೂಲು ಮಾಡಿಕೊಳ್ಳಬಹುದು. ಸಂಘದಿಂದ ವಸೂಲು ಮಾಡಿಕೊಳ್ಳುವ ಸಂದರ್ಭದಲ್ಲಿ, ಮೇಲೆ ವಿವರಿಸಲ್ಪಟ್ಟ ರೀತಿಗೆ ಅನುಸಾರವಾಗಿ ಅಂಥಾ ಸಂಘದ ಸೊತ್ತಿನಮೇಲೆ ಅಮಲ್ಜಾರಿ ಮಾಡತಕ್ಕದ್ದು.

ಜಯಿಸುವ ಪ್ರತಿವಾದಿಯು ನಿರ್ಣಯಿಸಲ್ಪಟ್ಟ ತನ್ನ ಕರ್ಚನ್ನು ವಸೂಲ್ಮಾಡೋಣ.

12. ಸಂಘದ ಯಾವ ಹಣವನ್ನಾದರೂ ಅಥವಾ ಸೊತ್ತನ್ನಾದರೂ ಕದ್ದುಕೊಳ್ಳುವ ಅಥವಾ ಚೌರ್ಯ ಮಾಡುವ ಅಥವಾ ಅಪಹರಿಸುವ; ಅಥವಾ ಅಂಥಾ ಸಂಘದ ಯಾವ ಸೊತ್ತನ್ನಾದರೂ ಬೇಕೆಂದು ಮತ್ತು ಮತ್ಸರವಾಗಿ ನಾಶಪಡಿಸುವ ಅಥವಾ ಕೆಡಿಸುವ, ಅಥವಾ ಅಂಥಾ ಸಂಘದ ಬಂಡವಾಳವನ್ನು ನಷ್ಟಕ್ಕೆ ಗುರಿಮಾಡಬಹುದಾದಂಥಾ ಯಾವ ಪತ್ರವನ್ನಾದರೂ ಬಾಂಡನ್ನಾದರೂ ಹಣದ ಬಗ್ಗೆ ಅಧಾರ ಪತ್ರವನ್ನಾದರೂ ರಸೀತಿಯನ್ನಾದರೂ ಅಥವಾ ಇತರ ದಸ್ತೈವಜನ್ನಾದರೂ ಕಲ್ಪಿಸುವ ಸಂಘದ ಯಾವ ಸಾಮಾಜಿಕನಾದರೂ ಸಾಮಾಜಿಕನಲ್ಲದೆ ಇರುವ ಯಾವ ಮನುಷ್ಯನಾಗಲಿ ಇಂಥಾ ಅಪರಾಧವನ್ನು ಮಾಡಿದರೆ ಯಾವ ವ್ಯಾಜ್ಯಕ್ಕೆ ಒಳಪಡುತ್ತಾನೋ ಮತ್ತು ತಪ್ಪು ಸಾಬೀತಾದರೆ ಯಾವ ದಂಡನೆಗೆ ಗುರಿಯಾಗುತ್ತಾನೋ, ಅದೇ ವ್ಯಾಜ್ಯಕ್ಕೆ ಆ ಸಾಮಾಜಿಕನು ಒಳಪಡುವನಲ್ಲದೆ ತಪ್ಪು ಸಾಬೀತಾದರೆ ಅದೇ ದಂಡನೆಗೆ ಗುರಿಯಾಗತಕ್ಕದ್ದು.

ಅಪರಾಧವನ್ನು ಮಾಡಿದ ಸಾಮಾಜಿಕರು ಪರಕೀಯರಂತೆ ದಂಡನೆಗೆ ಗುರಿಯಾಗಿರತಕ್ಕದ್ದು.

13. ಯಾವ ಪ್ರತ್ಯೇಕವಾದ ಉದ್ದೇಶಕ್ಕೋಸ್ಕರ ಅಥವಾ ಉದ್ದೇಶಗಳಿಗೋಸ್ಕರವಾದರೂ ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಟ್ಟ ಯಾವ ಸಂಘದ ಕಾರ್ಯನಿರ್ವಾಹ ಸಭೆಯವರಿಗೆ, ಅಂಥಾ ಉದ್ದೇಶವನ್ನು ಈ ರೆಗ್ಯುಲೇಷನಿನ ಅರ್ಥದಲ್ಲಿರುವ ಇತರ ಉದ್ದೇಶಕ್ಕೆ ಅಥವಾ ಇತರ ಉದ್ದೇಶಗಳಿಗೆ ಬದಲಾಯಿಸುವುದು, ವಿಸ್ತರಿಸುವುದು ಅಥವಾ ಸಂಕ್ಷೇಪಿಸುವುದು; ಅಥವಾ ಅಂಥಾ ಸಂಘವನ್ನು ಇತರ ಸಂಘದೊಡನೆ ಸ್ವಲ್ಪಮಟ್ಟಿಗೆ ಅಥವಾ ಸಂಪೂರ್ಣವಾಗಿ ಕೂಡಿಸುವುದು ಉಚಿತವೆಂದು ತೋರಿಬರುವುದಾದರೆ, ಅಂಥಾ ಕಾರ್ಯನಿರ್ವಾಹ ಸಭೆಯವರು ಬರಹದಲ್ಲಿರುವ ಅಥವಾ ಛಾಪಿಸಿರುವ ಒಂದು ರಿಪೋರ್ಟಿನಲ್ಲಿ ಆ ಪ್ರಮೇಯವನ್ನು ನಮೂದ್ಮಾಡಿ ಸಂಘದ ಸಾಮಾಜಿಕರಿಗೆ ಕಳುಹಿಸಬಹುದು ಮತ್ತು ಸಂಘದ ನಿಬಂಧನೆಗಳಿಗೆ ಅನುಸಾರವಾಗಿ ಅದನ್ನು ಆಲೋಚಿಸುವುದಕ್ಕೋಸ್ಕರ ಒಂದು ಪ್ರತ್ಯೇಕವಾದ ಸಾಮಾಜಿಕರ ಕೂಟವನ್ನು ಕೂಡಿಸಬಹುದು;

ಸಂಘಗಳು ತಮ್ಮ ಉದ್ದೇಶಗಳನ್ನು ಬದಲಾಯಿಸಲು ವಿಸ್ತರಿಸಲು ಅಥವಾ ಸಂಕ್ಷೇಪಿಸಲು ಅಧಿಕಾರ ಉಂಟಾಗಿರೋಣ.

ಆದರೆ ಆ ಪ್ರಮೇಯದ ಆಲೋಚನೆಯ ಬಗ್ಗೆಯಾಗಿ ಕಾರ್ಯನಿರ್ವಾಹ ಸಭೆಯವರಿಂದ ಕೂಡಿಸಲ್ಪಟ್ಟ ಪ್ರತ್ಯೇಕವಾದ ಕೂಟ ಕೂಡುವುದಕ್ಕೆ ಹತ್ತು ದಿನಗಳಿಗೆ ಪೂರ್ವ ಅಂಥಾ ಸಂಘದ ಪ್ರತಿ ಸಾಮಾಜಿಕನಿಗೂ ಅಂಥಾ ರಿಪೋರ್ಟು ಟಪಾಲು ದ್ವಾರಾ ಅಥವಾ ಇತರ ವಿಧದಲ್ಲಿ ಕಳುಹಿಸಲ್ಪಟ್ಟಿದ್ದಹೊರ್ತು, ಅಂಥಾ ಪ್ರಮೇಯವು ಜಾರಿಗೆ ಬರತಕ್ಕದ್ದಲ್ಲ.

ಅಥವಾ, ಖುದ್ದಾಗಿ ಯಾ ಪ್ರತಿನಿಧಿಯ ದ್ವಾರ ಸಾಮಾಜಿಕರಿಂದ ಕೊಡಲ್ಪಟ್ಟ ಸಂಮತಿಗಳ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳಿಂದ ಅಂಗೀಕರಿಸಲ್ಪಟ್ಟು, ಮೊದಲನೆಯ ಕೂಟವು ಆಗಿ ಒಂದು ತಿಂಗಳಾದ ಬಳಿಕ ಕಾರ್ಯನಿರ್ವಾಹ ಸಭೆಯವರಿಂದ ಕೂಡಿಸಲ್ಪಟ್ಟ ಎರಡನೆಯ ಪ್ರತ್ಯೇಕ ಕೂಟವಲ್ಲಿ ಹಾಜರಿದ್ದ ಸಾಮಾಜಿಕರ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳ ಸಾಮಾಜಿಕರ ಸಂಮತಿಗಳಿಂದ ಸ್ಥಾಪಿಸಲ್ಪಟ್ಟಹೊರ್ತು, ಅಂಥಾ ಪ್ರಮೇಯವು ಜಾರಿಗೆ ತರಲ್ಪಡತಕ್ಕದ್ದಲ್ಲ.

14. ಯಾವ ಸಂಘದ ಸಾಮಾಜಿಕರ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳಿಗೆ ಕಡಮೆ ಇಲ್ಲದ ಸಂಖ್ಯೆಯವರಾದರೂ ಅದು ಅಗಲತಕ್ಕದ್ದೆಂದು ತೀರ್ಮಾನ ಮಾಡಬಹುದು; ಮತ್ತು ಆ ಬಳಿಕ ಅದು, ಕೂಡ್ಲೆಯಾಗಲೀ ಅಥವಾ ಒಪ್ಪಲ್ಪಟ್ಟ ಬೇರೆ ಕಾಲದಲ್ಲಾಗಲೀ ಅಗಲಿಸಲ್ಪಡತಕ್ಕದ್ದು; ಮತ್ತು ಸಂಘದ ಸೊತ್ತು ಅದರ ಹಕ್ಕುಗಳು, ಮತ್ತು ಸಾಲಗಳು, ತತ್ಪ್ರಯುಕ್ತವಾದ ಸದರೀ ಸಂಘದ ನಿಬಂಧನೆಗಳಿಗೆ, ಅಂಥಾ ನಿಬಂಧನೆಗಳು ಏನಾದರೂ ಇದ್ದರೆ, ಅನುಸಾರವಾಗಿ, ಮತ್ತು ಅಂಥಾ ನಿಬಂಧನೆಗಳು ಇಲ್ಲದಿರುವ ಸಂದರ್ಭದಲ್ಲಿ ಕಾರ್ಯನಿರ್ವಾಹ ಸಭೆಯವರು ಯುಕ್ತವೆಂದು ಎಣಿಸುವಂತೆ, ವಿಲೇವಾರಿ ಮತ್ತು ವ್ಯವಸ್ಥೆ ಆಗುವ ಬಗ್ಗೆ ಎಲ್ಲಾ ಅವಶ್ಯವಾದ ಪ್ರಯತ್ನಗಳು ಮಾಡಲ್ಪಡತಕ್ಕದ್ದು; ಪರಂತು ಆ ಸಂಘದ ಕಾರ್ಯನಿರ್ವಾಹ ಸಭೆಯವರಲ್ಲಿ ಅಗಲಿ ಸಾಮಾಜಿಕರಲ್ಲಿ ಅಗಲಿ ಯಾವ ವಿವಾದವಾದರೂ ಹುಟ್ಟುವ ಪಕ್ಷಕ್ಕೆ ಅದರ ಆಡಳಿತದ ವ್ಯವಸ್ಥೆಯು, ಆ ಸಂಘದ ಮುಖ್ಯ ಕಟ್ಟಡವಿರುವ ಡಿಸ್ಟ್ರಿಕ್ಟಿನ ಪ್ರಥಮ ಸಿವಿಲ್ ಅಧಿಕಾರವುಳ್ಳ ಮುಖ್ಯ ಕೋರ್ಟಿನಲ್ಲಿ ನಡೆಸಲ್ಪಡತಕ್ಕದ್ದು; ಮತ್ತು ಆ ಕೋರ್ಟಿನವರು ಆ ವಿಷಯದಲ್ಲಿ ಅವಶ್ಯವೆಂದು ತಾವು ಎಣಿಸುವ ಆಜ್ಞೆಯನ್ನು ಮಾಡತಕ್ಕದ್ದು.

ಸಂಘಗಳ ಅಗಲುವಿಕೆಯ ಬಗ್ಗೆ ಮತ್ತು ಅವರ ಆಡಳಿತಗಳ ವ್ಯವಸ್ಥೆಯ ಬಗ್ಗೆ ನಿಯಮಗಳು.

ಪರಂತು ಆ ಉದ್ದೇಶದ ಬಗ್ಗೆ ಕೂಡಿಸಲ್ಪಟ್ಟ ಸಾಮಾಜಿಕರ ಒಂದು ಸಾಮಾನ್ಯ ಕೂಟದಲ್ಲಿ ಸಾಮಾಜಿಕರ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳವರು ಅಂಥಾ ಅಗಲುವಿಕೆ ಬಗ್ಗೆ ಅಪೇಕ್ಷೆಯನ್ನು ಖುದ್ದಾಗಿ ಅಥವಾ ಪ್ರತಿನಿಧಿಯ ದ್ವಾರಾ ಕೊಡಲ್ಪಟ್ಟ ತಮ್ಮ ಸಂಮತಿಗಳಿಂದ ಸೂಚಿಸಿದ್ದರೆ ಹೊರ್ತು, ಯಾವ ಸಂಘವಾದರೂ ಅಗಲಿಸಲ್ಪಡತಕ್ಕದ್ದಲ್ಲ.

ಸಮ್ಮತಿ ಅವಶ್ಯಕ.

1533

ಪರಂತು, ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಟ್ಟ ಯಾವ ಸಂಘದಲ್ಲಾಗಲಿ ಗವರನ್ಮೆಂಟಿನವರು ಸಾಮಾಜಿಕರಾಗಿ ಅಥವಾ ಚಂದಾದಾರರಾಗಿ ಅಥವಾ ಇತರ ವಿಧದಲ್ಲಿ ಸಂಬಂಧವುಳ್ಳವರಾಗಿರುವಾಗ, ಗವರನ್ಮೆಂಟಿನವರ ಅನುಮತಿ ವಿನಾ ಅಂಥಾ ಸಂಘವು ಅಗಲಿಸಲ್ಪಡತಕ್ಕದ್ದಲ್ಲ.

ಗವರ್ನಮೆಂಟಿನವರ ಅನುಮತಿ.

15. ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಟ್ಟ ಯಾವ ಸಂಘವಾದರೂ ಅಗಲಿಸಲ್ಪಟ್ಟ ಬಳಿಕ ಅದರ ಎಲ್ಲಾ ಸಾಲಗಳು ಮತ್ತು ದೇಣಿಗೆಗಳು ವ್ಯವಸ್ಥೆಯಾದ ನಂತರ ಯಾವ ಸೊತ್ತಾಗಲೀ ಉಳಿದಿರುವ ಸಂದರ್ಭದಲ್ಲಿ, ಆ ಸಂಘದ ಸಾಮಾಜಿಕರಿಗಾದರೂ ಅಥವಾ ಅವರುಗಳ ಪೈಕಿ ಕೆಲವರುಗಳಿಗಾದರೂ ಆ ಸೊತ್ತನ್ನು ಕೊಡಲೂ ಅಥವಾ ಹಂಚಲೂ ಕೂಡದು; ಆದರೆ, ಅಗಲುವಿಕೆಯ ಕಾಲದಲ್ಲಿ ಖುದ್ದಾಗಿ ಅಥವಾ ಪ್ರತಿನಿಧಿಯದ್ವಾರ ಹಾಜರಿದ್ದ ಸಾಮಾಜಿಕರ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳಿಗೆ ಕಡಮೆ ಇಲ್ಲದವರುಗಳ ಸಂಮತಿಗಳಿಂದಾದರೂ, ಅಥವಾ ಅದಿಲ್ಲದಪಕ್ಷಕ್ಕೆ ಮೇಲೆ ಹೇಳಲ್ಪಟ್ಟ ಅಂಥಾ ಕೋರ್ಟಿನವರಿಂದಾದರೂ ತೀರ್ಮಾನ ಮಾಡಲ್ಪಟ್ಟ ಇತರ ಯಾವ ಸಂಘಕ್ಕೆ ಆಗಲಿ ಕೊಡಲ್ಪಡತಕ್ಕದ್ದು.

ಅಗಲುವಿಕೆಯ ತರುವಾಯ ಯಾವ ಸಾಮಾಜಿಕನೂ ಆದಾಯ ಹೊಂದಕೂಡದು.

ಪರಂತು, ಈ ಕಲಮು, ಒಂದು ಜಾಯಿಂಟ್ ಸ್ಟಾಕ್ ಕಂಪೆನಿಯ ಸ್ವಭಾವವುಳ್ಳದ್ದಾಗಿ ಪಾಲುದಾರರ ಚಂದಾಗಳಿಂದ ಸ್ಥಾಪಿಸಲ್ಪಟ್ಟ ಯಾವ ಸಂಘಕ್ಕಾದರೂ ಪ್ರಯೋಗಿಸಲ್ಪಡತಕ್ಕದ್ದಲ್ಲ.

ಜಾಯಿಂಟ್ ಸ್ಟಾಕ್ ಕಂಪೆನಿಗಳಿಗೆ ಈ ಕಲಮು ಅನ್ವಯಿಸಕೂಡದು.

16. ಈ ರೆಗ್ಯುಲೇಷನಿನ ಉದ್ದೇಶಗಳಿಗೋಸ್ಕರ, ಒಂದು ಸಂಘದ ನಿಬಂಧನೆಗಳ ಮತ್ತು ಖಾನೂನುಗಳ ಪ್ರಕಾರ ಅದರ ಸಾಮಾಜಿಕನಾಗಿ ಸೇರಿಸಲ್ಪಟ್ಟಿರುವ, ಚಂದಾವನ್ನು ಕೊಟ್ಟು ಇರುವ ಅಥವಾ ಅದರ ಸಾಮಾಜಿಕರ ಪಟ್ಟಿಗೆ ರುಜು ಮಾಡಿರುವ, ಅಂಥಾ ನಿಬಂಧನೆಗಳಿಗೆ ಮತ್ತು ಖಾನೂನುಗಳಿಗೆ ಅನುಸಾರವಾಗಿ ರಾಜಿನಾಮೇ ಕೊಡದೆ ಇರುವ ಮನುಷ್ಯನು ಆ ಸಂಘದ ಸಾಮಾಜಿಕನಾಗಿರತಕ್ಕದ್ದು; ಆದರೆ ಈ ರೆಗ್ಯುಲೇಷನಿನ ಪ್ರಕಾರವಾದ ಎಲ್ಲಾ ನಡವಳಿಕೆಗಳಲ್ಲಿಯೂ, ತತ್ಕಾಲದಲ್ಲಿ ಮೂರು ತಿಂಗಳುಗಳಿಗೆ ಹೆಚ್ಚಿದ ಕಾಲದವರೆಗೂ ಚಂದಾವನ್ನು ಬಾಕಿಯಲ್ಲಿಟ್ಟುಕೊಂಡಿರುವ ಯಾವ ಮನುಷ್ಯನೂ ಸಂಮತಿಯನ್ನು ಕೊಡುವುದಕ್ಕಾಗಲೀ, ಅಥವಾ ಸಾಮಾಜಿಕನೆಂದು ಎಣಿಸಲ್ಪಡುವುದಕ್ಕಾಗಲೀ ಹಕ್ಕುಳ್ಳವನಾಗಿರತಕ್ಕದ್ದಲ್ಲ.

ಸಾಮಾಜಿಕನ ವಿವರಣೆ. ಅನರ್ಹರಾಗಿ ಮಾಡಲ್ಪಟ್ಟ ಸಾಮಾಜಿಕರು.

17. ಒಂದು ಸಂಘದ ನಿಬಂಧನೆಗಳ ಮತ್ತು ಖಾನೂನುಗಳ ಪ್ರಕಾರ ಅದರ ಆಡಳಿತಗಳ ನಿರ್ವಾಹವನ್ನು ವಹಿಸಿರುವ ಅಧಿಕಾರಿ (ಗವರ್ನರ್) ಗಳು, ಆಲೋಚನಾ ಸಭೆ (ಕೌನ್ಸಿಲ್), ಆಡಳಿತಗಾರರು (ಡೈರೆಕ್ಟರುಗಳು), ಅಧಿಕಾರ ಸಭೆ (ಕಮ್ಮಿಟಿ) ಯವರು, ನಿಕ್ಷೇಪಧಾರಿ (ಟ್ರಸ್ಟೀ) ಗಳು ಅಥವಾ ಇತರ ಸಭೆಯು, ಅದರ ಕಾರ್ಯ ನಿರ್ವಾಹ ಸಭೆಯಾಗಿರತಕ್ಕದ್ದು.

ಕಾರ್ಯ ನಿರ್ವಾಹ ಸಭೆಯ ವಿವರಣೆ.

18. ಈ ರೆಗ್ಯುಲೇಷನು ಜಾರಿಗೆ ಬರುವದಕ್ಕೆ ಪೂರ್ವ, ಸಾಹಿತ್ಯಕ್ಕೆ ಶಾಸ್ತ್ರಕ್ಕೆ, ಅಥವಾ ಧರ್ಮಕಾರ್ಯಕ್ಕೆ ಸಂಬಂಧಪಟ್ಟ ಉದ್ದೇಶದ ಬಗ್ಗೆ ಸ್ಥಾಪಿಸಲ್ಪಟ್ಟು ಏರ್ಪಡಿಸೋಣಾದ ಯಾವ ಸಂಘವಾಗಲೀ ಇತರಪರ ಯಾವ ಕಾಲದಲ್ಲಾದರೂ, ಈ ರೆಗ್ಯುಲೇಷನಿನ ಪ್ರಕಾರವಾದ ಒಂದು ಸಂಘದಂತೆ ರಿಜಿಸ್ಟರ್ಮಾಡಲ್ಪಡಬಹುದು; ಪರಂತು ಈ ಕೆಳಗೆ ಬರುವ ನಿಯಮಕ್ಕೆ ಹಾಗೆ ಮಾಡೋಣವು ಒಳಪಟ್ಟಿರತಕ್ಕದ್ದು— ಅದೇನಂದರೆ :—

ರೆಗ್ಯುಲೇಷನಿಗೆ ಪೂರ್ವ ಆದ ಸಂಘಗಳ ರಿಜಿಸ್ಟ್ರೇಷನ್.

ಕಾರ್ಯನಿರ್ವಾಹ ಸಭೆಯವರಿಂದ ಆ ಉದ್ದೇಶದ ಬಗ್ಗೆ ಕೊಡಿಸಲ್ಪಟ್ಟ ಯಾವದಾದರೂ ಸಾಮಾಜಿಕರ ಸಾಮಾನ್ಯಕೂಟದಲ್ಲಿ ಬುದ್ಧಾಗಿ ಅಥವಾ ಪ್ರತಿನಿಧಿದ್ವಾರ ಹಾಜರಿದ್ದ ಸಾಮಾಜಿಕರ ಪೈಕಿ ಐದು ಭಾಗಗಳಲ್ಲಿ ಮೂರು ಭಾಗಗಳವರ ಸಂಮತಿಯು ಹಾಗೆ ರಿಜಿಸ್ಟರ್ಮಾಡಲು ಕೊಡಲ್ಪಟ್ಟಿದ್ದರೆ ಹೊರ್ತು ಅಂಥಾ ಯಾವ ಸಂಘವಾದರೂ ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಡತಕ್ಕದ್ದಲ್ಲ.

ಸಂಮತಿಯು ಅವಶ್ಯ.

ಅಂಥಾ ಸಂಘ ಏರ್ಪಟ್ಟಾಗ ಕಾರ್ಯನಿರ್ವಾಹ ಸಭೆಯನ್ನು ಏರ್ಪಡಿಸದೇ ಇರುವ ಪಕ್ಷಕ್ಕೆ, ಮುಂದೆ ಸಂಘದಪರವಾಗಿ ನಡೆಯುವ ಬಗ್ಗೆ, ಒಂದು ಕಾರ್ಯನಿರ್ವಾಹ ಸಭೆಯನ್ನು ತಕ್ಕ ನೋಟಿಸ ಸಾದರಾದ ಬಳಿಕ ಏರ್ಪಡಿಸಲು ಅದರ ಸಾಮಾಜಿಕರಿಗೆ ನ್ಯಾಯವಾಗಿ ಬರತಕ್ಕದ್ದು.

19. ಹಿಂದಿನ ಕಡೇ ಪ್ರಕರಣದಲ್ಲಿ ನಮೂದಾದ ಅಂಥಾ ಯಾವ ಸಂಘವಾದರೂ ಈ ರೆಗ್ಯುಲೇಷನಿನ ಪ್ರಕಾರ ರಿಜಿಸ್ಟರ್ಮಾಡಲ್ಪಡುವ ಬಗ್ಗೆ, ಸಂಘದ ಹೆಸರು, ಅದರ ಉದ್ದೇಶಗಳು ಮತ್ತು ಕಾರ್ಯ ನಿರ್ವಾಹ ಸಭೆಯವರ ಹೆಸರುಗಳು, ವಿಳಾಸಗಳು ಉದ್ಯೋಗಗಳು ಇವುಗಳನ್ನು ತೋರಿಸುವ ಒಂದು ಮೆಮೋರಾಂಡಮ್ ವಾ ಪಟ್ಟಿಯನ್ನು, ಅದರೊಂದಿಗೆ 3ನೇ ಪ್ರಕರಣದಲ್ಲಿ ವಿಧಿಸಿರುವಂತೆ ಸರ್ಟಿಫೈ ಮಾಡಲ್ಪಟ್ಟ ಆ ಸಂಘದ ನಿಬಂಧನೆಗಳ ಮತ್ತು ಖಾನೂನುಗಳ ಒಂದು ನಕಲನ್ನು ಮತ್ತು ರಿಜಿಸ್ಟ್ರೇಷನ್ ಆಗಬೇಕೆಂದು ತೀರ್ಮಾನ ಮಾಡಿದ ಸಾಮಾಜಿಕರ ಸಾಮಾನ್ಯ ಕೂಟದಲ್ಲಿ ನಡದಂಥಾ ನಡವಳಿಕೆಗಳ ರಿಪ್ರೇಟಿನ ಒಂದು ನಕಲನ್ನು ಜಾಯಿಂಟ ಸ್ಟಾಕ ಕಂಪೆನಿಗಳ ರಿಜಿಸ್ಟ್ರಾರರವರಲ್ಲಿ ಕಾರ್ಯ ನಿರ್ವಾಹ ಸಭೆಯವರು ದಾಖಲ್ಮಾಡಿದರೆ ಸಾಕಾಗಿರುತ್ತದೆ.

ಅಂಥಾ ಸಂಘಗಳು ರಿಜಿಸ್ಟ್ರಾರ್ ಆಫ್ ಜಾಯಿಂಟ್ ಸ್ಟಾಕ ಕಂಪೆನಿಯವರಲ್ಲಿ ಮೆಮೋರಾಂಡಂ ವಾ ಸಂಘದ ಪತ್ರ ಮುಂತಾದ್ದನ್ನು ದಾಖಲ್ ಮಾಡತಕ್ಕದ್ದು.

20. ಯಾವ ಮನುಷ್ಯನಾಗಲೀ, ಜಾಯಿಂಟ ಸ್ಟಾಕ ಕಂಪೆನಿಗಳ ರಿಜಿಸ್ಟ್ರಾರರವರಲ್ಲಿ ದಾಖಲ್ಮಾಡಲ್ಪಟ್ಟ ಎಲ್ಲಾ ದಸ್ತೈವೆಜುಗಳನ್ನು, ಪ್ರತಿ ಅಜಮಾಯಿಷಿಗೆ ಒಂದು ರೂಪಾಯಿ ಫೀ ಕೊಟ್ಟ ನಂತರ ಅಜಮಾಯಿಷಿ ಮಾಡಬಹುದು; ಮತ್ತು ಯಾವ ಮನುಷ್ಯನಾಗಲೀ ಯಾವ ದಸ್ತೈವೆಜಿನ ಅಥವಾ ಯಾವ ದಸ್ತೈವೆಜಿನಿಂದ ಎತ್ತಿ ಬರೆದ ಭಾಗದ ಅಥವಾ ಯಾವ ದಸ್ತೈವೆಜಿನ ಯಾವ ಭಾಗದ ರಿಜಿಸ್ಟ್ರಾರಿಂದ ಸರ್ಟಿಫೈ ಮಾಡಲ್ಪಟ್ಟ ನಕಲನ್ನಾಗಲಿ ಅಂಥಾ ನಕಲಿನ ಅಥವಾ ಪ್ರತಿ ನೂರು ಮಾತುಗಳಿಗೆ ಎರಡು ಆಣೆಯ ಪ್ರಕಾರ ಫೀ ಪಾವತಿ ಮಾಡಿದ ತರುವಾಯ, ಕೋರಿಕೊಳ್ಳಬಹುದು; ಮತ್ತು ಯಾವ ಕೋರ್ಟಿನ ವ್ಯವಹಾರಗಳಲ್ಲಿಯಾದರೂ ಹಾಗೆ ಸರ್ಟಿಫೈ ಮಾಡಲ್ಪಟ್ಟ ನಕಲು ಅದರಲ್ಲಿರುವ ವಿಷಯಗಳನ್ನು ಸ್ಥಾಪಿಸುವುದಕ್ಕೆ, ಅನ್ಯಥಾ ಖಂಡಿಸಲ್ಪಟ್ಟ ಹೊರ್ತು, ಸಾಕಾದಷ್ಟು ಸಾಕ್ಷ್ಯವಾಗಿರತಕ್ಕದ್ದು.

ದಸ್ತೈವೆಜುಗಳ ಅಜಮಾಯಿಷಿ.

21. ಈ ರೆಗ್ಯುಲೇಷನಿನ ಪ್ರಕಾರ ಈ ಕೆಳಗಿನ ಸಂಘಗಳು ರಿಜಿಸ್ಟರ್ಮಾಡಲ್ಪಡಬಹುದು ಅವು ಯಾವವೆಂದರೆ:—ಧರ್ಮ ಕಾರ್ಯಗಳ ಸಂಘಗಳು, ಶಾಸ್ತ್ರವನ್ನು, ಗ್ರಂಥ ಸಮುದಾಯವನ್ನು ಅಥವಾ ಕಲೆಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ, ಉಪದೇಶದ ಬಗ್ಗೆ, ಉಪಯುಕ್ತವಾದ ಜ್ಞಾನಪ್ರಸರಣದ ಬಗ್ಗೆ, ಎಲ್ಲರ ಅಥವಾ ಸಾಮಾಜಿಕರ ಉಪಯೋಗಾರ್ಥವಾಗಿ ಪುಸ್ತಕಶಾಲೆಗಳನ್ನು ಅಥವಾ ವಾಚಕಶಾಲೆಗಳನ್ನು ಚಿತ್ರಲೇಖನ ಮುಂತಾದ ಕಲೆಗಳ ಸಂಬಂಧವಾದ ಕಲಸಗಳ, ಮತ್ತು ಸ್ಥಾವರ ಜಂಗಮಶಾಸ್ತ್ರ ಸಂಬಂಧವಾದ ಪದಾರ್ಥಗಳ, ಯಾಂತ್ರಿಕ ಮತ್ತು ಪದಾರ್ಥ ವಿಜ್ಞಾನಸಂಬಂಧವಾದ ನವಕಲ್ಪನೆಗಳ, ಉಪಕರಣಗಳ ಅಥವಾ ಉಪಯೋಗ ಸಂಗ್ರಹಗಳ ಸರ್ವಜನೋಪಯುಕ್ತವಾದ ವಿಚಿತ್ರವಸ್ತು ಪ್ರದರ್ಶನ ಶಾಲೆಗಳನ್ನು ಸ್ಥಾಪಿಸುವ ಅಥವಾ ಕಾಪಾಡುವ ಬಗ್ಗೆ ಏರ್ಪಡಿಸಲ್ಪಟ್ಟ ಸಂಘಗಳು.

ಯಾವ ಸಂಘಗಳಿಗೆ ರೆಗ್ಯುಲೇಷನ್ ಪ್ರಯೋಗಿಸಲ್ಪಡತಕ್ಕದ್ದು.

ಪಿ. ಎನ್. ಕೃಷ್ಣಮೂರ್ತಿ,
ಮೈಸೂರು ದಿವಾನ.

1535

103

ಮೈಸೂರ ಗೆಜೆಟ್.

ವಿಶೇಷಪತ್ರಿಕೆ.

ಸರ್ಕಾರದಿಂದ ಪ್ರಾಯಿಷ್ಕರಿಸಿದ್ದು.

ಮೈಸೂರು, 17ನೇ ಅಕ್ಟೋಬರ್ 1904.

ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದ್ದೂರ್‌ರವರ ಸರ್ಕಾರದಿಂದ ಕೊಡೋಣಾದ

ಇಸ್ತಿಹಾರ್‌ನಾಮೆ.

ನಂ॥ C. ತಾರೀಖು 17ನೇ ಅಕ್ಟೋಬರ್ 1904, ಮೈಸೂರು.

1904ನೇ ಇಸವಿ ಅಕ್ಟೋಬರ್ ತಾರೀಖು 17ರಲ್ಲು ನವರಾತ್ರಿ ಮಹೋತ್ಸವ ಪ್ರಯುಕ್ತವಾದ ದರ್ಬಾರಿನಲ್ಲಿ ಶ್ರೀಮನ್ಮಹಾರಾಜ ರಾಜಾಸಾಹೇಬ್ ಬಹದ್ದೂರ್‌ರವರು ಬಿರುದುಗಳನ್ನು ದಯಪಾಲಿಸಿ ಅಪ್ಪಣೆ ಕೊಟ್ಟ ಇದರ ಕೆಳಗೆ ಬರುವ ಪ್ರಸಿದ್ಧ ಪತ್ರಿಕೆಯನ್ನು ಸರ್ವರ ತಿಳ್ಳುವಳಿಕೆಬಗ್ಗೆ ಪ್ರಕಟಪಡಿಸಿರುತ್ತೆ.

ಹುಕುಂ ಬಮೋಜಿಬ್,

B. K. VENKATAVARADA IYENGAR,

ಸೆಕ್ರಿಟೆರಿ, ಮೈಸೂರು ಗವರ್ನಮೆಂಟ್, ಜನರಲ್ ಮತ್ತು ರೆವಿನ್ಯೂ ಇಲಾಖಾ.

ಪ್ರಸಿದ್ಧಪತ್ರಿಕೆ.

ಶ್ರೀಃ

ಶ್ರೀಮತ್ಸಮಸ್ತ ಭೂಮಂಡಲ ಮಂಡನಾಯಮಾನ ನಿಖಿಳದೇಶಾವತಂಸ ಕರ್ಣಾಟಕ ಜನಪದ ಸಂಪದಧಿಷ್ಠಾನಭೂತ ಶ್ರೀಮನ್ಮಹಿಶೂರಮಹಾಸಂಸ್ಥಾನಮಧ್ಯದೇದೀಪ್ಯಮಾನ ನಿಖಿಳಕಲಾನಿಧಿ ಕುಲಕ್ರಮಾಗತ ರಾಜಕ್ಷಿತಿಪಾಲಪ್ರಮುಖ ನಿಖಿಳ ರಾಜಾಧಿರಾಜ ಮಹಾರಾಜ ಚಕ್ರವರ್ತಿಮಂಡಲಾನುಭೂತ ದಿವ್ಯರತ್ನಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾಪ್ರತಿಮವೀರ ನರಪತಿಬಿರುದಾಂತಾಂಬರಗಂಡ ಲೋಕೈಕವೀರ ಯದುಕುಲ ಪಯೋಪಾರಾವಾರ ಕಳಾನಿಧಿ ಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡ ಭೇರುಂಡ ಧರಣೀವರಾಹ ಹನೂಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತರಾದ ಕರ್ಣಾಟಕ ಸಿಂಹಾಸನಾಧೀಶ್ವರ ಶ್ರೀಮತ್ಕೃಷ್ಣರಾಜ ಒಡೆಯರ್ ಬಹದ್ದೂರ್‌ರವರು—

ಶಾಲಿವಾಹನ ಶಕ ೧೮೨೬ನೆ ಕ್ರೋಧಿಸಂವತ್ಸರದ ಆಶ್ವಯುಜ ಶುದ್ಧ ೯ ಸೋಮವಾರದಲ್ಲು ನವರಾತ್ರಿ ಮಹೋತ್ಸವಪ್ರಯುಕ್ತವಾದ ದರ್ಬಾರಿನಲ್ಲಿ ನಮ್ಮ ಅನುಗ್ರಹಕ್ಕೆ ಪಾತ್ರರಾದ—

ಚಂಗಾಡು ಶ್ರೀನಿವಾಸಯ್ಯಂಗಾರ್ರಿಗೆ "ರಾಜಮಂತ್ರಪ್ರವೀಣ" ಎಂಬ ಬಿರುದನ್ನು, ಚುನ್ನಿಲಾಲ್ ತಾರಾಚಂದ್ ಪಲ್ಲಾಲರಿಗೆ "ರಾಜಸಭಾಭೂಷಣ" ಎಂಬ ಬಿರುದನ್ನು, ಗುಬ್ಬಿ ತೋಟದಪ್ಪನವರಿಗೆ "ಧರ್ಮಪ್ರವರ್ತಕ" ಎಂಬ ಬಿರುದನ್ನು ತಕ್ಕ ಮರ್ಯಾದೆಗಳೊಡನೆ ದಯಪಾಲಿಸಿರುತ್ತೇವೆ.

KRISHNARAJA WADIYAR.

1537

104

ಮೈಸೂರ ಗೆಜೆಟ್.

ಸರ್ಕಾರದಿಂದ ಘೋಷಿಸಲ್ಪಟ್ಟದ್ದು.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 27, ಸನ 1904.

☞ ಈ ಭಾಗವನ್ನು ಪ್ರತ್ಯೇಕಿಸಿ ಇಡುವ ಬಗ್ಗೆ ಇದಕ್ಕೆ ಬೇರೆಯಾಗಿ ಪುಟಸಂಖ್ಯೆ ಕೊಡಲ್ಪಡುತ್ತದೆ.

೪ನೆಯ ಭಾಗ.

ಸರ್ಕಾರಿ ಕಾಗದ ಪತ್ರಗಳು.

ಮೈಸೂರಲ್ಲಿ ಸೇರಿದ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಮೈಸೂರು ಸಂಸ್ಥಾನದ ದೀವಾನರವರು ಮಾಡಿದ ಉಪನ್ಯಾಸ.

1904ನೆಯ ಇಸವಿ ಅಕ್ಟೋಬರ್ ತಾರೀಖು 21 ನೆಯ ಶುಕ್ರವಾರ.

ಸಭಿಕರಿರಾ,

ಶ್ರೀಮನ್ಮಹಾರಾಜರವರ ಹೆಸರಿನಲ್ಲಿ ಈ ಪಟ್ಟಣಕ್ಕೆ ಪುನಃ ತಮ್ಮನ್ನೆಲ್ಲಾ ಬರಮಾಡಿಕೊಳ್ಳುವಲ್ಲಿ ಈ ವರ್ಷ ಪ್ಲೇಗಿನ ಹಾವಳಿ ಕಡಿಮೆಯಾದಪ್ರಯುಕ್ತ ನಾವು ಸ್ವಲ್ಪಮಟ್ಟಿಗೆ ನಿರಪಾಯವಾದ ಸನ್ನಿವೇಶದಲ್ಲಿ ಸಭೆಸೇರಿದ್ದೇವೆಂದು ತಿಳಿಸಲು ಸಂತೋಷಿಸುತ್ತೇನೆ. ಶ್ರೀಮನ್ಮಹಾರಾಜರವರು ರಾಜ್ಯಭಾರವನ್ನು ವಹಿಸಿದಬಳಿಕ ಮೊದಲನೆಯಸಲ ನಡೆದ ಸಭೆಯು ಆಗ್ರಾಸನಾಧಿಪತ್ಯವನ್ನು ವಹಿಸಿ ತನ್ಮೂಲಕ ಅವರು ಪ್ರಕಟಪಡಿಸಿದ ಅಭಿಮಾನವೂ ಆಕಾಲದಲ್ಲಿ ದಯಪಾಲಿಸಿದ ಹಿತೋಕ್ತಿಗಳೂ ನಮ್ಮ ಜವಾಬ್ದಾರಿಯನ್ನು ಹೆಚ್ಚಿಸಿದ್ದಲ್ಲದೆ ಈ ದೇಶದ ಕ್ಷೇಮಲಾಭದಲ್ಲಿಯೂ ಪ್ರಜೆಗಳ ಪುರೋವೃದ್ಧಿಯಲ್ಲಿಯೂ ಶ್ರೀಮನ್ಮಹಾರಾಜರವರು ತೋರ್ಪಡಿಸಿದ ಆದರಕ್ಕಾಗಿ ಅವರಲ್ಲಿ ನಮ್ಮ ಕೃತಜ್ಞತೆಯನ್ನೂ ಅಭಿವೃದ್ಧಿಪಡಿಸಿವೆ. ಹಿಂದಿನ ಬ್ರಿಟಿಷ್ ರೆಸಿಡೆಂಟರಾದ ಸರ್ ಡೊನಾಲ್ಡ್ ರಾಬರ್ಟ್‌ಸರ್ಗರವರು ಜನೋಪಕಾರಕವಾದ ರಾಜಕಾರ್ಯವನ್ನು ದೀರ್ಘಕಾಲ ವಹಿಸಿ ಬಳಿಕ ತಮ್ಮ ನ್ಯಾಯಾರ್ಜಿತವಾದ ವಿಶ್ರಾಂತಿಸುಖವನ್ನು ಅನುಭವಿಸುವುದಕ್ಕಾಗಿ ತಮ್ಮ ಸ್ವದೇಶಕ್ಕೆ ತೆರಳಿದ್ದನ್ನು ಕುರಿತು ಈ ಸಭೆಯ ಕಾರ್ಯವನ್ನು ಪ್ರಾರಂಭಿಸುವುದಕ್ಕೆ ಮೊದಲು, ತಿಳಿಸಲಪೇಕ್ಷಿಸುತ್ತೇನೆ. ಶ್ರೀಮನ್ಮಹಾರಾಜರವರು ಪ್ರಾಪ್ತವಯಸ್ಕರಾಗುವುದಕ್ಕೆ ಪೂರ್ವ ಈ ಸಂಸ್ಥಾನದ ಆಡಳಿತದಲ್ಲಿ ಸರ್ ರಾಬರ್ಟ್‌ಸರ್ಗರವರಿಗಿದ್ದ ವಿಶೇಷವಾದ ಸಂಬಂಧದಿಂದ ಇಲ್ಲಿ ಅವರ ಗುರುತು ಶಾಶ್ವತವಾಗಿ ನಿಂತಿದೆ. ಅವರ ಪರೋಕ್ಷದಲ್ಲಿ ನಾವು ಪ್ರಥಮತಃ ಸಭೆ ಸೇರಿದ ಈ ಸನ್ನಿವೇಶದಲ್ಲಿ ಅವರು ಮೈಸೂರು ಸೀಮೆಯ ಆಡಳಿತದಲ್ಲಿ ವಹಿಸಿದ ಆದರಾತಿಶಯಕ್ಕಾಗಿ ನಮ್ಮೆಲ್ಲರ ಪರವಾಗಿಯೂ ಅವರನ್ನು ವಂದಿಸುತ್ತೇನೆ. ಅವರು ಇನ್ನೂ ಅನೇಕ ವರ್ಷಕಾಲ ಪ್ರಸಿದ್ಧರಾಗಿಯೂ ಸುಖಿಯಾಗಿಯೂ ಜೀವಿಸಲಿ ಎಂದು ನಾವು ಮನಃಪೂರ್ವಕವಾಗಿ ಹಾರೈಸುತ್ತೇವೆ. ಇದೇ ಸಮಯದಲ್ಲಿ, ಪ್ರಖ್ಯಾತರಾದ ಬ್ರಿಟಿಷ್ ಸೇನಾಪತಿಗಳೂ ಪ್ರಕೃತದಲ್ಲಿ ಇಂಡಿಯಾದೇಶದ ಕಮಾಂಡರ್ ಇನ್ ಚೀಫರೂ ಆದ ಕಿಚೆನರ್‌ಮಿನ ಲಾರ್ಡ್ ಕಿಚೆನರ್‌ರವರು ಇಲ್ಲಿಗೆ ದಯಮಾಡಿಸಿ ನಮಗೆಲ್ಲಾ ಗೌರವವನ್ನು ಉಂಟುಮಾಡಿದ ವಿಷಯವನ್ನೂ ತಿಳಿಸುತ್ತೇನೆ.

ನಾನು ಕಳೆದ ವರ್ಷದ ಉಪನ್ಯಾಸದಲ್ಲಿ ವಿವರಿಸಿದ ರಾಜಕಾರ್ಯ ನಿರ್ವಾಹಕ್ರಮದಲ್ಲಿ, ಒಂದು ವಿಷಯದಲ್ಲಿ ವಿನಾ, ಯಾವ ವ್ಯತ್ಯಾಸಗಳೂ ಆಗಲಿಲ್ಲ. ನಿಮಗೆ ತಿಳಿದಿರುವಂತೆ ರೆವಿನ್ಯೂ ಇಲಾಖೆಯ ಸರಿಯಾದ ಮೇಲು ವಿಚಾರಣೆಗಾಗಿಯೇ ಒಬ್ಬ ರೆವಿನ್ಯೂ ಕಮಿಷನರನ್ನು ನೇಮಿಸಿದ್ದು ಸರಿಯಷ್ಟೆ. ಅವರು ಆಗಾಗ್ಗೆ ಸಂಚಾರ ಹೊರಟು ಅಜಮಾಯಿಷಿಮಾಡಬೇಕೆಂದು ಗೊತ್ತುಮಾಡಿತ್ತು. ಮುಖ್ಯವಾಗಿ ರೆವಿನ್ಯೂ ಕಮಿಷನರ ಹುದ್ದೆಯೊಡನೆ ರೆವಿನ್ಯೂ ಕೌನ್ಸಿಲರ ಕೆಲಸವು ಸೇರಿದ್ದದ್ದರಿಂದ ಮೇಲೆ ಹೇಳಿದ ಉದ್ದೇಶಗಳು ಅಸಮಗ್ರವಾಗಿ ನೆರವೇರುತ್ತಿದ್ದವು. ಅಲ್ಲದೆ ಅವರು ರೆವಿನ್ಯೂ ಕಮಿಷನರಾಗಿ ತಾವು ಮಾಡಿದ ಹುಕುಮ್ಮನ್ನೂ ಕೊಟ್ಟ ಅಭಿಪ್ರಾಯವನ್ನೂ ರೆವಿನ್ಯೂ ಕೌನ್ಸಿಲರಾಗಿ ತಾವೇ ಪುನಃ ವಿಮರ್ಶೆಮಾಡಬೇಕಾಗುತ್ತಿತ್ತು. ಇದರಿಂದಲೂ ಇನ್ನೂ ಬೇರೆ ಕಾರಣಗಳಿಂದಲೂ ಪ್ರತ್ಯೇಕವಾದ ಒಬ್ಬ ರೆವಿನ್ಯೂ ಕಮಿಷನರನ್ನು ನೇಮಿಸಿ ಅವರ ಕೆಲಸದೊಡನೆ, ಸೆಟಲ್‌ಮೆಂಟ್ ಕೆಲಸವು ಮುಗಿದ ಬಳಿಕ ತಮ್ಮ ಕಾಲವನ್ನೆಲ್ಲಾ ವಿನಿಯೋಗಿಸುವಷ್ಟು ಕೆಲಸವಿಲ್ಲದಿದ್ದ ಡೈರೆಕ್ಟರ್ ಆಫ್ ಸ್ಟಾಟಿಸ್ಟಿಕ್ಸ್‌ರವರ ಕೆಲಸವನ್ನೂ, ಸೇರಿಸಲಾಯಿತು. ಈ ಏರ್ಪಾಡು, ಮಿತವ್ಯಯ, ಕಾರ್ಯನಿರ್ವಾಹ, ಒಳ್ಳೆ ರಾಜತಂತ್ರ ಈ ಯೆಲ್ಲಾ ವಿಷಯಗಳಲ್ಲಿಯೂ ಉತ್ತಮವಾಗಿ ತೋರಿದೆ.

ಈ ಸಂಸ್ಥಾನದ ಅಕೌಂಟು ಇಲಾಖೆಯಲ್ಲಿ ಈಚೆಗೆ ಜಾರಿಗೆ ತಂದ ಪರಿಷ್ಕೃತವಿಧಾನಗಳ ಪೂರ್ಣಪ್ರಯೋಜನವನ್ನು ಪಡೆದುಕೊಳ್ಳುವದಕ್ಕಾಗಿ, ಬ್ರಿಟಿಷ್ ಅಕೌಂಟ್ ಇಲಾಖೆಯಲ್ಲಿ ಅನುಭವಶಾಲಿಯಾದ ಒಬ್ಬ ಲೆಕ್ಕಾಚಾರಸ್ಥರನ್ನು ಮೂರು ವರ್ಷಕಾಲ ಕಂಟ್ರೋಲರ್ ಕೆಲಸಕ್ಕೆ ಚುನಾವಣೆಮಾಡಲಾಯಿತು. ಈ ಸಂಸ್ಥಾನದಲ್ಲಿ ಹಿಂದೆ ಆಗಾಗ್ಗೆ ಜಾರಿಗೆತಂದ ಏರ್ಪಾಡುಗಳು ಅಸಮಗ್ರವಾಗಿ ಇದ್ದದ್ದರಿಂದ, ಅವುಗಳಿಗೆ ಪ್ರತಿಯಾಗಿ ಇಂಡಿಯಾ ಸರ್ಕಾರದ ರೆವಿನ್ಯೂ ಮತ್ತು ಆಗ್ರಿಕಲ್ಚರಲ್ ಸೆಕ್ರಿಟೆರಿಯವರ ಆಫೀಸಿನಲ್ಲಿರುವಂತೆ ಉಚಿತವಾದ ಕೆಲವು ತಿದ್ದುಪಾಟುಗಳನ್ನು ಜಾರಿಗೆತಂದದ್ದು ಸರಿಯಷ್ಟೆ. ಈಗ ಇಲ್ಲಿಯ ರೆವೆನ್ಯೂ ಮತ್ತು ಜನರಲ್ ಸೆಕ್ರಿಟೆರಿಯವರ ಆಫೀಸಿನಲ್ಲಿ ಒಂದು ಫೈನಾಂಷಲ್ ಎಂದರೆ ಲೆಕ್ಕಾಚಾರಕ್ಕೆ ಸಂಬಂಧಪಟ್ಟ ಶಾಖೆಯನ್ನು ಏರ್ಪಡಿಸಲಾಯಿತು. ಈ ವಿಷಯದಲ್ಲಿ ದಯವಿಟ್ಟು ಸಹಾಯಮಾಡಿದ್ದಕ್ಕಾಗಿ ಇಂಡಿಯಾ ಸರ್ಕಾರಕ್ಕೆ ನಾವು ಕೃತಜ್ಞರಾಗಿರುತ್ತೇವೆ. ಈ ತಿದ್ದುಪಾಟುಗಳಿಗನುಗುಣವಾಗಿ ಜನರಲ್ ಸೆಕ್ರಿಟರಿಯಟ್ಟಿನಿಂದ ಮುಜರಾಯಿ ಸೆಕ್ರಿಟರಿಯವರ ಆಫೀಸನ್ನು ಬೇರೆಮಾಡಿ ಫಾರೆಸ್ಟ್ ಸೆಕ್ರಿಟರಿ ಆಫೀಸನ್ನು ಜನರಲ್ ಸೆಕ್ರಿಟರಿ ಆಫೀಸಿನಲ್ಲಿ ಅಡಕಮಾಡಲಾಯಿತು.

ಜಮಾಖರ್ಚು.—ಕಳೆದ ವರ್ಷ ಒಟ್ಟು 214,31,063 ರೂಪಾಯಿ ಜಮೆಯೂ ಒಟ್ಟು 218,96,459 ರೂಪಾಯಿ ಖರ್ಚೂ ಆದವು.

ಸಾಮಾನ್ಯಜಮೆಗಳಿಂದ 172,25,706 ರೂಪಾಯಿ, ಬಡ್ಡಿಯಿಂದ 1,91,537 ರೂಪಾಯಿ, ರೈಲ್ವೇಯಿಂದ 7,08,796 ರೂಪಾಯಿ, ಚಿನ್ನದ ಗಣಿಯಿಂದ 18,33,804 ರೂಪಾಯಿ, ಕಾವೇರಿ ವೈದ್ಯುತ ಶಕ್ತಿಯಿಂದ 14,71,220 ರೂಪಾಯಿ ಹುಟ್ಟುವಳಿಯಾದವು.

ಬಡ್ಡಿಗಾಗಿ 2,36,440 ರೂಪಾಯೂ, ರೈಲ್ವೆಗಳಿಗಾಗಿ 7,20,260 ರೂಪಾಯೂ, ಕಾವೇರೀ ವೈದ್ಯುತಶಕ್ತಿ ಸ್ಥಾಪನೆಗಾಗಿ 10,49,814 ರೂಪಾಯೂ, ಹೋಗಲಾಗಿ, ಸಾಮಾನ್ಯಬಾಬುಗಳಿಗಾಗಿ 1,98,39,845 ರೂಪಾಯಿ ಖರ್ಚಾದವು.

ಗತ ವರ್ಷ ನಿರೀಕ್ಷಿಸಿದಂತೆ ಜಮಾಖರ್ಚು ಅಂದಾಜಾಪಟ್ಟಿಯ ಪ್ರಕಾರ ಜಮೆಗೆ ಮೇಲೆ 9 ಲಕ್ಷ ರೂಪಾಯಿ ಹೆಚ್ಚು ಖರ್ಚಾಗುವುದಕ್ಕೆ ಬದಲಾಗಿ 4,65,000 ರೂಪಾಯಷ್ಟು ಮಾತ್ರವೇ ಹೆಚ್ಚು ಖರ್ಚಾಯಿತು. ಅಂದಾಜಾಪಟ್ಟಿಯಲ್ಲಿ ನಮೂದಿಸಿದ ವರಮಾನಕ್ಕಿಂತ ಸ್ವಲ್ಪಕಡಿಮೆ 8 ಲಕ್ಷ ರೂಪಾಯಿ ಹೆಚ್ಚು ವರಮಾನವಾಯಿತು. ಇದಕ್ಕೆ ಚಿನ್ನದ ಗಣಿಯಿಂದ ಬರತಕ್ಕ ರಾಜಾಯದ ಹೆಚ್ಚು ಭಾಗವು ಜಮೆಯಾದ್ದೂ (6,01,705 ರೂಪಾಯೂ) ರೈಲ್ವೆಯಲ್ಲಿ ಹೆಚ್ಚು ಹುಟ್ಟುವಳಿಯಾದ್ದೂ (1,15,540 ರೂಪಾಯೂ) ಕಾವೇರಿ ವೈದ್ಯುತ ಶಕ್ತಿಯ ಉಪಯೋಗ ಹೆಚ್ಚಿದ್ದೂ (2,86,072 ರೂ.) ಮುಖ್ಯಕಾರಣಗಳಾಗಿವೆ. ಇದೇ ಕಾಲದಲ್ಲಿ ಕೆಲವು ಬಾಬುಗಳಲ್ಲಿ ಸ್ವಲ್ಪ ಹಣ ಮಿಕ್ಕಿತು ಅಥವಾ ಅಂದಾಜಾಪಟ್ಟಿಯ ಕೆಲವು ಖರ್ಚುಬಾಬುಗಳಲ್ಲಿ ಹಣವನ್ನು ಮಿಗಿಸುವಂತೆ ಮಾಡಲಾಯಿತು. ಇದಲ್ಲದೆ ಗತವರ್ಷದ ಅಂದಾಜಾಪಟ್ಟಿಯು ತಯಾರಾದಾಗ ನಿರೀಕ್ಷಿಸಲಾಗದೆಹೋದ ಕೆಲವು ದುಬಾರಿ ಖರ್ಚುಗಳು ಉಂಟಾದವು. ಕೋಲಾರ ಡಿಸ್ಟ್ರಿಕ್ಟಿನ ಪಾಲಾರುಸೊಲುಕೆರೆಗಳು ಒಡೆದುಹೋದ್ದರಿಂದ ಅವುಗಳ ದುರಸ್ತಿ ಹೆಚ್ಚು ಖರ್ಚಿಗೆ ಕಾರಣವಾಯಿತು; ಮತ್ತು ಅರಮನೆ ಖರ್ಚಿಗೆ 2 ಲಕ್ಷ ರೂಪಾಯಿ ಹೆಚ್ಚಾಗಿ ಕೊಡಲಾಯಿತು. ಒಟ್ಟಿನಲ್ಲಿ 214 ಲಕ್ಷಕ್ಕೆ ಸ್ವಲ್ಪವಿಾಗಿದ ಖರ್ಚಿಗೆ ಏರ್ಪಾಡು ಮಾಡಿತ್ತು. ಮೇಲೆ ನಮೂದಿಸಿದಂತೆ, ನಿರೀಕ್ಷಿತವಲ್ಲದ ಹೆಚ್ಚು

ಖರ್ಚಾಗಬಹುದ್ದರೆ ಈ ವರ್ಷಾಂತ್ಯದಲ್ಲಿ ಆದಾಯವ್ಯಯಗಳು ಸರಿಹೋಗುತ್ತಿದ್ದವೆಂಬಂಶವು ತಮಗೇ ವೇದ್ಯವಾಗುವದು. 1239

ಗತವರ್ಷದ ಮತ್ತು ಅದಕ್ಕೆ ಹಿಂದಿನವರ್ಷದ ಆದಾಯವ್ಯಯಗಳನ್ನು ಹೋಲಿಸಿ ನೋಡುವಲ್ಲಿ, ನೆಲಗಂದಾಯದಲ್ಲಿಯೂ ಸಾಯರಿನಲ್ಲಿಯೂ ಮುಖ್ಯವಾಗಿ ವರಮಾನ ಕಡಿಮೆಯಾಯಿತು. ಜಮೀನ್ ಕಂದಾಯದ ಹುಟ್ಟುವಳಿಯಲ್ಲಿ ಸುಮಾರು 1 ಲಕ್ಷ ರೂಪಾಯಿ ಕಡಿಮೆಯಾದ್ದರಿಂದಲೂ, 1903ನೆಯ ಇಸವಿಯ ಆಗಸ್ಟ್ 29 ನೆಯ ತಾರೀಖಿನ ಹುಕುಂ ಪ್ರಕಾರ ಖಾಲೀನಿವೇಶನಗಳ ಕಂದಾಯದ ದರವನ್ನು ಬದಲಾಯಿಸಿ ಆ ಬಾಬಿನ 73,000 ರೂಪಾಯಿಗಳನ್ನು ಮೊಹತಪರ್ಹಾವಿಗೆ ವರ್ಗಾಯಿಸಿದ್ದರಿಂದಲೂ, ಹಿಡುವಳಿ ಜಮೀನುಗಳ ಮಾರಾಟದಲ್ಲಿ 33,066 ರೂಪಾಯಿಗಳು ಕಡಿಮೆಯಾದ್ದರಿಂದಲೂ ಜಮೀನ್ಹುಟ್ಟುವಳಿ (2,09,239 ರೂಪಾಯಿ) ಕಡಿಮೆಯಾಗುವದಕ್ಕೆ ಕಾರಣವಾಯಿತು. ಸುಪಾರಿ ಹಾಳತದ ವಸೂಲಾತಿ ಕಡಿಮೆಯಾದ್ದರಿಂದ ಸಾಯರ್ ಬಾಬಿನಲ್ಲಿ (47,569 ರೂಪಾಯಿ) ಉತ್ಪತ್ತಿ ಕಡಿಮೆ ಆಯಿತು. ಇದಕ್ಕೆ ಪ್ರತಿಯಾಗಿ ಆಬ್ಕಾರಿಯಲ್ಲಿ 72,000 ರೂಪಾಯಿ, ಜಂಗಲಿನಲ್ಲಿ 79,000 ರೂಪಾಯಿ, ಸ್ಟ್ಯಾಂಪಿನಲ್ಲಿ 20,000 ರೂಪಾಯಿ ಮತ್ತು ಇತರ ಬಾಬುಗಳಲ್ಲಿ ಸಹ ವರಮಾನಗಳು ಹೆಚ್ಚಾದವು.

ಖರ್ಚುಬಾಬಿನಲ್ಲಿ ಕಾವೇರಿ ವೈದ್ಯುತಶಕ್ತಿಯ ಎರಡನೆಯ ಸ್ಥಾಪನೆಗಾಗಿ ಗತವರ್ಷದಲ್ಲಿ 10,49,814 ರೂಪಾಯಿಗಳನ್ನು ಖರ್ಚು ಮಾಡಿತು. ಕಳೆದ ವರ್ಷದ ಉಪನ್ಯಾಸದಲ್ಲಿ ವಿವರಿಸಿದಂತೆ ಅರಮನೆಯ ಹೊಸ ಕಟ್ಟಡ, ಚಿನ್ನದಗಣಿಗೆ ನೀರುಸರಬರಾಯಿ, ಮಾರೀಕಣಿವೆ ಕಾಮಗಾರಿ, ಶ್ರೀಮಾನ್ಮಹಾರಾಜರವರು ರಾಜ್ಯಭಾರವನ್ನು ವಹಿಸಿದ ಕಾಲದಲ್ಲಿ ಆದ ಉತ್ಸವದ ಮತ್ತು ಡೆಲ್ಲಿಯ ಖರ್ಚುಗಳು, ಮೈಸೂರುಸಿಟಿ ಟ್ರಸ್ಟ್, ಚಕ್ರವರ್ತಿಸಿಯವರ ಮೆಮೋರಿಯಲ್, ಪ್ಲೇಗು ಮತ್ತು ಇತರಬಾಬುಗಳು, ಇವೇ ಮೊದಲಾದ ವಿಶೇಷ ಬಾಬುಗಳಿಗಾಗಿ ಒಟ್ಟು 22,26,000 ರೂಪಾಯಿ ಖರ್ಚಾಯಿತು. ಮತ್ತು ಚಾಮರಾಜೇಂದ್ರ ನೀರು ಸರಬರಾಯಿ ಕೆಲಸಕ್ಕಾಗಿ ಬೆಂಗಳೂರು ಮ್ಯುನಿಸಿಪಾಲಿಟಿಯಿಂದ ಬರಬೇಕಾದ ಸುಮಾರು 3 ಲಕ್ಷ ರೂಪಾಯಿಯನ್ನು ಸಂಸ್ಥಾನದ ಖರ್ಚಿಗೆ ಹಾಕಿತು. ಜಂಗಲ್ ಕೆಲಸವರ್ಕಸಿಗಾಗಿ (40,692 ರೂಪಾಯಿ), ವಿದ್ಯಾಭ್ಯಾಸಕ್ಕಾಗಿ (30,000 ರೂಪಾಯಿ), ವೈದ್ಯಕ್ಕಾಗಿ (69,918 ರೂಪಾಯಿ) ಮತ್ತು ಇನ್ನು ಕೆಲವು ಬಾಬುಗಳಿಗಾಗಿ ಸ್ವಲ್ಪ ಹೆಚ್ಚು ಖರ್ಚುಗಳೂ ಆದವು. ನಿಮ್ಮ ಕೈಯಲ್ಲಿರುವ ಪಟ್ಟಿಯಲ್ಲಿ, ಜಮಾ ಖರ್ಚಿನ ನಾನಾ ಬಾಬುಗಳ ವ್ಯತ್ಯಾಸಗಳನ್ನೆಲ್ಲಾ ವಿವರವಾಗಿ ತಿಳಿಸಿದೆ.

ಕಳೆದ ಜುಲೈ ಗುರ್ರಿ ತಾರೀಖಿನಲ್ಲಿ 1,34,74,685 ರೂಪಾಯಿ ಶಿಲ್ಕು ಉಳಿದಿತ್ತು. ಈಪೈಕಿ 42,87,700 ರೂಪಾಯಿಗಳು ಸರ್ಕಾರಿ ಪತ್ರರೂಪವಾಗಿಯೂ ಬಾಕಿ ನಗದಾಗಿಯೂ ಇದ್ದವು—ಎಂದರೆ, 61,41,074 ರೂಪಾಯಿಗಳು ಮದ್ರಾಸ್ ಬ್ಯಾಂಕಿನಲ್ಲಿಯೂ, 29,93,891 ರೂಪಾಯಿಗಳು ಸರ್ಕಾರಿ ಖಜಾನೆಗಳಲ್ಲಿಯೂ, 52,020 ರೂಪಾಯಿಗಳು ಮೆ॥ ಕೂಟ್ಸ್ ಅಂಡಕೊ ಯವರ ಬಳಿಯಲ್ಲಿಯೂ, ಇದ್ದವು. ವರ್ಷಾಂತ್ಯದಲ್ಲಿ 44,24,953 ರೂಪಾಯಿಗಳು ಶಿಲ್ಕು ಉಳಿದಿತ್ತು.

ಸಾಲ್ಮಜಕೂರಿನ ಜಮಾ ಖರ್ಚು ಅಂದಾಜಾ ಪಟ್ಟಿಯಲ್ಲಿ ಶಿವಲ್ ಮತ್ತು ಪಬ್ಲಿಕ್ ವರ್ಕ್ಸ್ ಬಾಬುಗಳಿಂದ 1,77,04,000 ರೂಪಾಯಿಗಳು, ಚಿನ್ನದಗಣಿಯ ರಾಜಾಯದಿಂದ 17 ಲಕ್ಷ ರೂಪಾಯಿಗಳು, ವೈದ್ಯುತಶಕ್ತಿಯ ಮಾರಾಟದಿಂದ 15 ಲಕ್ಷ ರೂಪಾಯಿಗಳು, ರೈಲ್ವೆಗಳಿಂದ 5,61,000 ರೂಪಾಯಿಗಳು, ಎಂದರೆ ಒಟ್ಟು 2,14,65,000 ರೂಪಾಯಿಗಳು ಬರುವುದಾಗಿ ಅಂದಾಜು ಮಾಡಿದೆ. ಇದು ಹಿಂದಿನ ವರ್ಷದ ವರಮಾನಕ್ಕಿಂತ ಸ್ವಲ್ಪ ಹೆಚ್ಚಾಗಿದೆ. ಈ ವರ್ಷದ ಒಟ್ಟು ಖರ್ಚು 2,19,25,000 ರೂಪಾಯಿ ಆಗುವುದಾಗಿ ಅಂದಾಜು ಮಾಡಿದೆ. ಇದರಲ್ಲಿ ಅನೇಕ ವಿಶೇಷ ಖರ್ಚುಗಳಿಗೂ ಬಹಳವಾಗಿ ಏರ್ಪಾಡುಮಾಡಿ ಕಾವೇರೀ ವೈದ್ಯುತಶಕ್ತಿಯ ದ್ವಿತೀಯಸ್ಥಾಪನೆಗಾಗಿಯೂ ಬೆಂಗಳೂರಿನಲ್ಲಿ ಇಡುವ ವೈದ್ಯುತ ದೀಪಗಳಿಗಾಗಿಯೂ ಮಾರಿಕಣಿವೆ ಕಾಮಗಾರಿಗಾಗಿಯೂ ಒಟ್ಟು ಬೂಡವಾಳದ ಖರ್ಚು 14 ಲಕ್ಷ ರೂಪಾಯಿ ಆಗುತ್ತದೆ. ರೇಲ್ವೆ ಹಾಕುವುದಕ್ಕಾಗಿ ಆಗುವ ಖರ್ಚೂ ರೇಲ್ವೆ ರೆವಿನ್ಯು ಲೆಕ್ಕಕ್ಕಾಗಿ ಆಗುವ ನಿವ್ವಳ ಖರ್ಚೂ ಸೇರಿ $2\frac{3}{4}$ ಲಕ್ಷ ವಾಗುತ್ತದೆ. ಹಿಂದಿನ ವರ್ಷದಲ್ಲಿ ಆರಂಭಿಸಿದ ಕೆಲವು ವಿಶೇಷವಾದ ಮರಹಮ್ಮತ್ ಕೆಲಸಗಳ ಖರ್ಚಿಗಾಗಿ ಭಾರಿ ಮೊಬಲಗನ್ನು ತೆಗೆದಿಟ್ಟಿದೆ. ಅವು ಯಾವವೆಂದರೆ:—ಅರಮನೆಯ ಕಟ್ಟಡಕ್ಕಾಗಿ $4\frac{1}{2}$ ಲಕ್ಷ ರೂಪಾಯೂ, ಕಳೆದ ನವೆಂಬರ ತಿಂಗಳಲ್ಲಿ ಆದ ಭಾರಿಮಳೆಯಿಂದ ಒಡೆದು ಹೋದ ಕೆರೆಗಳ ದುರಸ್ತಿಗಾಗಿ 2 ಲಕ್ಷ ಕ್ಕಿಂತ ಹೆಚ್ಚು ಮೊಬಲಗೂ, ಕೋಲಾರದ ಚಿನ್ನದಗಣಿ ನೀರು ಸರಬರಾಯಿ ಕಾಮಗಾರಿಗಾಗಿ $1\frac{1}{4}$ ಲಕ್ಷ

ರೂಪಾಯೂ, ಚಿಕ್ಕದೇವರಾಯ ಸಾಗರ, ಹೇಮಗಿರಿ, ಮತ್ತು ಶ್ರೀರಾಮದೇವರಅಣೆ ಇವುಗಳ ದುರಸ್ತಿಗಾಗಿ 1½ ಲಕ್ಷ ರೂಪಾಯೂ, ಮಿಲಿಟರಿ ಕಟ್ಟಡಗಳಿಗಾಗಿ 1 ಲಕ್ಷವೂ, ಇತರ ವಿಶೇಷ ಮರಹಮ್ಮತ್ ಕೆಲಸಗಳಿಗಾಗಿ 1 ಲಕ್ಷವೂ,—ಇವೇ. ಬೆಂಗಳೂರು, ಮೈಸೂರು, ಶಿವಮೊಗ್ಗ, ಈ ಪಟ್ಟಣಗಳ ಅಭಿವೃದ್ಧಿಗಾಗಿ 4½ ಲಕ್ಷಕ್ಕೆ ಮೇಲ ಹಣ ಕೊಟ್ಟಿದೆ. ಪ್ಲೇಗ್ ನಿವಾರಣೆಯ ಖರ್ಚಿಗಾಗಿ 1 ಲಕ್ಷ ರೂಪಾಯಿ ಇಟ್ಟಿದೆ. ಇತರ ವಿಶೇಷ ಚಿಲ್ಲರೆ ಖರ್ಚುಗಳು ಯಾವವೆಂದರೆ:—ಸ್ವರ್ಗಸ್ಥರಾದ ಶ್ರೀ ಚಾಮರಾಜೇಂದ್ರ ಒಡೆಯರ್ ಬಹದ್ದೂರವರ ಪ್ರತಿಮೆಗಾಗಿ 1 ಲಕ್ಷ ರೂಪಾಯೂ, ಡಿಲ್ಲಿ ಕ್ಯಾಂಪಿಗೆ ಸಂಬಂಧಪಟ್ಟ ಖರ್ಚಿನ ವ್ಯವಸ್ಥೆಗಾಗಿ ½ ಲಕ್ಷವೂ,—ಇವೇ. ಅದ್ದರಿಂದ ಈ ವರ್ಷದ ಆಡಳಿತದ ಪಟ್ಟಿಯಲ್ಲಿ ಒಟ್ಟು ಸುಮಾರು 34½ ಲಕ್ಷ ರೂಪಾಯಿಷ್ಟು ವಿಶೇಷ ಖರ್ಚಿಗೆ ಏರ್ಪಾಡು ಮಾಡಿದೆ. ವಿಶೇಷ ಬಾಬುಗಳಿಂದ ಬರುವ ವರಮಾನವು, ಅವುಗಳಿಗಾಗಿ ಇಟ್ಟಿರುವ ವಿಶೇಷ ಸಿಲ್ಕಿನಿಂದಿಗೆಳ ಖರ್ಚು ಜಾತ 15½ ಲಕ್ಷ ರೂಪಾಯಿ ಆಗುತ್ತದೆ. ಈ ವಿಶೇಷ ಬಾಬುಗಳನ್ನು ಅಂದಾಜು ಪಟ್ಟಿಯ ಜಮಾಖರ್ಚುಗಳೆರಡರಿಂದಲೂ ವಜಾಮಾಡಲಾಗಿ ಈ ವರ್ಷದ ಸಾಧಾರಣ ಜಮಾಖರ್ಚಿನ ನಿರೀಕ್ಷಿಸಿದ ನಿವ್ವಳ ಫಲಿತಾಂಶವು ಸುಮಾರು 1 ಲಕ್ಷ ರೂಪಾಯಿನಷ್ಟು ಶಿಲ್ಕು ಉಳಿಯುವಹಾಗೆ ತೋರುತ್ತದೆ.

ಆರಂಭಿಸಿದ ಭಾರಿ ಕಾಮಗಾರಿಗಳಲ್ಲಿ ಕಾವೇರಿ ವೈದ್ಯುತಶಕ್ತಿಯ ಪ್ರಥಮ ಸ್ಥಾಪನೆಯು ಪೂರ್ತಿಯಾಗಿ ಒಳ್ಳೇ ಆದಾಯವನ್ನು ಕೊಡುತ್ತಿದೆ. ದ್ವಿತೀಯ ಸ್ಥಾಪನೆಯು ಕ್ಷಿಪ್ರದಲ್ಲಿಯೇ ಪೂರ್ತಿಯಾಗಿ ಈ ಸರ್ಕಾರಿ ವರ್ಷದ ದ್ವಿತೀಯಾರ್ಧ ಭಾಗದಿಂದ ವರಮಾನವನ್ನು ಕೊಡಲಾರಂಭಿಸುತ್ತದೆ. ಕೋಲಾರದ ಚಿನ್ನದ ಗಣಿನೀರುಸೆರಬರಾಯಿ ಕಾಂಗಾರಿ ಕೂಡ ಕಾರ್ಯತಃ ಮುಗಿದಿದೆ. ಅದೂ ನಿರೀಕ್ಷಿಸಿದ ವರಮಾನವನ್ನು ಜಾಗ್ರತೆಯಾಗಿಯೇ ಕೊಡುವುದು. ಈ ವರ್ಷದೊಳಗಾಗಿ ಬೆಂಗಳೂರು ವೈದ್ಯುತದೀಪಗಳ ಕಾಂಗಾರಿಯಲ್ಲಿ ಬಹಳ ಭಾಗವು ಪೂರೈಸುವುದು. ಇನ್ನು ಒಂದೆರಡು ವರ್ಷಗಳೊಳಗಾಗಿ ಮಾರಿಕಣೆವೆಯೂ ಅರಮನೆಯೂ ಕಟ್ಟಿ ಪೂರ್ತಿಯಾಗುವವು ಇವುಗಳು ಪೂರ್ತಿಯಾದಬಳಿಕ, ಈಗ ತಗಲುತ್ತಿರುವ ವಿಶೇಷ ಖರ್ಚಿನಲ್ಲಿ ಬಹಳ ಭಾಗವು ಕಡಿಮೆಯಾಗುವುದು ಮಾತ್ರವೇ ಅಲ್ಲದೆ ಇವುಗಳಿಂದ ಆಗುವ 30 ಲಕ್ಷ ರೂಪಾಯಿಗೆ ಮೀರಿದ ವಾರ್ಷಿಕ ನಿವ್ವಳ ಹುಟ್ಟುವಳಿಯೂ ಆಗುವಕಾರಣ, ಮುಂದೆ ಭಾರಿ ಮೊಬಲಗನ್ನು ಮಿಗಿಸಿಡಲು ಅನುಕೂಲವಾಗುತ್ತದೆ. ಸಂಸ್ಥಾನದ ಆದಾಯವ್ಯಯದ ಸ್ಥಿತಿಯನ್ನು ಸಮರ್ಪಕವಾಗಿಡುವುದಕ್ಕೆ, ಸಾಲವಬಾಬು ಮೂಲಗುತ ಒಂದು ಕೋಟಿ ರೂಪಾಯಿ ಶಿಲ್ಕು ಬಡ್ಡಿಗಹಾಕಿಯೂ, ಸರ್ಕಾರಿ ವರ್ಷದ ಆದಿಭಾಗದಲ್ಲಿ ಖರ್ಚಿಗಾಗಿ ಕೈಯ್ಯಲ್ಲಿ 75 ಲಕ್ಷ ರೂಪಾಯೂ, ಆವಶ್ಯಕವೆಂದು ಹೋದವರ್ಷ ಸೂಚಿಸಿದ್ದು ನಿಮಗೆ ಜ್ಞಾಪಕದಲ್ಲಿರಬಹುದಷ್ಟೆ. ಈ ಪೈಕಿ ಕಳೆದ ಜುಲೈ ಗುರ್ರಿ ತಾರೀಖಿನಲ್ಲಿ 44,24,953 ರೂಪಾಯಿ ರೆವಿನ್ಯೂ ಶಿಲ್ಕು ಉಳಿದಿತ್ತು. ಹೆಚ್ಚು ಖರ್ಚುಬಾಬುಗಳನ್ನು ಜಾಗರೂಕತೆಯಿಂದ ನೆಹಿಸಿ, ಕೂಡಿದಮಟ್ಟಿಗೆ ಮಿತವ್ಯಯಮಾಡಿ, ಈ ಮೊಬಲಗನ್ನು ಕೆಲವು ವರ್ಷಗಳಲ್ಲಿಯೇ ನಮಗೆ ಬೇಕಾಗಿರುವ ಒಂದು ಕೋಟಿ ರೂಪಾಯಿಗೆ ಹೆಚ್ಚಿಸುವುದೇ, ನಮ್ಮ ಸ್ಥಿರವಾದ ಉದ್ದೇಶವಾಗಿರುವುದು. ಆದಾಗ್ಯೂ ರೇಲ್ವೇಗಳನ್ನು ವಿಸ್ತರಿಸುವ ವಿಷಯಕ್ಕೆ ಅವಧಾನವನ್ನು ಕೊಡಬೇಕಾಗಬಹುದು. ಮೂರು ಜಾಲಿಜಾಲಿ ರೇಲ್ವೇ ಲೈನುಗಳಿಗೆ ಅಂದಾಜಾಗಿದೆ. ಇವುಗಳಲ್ಲಿ ಪ್ರಯೋಜನಕಾರಿಯೆಂದುತೋರುವ ನಂಜನಗೂಡು ಈರೋಡು ಮಾರ್ಗವನ್ನು ಕ್ಷಿಪ್ರದಲ್ಲಿಯೇ ಆರಂಭಿಸಬೇಕಾಗಬಹುದು.

ಖಜಾನೆಗಳ ಆಡಳಿತಗಳಿಗಾಗಿ ವರ್ಷಾರಂಭದಲ್ಲಿ ಇರಬೇಕಾದ ಮೊಬಲಗು, ಆ ತಾರೀಖಿನಲ್ಲಿ ಇರಬೇಕಾಗಿದ್ದ ಕನಿಷ್ಟಪಕ್ಷದ ಮೊಬಲಗು 75 ಲಕ್ಷಕ್ಕಿಂತ 14,88,995 ರೂಪಾಯಿ ಹೆಚ್ಚಾಗಿತ್ತು. ಹೀಗಾಗಿ ನಗದಿ ಶಿಲ್ಕು ಅದರ ಸ್ವಭಾವಸ್ಥಿತಿಗೆ ಬರುತ್ತ ಇರುವುದು ತೃಪ್ತಿಕರವಾಗಿದೆ. ಈ ಪೈಕಿ 22 ಲಕ್ಷ ರೂಪಾಯಿಗಳನ್ನು ಈಚೆಗೆ ಇಂಡಿಯಾ ಸರ್ಕಾರಿ ಪತ್ರರೂಪವಾಗಿ ಬಡ್ಡಿಗೆ ಹಾಕಿರುವುದು ಸಂತೋಷಕರವಾಗಿದೆ.

ಲೂಕಲ್ ಮತ್ತು ಮುನಿಸಿಪಲ್ ರೆವಿನ್ಯೂ—ಮುನಿಸಿಪಲ್ ಎಲ್ಲಾ ಬಾಬುಗಳಿಂದಲೂ ಒಟ್ಟು 8,37,680 ರೂಪಾಯಿ ಹುಟ್ಟುವಳಿಯಾಯಿತು. ಹಿಂದಿನ ವರ್ಷದ ಸಿಲ್ಕು ಸಹಿತ ಗತವರ್ಷದಲ್ಲಿ 11,56,8[illegible]ರೂಪಾಯಿ ಖರ್ಚಿಗೆ ಬಂದಿತ್ತು. ಈ ಪೈಕಿ ಒಟ್ಟು 7,60,64[illegible] ರೂಪಾಯಿ ಖರ್ಚಾಯಿತು. ಖರ್ಚಿನ ಮುಖ್ಯಬಾಬುಗಳು ಯಾವವೆಂದರೆ:—ಪಾಕೇಜಕ್ಕಾಗಿ 1,80,530 ರೂಪಾಯಿ, ಜನನ ಮರಣ ರಿಜಿಸ್ಟ್ರೇಷನ್‌ಗಾಗಿ 1[illegible] ರೂಪಾಯಿ, ಮರಹಮ್ಮತ್ ಕೆಲಸಗಳಿಗಾಗಿ 2,07,691 ರೂಪಾಯಿ, ವಿದ್ಯಾಭ್ಯಾಸಕ್ಕಾಗಿ 38,192 ರೂಪಾಯಿ, ದೀಪಕ್ಕಾಗಿ [illegible]68 ರೂಪಾಯಿ, ವೈದ್ಯಕೀಯ ಖರ್ಚು ಸಹಿತ ಧರ್ಮದ ಖರ್ಚಿಗಾಗಿ 30,021 ರೂಪಾಯಿ, ಇತರ ಚಿಲ್ಲರೆ ಬಾಬುಗಳಿಗಾಗಿ 2,11,062 ರೂಪಾಯಿ,—ಇವೇ.

ಡಿಸ್ಟ್ರಿಕ್ಟ್ ಫಂಡಿನ ಎಲ್ಲಾ ಬಾಬುಗಳಿಂದ 6,84,857 ರೂಪಾಯಿ ವರಮಾನ ಬಂತು. ಕಳೆದ ವರ್ಷದ ಸಿಲ್ಕು ಸೇರಿ ಗತವರ್ಷದ ಖರ್ಚಿಗಾಗಿ 10,54,840 ರೂಪಾಯಿ ಒದಗಿತ್ತು; 6,64,204 ರೂಪಾಯಿ ಖರ್ಚಾಯಿತು. ಈ ಖರ್ಚಿನ ಪೈಕಿ ಮರಮತ್ ಕೆಲಸಗಳಿಗಾಗಿ 5,17,058 ರೂ., ಆರೋಗ್ಯಾಭಿವೃದ್ಧಿಗಾಗಿ 20,873 ರೂ., ವೈದ್ಯಸಹಾಯಕ್ಕಾಗಿ 25,454 ರೂ., ಪ್ರಯಾಣಕರ ಸೌಕರ್ಯಕ್ಕಾಗಿ 24,064 ರೂ., ಉಳಿದದ್ದು ಇತರ ಚಿಲ್ಲರೆಬಾಬುಗಳಿಗೆ ಖರ್ಚಾಯಿತು. 1541

ಲೋಕಲ್‌ಫಂಡ್ ಜನರಲ್ ಬಾಬಿನಲ್ಲಿ 1,06,390 ರೂ. ವರಮಾನ ಬಂತು. ಇದಕ್ಕೆ ಹಿಂದಿನ ವರ್ಷದ ಸಿಲ್ಕು 3,03,928 ರೂಪಾಯನ್ನು ಸೇರಿಸಲಾಗಿ, 4,10,319 ರೂ ಖರ್ಚಿಗೆ ಒದಗಿತ್ತು. ಈ ಪೈಕಿ 1,70,145ರೂ, ಗತವರ್ಷ ಖರ್ಚಾಯಿತು.

ಬೀಮ.—ಸರ್ಕಾರೀ ಬೀಮಾ ಫಂಡಿನ ವಾಸ್ತವಸ್ಥಿತಿಯನ್ನು ಎಡಿಂಬರೋ ಪಟ್ಟಣದ ಒಬ್ಬ "ಆಕ್ಚುಯೆರಿ" ಯೆಂದರೆ ಲೆಕ್ಕಾಚಾರಸ್ಥರಿಂದ ಅಜಮಾಯಿಷಿಮಾಡಿಸಿ ರಿಪೋರ್ಟನ್ನು ತರಿಸಿಕೊಳ್ಳಲಾಯಿತು. ಇದರ ಸ್ಥಿತಿಯು ಬಹಳ ತೃಪ್ತಿ ಕರವಾಗಿದೆ ಯೆಂದು ಅವರು ಅಭಿಪ್ರಾಯಪಡುತ್ತಾರೆ. ಇತರ ಬೀಮಾ ವಿಧಾನಗಳಿಗಿಂತ ಈ ಸಂಸ್ಥಾನದ ಸರ್ಕಾರಿ ಬೀಮಾ ವಿಧಾನವು ಬಹಳ ಉತ್ಕೃಷ್ಟ ಸ್ಥಿತಿಯಲ್ಲಿದೆ ಎಂಬುದಕ್ಕೆ ಇದರಿಂದ ಲಭಿಸುವ ಲಾಭಕರವಾದ ಬೋನಸ್ ಎಂಬ ಪ್ರತಿಫಲವೂ, ಇದರ ಆಡಳಿತದ ಖರ್ಚು ಹಿಂದೂದೇಶದಲ್ಲಿ ಕೆಲಸ ಮಾಡುವ ಇತರ ಆಫೀಸುಗಳ ಸರಾಸರಿ ಖರ್ಚಿನಲ್ಲಿ $\frac{1}{7}$ ಭಾಗದಷ್ಟು ಅತ್ಯಲ್ಪವಾಗಿರವುದೂ, ಆಯಾತಿಂಗಳ ಶಿಲ್ಕು ಮೊಬಲಗಿನಮೇಲೆ ಬಡ್ಡಿದರವನ್ನು ಶೇಕಡಾ $3\frac{1}{2}$ರಂತೆ ಸರ್ಕಾರದವರು ಗೊತ್ತು ಮಾಡಿರುವ ಏರ್ಪಾಡೂ ಮುಖ್ಯ ಕಾರಣಗಳಾಗಿವೆ. ವರ್ಷಾಂತ್ಯದಲ್ಲಿ ಈ ಫಂಡಿನ ಆಖೈರು ಶಿಲ್ಕು 10,27,227—10—1 ಆಗಿತ್ತು.

ಮಳೆ ಮತ್ತು ಋತುಧರ್ಮ.—1903–04ನೆಯ ವರ್ಷದಲ್ಲಿ ಸರಾಸರಿ 55·49 ಅಂಗುಲ ಮಳೆಯಾಯಿತು. ಎಂದರೆ ಹಿಂದಿನ ವರ್ಷಕ್ಕಿಂತ 13 ಅಂಗುಲ ಹೆಚ್ಚಾಗಿಯೂ, 1870 ನೆಯ ವರ್ಷದಿಂದ ಹಿಡಿದು ಮೂವತ್ತೊಂದು ವರ್ಷಗಳ ಸರಾಸರಿಗಿಂತ 10·17 ಅಂಗುಲುಗಳಷ್ಟು ಹೆಚ್ಚಾಗಿಯೂ, ಇತ್ತು. ಕೋಲಾರದ ಡಿಸ್ಟ್ರಿಕ್ಟಿನಲ್ಲಿ ಬಿದ್ದ ಬಲವಾದ ಮಳೆಯಿಂದ ಪ್ರಸಿದ್ಧವಾದ ಪಾಲಾರು ಸಾಲು ಕೆರೆಗಳಲ್ಲಿ ಪ್ರಾಯಃ ಎಲ್ಲವೂ ಒಡೆದು ನಷ್ಟವಾದ್ದಕ್ಕಾಗಿ ಈವರ್ಷವು ಚಿರಸ್ಮರಣೀಯವಾಗಬಹುದು. ಇಷ್ಟು ನಷ್ಟಕರವಾದಾಗ್ಯೂ ಋತುಧರ್ಮವು ಇತರ ವಿಷಯಗಳಲ್ಲಿ ಅನುಕೂಲ ವಾಗಿತ್ತು. ಕೋಲಾರದಲ್ಲಿ ಜನಗಳಿಗೆ ಸಂಕಟ ಸಂಭವಿಸಿದ ಪಕ್ಷದಲ್ಲಿ ತನ್ನಿವಾರಣಾರ್ಥವಾಗಿ ಶ್ರೀಮನ್ಮಹಾರಾಜರವರು ತಮ್ಮ ಖಾಸ ಖಜಾನೆಯಿಂದ ಭಾರಿ ಮೊಬಲಗನ್ನು ಕೊಡುವದಾಗಿ ಅಪ್ಪಣೆ ದಯಪಾಲಿಸಿದ್ದರು.

ಈಗ ಕೆಲವು ವಾರಗಳಿಂದ ಮಳೆಯಿಲ್ಲದೆ ಪೈರುಗಳು ಒಣಗಿಹೋಗುತ್ತಿದ್ದವೆಂದು ಎಲ್ಲಾ ಡಿಸ್ಟ್ರಿಕ್ಟುಗಳಿಂದಲೂ ಬರುತ್ತಿದ್ದ ಪ್ರತಿಕೂಲವಾದ ರಿಪೋರ್ಟುಗಳಿಂದ ಸ್ವಲ್ಪ ಚಿಂತೆಯುಂಟಾಗಿತ್ತು. ಆದರೆ ಈಚೆಗೆ ಸಕಾಲಕ್ಕೆ ಬಂದ ಮಳೆಯಿಂದ ಈ ಚಿಂತೆಯು ಪರಿಹಾರವಾಗಿ ಎಲ್ಲಾ ಕಡೆಯಲ್ಲಿಯೂ ಪೈರು ಬಹಳವಟ್ಟಿಗೆ ಉತ್ತಮಸ್ಥಿತಿಗೆ ಬಂದಿರುವುದರಿಂದ ಬೆಳೆಯು ವಿಶೇಷವಾಗಿ ಕೆಟ್ಟು ಹೋಗಬಹುದೆಂಬ ಭೀತಿಗೆ ಅವಕಾಶವಿಲ್ಲ.

ವ್ಯವಸಾಯ, ಕೈಗಾರಿಕೆ, ಮತ್ತು ವ್ಯಾಪಾರ.—ಗತವರ್ಷದಲ್ಲಿ ಹಿಡುವಳಿಜಮೀನಿನ ವಿಸ್ತೀರ್ಣದಲ್ಲಿ 30,055 ಎಕರೆಗಳಷ್ಟು ನಿವ್ವಳ ಹೆಚ್ಚಾಯಿತು. ಇದರಿಂದ 38,842 ರೂಪಾಯಿ ಕಂದಾಯ ಹೆಚ್ಚಿತು. ಕಾಫಿ ವ್ಯವಸಾಯದಲ್ಲಿ ನಿವ್ವಳ 1,940 ಎಕರೆ ಭೂಮಿಯೂ 489 ರೂಪಾಯಿ ಕಂದಾಯವೂ ಕಡಮೆಯಾಯಿತು.

ರಿವಿಜನ್ ಸೆಟಲ್‌ಮೆಂಟ್—ಹೋದ ವರ್ಷದ ಉಪನ್ಯಾಸದಲ್ಲಿ ತಿಳಿಸಿದ ಮೇರೆ ದಾವಣಗೆರೆ ಮತ್ತು ಹಿರಿಯೂರು ತಾಲ್ಲೂಕುಗಳಲ್ಲಿ ರಿವಿಜನ್ ಸರ್ವೆ ಸೆಟಲ್‌ಮೆಂಟನ್ನು ಜಾರಿಗೆ ತರಲಾಯಿತು. ಹೊಳಲ್ಕೆರೆ ಚಿತ್ರದುರ್ಗ ಮತ್ತು ಜಗಳೂರು ತಾಲ್ಲೂಕುಗಳು ಸೆಟಲ್ಮೆಂಟಿಗೆ ಸಿದ್ಧವಾಗಿವೆ. ಹೊಸ ದರಗಳನ್ನು ಮುಂದಿನ ಚಳಿಗಾಲದಲ್ಲಿ ಪ್ರಕಟಿಸಲಾಗುತ್ತದೆ. ಹೊಳಲ್ಕೆರೆ ಮತ್ತು ಹಿರಿಯೂರು ತಾಲ್ಲೂಕುಗಳ ಕೆಲವು ಭಾಗಗಳನ್ನು ಸೇರಿಸಿ ಹೊಸದುರ್ಗದ ತಾಲ್ಲೂಕನ್ನು ಈಚೆಗೆ ಏರ್ಪಡಿಸಿದೆ.

ರಿವಿಜನ್ ಸೆಟಲ್ಮೆಂಟಿನಿಂದ ಹೆಚ್ಚಿದ ಕಂದಾಯದ ಸರಾಸರಿಯು ದಾವಣಗೆರೆ ತಾಲ್ಲೂಕಿಗೆ ಶೇಕಡ 22ರಂತೆಯೂ ಹಿರಿಯೂರಿಗೆ 20ರಂತೆಯೂ ಚಿತ್ರದುರ್ಗಕ್ಕೆ 15 ರಂತೆಯೂ ಹೊಳಲ್ಕೆರೆಗೆ 18 ರಂತೆಯೂ ಆಗಿರುವದಾಗಿ ಗಣಿತಿಯಾಗಿದೆ.

ಬಾಗಾಯತು ಕಂದಾಯದ ದರವು ಬಹಳಮಟ್ಟಿಗೆ ಕಡಿಮೆಯಾದ್ದೇ ಈ ಹೊಸ ರಿವಿಜನಿಂದ ಉಂಟಾದ ಮುಖ್ಯ ಫಲವಾಗಿದೆ. ಸರಾಸರಿ ದರವು ದಾವಣಗೆರೆಯಲ್ಲಿ ರೂ 4–6–11 ರಿಂದ 2–13–0 ಕ್ಕೂ ಚಿತ್ರದುರ್ಗದಲ್ಲಿ 3–14–5 ರಿಂದ 2–8–2 ಕ್ಕೂ ಇತರ ತಾಲ್ಲೂಕುಗಳಲ್ಲಿಯೂಕೂಡ ತತ್ತದನುಗುಣವಾಗಿಯೂ ಇಳಿಯಿತು. ಹಿಂದಿನ ಸರ್ವೆ ಸೆಟಲ್‌ಮೆಂಟಿನಿಂದೀಚೆಗೆ, ಸರ್ಕಾರಿ ನೀರಿನ ಸಹಾಯವಿಲ್ಲದೆ ಬಾವಿ ನೀರಿನಿಂದ ಬಾಗಾಯತು ಸಾಗುವಳಿಗೆತಂದ(2,614 ಎಕರೆಯಷ್ಟು) ವಿಸ್ತಾರವಾದ ಒಣಭೂಮಿ ಜಮೀನಿನಮೇಲೆ ಮುಖ್ಯೀದರವನ್ನೇ ಹಾಕಿರುವುದರಿಂದ ಸ್ವಲ್ಪಮಟ್ಟಿಗೆ ಹೀಗಾಗುವುದಕ್ಕೆ ಕಾರಣವಾಯಿತೆಂಬುವದಕ್ಕೆ ಸಂದೇಹವಿಲ್ಲ. ಬಹಳ ದುಬಾರಿಯಾದ ದರಗಳನ್ನೆಲ್ಲಾ ಕಡಿಮೆಮಾಡಿದ್ದರಿಂದ ಬಾಗಾಯಿತ್ ಕಂದಾಯದ ದರಗಳೆಲ್ಲಾ ಒಂದೇ ಸಮವಾಗಿ ಆದವು ಈ ಉದಾರವಾದ ಏರ್ಪಾಡಿನಿಂದ ಬಾಗಾಯತ ಸಾಗುವಳಿಗೆ ಪ್ರೋತ್ಸಾಹವುಂಟಾಗುವುದೆಂದುನಂಬುತ್ತೇವೆ. ಆಗಲೇ ಹೊಳಲಕೆರೆ ತಾಲ್ಲೂಕಿನಲ್ಲಿ 1,015 ಎಕರೆಯಷ್ಟು ಒಣಭೂಮಿ ಜಮೀನಿನಲ್ಲಿ ಕೈ ನೀರಿನಸಹಾಯವಿಲ್ಲದೆ ತೆಂಗಿನತೋಟ ಮಾಡಲ್ಪಟ್ಟಿದೆ.

ಚಿತ್ರದುರ್ಗದ ಡಿಸ್ಟ್ರಿಕ್ಟ್‌ನಲ್ಲೆಲ್ಲಾ ರಿವಿಜನ್ ಸರ್ವೆಸೆಟಲ್ಮೆಂಟು ಈಗ ಕಾರ್ಯತಃ ಪೂರ್ತಿಯಾಗಿದೆ. ಇದರ ಫಲಿತಾಂಶವನ್ನು ನೋಡಿದರೆ ಕಂದಾಯವು ಏತವಾಗಿ ಹೆಚ್ಚಿದಂತೆ ಕಾಣುತ್ತದೆ. 1876–77ನೆಯ ವರ್ಷದ ಘೋರವಾದ ಕ್ಷಾಮದಿಂದ ವಿಶೇಷವಾಗಿ ಪೀಡಿತವಾದ ಡಿಸ್ಟ್ರಿಕ್ಟುಗಳಲ್ಲಿ ಇದು ಒಂದಾಗಿದ್ದರೂ ಇದರ ಭೂಮಿಯು, ಅಲ್ಲಿ ಮಳೆ ಅಲ್ಪವಾದರೂ, ಫಲವತ್ತಾಗಿಯೂ ಚೇತರಿಸಿಕೊಳ್ಳುವ ಶಕ್ತಿಯುಳ್ಳದ್ದಾಗಿಯೂ ಇರುವುದರಿಂದ, ಕ್ಷಾಮದಿಂದ ಉಂಟಾದ ನಷ್ಟವನ್ನು ಸಂಪೂರ್ಣವಾಗಿ ನಿವಾರಿಸಿಕೊಂಡದ್ದು ಮಾತ್ರವಲ್ಲದೆ ವಿಕರೀತಿಯಾಗಿ ಅಭಿವೃದ್ಧಿಗೂ ಬರುತ್ತಿರುವವಿಷಯವು ಅದರ ಪ್ರಜಾಸಂಖ್ಯೆಯ ಅಧಿಕ್ಯದಿಂದಲೂ ಹಿಡುವಳಿ ಜಮೀನುಗಳ ಅಧಿಕ್ಯದಿಂದಲೂ ಮುಂದೆ ಇನ್ನೂ ವೃದ್ಧಿಗೆ ಬರತಕ್ಕ ಸಂಭವದಿಂದಲೂ ವ್ಯಕ್ತವಾಗುತ್ತದೆ. ಕಳೆದ ಸೆಟಲ್ಮೆಂಟಿನಿಂದ ಈಚೆಗೆ ಎಲ್ಲಾ ಪದಾರ್ಥಗಳ ಬೆಲೆಯೂ ಶೇಕಡಾ 35 ರಿಂದ 40 ಕ್ಕೆ ಹೆಚ್ಚಿದೆ. ಅಲ್ಲಿಂದೀಚೆ ಮಾರ್ಗವೇಷೊದಲಾದ ಸಂಚಾರಾನುಕೂಲ್ಯಗಳನ್ನು ಬಹಳವಾಗಿ ಹೆಚ್ಚಿಸಿದೆ. ರೇಲ್ವೆಯನ್ನು ಹಾಕಿದ್ದು ವ್ಯಾಪಾರಾಭಿವೃದ್ಧಿಗೆ ಮಾತ್ರವೇ ಅಲ್ಲದೆ ಇತರವಾದ ಸಂಪತ್ತುಗಳ ಅಧಿಕ್ಯಕ್ಕೂ ವಿಶೇಷ ಸಹಾಯವಾಗಿದೆ. ಇಷ್ಟು ಅನುಕೂಲ್ಯಗಳನ್ನು ಮಾಡಿಕೊಟ್ಟಿದ್ದಾಗ್ಗೂ ಈ ಪ್ರದೇಶವು ಈಗ ಉಂಟಾದ ಸೌಕರ್ಯಗಳ ಸಂಪೂರ್ಣ ಫಲವನ್ನು ಅನುಭವಿಸಿ ತನ್ಮೂಲಕ ಕ್ಷಾಮವೇ ಮೊದಲಾದ ಪ್ರತಿಕೂಲಗಳಿಂದ ಪೀಡಿತವಾಗದೆ ನಿರಂತರವಾದ ಅಭಿವೃದ್ಧಿಯನ್ನು ಹೊಂದಲಿ ಎಂಬ ಉದ್ದೇಶದಿಂದ ಹೊಸದರಗಳನ್ನು ಮೇಲಿಹೇಳಿದಂತೆ ಬಹಳಮಿತವಾಗಿ ಹಾಕಲಾಯಿತು.

ನೀರಾವರಿ ಬಾವಿಗಳ ಸಂಖ್ಯೆಯು ಅವುಗಳ ಪ್ರಾಮುಖ್ಯತೆಗೂ ಮುಂಗಡ ಕೊಡುವುದರ ಮೂಲಕ ಸರಕಾರದವರು ಮಾಡಿಕೊಟ್ಟಿರುವ ಅನುಕೂಲ್ಯಗಳಿಗೂ ಅನುಗುಣವಾಗಿ ಹೆಚ್ಚಲಿಲ್ಲ. ಈ ವರ್ಷದಲ್ಲಿಯೂ ಈವಿಧವಾದ ಬಾವಿಗಳನ್ನು ಕಟ್ಟಲು ಮುಂಗಡ ಕೊಡುವುದಕ್ಕಾಗಿ 30 ಸಾವಿರರೂಪಾಯಿಗಳನ್ನು ಇರಿಸಿದೆ.

ಸುಧಾರಿತ ಬೇಸಾಯ.—ಕಳೆದ ವರ್ಷ ಸೂಚಿಸಿದಂತೆ ಬಾರಿಬಾರಿಗೂ ತೊಂದರೆ ಪಡಿಸುತ್ತಿದ್ದ ಅಡಕೆ ತೋಟಗಳ ಸಹಾಯದ ವಿಷಯವು ಈಗ ಒಂದು ವಿಧವಾಗಿ ಇತ್ಯರ್ಥಕ್ಕೆ ಬರುವಂತಿದೆ ಎಂದು ಹೇಳಬಹುದು. ಇದಕ್ಕಾಗಿ ಈ ಕೈಗಾರಿಕೆಯಲ್ಲಿ ನಿಪುಣರಾದವರ ಅಭಿಪ್ರಾಯಗಳನ್ನೆಲ್ಲಾ ಸರ್ಕಾರದವರು ತೆಗೆದುಕೊಂಡಿದ್ದಾರೆ. ಇದರ ಇತ್ಯರ್ಥವು ಜಾಗ್ರತೆಯಾಗಿಯೇ ಪ್ರಕಟಿಸಲ್ಪಡುವುದೆಂದು ನಿರೀಕ್ಷಿಸ ಬಹುದು.

ಕಾಫಿವ್ಯವಸಾಯದ ಪುರೋವೃದ್ಧಿಯು ಸ್ವಲ್ಪ ಮಟ್ಟಿಗೆ ಚೆನ್ನಾಗಿದೆ. ಈಗಿನ ಬೆಲೆಯು ಕೆಲವು ವರ್ಷಗಳಿಂದ ಇದ್ದದ್ದಕ್ಕಿಂತಲೂ ಸ್ವಲ್ಪ ಹೆಚ್ಚಿದೆ. ಸರ್ಕಾರದವರು ಪೂರ್ಣವಾಗಿ ಪರ್ಯಾಲೋಚಿಸಿ ಅನುಭವಶಾಲಿಗಳ ಆಲೋಚನೆಯನ್ನು ಕೇಳಿ ತಲಪರಿಗೆಗಳ ಅಂಚಿನಲ್ಲಿ ಯಾಲಕ್ಕಿಪೈರು ಮಾಡುವ ವಿಷಯದಲ್ಲಿದ್ದ ನಿರ್ಬಂಧವನ್ನು ತಪ್ಪಿಸಿದ್ದಲ್ಲದೆ ಯಾಲಕ್ಕಿತೋಟದ ಕನಿಷ್ಠ ಪರಿಮಾಣವನ್ನು 5 ಎಕರೆಗೆ ಇಳಿಸಿದ್ದಾರೆ. ಕಾಫಿಯ ಕ್ರಯವು ವ್ಯತ್ಯಾಸವಾಗುತ್ತಿರುವಕಾರಣ ಇನ್ಯಾವ ಪೈರಿನ ಬಿತ್ತನೆಯಿಂದ ತನ್ನ ನಷ್ಟವನ್ನು ಸರಿಮಾಡಿಕೊಳ್ಳಬೇಕೆಂದು ಬಹಳವಾಗಿ ಯೋಚಿಸುತ್ತಿರುವ ಕಾಫಿಪ್ಲಾಂಟರುಗಳು ಈ ವಿಧವಾದ ಸೌಕರ್ಯವನ್ನು ವಿಶೇಷವಾಗಿ ಪರಿಗಣಿಸುವುದರಲ್ಲಿ ಸಂದೇಹವಿಲ್ಲ.

ಕೈಗಾರಿಕೆಗಳು.—ಈ ಸಂಸ್ಥಾನದಲ್ಲಿ ಈ ವ್ಯವಸಾಯವನ್ನು ಸ್ಥಾಪಿಸುವ ಪ್ರಯತ್ನಗಳನ್ನು ನೋಡಿ ಸರ್ಕಾರದವರು ಸಂತೋಷಿಸಿ ಅನುಕೂಲವಾದ ಹಿಡುವಳಿ ದರಗಳನ್ನು ಏರ್ಪಡಿಸಿಕೊಟ್ಟು ಸರ್ಕಾರಕ್ಕೆ ಇತರವಿಧವಾಗಿ ನಷ್ಟವಾಗದಂತೆ ಸರಿಯಾದ ಜಮೀನುಗಳನ್ನು ಕುನಾಯಿಸುವುದರಲ್ಲಿ ಸಹಾಯಮಾಡಿ ಈ ವ್ಯವಸಾಯಕ್ಕೆ ಕೂಡಿದಷ್ಟಿಗೂ ಪ್ರೋತ್ಸಾಹನಮಾಡುತ್ತಿದ್ದಾರೆ.

ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಪರೀಕ್ಷಾ ವ್ಯವಸಾಯಕ್ಕಾಗಿ ಕೆಲವು ಷರತ್ತುಗಳಮೇರೆ 250 ಎಕರೆ ಜಮೀನನ್ನು ಮೆ॥ ಸ್ಟ್ರಿಕ್ಲಂಡರವರಿಗೆ ಈಚೆಗೆ ಕೊಡಲಾಯಿತು. ಈ ಪರೀಕ್ಷೆಗಳು ಸರ್ಕಾರಿ ತೋಟಗಳ ಸೂಪರಂಟೆಂಡೆಂಟರಿಂದ ಬೆಂಗಳೂರಲ್ಲಿ ಪ್ರಥಮತಃ ಸಫಲವಾಗಿ ನಡಿಸಲ್ಪಟ್ಟವು. 1593

ಆಗ್ರಿಕಲ್ಚರಲ್ ಕೆಮಿಸ್ಟ್ರಿ.—ಕಳೆದ ವರ್ಷದಲ್ಲಿ ಕಬ್ಬು ಬೆಲ್ಲ ಕಾಫಿ ಪ್ರಾಮುಕಾಲದಲ್ಲಿ ಉಪಯೋಗಿಸಬಹುದಾದ ಆಹಾರಪದಾರ್ಥಗಳು ಗೊಬ್ಬರಗಳು ಇವೇ ಮೊದಲಾದ ವ್ಯವಸಾಯಕ್ಕೆ ಸಂಬಂಧಪಟ್ಟ ಅನೇಕ ಪದಾರ್ಥಗಳು ಪರೀಕ್ಷಿಸಲ್ಪಟ್ಟವು. ಈ ಸೈಕಿ 50 ಕಾಪಿಯ ಮಾದರಿಗಳು. ಕಾಫಿಯ ಗುಣವನ್ನು ನಿರ್ಧರಿಸುವ ಪದಾರ್ಥಗಳು ಯಾವವೆಂದು ನಿಷ್ಕರ್ಷಿಸುವದಕ್ಕಾಗಿ, ಇವುಗಳು ಪರೀಕ್ಷಿಸಲ್ಪಡುತ್ತಿವೆ. ಸುಮಾರು ಇದೇ ಸಂಖ್ಯೆಯಷ್ಟು ಪ್ರಾಮುದಲ್ಲಿ ಉಪಯೋಗಿಸಬಹುದಾದ ಆಹಾರ ಪದಾರ್ಥಗಳು ಅವುಗಳಸಾರವನ್ನು ನಿರ್ಧರಿಸುವದಕ್ಕಾಗಿ ಪರೀಕ್ಷಿಸಲ್ಪಡುತ್ತಿವೆ.

ನಾನಾವಿಧವಾದ ಕಬ್ಬುಗಳನ್ನು ಬೇರೆಬೇರೆ ರೀತಿಯಾಗಿ ವ್ಯವಸಾಯಮಾಡಿ ಪರೀಕ್ಷಿಸಿ ಅವುಗಳನ್ನು ಗಾಣಕ್ಕೆ ಕೊಟ್ಟು ಹಾಲನ್ನು ಕಾಯಿಸಿ ಬಿಳೇ ಬಣ್ಣವುಳ್ಳ ಸೊಗಸಾದ ಬೆಲ್ಲವನ್ನು ಮಾಡಲಾಯಿತು ಈ ಬೆಲ್ಲವು ಮಳೆಗಾಲದಲ್ಲಿಯೂ ಕೆಡಲಿಲ್ಲ. ಮೂರು ಜಾತಿ ಗೆಣಸುಗಳೂ ನೆಲಗಡಲೆಯೂ ಬಿಳೆಯನ್ನು ಕೊಟ್ಟವು. ಇವುಗಳ ಕಣ್ಣುಗಳನ್ನೂ ಬಿತ್ತಗಳನ್ನೂ ಬಿತ್ತನೆಗಾಗಿ ಅನೇಕ ರೈತರಿಗೆ ಸುಮ್ಮನೆಯೂ ಕ್ರಯಕ್ಕೂ ಕೊಡಲಾಯಿತು. ಕಬ್ಬು, ರಾಗಿ, ಹತ್ತಿ, ಹರಳು ಇವುಗಳ ಕೂಳೆ ಪೈರುಗಳನ್ನು ಬೇರೆಬೇರೆ ವಿಧಾನದಲ್ಲಿ ಬೆಳೆಮಾಡಿ ಪರೀಕ್ಷೆಮಾಡುತ್ತಿದೆ. ಅನೇಕ ರೈತರು ಬಂದು ಪರೀಕ್ಷಾಕ್ಷೇತ್ರವನ್ನೂ ಅಭಿವೃದ್ಧಿಗೆ ತಂದ ಉಪಕರಣಗಳಿಂದಲೂ ಯಂತ್ರಗಳಿಂದಲೂ ಆಗುವ ಕೆಲಸವನ್ನೂ ನೋಡಿಕೊಂಡು ಹೋದರು. ಅಮೆರಿಕಾದೇಶದ (Hand Centrifugal and Spraying Pump) ಎಂಬಜಲಯಂತ್ರವು ಪ್ರಯೋಜನಕರವೆಂದು ತಿಳಿಯಬಂದಿದೆ.

ಪೈರಿಗೆ ಕೆಡಕುಮಾಡುವ ಕ್ರಿಮಿಗಳೂ ಸಸ್ಯರೋಗಗಳೂ ಗತವರ್ಷದಲ್ಲಿ ಹೆಚ್ಚಿದವು. ಅಡಕೆಗಿಡದ ಕೊಳೆರೋಗವೂ ಗಂದದ ಮರದ "ಸ್ಪೈಕ್" ಎಂಬ ರೋಗವೂ ಇಂಡಿಯಾ ಸರ್ಕಾರದ "ಕ್ರಿಪ್ಟೊಗಾಮಿಕ್ ಬಾಟನಿಸ್ಟ್" ಎಂಬ ಸಸ್ಯಶಾಸ್ತ್ರಜ್ಞರಿಂದಲೂ ಕ್ರಿಮಿಶಾಸ್ತ್ರಜ್ಞರಿಂದಲೂ ಮತ್ತು ಕಳೆದ ವರ್ಷ ರೋಗತಗುಲಿದ್ದ ಪ್ರದೇಶಗಳಿಗೆಬಂದು ನೋಡಿದ ಮದ್ರಾಸ್ ಸರ್ಕಾರದ ಸಸ್ಯ ಶಾಸ್ತ್ರಜ್ಞರಿಂದಲೂ ಪರೀಕ್ಷಿಸಲ್ಪಡುತ್ತಿವೆ.

ಕೃಷಿರಸಾಯನ ಶಾಸ್ತ್ರಾಭ್ಯಾಸಮಾಡುವದಕ್ಕಾಗಿ ಗತವರ್ಷ ಮೂರುಮಂದಿ ವಿದ್ಯಾರ್ಥಿಗಳು ಕಾರ್ಯಾಲಯ--(Laboratory) ದಲ್ಲಿ ಕೆಲಸಮಾಡುತ್ತಿದ್ದರು; ಇಲಾಖೆಯ ಉದ್ಯೋಗಸ್ಥರಲ್ಲಿ ಬಬ್ಬನನ್ನು ಬೊಂಬಾಯಿ ಆಧಿಪತ್ಯದ ಸರ್ಕಾರಿ ಪರೀಕ್ಷಾಕ್ಷೇತ್ರದಲ್ಲಿ ನಡಿಸುವ ಪರೀಕ್ಷಾಕ್ರಮಗಳನ್ನು ತಿಳಿದುಕೊಂಡು ಬರುವದಕ್ಕಾಗಿ ಪುಣೆಗೆ ಕಳುಹಿಸಲಾಯಿತು.

ಜಾನ್ವಾರ್ ಗಣಿತಿ.—ಕಳೆದ ಸೆಪ್ಟೆಂಬರಿನಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟ ಜಾನ್ವಾರ್‌ಗಳ ಪೌಂಚವಾರ್ಷಿಕ ಗಣಿತಿಯನ್ನು ತೆಗೆಯಲಾಯಿತು.

ವ್ಯವಸಾಯಾಭಿವರ್ಧಕ ಕಾರ್ಯಗಳು.—ಕಳೆದ ವರ್ಷದ ಉಪನ್ಯಾಸದಲ್ಲಿ ಈದೇಶದಲ್ಲಿ ವ್ಯವಸಾಯಾಭಿವೃದ್ಧಿಕರವಾದ ಕೆಲವು ಏರ್ಪಾಡುಗಳನ್ನು ಕುರಿತು ಹೇಳಲಾಯಿತು. ಈ ವರ್ಷ ಅವುಗಳಲ್ಲಿ ಮೂರನ್ನು ಜಾರಿಯಲ್ಲಿ ತರಲಾಯಿತು. ಅವುಗಳ ಪೈಕಿ ಸಾಲೀಯಾನ 5,132 ರೂಪಾಯಿ ಖರ್ಚಿನಮೇಲೆ ಮೈಸೂರು ನಾರ್ಮಲ್‌ಸ್ಕೂಲಿನಲ್ಲಿ ಕೃಷಿಶಾಸ್ತ್ರವನ್ನು ಕಾರ್ಯರೂಪೇಣ ಬೋಧಿಸಲು ಏರ್ಪಡಿಸಿದ್ದೇ ಮೊದಲನೆಯ ಏರ್ಪಾಡಾಗಿದೆ.

ಇದಕ್ಕಾಗಿ Farm Bailiff ಎಂಬ ಮೇಲ್ವಿಚಾರಣೆಗಾರನೊಬ್ಬ, ಉಳುವವರು ಮೂರುಮಂದಿ, ದನಕರು ಕಾಯುವವನೊಬ್ಬ, ಇಷ್ಟು ಸಿಬ್ಬಂದಿಯನ್ನು ವ್ಯವಸಾಯಶಾಸ್ತ್ರಬೋಧಕರ ಕೈಕೆಳಗಿಡುವಂತೆ ಮಂಜೂರ್ಮಾಡಿದೆ. ಇದಕ್ಕೆ ಬೇಕಾದ ಭೂಮಿಯನ್ನು ಪಡೆದುಕೊಳ್ಳುವದಕ್ಕೂ ಅಲ್ಲಿ ಬಾವಿಗಳನ್ನು ತೋಡಿಸುವದಕ್ಕೂ ಅವಶ್ಯವಾದ ಕಟ್ಟಡಗಳನ್ನು ಕಟ್ಟಿಸುವದಕ್ಕೂ ಬೇಕಾದ ಸಲಕರಣೆಗಳನ್ನೂ ಯಂತ್ರಗಳನ್ನೂ ಕೊಂಡುಕೊಳ್ಳುವದಕ್ಕೂ ತಕ್ಕ ಏರ್ಪಾಡುಗಳನ್ನೂ ಮಾಡಿದೆ. ಇಲ್ಲಿ ವ್ಯವಸಾಯಗಾರರು ಮಾಡಬೇಕಾದ ಎಲ್ಲಾ ಕೆಲಸಗಳನ್ನೂ ಮಾಡಿಸುವುದು ಮಾತ್ರವೇ ಅಲ್ಲದೆ ವಿದ್ಯಾರ್ಥಿಗಳಿಗೆ ಕೃಷಿಕಾರ್ಯದ ಮೂಲತತ್ವಗಳನ್ನೆಲ್ಲಾ

ಬೋಧಿಸಲಾಗುತ್ತದೆ. ನಾಲ್ಕೈದು ಮಂದಿ ವಿದ್ಯಾರ್ಥಿಗಳನ್ನು ಒಂದುಗೂಡಿಸಿ ಅವರಿಗೆ ಒಂದೊಂದು ಎಕರೆ ಭೂಮಿಯನ್ನು ಕೊಡಲಾಗುತ್ತದೆ. ಆ ಭೂಮಿಯ ವ್ಯವಸಾಯಕ್ಕೆ ಸಂಬಂಧಪಟ್ಟ ಎಲ್ಲಾ ಕೆಲಸಗಳನ್ನೂ ಆ ವಿದ್ಯಾರ್ಥಿಗಳೇ ಸ್ವತಃ ಮಾಡಿಕೊಳ್ಳಬೇಕು. ಸುಮಾರು 50 ಮಂದಿ ವಿದ್ಯಾರ್ಥಿಗಳಿಗೆ ನಾರ್ಮಲ್‌ಸ್ಕೂಲಿನಲ್ಲಿ ಕೊಡುವ ವಿದ್ಯಾರ್ಥಿ ವೇತನವಲ್ಲದೆ ಅವರು ಪ್ರತಿದಿವಸವೂ ಮಾಡುವ ಕೃಷಿಸಂಬಂಧವಾದ ದೇಹಶ್ರಮಕ್ಕೋಸ್ಕರ ತೆಗೆದುಕೊಳ್ಳಬೇಕಾದ ಮೇಲು ತಿಂಡಿಯ ಖರ್ಚಿಗಾಗಿ ಮಾಹೆಯಾನಾ ಮೂರು ರೂಪಾಯಿ ಕ್ಷೇತ್ರವೇತನವೂ (Farm allowance) ಕೊಡಲ್ಪಡುವದು. ಆಗ್ರಿಕಲ್ಚರ್ ಕಮಿಷ್ಟರವರು ಈ ಭೂಮಿಯನ್ನು ಆಗಾಗ್ಗೆ ಹೋಗಿನೋಡಿ ಅಭಿವೃದ್ಧಿಗೆ ಬೇಕಾದ ಏರ್ಪಾಡುಗಳನ್ನು ಸೂಚಿಸುವರು.

ಎರಡನೆಯದು ಯಾವದೆಂದರೆ:- ನೆರೆಹೊರೆಯ ರೈತರಿಗೆ ಕ್ರಮವಾದ ವ್ಯವಸಾಯವಿಧಾನದಲ್ಲಿ ಮೇಲ್ಪಙ್ಕಿಯಾಗಿರುವಂತೆ ಒಂದೊಂದು ತಾಲ್ಲೂಕಿನಲ್ಲಿಯೂ ಗೊತ್ತಾದ ಭೂಮಿಗಳಲ್ಲಿ ಉತ್ತಮವಾದ ನವೀನವ್ಯವಸಾಯ ಕ್ರಮಗಳನ್ನು ಆಚರಣೆಗೆ ತರುವ ಏರ್ಪಾಡನ್ನು ಕಳೆದವರ್ಷ ಮಂಜೂರ್ಮಾಡಲಾಯಿತು. ಸರ್ಕಾರದವರ ಸಹಾಯದಿಂದಲೂ ಮೇಲ್ವಿಚಾರಣೆಯಿಂದಲೂ ಪ್ರಜೆಗಳು ತಾವೇ ಇಂಥ ಕಾರ್ಯವನ್ನು ಕೈಕೊಳ್ಳುವಂತೆ ಮಾಡುವದೇ ಈ ಏರ್ಪಾಡಿನ ಮುಖ್ಯೋದ್ದೇಶವಾಗಿದೆ. ಕೂಡಿದವರಿಗೂ ದೊಡ್ಡ ಜಮೀನ್ದಾರರಾಗಿಯೂ ಆ ವರ್ಷ ತಮ್ಮ ಭೂಮಿಯನ್ನು ಮಾದರಿ ವ್ಯವಸಾಯಮಾಡಲು ಇಷ್ಟವುಳ್ಳವರಾಗಿಯೂ ಇರುವ ರೈತರುಗಳಲ್ಲಿ ಒಂದೊಂದು ಹೋಬಳಿಗೆ ಸರಾಸರಿ ಒಬ್ಬೊಬ್ಬನಂತೆ ತಾಲ್ಲೂಕಿಗೆ ಸುಮಾರು 6 ಮಂದಿ ಬುದ್ಧಿವಂತರಾದ ರೈತರನ್ನು ಪ್ರತಿಯೊಬ್ಬ ಅಮಲ್ದಾರರೂ ಆರಿಸಬೇಕು. ಅವರಿಗೆ ಬಳ್ಳೆಯ ಬಿತ್ತಿಗೊಬ್ಬರ ಮೊದಲಾದವುಗಳನ್ನು ಒದಗಿಸಿಕೊಡುವದರಲ್ಲಿ ಡೆಪ್ಯೂಟಿಕಮಿಷನರಗಳು ಸಹಾಯಮಾಡುವರು; ಡಾಕ್ಟರ್ ಲಿಮನ್ರವರೂ ಮಿ॥ ಕಾಮಿರಾನವರೂ ಬೇಕಾದ ಅಂಶಗಳನ್ನು ಉಚಿತವಾಗಿಯೇ ತಿಳಿಸುವುದಕ್ಕೆ ಸಿದ್ಧರಾಗಿರುವರು ರೆವಿನ್ಯೂ ಅಧಿಕಾರಿಗಳು ಇಂಥಾ ರೈತರಮೇಲೆ ವಿಶೇಷ ಅಧಿಕಾರವನ್ನು ಮಾಡದೆಯೂ ಆ ಭೂಮಿಗಳ ಆಡಳಿತದಲ್ಲಿ ಪ್ರವೇಶಿಸದೆಯೂ ಅಪ್ಪದೇಶಗಳಿಗೆ ಮಾತ್ರ ಆಗಾಗ್ಗೆ ಹೋಗಿ ನೋಡಿಕೊಂಡು ಈ ವಿಧವಾದ ಪರೀಕ್ಷೆಗಳಲ್ಲಿ ಆಸಕ್ತಿಯು ಜಮೀನ್ದಾರರಿಗೆ ಕತಿಮೆಯಾಗದೇ ಇರುವಂತೆಯೂ ನೆರೆಹೊರೆಯವರಿಗೆ ಉಂಟಾಗುವಂತೆಯೂ ಮಾಡಬೇಕಾಗಿದೆ. ಈ ಕೆಲಸಗಳ ಲೆಕ್ಕಗಳು ನಂಬಿಕೆಯಾಗಿ ಗೊತ್ತಾಗುವದಕ್ಕೋಸ್ಕರ ಅವುಗಳ ನಡವಳಿಕೆಯನ್ನೆಲ್ಲಾ ಕ್ರಮವಾಗಿ ಬರೆಯಡುವಂತೆ ಏರ್ಪಾಡುಮಾಡಿದೆ.

ಮೂರನೆಯದು ಯಾವದೆಂದರೆ :—ಕೃಷಿಗೂ ಕರವಿಗೂ ಸಂಬಂಧಪಟ್ಟ ಪದಾರ್ಥಗಳು, ಅಭಿವೃದ್ಧಿಗೆ ತಂದಿರುವ ಸ್ಥಳೀಯ ವ್ಯವಸಾಯೋಪಕರಣಗಳು, ಮತ್ತು ಬೇರೆಬೇರೆ ತಳಿಯ ದನಕರುಗಳು ಇವುಗಳ ಪ್ರದರ್ಶನಗಳನ್ನು ಗೊತ್ತಾದ ಕೆಲವು ಡಿಸ್ಟ್ರಿಕ್ಟ್ ಕಸಬೆಗಳಲ್ಲಿ ಈ ವರ್ಷ ನಡಿಸುವದಾಗಿ ಏರ್ಪಾಡು ಮಾಡಿದೆ. ಈ ಪ್ರದರ್ಶನಗಳಲ್ಲಿ ಮಾದರಿ ವ್ಯವಸಾಯಗಾರರೂ ಇತರರೂ ತಂತಮ್ಮಲ್ಲಿರುವ ಉತ್ತಮವಸ್ತುಗಳನ್ನು ತಂದಿಡಬಹುದು; ಅವುಗಳಲ್ಲಿ ಶ್ರೇಷ್ಠವಾದವುಗಳಿಗೆ ಸರ್ಕಾರದವರು ಯಥೋಚಿತವಾಗಿ ಬಹುಮಾನ ಕೊಡುವರು.

ಮನೆ ನಿವೇಶನಗಳನ್ನು ನೆಲಗಂದಾಯದಿಂದ ತಪ್ಪಿಸುವದು.— ವ್ಯವಸಾಯದಲ್ಲಿದ್ದ ಭೂಮಿಯನ್ನು ಬೇರೆಕೆಲಸಗಳಿಗೆ ಉಪಯೋಗಿಸಿಕೊಂಡಾಗ ನೆಲಗಂದಾಯವನ್ನೂ ಸ್ವಲ್ಪ ಹಾಕಿದರೆ ರೈತರಿಗೆ ಒಹಳ ತೊಂದರೆಯುಂಟಾಗುವದೆಂದು ಶ್ರೀಮನ್ಮಹಾಜನರವರ ಸರ್ಕಾರದವರು ಆಲೋಚಿಸಿ, ಮನೆ ನಿವೇಶನಗಳಿಗೆ ಉಪಯೋಗಿಸಿಕೊಂಡ ಸಾಗುವಳಿ ಜಮೀನುಗಳ ಮೇಲೆ ಕಂದಾಯ ವಸೂಲ್ಮಾಡುವ ಅಧಿಕಾರವನ್ನು ರದ್ದುಮಾಡುವಂತೆ ರವಿನ್ಯೂ 17ನೆಯ ನಿಬಂಧನೆಯನ್ನು ತಿದ್ದುಪಾಟು ಮಾಡಿದ್ದಾರೆ. ನಮ್ಮ ನಿಬಂಧನೆಗಳಿಗೆ ಆಧಾರವಾಗಿರುವ ಬೊಂಬಾಯಿ ನಿಬಂಧನೆಗಳಲ್ಲಿ, ಮನೆ ನಿವೇಶನಗಳ ಮೇಲೆ ನೆಲಗಂದಾಯವನ್ನೂ ವಸೂಲ್ಮಾಡುವ ಪದ್ಧತಿಯಿದೆ. ಆದರೆ ಮೈಸೂರಿನಲ್ಲಿ ಮನೆ ಕಟ್ಟಿಲ್ಪಟ್ಟಿರುವಂಥ ನಿವೇಶನಗಳೆಲ್ಲಾ ನೆಲಗಂದಾಯದಿಂದ ಹೊರಾಯಿಸಲ್ಪಟ್ಟಿವೆ.

ಬಾಗಾಯತ್ ಕ್ರಯದ ನಿಬಂಧನೆಗಳು --ಬಾಗಾಯತ್ ಸಾಗುವಳಿಬೆಗ್ಗೆ ಜಮೀನುಗಳನ್ನು ಕ್ರಯಕ್ಕೆ ಕೊಡತಕ್ಕ ನಿಬಂಧನೆಗಳನ್ನು ತಿದ್ದುಪಾಟುಮಾಡಿ ಅವುಗಳ ಷರತ್ತುಗಳನ್ನು ರೈತರಿಗೆ ಅನುಕೂಲವಾಗುವಂತೆಬದಲಾಯಿಸಿ ಹಿಂದೆ ಕಾರ್ಯಕಾರಿಯಾಗದಿದ್ದ ಆ ನಿಬಂಧನೆಗಳ ನಿರ್ಬಂಧಗಳನ್ನು ತಪ್ಪಿಸಲಾಯಿತು. ಕಾಲವಿಳಂಬದಿಂದ ನಷ್ಟವಾಗುವಂತಿದ್ದರೆ ನಿಷ್ಕೃಷ್ಟ ಕಮಿಷ್ಟರವರು ತಮ್ಮಲ್ಲಿ ದಖಲಾಸ್ತುಮಾಡಿಕೊಟ್ಟ ಜಮೀನನ್ನು ಬಾಗಾಯತ್ ಸಾಗುವಳಿಗೆ ಕೊಟ್ಟು, ಹಾಕಬಹುದಾದ ಕಂದಾಯದ ದರವನ್ನು ಅನಂತರ ಗೊತ್ತುಮಾಡಬಹುದು. ಜಮೀನ

ಸಿಗೆ ದರ್ಖಾಸ್ತು ಮಾಡುವುದಕ್ಕೆ ಮುಂಚೆ ಮೂರುವರ್ಷಗಳಿಂದ ಬಂಜರುಬಿದ್ದಿದ್ದ ಜಮೀನುಗಳನ್ನು ಈ ನಿಬಂಧನೆಗಳಿಗೆ ಒಳಪಡಿಸುವಂತೆ ಡಿಪ್ಯುಟಿ ಕಮೀಷನರಿಗೆ ಅಧಿಕಾರಕೊಟ್ಟಿದೆ. ಅವಶ್ಯಕವಾಗಿ ಕಂಡುಬಂದಕಡೆ ಇನ್ನೂ ಹೆಚ್ಚು ರಿಯಾಯಿತಿ ತೋರಿಸುವ ವಿಷಯದಲ್ಲೂ ಬೇಕಾದ ಏರ್ಪಾಡುಮಾಡಿದೆ. 1545

ಕಂದಾಯದ ಪಾವತಿ.—ಇವುಗಳು ಮಾತ್ರವೇ ಅಲ್ಲದೆ ರೈತರ ಆನುಕೂಲ್ಯಕ್ಕಾಗಿ ಕಂದಾಯವನ್ನು ನಗದಾಗಿಯಾಗಲೀ ಅಥವಾ ಮನಿಯಾರ್ಡರ್ ಮೂಲಕವಾಗಿಯಾಗಲೀ ಕಂದಾಯದ ಭೂಮಿಯು ಯಾವ ತಾಲ್ಲೂಕಿಗೆ ಸೇರಿದೆಯೋ ಆತಾಲ್ಲೂಕು ಖಜಾನೆಗಾಗಲಿ ಅಥವಾ ಡಿಪ್ಯುಟಿ ಕಮೀಷನರ ವಿಶೇಷ ಅಪ್ಪಣೆಯ ಮೇರೆ ಆ ಡಿಸ್ಟ್ರಿಕ್ಟಿನ ಮತ್ತಾವ ತಾಲ್ಲೂಕು ಖಜಾನೆಗಾಗಲಿ ಅಥವಾ ಡಿಸ್ಟ್ರಿಕ್ಟ್ ಖಜಾನೆಗೇ ಆಗಲಿ ರೈತನ ಇಷ್ಟಾನುಸಾರವಾಗಿ ಪಾವತಿಮಾಡಬಹುದೆಂದು ಈಗಿನ ಲ್ಯಾಂಡ್ ರೆವಿನ್ಯೂ ನಿಬಂಧನೆಗಳಲ್ಲಿ 91ನೆಯ ನಿಬಂಧನೆಯನ್ನು ತಿದ್ದುಪಾಟು ಮಾಡಿದೆ.

ಹಿಂದಿನವರ್ಷ ಸರ್ಕಾರದವರ ಅವಧಾನದಲ್ಲಿದ್ದುದಾಗಿ ನಾನು ತಿಳಿಸಿದ ಮತ್ತೊಂದು ಏರ್ಪಾಡೂ ಈಚೆಗೆ ಮಂಜೂರಾಯಿತು. ಈ ಏರ್ಪಾಡಿನಿಂದ ಉಂಟಾಗುವ ಶೇಕದಾರಿ ಕೆಲಸದ ಅಭಿವೃದ್ಧಿಯು ದೇಶದ ರೆವೆನ್ಯೂ ಆಡಳಿತಕ್ಕೆ ಬಹಳವಾಗಿ ಸಹಾಯಕರವಾಗಿರುವುದೆಂದು ನಿರೀಕ್ಷಿಸಿದೆ. ಇದುವರೆಗೆ ಈ ಕೆಲಸಕ್ಕೆ ಜಾಸ್ತಿ ತಲಬು ಸಲ್ಲುತ್ತಿದ್ದದ್ದರಿಂದ ನಿಜವಾಗಿ ಯೋಗ್ಯರಾದವರು ಈ ನೌಕರಿಗೆ ಅಪೇಕ್ಷಿಸುತ್ತಿರಲಿಲ್ಲ. ರೆವಿನ್ಯೂ ಆಡಳಿತಕ್ಕೆ ಕಾರ್ಯತಃ ಆಧಾರವಾಗಿರುವ ಶೇಕದಾರರಿಗೆ ವಿಶೇಷವಾಗಿ ಪುರೋವೃದ್ಧಿಯುಂಟಾಗುವಂತೆಯೂ ಅನೇಕವಿಧವಾದ ಕಾರ್ಯಗಳನ್ನೆಲ್ಲಾ ಸಮರ್ಪಕವಾಗಿ ನಡಿಸುವದಕ್ಕೆ ತಕ್ಕಮಟ್ಟಿಗೆ ಅವರಿಗೆ ವಿದ್ಯಾಭ್ಯಾಸವನ್ನು ಮಾಡಿಸುವಂತೆಯೂ ಸರ್ಕಾರದವರು ಈಗ ಏರ್ಪಾಡುಮಾಡಿದ್ದಾರೆ. ಯೋಗ್ಯತೆಯುಳ್ಳ ಮನುಷ್ಯರು ಶಿಕ್ಷಿತರಾಗಲೆಲ್ಲಾ ಈ ಏರ್ಪಾಡು ಸ್ವಲ್ಪಸ್ವಲ್ಪವಾಗಿ ಜಾರಿಯಲ್ಲಿ ಬರತಕ್ಕದ್ದಾಗಿದೆ. ಅದು ಪೂರ್ತಿಯಾಗಿ ಜಾರಿಗೆ ಬಂದಾಗ ಸಾಲಿಯಾನ ಒಟ್ಟು ಹೆಚ್ಚು ಕರ್ಚು 62,520 ರೂಪಾಯಿಗೆ ಮೀರುವುದಿಲ್ಲ.

ವ್ಯವಸಾಯದ ಬ್ಯಾಂಕುಗಳು.—ಕೋಲಾರ ಡಿಸ್ಟ್ರಿಕ್ಟಿನ ವ್ಯವಸಾಯ ಬ್ಯಾಂಕುಗಳ ಪೈಕಿ ಗೋರೀಬಿದನೂರು ತಾಲ್ಲೂಕು ಸುಬ್ಬನಹಳ್ಳಿಬ್ಯಾಂಕ್ ಏಜಂಟಿನ ಮೋಸಕೃತ್ಯದಿಂದಲೂ ಬ್ಯಾಂಕಿನ ಆಡಳಿತಗಳನ್ನು ಮೆಂಬರುಗಳು ತಮ್ಮ ಅಸಮರ್ಥತೆಯಿಂದಲೋ ಅಥವಾ ಔದಾಸೀನ್ಯದಿಂದಲೋ ನಡಿಸಲಾರದೆ ಹೋದ್ದರಿಂದಲೂ ಗತವರ್ಷ ಆ ಬ್ಯಾಂಕು 'ಲಿಕ್ವಿಡೇಷನ್' ಗೆ ಬಂದ ಪ್ರಯುಕ್ತ ಸರ್ಕಾರದವರು ಆ ಬ್ಯಾಂಕಿಗೆ ಮುಂಗಡವಾಗಿ ಕೊಟ್ಟಿದ್ದ 26,000 ರೂಪಾಯನ್ನು ವಾಪಸು ತೆಗೆದುಕೊಳ್ಳಬೇಕಾಯಿತು.

ಎರಡು ಕಾಫಿ—ಬ್ಯಾಂಕುಗಳು ವಿನಾ ಉಳಿದ 59 ಬ್ಯಾಂಕುಗಳಿಗೆ ಮುಂಗಡವಾಗಿ ಕೊಟ್ಟಿದ್ದ 7,52,104 ರೂಪಾಯಿಗಳನ್ನು ಸುಲಭವಾದ ಕಿಸ್ತು ಬಂದಿ ಮೇಲೆ ವಸೂಲ್ಮಾಡುವ ಏರ್ಪಾಡು, 1900–1901ರ ಲಾಗಾಯಿತು ಜಾರಿಯಲ್ಲಿದೆ. ಈ ಏರ್ಪಾಡಿನ ಪ್ರಕಾರ ಕಳೆದ ಜೂನ್ ಆಖೈರವರಿಗೆ ಬರಬೇಕಾಗಿದ್ದ ಒಟ್ಟು ಖಿಸ್ತಿನ ಮೊಬಲಗು 2,83,470ರ ಪೈಕಿ 2,04,155 ರೂಪಾಯಿ ವಸೂಲಾಯಿತು.

ಹಿಂದಿನ ಉಪನ್ಯಾಸಗಳಲ್ಲಿ ತಿಳಿಸಿದಂತೆ ಈ ಬ್ಯಾಂಕುಗಳ ಆಡಳಿತಗಳು ಕೇವಲ ಅತೃಪ್ತಿಕರವಾಗಿಯೇ ಇವೆ. ಈ ಬ್ಯಾಂಕುಗಳನ್ನು ಸ್ಥಳೀಯಾಧಿಕಾರಿಗಳು ಎರಡು ವರ್ಷಕ್ಕೊಂದಾವೃತ್ತಿ ಆಡಿಟುಮಾಯಿಷಿ ಮಾಡುತ್ತಿದ್ದಾಗ್ಯೂ ಡೈರಕ್ಟರುಗಳ ಮತ್ತು ಮೆಂಬರುಗಳ ತಾತ್ಸಾರದಿಂದಲೂ ಸೋಮಾರಿತನದಿಂದಲೂ ಇವುಗಳ ಆಡಳಿತದಲ್ಲಿ ಯಾವ ಅಭಿವೃದ್ಧಿಯೂ ತೋರಿಬಂದಿಲ್ಲ. ಸರ್ಕಾರದವರು ಅನೇಕವೇಳೆ ಎಚ್ಚರಿಸಿದಬಳಿಕ ಬೇರೆ ಐದುಬ್ಯಾಂಕುಗಳಿಗೆ ಎಂದರೆ ಸಾತನೂರು, ಮುಡವಟ್ಟ, ಕ್ಯಾತಸಂದ್ರ, ಮಂಚಕಾಲ್ಕುಪ್ಪೆ, ಮತ್ತು ಮುಳಬೆನ್ನೂರು ಈ ಊರುಗಳ ಬ್ಯಾಂಕುಗಳಿಗೆ ಕೊಟ್ಟಿದ್ದ ಮುಂಗಡವನ್ನು ವಾಪಸು ತೆಗೆದುಕೊಳ್ಳುವಂತೆ ಹುಕುಂ ಮಾಡಬೇಕಾಯಿತು. ಪ್ರತಿಯೊಂದು ಬ್ಯಾಂಕಿನಲ್ಲಿಯೂ ಬ್ಯಾಂಕು ಮೆಂಬರುಗಳ ನಿಜವಾದ ಆಸ್ತಿಯನ್ನು ವಿಚಾರಪೂರ್ವಕವಾಗಿ ತಿಳಿಸುವ ಒಂದು ರಿಜಿಸ್ಟರನ್ನೂ, ಮೆಂಬರುಗಳು ಪಡೆದುಕೊಂಡ ಸಾಲದ ಮೊಬಲಗನ್ನು ಹೇಗೆ ಉಪಯೋಗಿಸಿದರೆಂಬ ವಿಚಾರದ ಫಲಿತಾಂಶವನ್ನು ತಿಳಿಸುವ ಒಂದು ರಿಜಿಸ್ಟರನ್ನೂ, ಇಡಬೇಕೆಂದು ಅಪ್ಪಣೆ ಮಾಡಲಾಯಿತು. ಎರಡು ಕಾಫೀ ಬ್ಯಾಂಕುಗಳ ಮೆಂಬರುಗಳು ತಮ್ಮ ತೋಟದ ಕೆಲಸವನ್ನು ನಡಿಸಿಕೊಳ್ಳುವಂತೆ ಸಹಾಯಮಾಡುವದಕ್ಕಾಗಿ ಅವರಿಗೆ ಬೇಕಾದ ಮೊಬಲಗನ್ನು ಮುಂಗಡ ಕೊಡುವಂತೆ 1902ನೆಯ ಇಸವಿ ನವೆಂಬರ್ ತಿಂಗಳಲ್ಲಿ ಮಂಜೂರ್ಮಾಡಿದ ಏರ್ಪಾಡಿನ ಮೇರೆ ಗತ ವರ್ಷದಲ್ಲಿ 60,069 ರೂಪಾಯನ್ನು ಮುಂಗಡವಾಗಿಕೊಡಲಾಯಿತು. ಆದರೆ ಅದರ ಫಲಿತಾಂಶವು ಪ್ರೋತ್ಸಾಹಕರವಾಗಿಲ್ಲ.

ಇಂಡಿಯಾ ಸರ್ಕಾರದವರು ಬಹುಕಾಲ ಪರ್ಯಾಲೋಚಿಸಿ ಬಹಳವಾಗಿ ವಿಚಾರಮಾಡಿ ಈಚೆಗೆ "ಕೊಆಪರೆಟಿವ ಕ್ರೆಡಿಟ್ ಸೊಸೈಟೀಸ ಆಕ್ಟ," ಎಂಬ ಒಂದು ಕಾನೂನನ್ನು ಮಂಜೂರ್ಮಾಡಿ ಆ ಕಾನೂನಿನ ಬೇರೆ ಬೇರೆ ನಿಯಮಗಳನ್ನು ಏರ್ಪಡಿಸುವುದರಲ್ಲಿ ತಮ್ಮ ಉದ್ದೇಶವೇನೆಂಬುದನ್ನೂ ಆ ಕಾನೂನನ್ನು ಯಾವ ರೀತಿ ಜಾರಿಗೆ ತರಬೇಕೆಂದು ತಮಗೆ ಇಷ್ಟವೆಂಬುದನ್ನೂ ವಿವರಿಸಿ ಒಂದು ರೆಜಲ್ಯೂಷನನ್ನೂ ಪ್ರಕಟಿಸಿದರು. ಈ ಏರ್ಪಾಡಿನಲ್ಲಿ ಆದಿಯಲ್ಲಿಯೇ ಬಹಳ ಭಾರಿಯಾಗಿ ಕೆಲಸವನ್ನು ಆರಂಭಿಸಕೂಡದೆಂದೂ ವಿಮರ್ಶೆಯಿಲ್ಲದೆ ಸರ್ಕಾರದ ಸಹಾಯವನ್ನು ಕೊಡಕೂಡದೆಂದೂ ನಿರೋಧಿಸಿದೆ. ಈ ಕೊರತೆಗಳೇ ನಾನು ಅನೇಕವೇಳೆ ಹೇಳುತ್ತಿದ್ದಂತೆ ಮೈಸೂರು ವ್ಯವಸಾಯ ಬ್ಯಾಂಕುಗಳ ನಾಶಕ್ಕೆ ಮೂಲವಾಗಿವೆ. ಇಂಡಿಯಾ ಸರ್ಕಾರದವರ ಕಾನೂನಿನಪ್ರಕಾರ ಈ ಗ್ರಾಮಸಂಘಗಳ ಕಾರ್ಯಾರಂಭದಲ್ಲಿ ಮಿತವಾಗಿ ಸಹಾಯಮಾಡಬೇಕೆಂದೂ ಈರೀತಿಯಾದ ಸಹಾಯವು ಸೊಂಬರುಗಳಿಂದ ಬ್ಯಾಂಕಿಗೆ ಪಾವತಿಯಾದ ಚಂದಾ, ಠೇವಣಾತಿ, ಅಥವಾ ಷೇರು ಮೊಬಲಗಿಗೆ ಮೀರಕೂಡದು ಎಂದರೆ ಯಾವಸಂದರ್ಭದಲ್ಲಿಯೂ 1000 ರೂಪಾಯಿಗೆ ಹೆಚ್ಚಾಗಕೂಡದೆಂದೂ ವಿಧಾಯಕವಾಗಿದೆ. ವ್ಯಾಪಾರಗಳಿಗೂ ಕೈಗಾರಿಕೆಗಳಿಗೂ ಸಹಾಯವಾಗುವಂತೆ ಇಂಡಿಯಾ ಸರ್ಕಾರದವರು ಮಾಡಿದ ಸೂಲದ ವಿಷಯವಾದ ಈ ಏರ್ಪಾಡಿನಿಂದ ನಾವು ಒಬ್ಬರೇ ಪ್ರಯತ್ನಮಾಡಿ ಸ್ವಾನುಭವದಿಂದ ಪಡೆದುಕೊಳ್ಳುತ್ತಿದ್ದುದಕ್ಕಿಂತಲೂ ಅಧಿಕವಾದ ತಿಳಿವಳಿಕೆಯೂ ವಿಶೇಷವಾದ ಅನುಭವವೂ ಉಂಟಾಗಿವೆ. ಆದ್ದರಿಂದ ಇಂಡಿಯಾ ಸರ್ಕಾರದವರು ಏರ್ಪಡಿಸಿದ ಈ ಕಾನೂನನ್ನು ಈ ಸಂಸ್ಥಾನದಲ್ಲಿಯೂ ಜಾರಿಗೆ ತರಕೂಡದೆ, ಎಂದು ಪರ್ಯಾಲೋಚಿಸಬೇಕಾಗಿದೆ. ಯಾವ ಸಂದರ್ಭದಲ್ಲಿಯೂ ಈದೇಶದ ಮುಖಂಡರ ಆದರಪೂರ್ವಕವಾದ ಪ್ರೋತ್ಸಾಹವೂ ಕಾರ್ಯೋಪಕ್ರಮವೂ ಇಲ್ಲದ ಈ ಕಾರ್ಯವು ಕೈಕೂಡಲಾರದು. ಆದ್ದರಿಂದ ಗಣಿಕರರಿಗೂ, ಜನರು ಸರ್ಕಾರದವರ ಉದಾರವಾದ ಈಉದ್ದೇಶಗಳಿಂದ ಪ್ರಯೋಜನಪೊಂದಲು ಪ್ರವರ್ತಿಸುವಂತೆ ಅವರಿಗೆ ಹಿತೋಪದೇಶ ಮಾಡಿ ಪ್ರೋತ್ಸಾಹಿಸುವುದು ನಿಮ್ಮ ಕೆಲಸವಾಗಿದೆ.

ಕೈಗಾರಿಕ ವಿದ್ಯಾಭ್ಯಾಸ.—ಕಳೆದ ಉಪನ್ಯಾಸದಲ್ಲಿ ಸಂಗ್ರಹವಾಗಿ ತಿಳಿಸಿದ ಕೈಗಾರಿಕೆ ವಿದ್ಯಾಭ್ಯಾಸದ ಏರ್ಪಾಡನ್ನು ಎಷ್ಟು ಮಟ್ಟಿಗೆ ಜಾರಿಗೆ ತಂದಿದೆ ಎಂಬಂಶವನ್ನು ತಿಳಿಯಲು ನಿಮಗೆ ಕುತೂಹಲವಿರಬಹುದು. 1903ನೆಯ ಜುಲೈ ತಿಂಗಳಲ್ಲಿ ಮೈಸೂರಲ್ಲಿ ಸ್ಥಾಪಿಸಿದ ಇಂಜನಿಯರಿಂಗ್ ಸ್ಕೂಲು, ಮೊದಲು ವರ್ಷದಲ್ಲಿಯೇ ಬಹಳ ತೃಪ್ತಿಕರವಾಗಿ ಅಭಿವೃದ್ಧಿಗೆ ಬಂತು. ಮೈಸೂರು ಕೈಗಾರಿಕ ಪಾಠಶಾಲೆಯನ್ನು ಕ್ರಮವಾಡಿಸಲಾಯಿತು. ಅದರ ಕೆಲಸವು ಎಲ್ಲಾ ಭಾಗಗಳಲ್ಲಿಯೂ ಉತ್ತಮಸ್ಥಿತಿಗೆ ತರಲ್ಪಟ್ಟಿದೆ. ಈಚೆಗೆ ಈ ಪಾಠಶಾಲೆಯನ್ನು, ಬೇರೆಕಡೆಯಲ್ಲಿ ಬಹಳ ಚೆನ್ನಾಗಿ ಕೆಲಸಮಾಡಿದ ಒಬ್ಬ ಸೂಪರಿಂಟೆಂಡೆಂಟರ ಕೈಕೆಳಗೆ ಇಡಲಾಯಿತು. ಈ ಅಧಿಕಾರಿಯು ಈ ಸಂಸ್ಥಾನದ ಇತರ ಕೈಗಾರಿಕೆ ಪಾಠಶಾಲೆಗಳನ್ನು ಕೂಡ ಅಜಮಾಯಿಷಿಮಾಡುವಂತೆ ಏರ್ಪಡಿಸಿದೆ. ಮೇಲುಕೋಟೆ ಕೈಗಾರಿಕೆ ಪಾಠಶಾಲೆಯಲ್ಲಿ ತಯಾರಾದ ರೇಷ್ಮೆ ಮತ್ತು ಹತ್ತಿಯ ಉತ್ತಮವಾದ ಒಟ್ಟೆಗಳನ್ನು ಕಳೆದ ಡಿಸೆಂಬರಿನಲ್ಲಿ ಮದ್ರಾಸಿ ಪ್ರದರ್ಶನಕ್ಕೆ ಕಳುಹಿಸಲಾಯಿತು. ಈಚೆಗೆ ಸರ್ಕಾರದ ಸಹಾಯವನ್ನು ಪಡೆದುಕೊಂಡ ಹೊಳೆನರಸೀಪುರದನೆಯ್ಗೆ ಪಾಠಶಾಲೆಯು ಹಾರುವ ಲಾಳಿಯುಳ್ಳ ಕೈಮಗ್ಗದ ಕೆಲಸದಲ್ಲಿ ಉತ್ತಮವಾದ ಪುರೋಭಿವೃದ್ಧಿಯನ್ನು ಹೊಂದಿದೆ. ಆ ಪಾಠಶಾಲೆಯ ಸೂಪರಿಂಟೆಂಡೆಂಟರು ಕೈಮಗ್ಗದ ಕಾರ್ಖಾನೆಗಳಲ್ಲಿ, ಊಕೆ ಹಾಕುವುದು, ಸರಿ ಹಾಕುವುದು ಇವೇಮೊದಲಾದ ಕೆಲಸಗಳಿಗೆ ಉಪಯೋಗಿಸ ಬಹುದಾದ ಕೆಲವು ಯಂತ್ರೋಪಕರಣಗಳನ್ನು ನಿರ್ಮಿಸಿದ್ದಾರೆ.

ಚೆನ್ನಪಟ್ಟಣದಲ್ಲಿ ಖಿಲವಾಗುತ್ತಿದ್ದ ಉಕ್ಕು ಮತ್ತು ತಂಬೂರಿತಂತಿಯ ಕೈಗಾರಿಕೆಯನ್ನೂ ಹಿಂದೆ ಅವ್ವೂರಿನ ಹೆಸರನ್ನು ಪ್ರಸಿದ್ಧಿಗೆ ತಂದಿದ್ದ ಬಚ್ಚಣೆ ಸಾಮಾನಿನ ಕೈಗಾರಿಕೆಯನ್ನೂ ಪುನಃ ಅಭಿವೃದ್ಧಿಗೆ ತರುವದಕ್ಕಾಗಿ ಒಂದು ಪಾಠಶಾಲೆಯನ್ನು ಇಡಲಾಯಿತು. ದೊಡ್ಡಒಳ್ಳಿಪುರದಲ್ಲಿ ಒಂದು ನೆಯ್ಗೆ ಪಾಠಶಾಲೆಯನ್ನಿಟ್ಟು ಅದರಲ್ಲಿ ಮರಗೆಲಸ, ನಕ್ಷೆಗೆಲಸ, ಇವುಗಳನ್ನು ಬೋಧಿಸುವದಕ್ಕೂ ಏರ್ಪಾಡುಮಾಡಿತು ಈ ಪಾಠಶಾಲೆಯು ಚೆನ್ನಾಗಿ ವೃದ್ಧಿ ಹೊಂದುತ್ತಿರುವದಾಗಿ ತಿಳಿಯಬಂದಿದೆ. ಚಿಕನಾಯಕನಹಳ್ಳಿಯಲ್ಲಿಯೂ, ಮೊಣಕಾಲುಮುರುವಿನಲ್ಲಿಯೂ ಈಚೆಗೆ ನೆಯ್ಗೆ ಪಾಠಶಾಲೆಗಳನ್ನು ಇಡಲಾಯಿತು. ಚಿತ್ರದುರ್ಗದಲ್ಲಿ ಮರಗೆಲಸ, ನಕ್ಷೆಗೆಲಸ, ಕಬ್ಬಿಣಗೆಲಸ ಇವುಗಳಿಗೆ ಒಂದು ಕೈಗಾರಿಕೆ ಪಾಠಶಾಲೆಯು ಸ್ಥಾಪಿಸಲ್ಪಟ್ಟಿತು. ಹೊಳೆನರಸೀಪುರದಲ್ಲಿ ಒಂದು ಮರಗೆಲಸದ ಪಾಠಶಾಲೆಯನ್ನು ಸ್ಥಾಪಿಸಿತು. ತುಮಕೂರಿನಲ್ಲಿರುವ ಮೆಸ್ಸರ್ಸ್ ಪಿಷ್ಟ ಕೈಗಾರಿಕೆ ಪಾಠಶಾಲೆಯನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಇವರು ಒಬ್ಬ ಯೂರೋಪಿಯನ್ ಸೂಪರಿಂ

ಟೆಂಡೆಂಟರನ್ನು ನೇಮಿಸಿದರು. ಅದಕ್ಕಾಗಿ ಆ ಪಾಠಶಾಲೆಯ ಗ್ರಾಂಟನ್ನು 40ರಿಂದ 165 ರೂಪಾಯಿಗಳಿಗೆ ಹೆಚ್ಚಿಸಲಾಯಿತು. ಕೋಲಾರದಲ್ಲಿಯೂ ಹಾಸನದಲ್ಲಿಯೂ ಹಿಂದೆ ಸ್ಥಾಪಿತವಾದ ಪಾಠಶಾಲೆಗಳು ಚೆನ್ನಾಗಿ ಕೆಲಸ ಮಾಡಿದವು. ಬೆಂಗಳೂರಲ್ಲಿ ತಾತಾಯವರ ರೇಶ್ಮೆ ತೋಟದಲ್ಲಿ ವಿದ್ಯಾಭ್ಯಾಸಮಾಡುವುದಕ್ಕಾಗಿ ಮೊದಲನೆಯ ಸಾರಿ ಕಳುಹಿಸಿದ್ದ ಐದುಮಂದಿ ಹೋಬಳಿ ಸ್ಕೂಲ್ ಮಾಸ್ಟರ್‌ಗಳನ್ನು ಇನ್‌ಸ್ಪೆಕ್ಟರ್‌ಗಳಾಗಿ ನೇಮಿಸಿ ಅವರು ರೇಶ್ಮೆ ಪೈರಾಗುವ ಗ್ರಾಮಗಳಿಗೆ ಹೋಗಿ ಆರೋಗ್ಯವಾದ ಹುಳುಗಳನ್ನು ಪೈರುಮಾಡುವಂತೆ ರೈತರಿಗೆ ಸಹಾಯಮಾಡಬೇಕೆಂದು ಗೊತ್ತುಮಾಡಲಾಯಿತು. ಅವರಲ್ಲಿ ಇಬ್ಬರನ್ನು ಬೆಂಗಳೂರು ಡಿಸ್ಟ್ರಿಕ್ಟಿಗೂ ಒಬ್ಬರನ್ನು ಕೋಲಾರಕ್ಕೂ ಒಬ್ಬರನ್ನು ಮೈಸೂರಿಗೂ ಒಬ್ಬರನ್ನು ತುಮುಕೂರಿಗೂ ಕಳುಹಿಸಲಾಯಿತು.

ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ನಕ್ಷೆ ಕೆಲಸವನ್ನು ಕಲಿಸುವದಕ್ಕಾಗಿಯೇ ಒಬ್ಬ ಉಪಾಧ್ಯಾಯನನ್ನು ನೇಮಿಸಲಾಯಿತು. ಸದ್ಯಃ ನಕ್ಷೆಯನ್ನು ಮಹಾರಾಜರವರ ಕಾಲೇಜು ಎಫ್. ಎ. ತರಗತಿಗಳಿಗೆ ಕಲಿಸುವಹಾಗೆ ಏರ್ಪಾಡು ಮಾಡಿದೆ.

ಮದ್ರಾಸ್ ಪ್ರದರ್ಶನ.—ಮದ್ರಾಸ್ ಕೈಗಾರಿಕೆಯ ಪ್ರದರ್ಶನದಲ್ಲಿ ಮೈಸೂರು ಸರ್ಕಾರದವರೂ ಅನ್ವಯಿಸಿದ್ದರು. ಅದರ ಪ್ರಾರಂಭದಿನದಲ್ಲಿ ಶ್ರೀಮನ್ಮಹಾರಾಜರವರು ಅಗ್ರಾಸನಾಧಿಪತ್ಯವನ್ನು ವಹಿಸಿದ್ದರು. ಅಲ್ಲಿ ಮೈಸೂರು ದೇಶದ ಪದಾರ್ಥಗಳನ್ನು ಪೃಥಕ್ಕಾಗಿ ಇಟ್ಟಿತ್ತು. ಅವು ಜನರನ್ನು ವಿಶೇಷವಾಗಿ ಆಕರ್ಷಿಸಿದವು. ಈ ದೇಶದ ಪದಾರ್ಥಗಳ ಔತ್ಕೃಷ್ಟ್ಯಕ್ಕಾಗಿ ಪ್ರದರ್ಶನಸಭೆಯವರು ಅನೇಕ ಬಿರುದುಬಿಲ್ಲೆಗಳನ್ನೂ ಬಹುಮಾನಗಳನ್ನೂ ಕೊಟ್ಟರು.

ಆಬ್ಕಾರಿ.—ಈ ಇಲಾಖೆಯಲ್ಲಿ ನಡಿಸಿದ ಹೊಸ ಏರ್ಪಾಡಿನ ಮುಖ್ಯವಾದ ಅಂಶಗಳು ಯಾವವೆಂದರೆ:—ಕೆಲಸ ವಿಶೇಷವಾಗಿದ್ದ ಗೋರೀಬಿದನೂರು ಕಡೂರು ರೇಂಜುಗಳಿಗೆ ಕೆಲಸ ಕಡಿಮೆ ಮಾಡುವುದಕ್ಕಾಗಿ ತರೀಕೆರೆ ಮತ್ತು ಬಾಗೆಪಲ್ಲಿ ತಾಲ್ಲೂಕುಗಳನ್ನು ಪ್ರತ್ಯೇಕವಾದ ರೇಂಜುಗಳನ್ನಾಗಿ ಮಾಡಿದ್ದು; ಮರದೆರಿಗೆಯನ್ನು ಜಾರಿಯಲ್ಲಿ ತರುವುದಕ್ಕಾಗಿ ಇಟ್ಟಿದ್ದ ಹಂಗಾಮಿ ಸಿಬ್ಬಂದಿಗಳನ್ನು ಖಾಯಂ ಮಾಡಿದ್ದು—ಇವೇ. ನಿಷೇಧಿಸಲ್ಪಟ್ಟ ಷರಾಬಿನ ಆಮದಿನ ಮತ್ತು ಕಳ್ಳವ್ಯಾಪಾರದ ಕೇಸುಗಳು 13 ರಿಂದ 43ಕ್ಕೆ ಏರಿದವು. ಕಳ್ಳ ಷರಾಬಿನ ವ್ಯಾಪಾರವನ್ನು ಅಡಗಿಸಬೇಕೆಂದು ಅನವರತ ಪ್ರಯತ್ನಮಾಡಿದಾಗ್ಯೂ ಅದು ಇನ್ನೂ ಶುದ್ಧಾಂಗವಾಗಿ ನಿಂತುಹೋದಂತೆ ಕಾಣುವುದಿಲ್ಲ. ಆದ್ದರಿಂದ ಅದರ ನಿರೋಧಾರ್ಥವಾಗಿ ಸಿಬ್ಬಂದಿಯನ್ನು ಇನ್ನೂ ಹೆಚ್ಚಿಸಿ ಇನ್ನೂ ಕ್ರಮವಾದ ಏರ್ಪಾಡುಗಳನ್ನು ಮಾಡುವುದು ಅವಶ್ಯಕವಾಗಿದೆ. ಕಳ್ಳವ್ಯಾಪಾರವನ್ನು ವಿಶೇಷವಾಗಿ ತಪ್ಪಿಸಿದ್ದರಿಂದಲೂ ದೇಶವು ಸಾಮಾನ್ಯವಾಗಿ ಸುಭಿಕ್ಷವಾಗಿದ್ದುದರಿಂದಲೂ ಸಾರಾಯದ ಖರ್ಚು ಶೇಕಡ 5ರಂತೆ ಹೆಚ್ಚಾಗಿ, ಆಬ್ಕಾರಿ ಹುಟ್ಟುವಳಿಯಲ್ಲಿ 72,000ರೂಪಾಯಿ ಹೆಚ್ಚು ಉತ್ಪತ್ತಿ ಯಾಗುವುದಕ್ಕೆ ಕಾರಣವಾಯಿತು

ಗತವರ್ಷ 349,826 ಗ್ಯಾಲನ್ ಸಾರಾಯಿ ಖರ್ಚಾಯಿತು. ಇದು ಗತವರ್ಷದ ಉಪನ್ಯಾಸದಲ್ಲಿ ಸೂಚಿಸಿದಂತೆ, 1896—97ನೆಯ ವರ್ಷಕ್ಕೆ ಹಿಂದಿನ ಪಾಂಚವಾರ್ಷಿಕ ಸರಾಸರಿ ಎಂದರೆ 410,236 ಗ್ಯಾಲನ್‌ಗಳಿಗಿಂತ 60,410 ಗ್ಯಾಲನಷ್ಟು ಕಡಿಮೆಯಾಗಿತ್ತು. ಆದರೂ ಈ ವರ್ಷ ಖರ್ಚಾದ ಒಳದೇಶದ ಮತ್ತು ಪರದೇಶದ ಒಟ್ಟು ಸಾರಾಯವು 1902ನೆಯ ವರ್ಷದಲ್ಲಿ ಖರ್ಚಾದ 11,136,620 ಗ್ಯಾಲನ್‌ಗಿಂತ 567,613 ಗ್ಯಾಲನಷ್ಟು ನಿವ್ವಳ ಕಡಿಮೆಯಾಗಿದೆ.

ಭಂಗಿಸೊಪ್ಪಿನ ಚಿಲ್ಲರೆ ಮಾರಾಟದ ದರವನ್ನು ತೊಲೆ 1ಕ್ಕೆ 1ಆಣೆಯಿಂದ 2ಆಣೆಗೆ ಹೆಚ್ಚಿಸಿತು.

ಜಂಗಲು.—ಸರ್ಕಾರಿ ಜಂಗಲನ್ನು 82,780 ಎಕರೆಗಳು ಎಂದರೆ ಸುಮಾರು 13 ಚದರ ಮೈಲಿಗಳಷ್ಟು ಹೆಚ್ಚಿಸಿತು. 1881ನೆಯ ಇಸವಿಯಲ್ಲಿ ಸಂಸ್ಥಾನವನ್ನು ವಹಿಸಿಕೊಟ್ಟಾಗ 454 ಚದರಮೈಲಿ ಇದ್ದದ್ದು ಈಗ 1,950 ಚದರಮೈಲಿ ಜಂಗಲಿದೆ. ಇದರಲ್ಲಿ 1,200 ಚದರಮೈಲಿ ಫಟ್ಟದ ಜಂಗಲೂ 183 ಚದರಮೈಲಿ ಕಾರ್ಯ ಜಂಗಲೂ ಸೇರಿಲ್ಲ.

98,000 ಎಕರೆ ವಿಸ್ತೀರ್ಣವಾದ 9 ಪ್ರದೇಶಗಳನ್ನು ಜಂಗಲ್ ಕಾನೂನಿನಮೇರೆ ಸೆಟಲ್ಮೆಂಟ್ ಮಾಡುವುದಾಗಿ ಪ್ರಕಟಿಸಿತು. ಒಟ್ಟು 86,076 ಎಕರೆಗಳುಳ್ಳ 13 ಪ್ರದೇಶಗಳನ್ನು ಪೂರ್ತಿಯಾಗಿ ಸೆಟಲ್ಮಾಡಿ ಪ್ರಕಟಿಸಲಾಯಿತು. ಸುಮಾರು 124 ಮೈಲಿಯುದ್ದ ಹೊಸದಾಗಿ ಎಲ್ಲೆಗುರುತು ಕಡಿಯಲ್ಪಟ್ಟಿತು, ಅಲ್ಲದೆ 30 ಮೈಲಿ ಹೊಸ ಲೈನುಗಳಲ್ಲಿಯೂ 740 ಮೈಲಿ ಹಳೇ ಲೈನುಗಳಲ್ಲಿಯೂ ದಾರಿ ಬಿಡಿಸಲಾಯಿತು.

ಒಟ್ಟು 600 ಎಕರೆಗಳಲ್ಲಿ ಗುಳಿತೋಡಿ ಗಿಡಹಾಕಲಾಯಿತು; ಮತ್ತು ಖಾಲಿಯಾಗಿದ್ದ ಹಳೆ ಗುಂಡಿಗಳಲ್ಲಿ ಬಹಳವಾಗಿ ಗಿಡ ನೆಡಲಾಯಿತು. ಸುಮಾರು 11,000 ಎಕರೆಗಳಲ್ಲಿ ಪೈರು ಮಾಡಲಾಯಿತು.

ಒಟ್ಟು 1,826 ಚದರ ಮೈಲಿಗಳನ್ನು ಬೆಂಕಿಯಿಂದ ಕಾಪಾಡಲು ಪ್ರಯತ್ನಿಸಿದ್ದದಲ್ಲಿ 1,658 ಚದರ ಮೈಲಿಗಳನ್ನು ನಿರುಪಾಧಿಕವಾಗಿ ರಕ್ಷಿಸಲಾಯಿತು. ಹೀಗೆ ಸಂಪೂರ್ಣವಾಗಿ ರಕ್ಷಿಸಿದ ದರವು 1902-03 ರಲ್ಲಿ ಸೇಕಡ 92.8 ಇದ್ದದ್ದು ಗತವರ್ಷದಲ್ಲಿ 97.2ಕ್ಕೆ ಏರಿತು.

ಕಳೆದ 14 ವರ್ಷಗಳಿಗಿಂತಹೆಚ್ಚಾಗಿ ಇಟ್ಟಿದ್ದ ಜಂಗಲ್ ಸರ್ವೆಯರುಗಳು ಅತಿಸ್ವಲ್ಪ ಕೆಲಸಮಾಡಿದ್ದಾಗಿ ತಿಳಿಯಲಾದ್ದರಿಂದ ಗತವರ್ಷದ ಅಂತ್ಯಭಾಗದಲ್ಲಿ ಒಂದು ಹೊಸಸರ್ವೆ ಪಾರ್ಟಿಯನ್ನು ಏರ್ಪಡಿಸಿ ಅದಕ್ಕೆ ಇಂಡಿಯಾಸರ್ಕಾರದ ಟೋಪೋಗ್ರಾಫಿಕಲ್ ಸರ್ವೆಯಿಂದ ನಿವೃತ್ತರಾದ ಮೆ॥ ಕ್ಲಾಡಿಯಸ್ ಎಂಬವರನ್ನು ಅಧ್ಯಕ್ಷರಾಗಿ ನಿಯಮಿಸಲಾಯಿತು. ಸಾಕಾದಷ್ಟು ಸ್ಥಳೀಯ ತಪಶೀಲುಗಳನ್ನು ತಿಳಿಸುವ ಸುಬದ್ಧವಾದ ನಕ್ಷೆಗಳನ್ನು ತಯಾರಾಗುವಂತೆ ಹುಕುಂ ಕೊಡಲಾಯಿತು. ಮೇಲ್ಕಂಡ ಸರ್ವೆಯವರಿಂದ ಬೀಗೂರು ಮತ್ತು ಕಾಕನಕೋಟೆ ಜಂಗಲುಗಳಲ್ಲಿ ಸುಮಾರು 50 ಚದರಮೈಲಿ ಪ್ರದೇಶವು ಪರಿಶೋಧಿತವಾಗಿ ಕಾಗದದಮೇಲೆ ಗುರುತು ಹಚ್ಚಲ್ಪಟ್ಟಿತು; ಇದಲ್ಲದೆ ಹಳೆ ಸರ್ವೆಯವರು ಶಿವಮೊಗ್ಗಾ ಮತ್ತು ಕೋಲಾರದ ಡಿಸ್ಟ್ರಿಕ್ಟುಗಳಲ್ಲಿ ಸುಮಾರು 100 ಮೈಲಿಉದ್ದ ಪ್ರದೇಶವನ್ನು ಪರಿಶೋಧಿಸಿದರು. ಈ ಸರ್ವೆಯು ಸಾಗಿದಹಾಗೆಲ್ಲಾ ಸುಬದ್ಧವಾದ ಕಾರ್ಯನಕ್ಷೆಗಳ ತಯಾರಿಯೂ ಸುಲಭವಾಗುವುದು.

ಇನ್ನೂ ಚರ್ಚೆಯಲ್ಲಿರುವ ಅನೇಕ ಜಂಗಲ್ ಸೆಟಲ್ಮೆಂಟುಗಳನ್ನು ಕ್ಷಿಪ್ರದಲ್ಲಿಯೇ ನಡಿಸುವುದಕ್ಕಾಗಿಯೂ ಅವುಗಳೆಲ್ಲಾ ಒಂದೇರೀತಿಯಾಗಿ ಇರುವಂತೆ ಮಾಡುವುದಕ್ಕಾಗಿಯೂ ಸಂಸ್ಥಾನಕ್ಕೆಲ್ಲಾ ಒಬ್ಬ ಸೆಟಲ್ಮೆಂಟ್ ಅಧಿಕಾರಿಯನ್ನು ನೇಮಿಸಲಾಯಿತು. ರೈತಾಪಿ ಜನದ ಹಕ್ಕುಗಳನ್ನು ಕಾಪಾಡುವುದಕ್ಕಾಗಿ ಈ ಕೆಲಸಕ್ಕೆ ಅನುಭವಶಾಲಿಯಾದ ರೆವಿನ್ಯೂ ಅಧಿಕಾರಿಯನ್ನೇ ಆಲೋಚನಾಪುರಸ್ಸರವಾಗಿ ಹುಡುಕಿ ನೇಮಿಸಲಾಯಿತು.

ಈ ಇಲಾಖೆಯ ಕಾನೂನಿನ ಉಳಿದ ಮೂರು ಅಧ್ಯಾಯಗಳನ್ನು ಗತವರ್ಷದಲ್ಲಿ ಮಂಜೂರಾಗಿ ಒಟ್ಟು ಕಾನೂನನ್ನು ಈವರ್ಷದ ಆರಂಭದಿಂದ ಜಾರಿಗೆ ತರಲಾಯಿತು. ಜಂಗಲೀ ಲೆಕ್ಕದ ಅಪವಾಯಿಷಿಯನ್ನು ಮೈಸೂರು ಸರ್ಕಾರಿ ಕಂಟ್ರೋಲರವರ ಕೈಕೆಳಗಿರುವ ಸರ್ಕಾರಿ ಲೆಕ್ಕದ ಇಲಾಖೆಗೆ ವರ್ಗಮಾಡಲಾಯಿತು.

ಚೌಬೀನೆಯ ವಾರಾಟದಿಂದ 2,55,500 ರೂಪಾಯೂ ಗಂಧದಮರದಿಂದ 10,22,900 ರೂಪಾಯೂ ಹುಟ್ಟುವಳಿಯಾದವು ಇತರಬಾಬುಗಳಿಂದ 2,96,300 ರೂ. ಉತ್ಪತ್ತಿಯಾಯಿತು. ಇಲಾಖೆಯಲ್ಲಿ ಬರ್ಚು ಜಾತ ಸಿಂತ ಸಿಲ್ಲು ಹಿಂದಿನವರ್ಷ 10,04,000 ರೂಪಾಯಿ ಇದ್ದದ್ದು ಗತವರ್ಷ 10,76,000 ರೂಪಾಯಿಗೆ ಏರಿತು. ಈವರ್ಷದ ಹುಟ್ಟುವಳಿ ಇಡಸಾಲಿಹುಟ್ಟುವಳಿಯಾಗಿತ್ತು. ಗಂಧದಮರದ ಕ್ರಯಹೆಚ್ಚಿದ್ದೂ ಚೌಬೀನೆಯ ವಾರಾಟ ಹೆಚ್ಚಿದ್ದೂ ಈ ರೀತಿಯಾದ ಹೆಚ್ಚು ಹುಟ್ಟುವಳಿಗೆ ಮುಖ್ಯಕಾರಣಗಳಾಗಿವೆ.

ಕಾಡಿನಮಧ್ಯದಲ್ಲಿ ಸ್ವಲ್ಪ ದುರ್ಗಮವಾದ ಪ್ರದೇಶಗಳಲ್ಲಿ ಬಣಗಿ ಹೋದ ಗಂಧದ ಮರಗಳನ್ನು ಗತವರ್ಷ ವಿಶೇಷ ಪ್ರಯತ್ನದಿಂದ ಕೂಡಿಸಲಾಯಿತು. ಹೀಗೆ ಮಾಡುವ ಅವಶ್ಯಕತೆಯು ಒಂದೇರೀತಿಯಾಗಿ ಹಚ್ಚುತ್ತದೆ. ಅದಕಾರಣ ಹಸಿಯಮರವನ್ನೇ ವಿಶೇಷವಾಗಿ ಕಡಿಯುವುದರಿಂದ ಮುಂದೆ ಸಂದಲ್ ಸಂಬಂಧಿಯಾಯ ಕಡಿಮೆಯಾಗುವುದೆಂಬ ಭಯಕ್ಕೆ ಅವಕಾಶವಿಲ್ಲ. ಮೈಸೂರು ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿ ಕಾಣಿಸಿಕೊಂಡ ಗಂಧದಮರದ 'ಸ್ಪೈಕ್' ಎಂಬ ವ್ಯಾಧಿಯು ಸರ್ಕಾರದವರ ಚಿಂತೆಗೆ ಕಾರಣವಾಗಿದೆ. ಹೀಗೆ ರೋಗ ಕಾಣಿಸಿಕೊಂಡ ಪ್ರಾಂತ್ಯಗಳಲ್ಲಿ ಅದಕ್ಕಾಗಿ ನೇಮಿಸಿದ ಜನಗಳು ಸಂಚಾರಮಾಡಿ ರೋಗಗ್ರಸ್ತವಾದ ಮರಗಳನ್ನು ಬೇರುಸಹಿತ ಕಿತ್ತುಹಾಕಿದರು. ಈ ರೋಗದ ವಿಷಯವು ಮೇಲೆ ಹೇಳಿದಂತೆ ಶಾಸ್ತ್ರರೀತ್ಯಾ ಪರೀಕ್ಷಿಸಲ್ಪಡುತ್ತಲೂ ಇದೆ.

ಇದುವರೆಗೂ ಚೌಬೀನೆಗೆ ಸ್ಥಳೀಯವಾದ ಗಿರಾಕಿ ಮಾತ್ರ ಇದ್ದದ್ದರಿಂದಲೂ ಕೆಲವು ಒಳ್ಳೆಯಕಾಡುಗಳು ರೇಲ್ವೆಸ್ಟೇಷನ್ ಗಳಿಗೆ ಬಹಳ ದೂರವಾಗಿ ಮರವನ್ನು ಸಾಗಿಸುವುದಕ್ಕೆ ಖರ್ಚಾದಿಂದಲೂ ಬೀಳುತ್ತಿದ್ದದ್ದರಿಂದಲೂ ಸಾಲಿವಾಸ ಬಹಳ ಮರಗಳು ಖರ್ಚಾಗದೆ ನಿಲ್ಲುತ್ತಿದ್ದದ್ದಲ್ಲದೆ ವಾರಾಟವಾದ ಮರಕ್ಕೆ ತಕ್ಕಂತೆ ಹುಟ್ಟುವಳಿಯಾಗುತ್ತಿರಲಿಲ್ಲ ಹೀಗೆ ಉಳಿದಿದ್ದ ಮರಗಳು ಹಾಜಿಇಸ್ಮಾಲ್ ಸೇಟರವರ ಮೂಲಕವಾಗಿ ಕೋಲಾರದ

ಚಿನ್ನದಗಣಿಯಲ್ಲಿ ಬಹಳವಾಗಿ ಮಾರಲ್ಪಟ್ಟವು. ಈವರ್ತಕರು ಬಳ್ಳಿಯ ಬೆಲೆಯನ್ನು ಕೊಟ್ಟು ಬೇಕಾದ ಹಾಗೆ ಗಿರಾಕಿಗಳನ್ನು ಬದಗಿಸುವ ಉದ್ದೇಶವುಳ್ಳವರಾಗಿಯೂ ಇದ್ದಾರೆ. ಈಗ ಸರಬರಾಯಿ ಆಗುವ ಮರಗಳು ಇದುವರೆಗೂ ಉಪಯೋಗಿಸದೆ ಇದ್ದ ಜಾತಿಗೆ ಸೇರಿದೆಯಾದುದರಿಂದ ಇವುಗಳ ಉಪಯೋಗವು ತೇಗ ಹೊನ್ನೆ ಮತ್ತು ಬಂದೆರಡು ಇತರ ಜಾತಿಯ ಮರಗಳಿಗೆ ಸ್ವಲ್ಪ ವಿಶ್ರಾಂತಿಯನ್ನುಂಟುಮಾಡಿದೆ.

ಜಂಗಲನ್ನು ಇನ್ನೂ ವಿಸ್ತರಿಸುವ ವಿಷಯವು ಅಜವಾಯಿಷಿಯಲ್ಲಿದೆ. ಸಭಿಕರಿರಾ, ಮುಖ್ಯವಾಗಿ ರೈತರ ಅನುಕೂಲ್ಯಕ್ಕಾಗಿ ಸರ್ಕಾರದವರು ಅನೇಕ ನಿಬಂಧನೆಗಳನ್ನು ಮಾಡಿ ಅವರಿಗೆ ಅನೇಕ ರಿಯಾಯಿತಿಗಳನ್ನು ತೋರಿಸುವದಲ್ಲದೆ ವಿಶೇಷಸಂದರ್ಭಗಳಲ್ಲಿ ನಡಿಸಬೇಕಾದ ಕಾರ್ಯಗಳಿಗೆ ಅವಧಾನವನ್ನು ಕೊಡುವದರಲ್ಲಿಯೂ ಸದಾ ಸಿದ್ಧವಾಗಿರುವ ಅಂಶವು ನಿಮಗೆ ತಿಳಿದೇಇದೆ. ಆದ್ದರಿಂದ ಜಂಗಲುಗಳು ಪುನಃ ಚೇತರಿಸಿಕೊಳ್ಳುವುದಕ್ಕೆ ಯಾವ ಕುಂದಕವೂ ಆಗದಂತೆ ಅವುಗಳನ್ನು ಕಾಪಾಡುವುದಕ್ಕೆ ಪ್ರತಿಯೊಬ್ಬರೂ ಸಹಾಯ ಮಾಡಬೇಕೆಂಬ ನಮ್ಮ ಪ್ರಾರ್ಥನೆಯು ವ್ಯರ್ಥವಾಗಲಾರದೆಂದು ನಂಬುತ್ತೇವೆ.

ಭೂಗರ್ಭ ಶೋಧನೆಯ ಇಲಾಖೆ.—ಗತವರ್ಷದಲ್ಲಿ ಗಣಿಯ ಗುತ್ತಿಗೆ, ಹೊಸಗಣಿಗಳ ಅನ್ವೇಷಣೆ, ಇವುಗಳಿಗೆ ಸಂಬಂಧಪಟ್ಟ ನಿಬಂಧನೆಗಳನ್ನು ತಿದ್ದುಪಾಟು ಮಾಡಿ ಪ್ರಕಟಿಸಲಾಯಿತು.

ಸರ್ಕಾರದವರು 1888ನೆಯ ವರ್ಷದಿಂದ ಒಂದು ವಿಧವಾದ ನಿರ್ಬಂಧಕ್ಕೆ ಒಳಗಾಗಿದ್ದು, ಹಳೆಯ ಕಂಪೆನಿಗಳ ಗುತ್ತಿಗೆ ಖರಾರನ್ನು 1901ನೆಯ ಡಿಸೆಂಬರಲ್ಲಿ ನವೀಕರಿಸಿದ್ದು ನಿಮಗೆಲ್ಲರಿಗೂ ಗೊತ್ತೇ ಇದೆ. ಈ ಕಂಪೆನಿಯವರು, ತಮ್ಮ ಕಂಪೆನಿಗಳಲ್ಲಿ ಕೆಲಸ ನಡಿಸುವದಕ್ಕೆ ಹೆಚ್ಚು ಬಂಡವಾಳ ಬೇಕಾಗಿರುವದೆಂದೂ, ಹೊಸ ಖರಾರಿನ ಷರತ್ತುಗಳು ತಿಳಿದ ಹೊರತು ಸಾಹುಕಾರರು ಬಂಡವಾಳವನ್ನು ಹಾಕಲು ಸಮ್ಮತಿಸುವದಿಲ್ಲವೆಂದೂ, ಆದಕಾರಣವೇ ಈ ಕೈಗಾರಿಕೆಯ ಪುರೋವೃದ್ಧಿಗೆ ಕುಂದಕವುಂಟಾಗಿದೆಯೆಂದೂ ಅನೇಕವೇಳೆ ಸರಕಾರಕ್ಕೆ ತಿಳಿಸಿಕೊಂಡಿದ್ದರು. ಸರ್ ಕೆ. ಶೇಷಾದ್ರಿ ಐಯರವರು, ಚಿನ್ನದ ಉತ್ಪತ್ತಿಗನುಗುಣವಾಗಿ ಸೇಕಡಾ 2 ರಿಂದ 12 ರವರೆಗೆ ವ್ಯತ್ಯಾಸವಾಗುತ್ತಿದ್ದ ಒಂದು ದರವನ್ನು ಹಾಕುವದಾಗಿ ಮೊದಲು ಹೇಳಿದರು. ಇಂಥ ದರವನ್ನು ನಿವ್ವಳ ಹುಟ್ಟುವಳಿಯಮೇಲೆ ಹಾಕಿದಲ್ಲಿ ಸರ್ಕಾರದವರಿಗೂ ಕಂಪೆನಿಯವರಿಗೂ ಭಿನ್ನಾಭಿಪ್ರಾಯಕ್ಕೆ ಕಾರಣವಾಗುವುದೆಂದೂ ಪ್ರಕಟಿಸಿದ ಲಾಭದ ಭಾಗಗಳ ಮೇಲೆ ವಸೂಲ್ಮಾಡಿದಲ್ಲಿ ಬಂಡವಾಳದ ಮೊಬಲಗನ್ನು ಮರೆಮಾಚುವದಕ್ಕೆ ಕಾರಣವಾಗುವುದೆಂದೂ ಯೋಚಿಸಿ ಇದನ್ನು ಅವರು ಬಿಟ್ಟುಬಿಟ್ಟದ್ದು ಯುಕ್ತವಾಗಿದೆ. ತರುವಾಯ ಅವರು ಚಿನ್ನದ ಉತ್ಪತ್ತಿಗೂ ನಿವ್ವಳ ಲಾಭಕ್ಕೂ ಒಂದು ನಿಯತವಾದ ಸಂಬಂಧವನ್ನು ಕಲ್ಪಿಸಿಕೊಂಡು ಅದರಮೇಲೆ ಯಥೋಚಿತವಾಗಿ ವ್ಯತ್ಯಸ್ತವಾಗುವ ಒಂದು ದರವನ್ನು ಹಾಕುವದಾಗಿ ಸೂಚಿಸಿದರು. ಆದರೆ ಇಂಡಿಯಾ ಸರ್ಕಾರದವರು ಉತ್ಪತ್ತಿಯು ಹೆಚ್ಚಾದಹಾಗೆ ನಿವ್ವಳ ಹುಟ್ಟುವಳಿಯೂ ಅದೇ ಪ್ರಮಾಣದಲ್ಲಿ ಹೆಚ್ಚುವುದೆಂಬ ವಿಷಯವನ್ನು ಅಂಗೀಕರಿಸಲಿಲ್ಲ. ಅಲ್ಲದೆ ವ್ಯತ್ಯಾಸವಾಗುವ ಈ ದರವು, ಅನೇಕ ಮಾರ್ಪಾಟುಗಳನ್ನು ಹೊಂದಿ ವಿಶೇಷ ಖರ್ಚಿನಿಂದ ತಮ್ಮ ಗಣಿಗಳನ್ನು ಯಥೋಚಿತವಾಗಿ ಆದಾಯಕರವಾದ ಅಭಿವೃದ್ಧಿಸ್ಥಿತಿಗೆ ತಂದ ಕಂಪೆನಿಗಳಿಗೆ ವಿಶೇಷ ಭಾರವನ್ನು ಹಾಕುವಂತೆ ಇರುವದಾಗಿಯೂ ಇಂಡಿಯಾ ಸರ್ಕಾರದವರು ಅಭಿಪ್ರಾಯಪಟ್ಟರು. ಆದುದರಿಂದ ಇಂಡಿಯಾ ಸರ್ಕಾರದವರು ಇಂಡಿಯಾ ಕೌನ್ಸಿಲ್ ಮೆಂಬರಾದ ಮೆ॥ ಲಿಮಾರ್ಚೆಂಟರವರಿಂದ ಕೊಡಲ್ಪಟ್ಟ ಈ ಕೆಳಗಿನ ಸಲಹೆಗಳನ್ನು ನಮ್ಮ ಸಮ್ಮತಿಗಾಗಿ ಶಿಫಾರ್ಸುಮಾಡಿ ಕಳುಹಿಸಿಕೊಟ್ಟರು. ಅದೇನೆಂದರೆ—

(a) ಒಟ್ಟು ವರಮಾನದಮೇಲೆ ಈಗಿನ ರಾಜಾಯವನ್ನೇ ನಡಿಸಿಕೊಂಡು ಬರುವುದು.

(b) ರಾಜಾಯವನ್ನು ಸೇಕಡ 5ಕ್ಕೆ ಮೇಲೆ ಹಾಕಕೂಡದು; ಅಲ್ಲದೆ ಕಡಿಮೆ ಆದಾಯವುಳ್ಳ ಕಂಪೆನಿಗಳಿಗೆ ವಿಶೇಷ ಭಾರವಾಗದಂತೆ ಮೇಲೆಕಂಡ ದರವನ್ನು ಯಥೋಚಿತವಾಗಿ ಕಡಿಮೆ ಮಾಡಬೇಕು.

(c) ವರ್ಷಕ್ಕೆ ಗೊತ್ತಾದ ಮೊಬಲಗಿಗಿಂತ ಎಂದರೆ 25,000 ಪೌನಿಗಿಂತ ಕಡಿಮೆಯಾದ ವರಮಾನವುಳ್ಳ ಕಂಪೆನಿಗಳ ಪಾಲುದಾರರ ನಫೆಯ ಮೇಲೆ ರಾಜಾಯವನ್ನು ಹಾಕದೆ ಬಿಟ್ಟುಬಿಟ್ಟೂ ಅಥವಾ ಕಡಿಮೆ ಮಾಡಿಯೂ ಉಳಿದ ಕಂಪೆನಿಗಳ ಪಾಲುದಾರರ ನಫೆಯಮೇಲೆ ಸೇಕಡ $2\frac{1}{2}$ ಯಂತೆ ರಾಜಾಯವನ್ನು ಹಾಕಬೇಕು.

ಇಂಡಿಯಾಸರ್ಕಾರದವರ ಈ ಏರ್ಪಾಡು, ಆಕಾಲದಲ್ಲಿ ನವೀಕರಣಕ್ಕಾಗಿ ಬಂದಿದ್ದ ಕೋಲಾರದ ಗಣಿಗುತ್ತಿಗೆ ಕರಾರುಗಳ ವಿಷಯವಾದ ಆಲೋಚನೆಗಳಿಂದಲೂ ಮತ್ತು ಮುಂದಿನ ಗುತ್ತಿಗೆ ಕರಾರುಗಳ ಮೇಲೆ ರಾಜಾಯವನ್ನು ವಸೂಲ್ಮಾಡುವ ಏರ್ಪಾಡು ಕೋಲಾರದ ಕೆಲವು ಬಹಳ ಲಾಭಕರವಾದ ಗಣಿಗಳ ಗುತ್ತಿಗೆ ಕರಾರುಗಳ ನವೀಕರಣಕ್ಕೆ ಲಗಾಮ ಮಾಡದಂತೆ ಇರಬೇಕೆಂಬ ಭೀತಿಯಿಂದಲೂ ಬಹಳವಾಗಿ ಪ್ರೇರೇಪಿಸಲ್ಪಟ್ಟಿದೆಯೋ ಎಂಬುವಾಗಿ ತೋರಿತು. ಆದ್ದರಿಂದ ಮುಂದೆ ನಡೆಯಬಹುದಾದ ಗಣಿಗಳಿಗೆ ಸಂಬಂಧಪಟ್ಟ ಸಾಮಾನ್ಯ ಸಂಬಂಧನೆಯೊಂದು; ನಡವಳಿಕೆಯುಮೇಲೂ ಪರಸ್ಪರ ಒಡಂಬಡಿಕೆಯುಮೇಲೂ ನಡೆಯತಕ್ಕ ವಿಷಯ ಒಂದು; ಈ ಯೆರಡು ವಿಷಯಗಳನ್ನೂ ಪ್ರತ್ಯೇಕವಾಗಿಡುವುದು ಯುಕ್ತವಾಗಿ ತೋರಿತು. 1901ನೆಯ ಡಿಸೆಂಬರ್ ತಿಂಗಳಲ್ಲಿ ಆನರೆಬಲ್ ಮಾರ್ಕ್ ನೇಪಿಯರ್ ಯವರು ಇಂಡಿಯಾ ದೇಶಕ್ಕೆ ಬಂದಾಗ ಅವರೊಡನೆ ಈ ವಿಷಯವಾಗಿ ಕಾಗದ ಪತ್ರಗಳನ್ನು ಬಳಸಲಾಯಿತು. ಅವರು ಕಂಪೆನಿಗಳ ಪರವಾಗಿ ನಿವ್ವಳ ಹುಟ್ಟುವಳಿಯ ಮೇಲೆ ಸೇಕಡಾ 5 ರಂತೆಯೂ ಪಾಲುದಾರರ ನಫೆಯ ಭಾಗದಮೇಲೆ ಸೇಕಡ 1 ರಂತೆಯೂ ರಾಜಾದಾಯ ಕೊಡುವೆವಾಗಿ ತಿಳಿಸಿದರು. ಅವರೂ ಕರ್ತವ್ಯವಾದವಲ್ಲಿ ಇನ್ನೂ ಲಾಭಕರವಾದ ಷರತ್ತುಗಳನ್ನು ಪಡೆದುಕೊಂಡು ಕೋಲಾರದ ಗಣಿಗಳ ಗುತ್ತಿಗೆ ಕರಾರುಗಳನ್ನು ಮೊದಲು ಕರಾರಿನವಾಯಿದೆ ಮುಗಿಯುವ ತಾರೀಖ್ ಲಾಗಾಯ್ತು ಎಂದರೆ 1910 ನೆಯ ವರ್ಷದ ಮಾರ್ಚ್ 22ರ ಲಾಗಾಯ್ತು 30 ವರ್ಷಗಳವರೆಗೆ ವಾಯಿದೆಯನಿಸಿ ನವೀಕರಿಸಲಾಯಿತು. ಈ ಕರಾರಿನ ಪ್ರಕಾರ ಬರುವ ರಾಜಾಯವು ಒಟ್ಟು ಉತ್ಪತ್ತಿಯಮೇಲೆ ಸೇಕಡಾ 5ರ ಮೇರೆಗೂ ಮತ್ತು ಪಾಲುದಾರರ ನಫೆಯ ಭಾಗದ ಎಲ್ಲಾ ಉತ್ಪತ್ತಿಯಮೇಲೆ ಸೇಕಡ 2½ ಯಂತೆಯೂ ಆಗುತ್ತದೆ.

ಕೋಲಾರದ ಚಿನ್ನದ ಗಣಿಯ ಕರಾರುಗಳು ಮೊದಲು ವ್ಯವಸ್ಥೆಯಾದ್ದರಿಂದ 1893 ನೆಯ ವರ್ಷದಲ್ಲಿ ಹುಟ್ಟಿದ ಖನಿಜಾನ್ವೇಷಣೆದ ಮತ್ತು ಖನನ ಕಾರ್ಯದ ನಿಬಂಧನೆಗಳಿಗೆ ಪ್ರತಿಯಾಗಿ ಹೊಸನಿಬಂಧನೆಗಳನ್ನು ಕ್ಷಿಪ್ರವಲ್ಲಿಯೇ ಪ್ರಕಟಿಸುವುದಕ್ಕೆ ಅನುಕೂಲವಾಯಿತು. ಇಂಥ ಕಾರ್ಯಗಳಲ್ಲಿ ಬರುವ ಲಾಭವು ಸಿಯತ ವಲ್ಲಾದ್ದರಿಂದ ಚಿನ್ನದ ಗಣಿಯವರಿಗೆ ವಿಶೇಷ ಲಾಭವನ್ನು ಬಿಟ್ಟು ಕೊಡುವುದು ಅವಶ್ಯವಾಗಿತ್ತು. ಕಲಸವನ್ನು ಉಪಕ್ರಮಿಸುವ ಕಂಪೆನಿಗಳಿಗೆ ಸಾಧ್ಯವಾದ ಮಟ್ಟಿಗೂ ಲಘುವಾದ ಷರತ್ತುಗಳನ್ನು ವಿಧಿಸುವುದೂ ಮತ್ತು ಬಂಡವಾಳಕ್ಕಾಗಿಯೇ ಪಾಲುದಾರರು ಪಾವತಿಮಾಡಿದ ಮೊಬಲಗನ್ನು ಸಾಧ್ಯವಾದ ಮಟ್ಟಿಗೂ ಗಣಿಗಳ ಅಭಿವೃದ್ಧಿ ಕಾರ್ಯದ ವಿನಿಯೋಗಕ್ಕಾಗಿಯೇ ಬಿಡುವುದೂ ಅವಶ್ಯಕವಾಗಿತ್ತು. ಒಳಗುತ್ತಿಗೆಮೇಲೆ ರುಸುಮನ್ನು ವಸೂಲ್ಮಾಡಿದಲ್ಲಿ ಕೆಲವು ಸಂದರ್ಭಗಳಲ್ಲಿ ಸರ್ಕಾರದ ಗುತ್ತಿಗೆ ದಾರನಿಗೂ ಒಳಗುತ್ತಿಗೆ ದಾರನಿಗೂ ನಡೆದಕಾಗದ ಪತ್ರಗಳನ್ನೆಲ್ಲಾ ಅಸಮಾಧಾನಕರವಾದ ರೀತಿಯಲ್ಲಿ ಪರೀಕ್ಷಿಸಬೇಕಾಗುತ್ತಿತ್ತು; ಮತ್ತು ಈ ಕಾರ್ಯವನ್ನು ಸಂಪೂರ್ಣವಾಗಿ ನಡಿಸಿದಲ್ಲಿ ಭತ್ತಿಯಾದ ಪಾಲು (ಷೇರ್) ಗಳನ್ನೇ ರುಸುಮಿನ ಭಾಗವಾಗಿ ಸರ್ಕಾರದವರು ಅಂಗೀಕರಿಸಬೇಕಾಗಿಯೂ ಬರುತ್ತಿತ್ತು. ಈಸಂದರ್ಭದಲ್ಲಿ ಸರ್ಕಾರದವರು ಜಂಟಿ ಸಂಬಂಧವನ್ನು ಉಂಟುಮಾಡುವುದೂ ಉಚಿತವಾಗಿ ತೋರಲಿಲ್ಲ; ಇದು ಅನೇಕವೇಳೆ ನಷ್ಟದಲ್ಲಿ ಪರಿಣಮಿಸುತ್ತಿತ್ತು. ಆದ್ದರಿಂದ 1902 ನೆಯ ಏಪ್ರಿಲ್ ತಿಂಗಳಲ್ಲಿ ಒಂದು ಹೊಸ ಏರ್ಪಾಡನ್ನು ಸೂಚಿಸಲಾಯಿತು. ಇದರ ಮುಖ್ಯಾಂಶಗಳೇನೆಂದರೆ:—

(1) ಗಣಿ ಕೆಲಸದಲ್ಲಿ ಆದಿಭಾಗದಲ್ಲಿ ನಫೆ ಬಾರದಿರುವವರೆಗೂ ರಾಜಾಯವನ್ನು ಬಿಟ್ಟುಕೊಟ್ಟು ಗಣಿ ಕೆಲಸವನ್ನು ಪ್ರೋತ್ಸಾಹಪಡಿಸುವುದು.

(2) ಒಟ್ಟು ಹುಟ್ಟುವಳಿಯ ಮೇಲೆ ಸುಲಭವಾಗಿ ವಸೂಲ್ಮಾಡಬಹುದಾದ ಸೇಕಡ 5ರ ಪ್ರಕಾರ ರಾಜಾಯವನ್ನು ಹಾಕುವುದು

(3) ವಿಶೇಷಲಾಭಕರವಾದ ಗಣಿಗಳಲ್ಲಿ 25,000 ಪಾಸಿಗೆ ಮೇಲೆ ಒರುವ ನಿವ್ವಳ ಆದಾಯದ ಮೇಲೆ ಸೇಕಡ 7ರ ಮೇರೆ ಹೆಚ್ಚು ರಾಜಾಯ ಹಾಕುವುದು.

ಇಂಡಿಯಾ ಸರ್ಕಾರದವರಿಂದ ಅನುಮೋದಿತವಾದ ಈ ಏರ್ಪಾಡು, ಹೊಸತಾಗಿ ಆರಂಭಿಸಿ ಕಷ್ಟಪಡುತ್ತಿರುವ ಗಣಿಗಳ ವಿಷಯದಲ್ಲಿ ಔದಾರ್ಯವನ್ನು ತೋರಿಸುವದಲ್ಲದೆ, ಆ ಕೆಲಸವು ಒಟ್ಟಿನಲ್ಲಿ ಲಾಭಕರವಾಗಿ ಪರಿಣಮಿಸುವ ಸಂದರ್ಭದಲ್ಲಿ, ಸಂಸ್ಥಾನದ ಆದಾಯಕ್ಕೆ ಕುಂದಕ ಬಾರದಂತೆ ಭದ್ರಪಡಿಸುವ ಸ್ವಭಾವವುಳ್ಳದ್ದಾಗಿಯೂ ಇದೆ. ಈ ಹೊಸ ಏರ್ಪಾಡಿನಲ್ಲಿ ಅನೇಕ ಇತರ ಪರಿಷ್ಕಾರಗಳನ್ನು ಉಂಟುಮಾಡಲಾಯಿತು. ಹಿಂದಿನ ಏರ್ಪಾಡಿನಲ್ಲಿ ಒಬ್ಬ ಖನಿಜಾನ್ವೇಷಕನು ಹತ್ತು ಚದರ ಮೈಲಿಗೆ ಮೀರಿ ತೆಗೆದುಕೊಳ್ಳಕೂಡದಾಗಿಯೂ ಇದಕ್ಕಾಗಿ ಕ್ಲಿಷ್ಟವಾಗಿ 500 ರೂಪಾಯಿ ರುಸುಮ್ಮನ್ನು ಕೊಡಬೇಕಾಗಿಯೂ ಇತ್ತು. ಈಗಿನ ಹೊಸ ನಿಬಂಧನೆಯ ಪ್ರಕಾರ ಭೂಮಿಯ ವಿಸ್ತೀರ್ಣವು ಸರ್ಕಾರದವರ ಇಷ್ಟಾನುಸಾರವಾಗಿ ಎಷ್ಟು ದೊಡ್ಡದಾಗಿಯಾದರೂ ಇರಬಹುದು. ಈಗ 100ರೂಪಾಯಿಗೆ ಕಡಿಮೆಯಿಲ್ಲದ ಶ್ರೇಣಿಯನ್ನು ಚದರ

ಮೈಲಿಗೆ 50 ರೂಪಾಯಿಮೇರೆ ಬಾಡಿಗೆಯನ್ನು ರುಸುಮ್ಮಾಗಿ ಕೊಡುವಂತೆಯೂ ಮಾಡಲಾಯಿತು. ಗಣಿತೋಡುವ ಭೂಪರಿಮಾಣವು ಯಾವಕಡೆ ಅಳತೆಮಾಡಿದರೂ ಒಂದು ಕೊನೆಯಿಂದ ಇನ್ನೊಂದು ಕೊನೆಗೆ 2 ಮೈಲಿ ಇರಬೇಕೆಂಬ ನಿಯಮವನ್ನು ತಪ್ಪಿಸಿ 1 ಮೈಲಿಗೆ ಇಳಿಸಲಾಯಿತು. ಹಳೆ ನಿಬಂಧನೆಗಳಮೇರೆ ಖನಿಜಾನ್ವೇಷಕನಿಗೆ ಕಾರ್ಯೋಪಕ್ರಮಕ್ಕಾಗಿ ಕೊಟ್ಟಿದ್ದ ಒಂದು ತಿಂಗಳ ವಾಯಿದೆಯನ್ನು ಈಗ 6 ತಿಂಗಳಿಗೆ ಹೆಚ್ಚಿಸಿತು. ಕಳೆದ 20 ವರ್ಷಗಳಿಂದ ಗಣಿಭೂಮಿಯ ಕಂದಾಯದ ವಸೂಲಾತಿಯಲ್ಲಿ ಬಹಳ ತೊಂದರೆಯುಂಟಾಗಿ ವಿಶೇಷವಾಗಿ ಕಾಗದಪತ್ರನಡೆದು ಕೊನೆಗೆ ಕಂದಾಯದ ಹೆಚ್ಚುಭಾಗವನ್ನು ಬಿಟ್ಟುಬಿಡುವದರಲ್ಲಿ ಪರ್ಯವಸಾನವಾಯಿತು. ಇದರಿಂದ ಗುತ್ತಿಗೆ ಕೊಡುವುದರಲ್ಲಿ ವಿಶೇಷ ವಿಳಂಬವಾಗುತ್ತಿದ್ದುದಲ್ಲದೆ ಗ್ರಾಮಗಳ ಲೆಕ್ಕಗಳಲ್ಲಿಯೂ ಬಹಳ ಗಲಿಬಿಲಿಯುಂಟಾಗುತ್ತಿತ್ತು. ಆದ್ದರಿಂದ ಸೆಟಲ್ಮೆಂಟ್ ಇಲಾಖೆಯವರು ಹಾಕಿದ್ದ ಕಂದಾಯಕ್ಕೆ ಪ್ರತಿಯಾಗಿ ಎಕರೆಗೆ ಒಂದು ರೂಪಾಯಿಮೇರೆ ಒಂದೇರೀತಿಯಾದ ಕಂದಾಯ ಹಾಕಲ್ಪಟ್ಟಿತು.

1903ನೆಯ ಜೂನ್‌ನಲ್ಲಿದ್ದ 11 ಗಣಿಗಳಿಗೆ ಬದಲಾಗಿ ಕಳೆದ ವರ್ಷಾಂತ್ಯದಲ್ಲಿ 13 ಗಣಿಗಳಲ್ಲಿ ಕೆಲಸ ನಡೆಯುತ್ತಿತ್ತು. ತುಮುಕೂರು ಡಿಸ್ಟ್ರಿಕ್ಟಿನಲ್ಲಿ ಬಳ್ಳಾರದ ಪ್ರದೇಶದಲ್ಲಿಯೂ, ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಬೊಡಿಮಡಿ ಪ್ರದೇಶದಲ್ಲಿಯೂ ಹೊಸದಾಗಿ ಗಣಿಯ ಕೆಲಸವು ಉಪಕ್ರಮಿಸಿದ್ದೇ ಈ ಹೆಚ್ಚಿಗೆಗೆ ಕಾರಣವಾಯಿತು.

ಸರ್ಕಾರಿ ಸಾಲಿನಲ್ಲಿ ಗಣಿಗಳಲ್ಲೆಲ್ಲಾ ಒಟ್ಟು 3,50,32,866 ರೂಪಾಯಿ ಬಾಳತಕ್ಕ 6,12,777 ಟೌನ್ಸು ಗಟ್ಟಿ ಚಿನ್ನ ಉತ್ಪತ್ತಿಯಾಯಿತು. ಹಿಂದಿನ ವರ್ಷ 3,30,21,817 ರೂಪಾಯಿ ಬಾಳತಕ್ಕ 5,76,837 ಟೌನ್ಸುಗಳು ಉತ್ಪತ್ತಿಯಾಗಿದ್ದವು. 1903–04ನೆಯ ವರ್ಷದಲ್ಲಿ ಸರ್ಕಾರಕ್ಕೆ ಬರಬೇಕಾದ ಒಟ್ಟು ರಾಜಾಯವು 17,51,643 ರೂಪಾಯಿ; 1902–03 ರಲ್ಲಿ 16,51,090 ರೂಪಾಯಿ. ಆದ್ದರಿಂದ 1,00,553 ರೂಪಾಯಿ ಹೆಚ್ಚು ಬಂದಂತಾಯಿತು.

ಗಣಿ ಅಜವಾಯಿಷಿ ಕೆಲಸವು ಜಾಗ್ರತೆಯಾಗಿ ಹೆಚ್ಚುತ್ತಿರುವುದರಿಂದ ಕಳೆದ ವರ್ಷದಲ್ಲಿ ಒಬ್ಬ ಇನ್ಸ್ಪೆಕ್ಟರನ್ನು ಹೆಚ್ಚಾಗಿ ಮೊಕರರ್ ಮಾಡಿದ್ದು ನಿಮಗೆ ತಿಳಿದೇಇದೆಯಷ್ಟೆ. ಇನ್ನೂ ಹೆಚ್ಚು ಸಿಬ್ಬಂದಿ ಬೇಕಾಗಿದೆಯೆಂದು ಸರ್ಕಾರಕ್ಕೆ ತಗಾದೆ ಬಂದಿದೆ.

ಗಣಿಗಳಲ್ಲಿ ಯಂತ್ರಗಳನ್ನೂ "ಬಾಯಿಲರ್‌ಗಳನ್ನೂ" ನೋಡಿಕೊಳ್ಳುವವರ ಆಚರಣೆಬಗ್ಗೆ ಕೆಲವು ನಿಬಂಧನೆಗಳನ್ನೂ ಗಣಿಗಳಲ್ಲಿ ಭೂಮಿಯೊಳಗಡೆ ಕೆಲಸಮಾಡುವ ಕೂಲಿಗಳನ್ನು ನಿರಪಾಯವಾಗಿಯೂ ತಹಬಂದಿಯಲ್ಲಿಯೂ ಇಡುವುದಕ್ಕಾಗಿ ಮೈಸೂರು ಗಣಿಯ ರೆಗ್ಯುಲೇಷನಿಗನುಸಾರವಾಗಿ ಕೆಲವು ಅಧಿಕವಾದ ನಿಬಂಧನೆಗಳನ್ನೂ ಕೂಡ ಮಾಡಲಾಯಿತು.

ತುಮಕೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್‌ಗಳಲ್ಲಿ ಭೂಗರ್ಭಶೋಧನೆಯನ್ನು ನಡಿಸಲಾಯಿತು. ಇದರಿಂದ ಚಿತ್ರದುರ್ಗದ ಶಿಲಾಶ್ರೇಣಿಯ ಪೂರ್ವಕ್ಕೆ 60 ಮೈಲಿ ಉದ್ದವೂ 8 ಮೈಲಿ ಅಗಲವೂಉಳ್ಳ ಒಂದು ಹೊಸ ಶ್ರೇಣಿಯು ಸಿಕ್ಕಿತು; ಅದರ ನಕ್ಷೆಯನ್ನೂ ತಯಾರ್ಮಾಡಲಾಯಿತು. ಅಲ್ಲಿಯ ಕಲ್ಲುಗಳು ಬಹಳ ಮಟ್ಟಿಗೆ ಕೋಲಾರದ ಚಿನ್ನದಗಣಿಯ ಕಲ್ಲುಗಳಂತೆಯೇ ಇವೆ.

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ 570 ಚದರ ಮೈಲಿ ಪ್ರದೇಶದಲ್ಲಿ ಭೂಗರ್ಭಶೋಧನೆ ಮಾಡಿತು. ಅಲ್ಲಿ ಆಯನೂರಿಗೆ ದಕ್ಷಿಣದಲ್ಲಿ ಶಂಕರಗುಡ್ಡದ ಶ್ರೇಣಿಯ ಜಂಗಲುಗಳಲ್ಲಿ "ಮಾಂಗನೀಸ್" ಎಂಬ ಲೋಹದ ಅದರು ಸಿಕ್ಕುವ ಲಾಭಕರವಾದ ಪ್ರದೇಶಗಳು ಗೊತ್ತಾದವು.

ದುರಸ್ತಿ ಇಲಾಖೆ.—1903–04ನೆಯ ವರ್ಷದಲ್ಲಿ ಎಲ್ಲಾವಿಧವಾದ ಕಾಂಗಾರಿಗಳಿಗಾಗಿಯೂ ಒಟ್ಟು 59,62,671 ರೂಪಾಯಿ ಖರ್ಚಾಯಿತು. ಇದರಲ್ಲಿ ಕಾವೇರೀ ವೈದ್ಯುತಶಕ್ತಿಯ ದ್ವಿತೀಯ ಸ್ಥಾಪನೆಗಾಗಿ ಇಂಗ್ಲೆಂಡಿನಲ್ಲಿ ಪಾವತಿಮಾಡಿದ 3,67,604 ರೂಪಾಯೂ ಸೇರಿದೆ. ಮೇಲ್ಕಂಡ ಒಟ್ಟು ಖರ್ಚುಪೈಕಿ 1,80,000 ರೂಪಾಯಿ ಅರಮನೆ ಲೆಕ್ಕಕ್ಕೆ ಸೇರಿದ್ದು.

ಕೋಲಾರ ಡಿಸ್ಟ್ರಿಕ್ಟಿನಲ್ಲಿ ವಿಶೇಷ ವರಮಾನಕ್ಕೆ ಆಧಾರವಾಗಿದ್ದು ಒಡೆದುಹೋದ ಕೆರೆಗಳ ದುರಸ್ತನ್ನು ಒಡನೆಯೇ ಆರಂಭಿಸಿ ಈ ವರ್ಷದ ಪೈರಿಗೆ ತಕ್ಕಷ್ಟು ನೀರುನಿಲ್ಲುವಂತೆ ಅವುಗಳನ್ನು ದುರಸ್ತು ಮಾಡಲಾಯಿತು.

ಹಿಂದಿನ ವರ್ಷಗಳಂತೆಯೇ ಈ ವರ್ಷವೂ ಮಾರಿಕಣಿವೆಯ ಕೆಲಸವು ಬಹಳ ತೃಪ್ತಿಕರವಾಗಿ ನಡೆಯಿತು. ಎರಡು ನೀರಾವರಿ ನಾಲೆಗಳ ಮತ್ತು ಕೆರೆಯ ಕಾಂಗಾರಿಯ ಖರ್ಚು ಸಹಿತ 44,67,211 ರೂಪಾಯಿನ

ಹೊಸ ಅಂದಾಜು ಮಂಜೂರಾಯಿತು. ಕಟ್ಟೆಯು 86·7 ಅಡಿಯಿಂದ 109·40 ಅಡಿಗೆ ಎಂದರೆ 22·65 ಅಡಿಯಷ್ಟು ಎತ್ತರಿಸಲ್ಪಟ್ಟಿತು. ನಾಲೆಗಾಗಿ ಕಟ್ಟಿದ ಅಣೆಕಟ್ಟಿನಲ್ಲಿ ಅರ್ಧ ಭಾಗವು ಹೊಳೆಯಮಟ್ಟದಿಂದ 6 ಅಡಿಯಷ್ಟು ಎತ್ತರಿಸಲ್ಪಟ್ಟಿತು. ನಾಲೆಗಳನ್ನು ತೋಡುವದರಲ್ಲಿಯೂ ಬಹಳ ಕೆಲಸ ನಡೆಯಿತು. 1903 ನೆಯ ವರ್ಷದ ಪ್ರವಾಹಕಾಲದಲ್ಲಿ 80ಅಡಿ ಯೆತ್ತರದಲ್ಲಿಟ್ಟಿದ್ದ ಹಂಗಾಮಿಕೋಡಿಯಮೇಲೆ 2½ ಅಡಿ ನೀರು ಹೊರಳಿತು. 1904ನೆಯ ಜೂನ್ ಅಖೈರಿನಲ್ಲಿ ಕೆರೆಯಲ್ಲಿ 19,833 ಯೂನಿಟ್ಟು ಪ್ರಮಾಣ ನೀರು ಜಮಾಯಿಸಿತ್ತು.

1,03,319 ರೂಪಾಯಿ ಅಂದಾಜಿನಮೇಲೆ ಹೊಸ ಚಿಕ್ಕದೇವರಾಜಸಾಗರದ ಅಣೆಕಟ್ಟು ಕಾಂಗಾರಿಯನ್ನು ಮಂಜೂರುಮಾಡಿ ಕಳೆದವರ್ಷ ಕೆಲಸನಡಿಸುವಕಾಲದಲ್ಲಿ ಕಾಂಗಾರಿಯನ್ನು ಚೆನ್ನಾಗಿ ಪ್ರಾರಂಭಿಸಲಾಯಿತು.

ಈ ಕೆಳಗೆ ನಮೂದುಮಾಡುವ ಮುಖ್ಯತರವಾದ ಕಾಂಗಾರಿಗಳಲ್ಲಿಯೂ ಕೆಲಸ ಚೆನ್ನಾಗಿ ನಡೆಯಿತು. ಅವು ಯಾವವೆಂದರೆ:—ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ ಹೆಸರುಗಟ್ಟದ ಕೆರೆಯಮೇಲಿರುವ ಮದರೆ ಕೆರೆಯ ದುರಸ್ತು; ಕೋಲಾರ ಡಿಸ್ಟ್ರಿಕ್ಟಿನ ಚಿಲ್ಲಪಲ್ಲಿ, ಹೊಳಲಿಸೋವಾಂಬುಧಿ ಅಗ್ರಹಾರ, ಚಂದಾಪುರ ಇಲ್ಲಿಯ ಕೆರೆಗಳ ದುರಸ್ತು; ಹಾಸನ ಡಿಸ್ಟ್ರಿಕ್ಟಿನಲ್ಲಿ ಅಗ್ರಹಾರದ ಕೆರೆ, ಕಿತ್ತೂರಣೆ ಮತ್ತು ನಾಲೆಗಳು ಇವುಗಳ ದುರಸ್ತು; ತುಂಕೂರು ಡಿಸ್ಟ್ರಿಕ್ಟಿನಲ್ಲಿ ಮಾವತ್ತೂರು ಹೊಸಕೆರೆಯ ಕಟ್ಟಡ; ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಕಲ್ಲಹಳ್ಳಿ ಚಿಕ್ಕಮದರೆ ಮತ್ತು ರಾಣಿಕೆರೆ ಇವುಗಳ ಕಟ್ಟಡ. ರೀಜಂಟರಾಗಿದ್ದ ಶ್ರೀ ಮಹಾರಾಣಿಯವರು ಪ್ರಜೆಗಳ ಕೋರಿಕೆಯಮೇರೆ ಈ ಕೊನೆಯಲ್ಲಿಹೇಳಿದ ಕೆರೆಗೆ ತಮ್ಮ ಹೆಸರಿಡಲು ಅನುಮತಿಯನ್ನು ದಯಪಾಲಿಸಿದರು.

ಕೆಳಗೆ ನಮೂದಿಸುವ ಕೆಲಸಗಳು ಗತವರ್ಷದಲ್ಲಿ ಕಾರ್ಯತಃ ಪೂರ್ತಿಯಾದ ಹಾಗೆ ತಿಳಿಯಬೇಕಿದೆ ಅವು ಯಾವವೆಂದರೆ:—ಕೋಲಾರದ ಡಿಸ್ಟ್ರಿಕ್ಟಿನಲ್ಲಿರುವ ರಾಮಸಾಗರದ ಕೆರೆಯ ನಾಲೆಯ ದುರಸ್ತು ಮತ್ತು ರಾಮಸಮುದ್ರದ ಹೊಸಕೆರೆಯ ಬಲಭಾಗದ ನಾಲೆ ತೆಗೆಯುವದು; ತುಂಕೂರು ಡಿಸ್ಟ್ರಿಕ್ಟಿನಲ್ಲಿ ಕೇತಗನ ಕೆರೆಯ ಕೆರೆ ದುರಸ್ತು; ಮೈಸೂರು ಡಿಸ್ಟ್ರಿಕ್ಟಿನಲ್ಲಿ ಚಿಕ್ಕದೇವರಾಯಸಾಗರ ನಾಲೆಯ ಸೇತುವೆಯಮೇಲಿನ ಹೊಸ ಕಾಲ್ವೆ ಕಟ್ಟಡ—ಇವೇ.

ಹಿಂದಿನ ಉಪನ್ಯಾಸದಲ್ಲಿ ಕ್ಷಾಮನಿವಾರಣಾರ್ಥವಾದ ಕೆಲವು ಕಾಂಗಾರಿಗಳಿಗೆ ಅಂದಾಜು ತಯಾರಾಗುವ ವಿಷಯವನ್ನು ಸೂಚಿಸಿತ್ತಷ್ಟೆ. ಇದಕ್ಕಾಗಿ ನಿಯಮಿತವಾದ ಇಂಜನಿಯರು ಗತವರ್ಷ 59,03,708 ರೂಪಾಯಿ ಮುಟ್ಟುವ ಹದಿನೇಳು ಕೆಲಸಗಳ ಅಂದಾಜುಗಳನ್ನು ಪೂರೈಸಿದರು. ಈ ಪೈಕಿ ವೃಷಭಾವತಿಗೆ ಬೀಳುವ ಒಂದು ಉಪನದಿಗೆ ಅಡ್ಡವಾಗಿ ಬಿಡದಿಯ ಹತ್ತಿರ ಕಟ್ಟುವಕೆರೆಗಳು, ಜಗಳೂರು ತಾಲ್ಲೂಕಿನಲ್ಲಿ ಗಂಡಿಗೆಕಾಂಟೆಯ ಹತ್ತಿರ ಸುಕ್ಕೆದಳ್ಳಕ್ಕೆ ಅಡ್ಡವಾಗಿ ಕಟ್ಟುವಕೆರೆ, ಹುಣಸೂರಿನ ಹತ್ತಿರ ಒಡ್ಡಿಗೆ ಅಡ್ಡವಾಗಿ ಕಟ್ಟುವ ಕೆರೆ, ಕೂಡ್ಲೂರು ಅಣೆಕಟ್ಟಿನಿಂದ ಎಡಗಡೆ ನಾಲೆ ತೆಗೆಯುವುದು, ಶ್ರೀರಾಮದೇವರ ಅಣೆಯ ದಕ್ಷಿಣನಾಲೆಯ ಒಡಾಣೆ, ಈ ಐದು ಕೆಲಸಗಳಿಗೆ ಒಟ್ಟು 6,06,680 ರೂಪಾಯಿ ಮಂಜೂರ್ಮಾಡಲಾಯಿತು. ಉಳಿದವು ಇನ್ನೂ ಪರ್ಯಾಲೋಚನೆಯಲ್ಲಿವೆ. ಈ ಕಾಂಗಾರಿಗಳ ಅಂದಾಜುಗಳು ಮುಗಿಯುತ್ತಾ ಬಂದದ್ದರಿಂದ ಬಹುಕಾಲದಿಂದ ಅಪೇಕ್ಷಿತವಾಗಿದ್ದಾಗ್ಯೂ ಇದುವರೆಗೆ ಕ್ರಮವಾದ ಪ್ರಯತ್ನಕ್ಕೆ ಬಳಗಾಗದ ಪಾಜ್ತಾವಾದ ನಕ್ಷೆಗಳನ್ನೂ ಕೆರೆಗಳ ರಿಜಿಸ್ಟರ್‌ಗಳನ್ನೂ ತಯಾರ್ಮಾಡಲು ಆರಂಭಿಸಿತು. ಅರ್ಕಾವತಿ ಮತ್ತು ದಕ್ಷಿಣಪಿನಾಕಿನೀ ಜಲಾನಯನದ ಕ್ಷೇತ್ರಗಳಲ್ಲಿರುವ ಕೆರೆಗಳ ಸ್ಥೂಲರೂಪವಾದ ನಕ್ಷೆಗಳನ್ನೂ ರಿಜಿಸ್ಟರ್‌ಗಳನ್ನೂ ಕಾರ್ಯತಃ ಪೂರೈಸಲಾಯಿತು. ಉತ್ತರಪಿನಾಕಿನೀ ಜಲಾನಯನಕ್ಷೇತ್ರದಲ್ಲಿ ನೆಲವಂಗಲದ ತಾಲ್ಲೂಕಿನಲ್ಲಿರುವ ಕೆರೆಗಳ ಪ್ರಾಥಮಿಕ ರಿಜಿಸ್ಟರ್‌ಗಳು ಪೂರ್ತಿಯಾದವು. ಶಿಂಶಾ ನದಿಯ ಜಲಾನಯನ ಕ್ಷೇತ್ರದಲ್ಲಿರುವ ಬಹಳ ಕೆರೆಗಳನ್ನು ಅಳವಾಯಿಷಿ ಮಾಡಿಸಿ ಅವುಗಳ ಪಾತ್ರವಿಸ್ತಾರ, ಅಚ್ಚುಕಟ್ಟು, ಹುಟ್ಟುವಳಿ ಮೊದಲಾದವುಗಳ ತಪಸೀಲನ್ನು ತರಿಸಿಕೊಳ್ಳಲಾಯಿತು.

ಸಿವಿಲ್ ಕೆಲಸಗಳು ಸಿವಿಲ್ ಕಟ್ಟಡಗಳು.—ಸಿವಿಲ್ ಕಟ್ಟಡಗಳ ಪೈಕಿ ಈವರ್ಷ ಕೆಲಸ ನಡೆಯುತ್ತಿದ್ದವು ಯಾವವೆಂದರೆ:—ಬೆಂಗಳೂರಿನಲ್ಲಿರುವ ವಿಕ್ಟೋರಿಯಾ ಆಸ್ಪತ್ರೆಯ ಅಭಿವೃದ್ಧಿ ಮತ್ತು ಬಡಾವಣೆ; ಕೋಲಾರದ ಚಿನ್ನದಗಣಿಯಲ್ಲಿ ಹೊಸಆಸ್ಪತ್ರೆ ಮತ್ತು ವೈದ್ಯರ ನಿವೇಶನ ಇವುಗಳ ಕಟ್ಟಡ; ಮೈಸೂರಿನಲ್ಲಿ ಅರಮನೆಯ ಹೊಸಕಟ್ಟಡ ಮತ್ತು ಉದಕಮಂಡಲದಲ್ಲಿ ಫರ್ನ್‌ಹಿಲ್ ಅರಮನೆಯಲ್ಲಿ ದರ್ಬಾರ್ ಹಾಲಿನ ಕಟ್ಟಡ—ಇವೇ.

ರಸ್ತೆಗಳಪೈಕಿ ಕೆಳಗೆ ನಮೂದಿಸುವ ಕೆಲಸಗಳು ಕಾರ್ಯತಃ ಮುಗಿದವು. ಅವು ಯಾವವೆಂದರೆ,—ಉರಿಗಾಂ ಚಿನ್ನದಗಣಿಯಿಂದ ರೈಲ್ವೆಗೆ ಹೋಗುವ ರಸ್ತೆಯನ್ನು ವಿಸ್ತರಿಸುವುದು; ಬಾಲಗಾಟ್ ಮಾರಿಕೊಪ್ಪದ ಹೊಸ ಸಣ್ಣರಸ್ತೆ, ಗುಂಡ್ಲ ಪೇಟೆ ಸುಲ್ತಾನ್ ಬತೇರಿ ರಸ್ತೆಗೆ ಜಲ್ಲಿ ಹಾಕಿದ್ದು; ಹಿರಿಯೂರು ಮಾರಿಕಣಿವೆ ರಸ್ತೆಯಲ್ಲಿಯೂ ಅನಂತಪುರ್ ತೀರ್ಥಹಳ್ಳಿ ರಸ್ತೆಗಳಲ್ಲಿಯೂ ಸೇತುಗಳನ್ನು ಕಟ್ಟಿದ್ದು—ಇವೇ.

ಈ ಕೆಳಗಿನ ಕಾಂಗಾರಿಗಳಲ್ಲಿ ಬಹಳಮಟ್ಟಿಗೆ ಕೆಲಸನಡೆದಿದೆ. ಅವು ಯಾವವೆಂದರೆ,—ಹಣಬಾಳದೇವರುಃಡವ ಮತ್ತು ಸಕಲೇಶಪುರ ಗೋಣೀಬೀಡಿನ ರಸ್ತೆಗಳ ಬಾಕಿ ಭಾಗಗಳನ್ನು ಮುಗಿಸುವುದು; ಶುಕ್ರವಾರ ಸಂತೆ ಸುಬ್ರಹ್ಮಣ್ಯದ ರಸ್ತೆಯಲ್ಲಿ ಬಿಸಲಘಟ್ಟೆಯನ್ನು ಹಸನು ಮಾಡುವುದು; ಹಿರೋಡೆ ಸ್ಟೇಷನಿಂದ ನೆಲ್ಲಿಗೆರೆಗೆ ಹೋಗುವ ರಸ್ತೆಯಲ್ಲಿ ಹೊಣಕೆರೆಯ ಹತ್ತಿರ ಲೋಕಪಾವನಗೆ ಸೇತುವೆಗಳನ್ನು ಕಟ್ಟುವುದು; ತರೀಕೆರೆ ಮಂಗಳೂರು ರಸ್ತೆಯಲ್ಲಿ ಅಂಬ್ಳೈಕೆ ಹಳ್ಳಕ್ಕೆ ಸೇತುಗಳನ್ನು ಕಟ್ಟುವುದು; ಆನೆ ಮಹಲ್ ಮೂಡಗೆರೆ ರಸ್ತೆಯಲ್ಲಿ ಅಂಜೂರಿನಹತ್ತಿರ ಹೇಮಾವತಿಗೆ ಸೇತುವನ್ನು ಕಟ್ಟುವುದು; ಕೋಲಾರ ವೆಂಕಟಗಿರಿಕೋಟೆ ರಸ್ತೆಯಲ್ಲಿ ಪಾಲಾರ್‌ನದಿಯ ಶಿಥಿಲವಾದ ಸೇತುವನ್ನು ಪುನಃ ಕಟ್ಟುವುದು;—ಇವೇ.

11 ಲಕ್ಷರೂ. ಅಂದಾಜಿನಮೇಲೆ ಹಿಂದಿನವರ್ಷ ಆರಂಭಿಸಿದ ಕೋಲಾರದ ಚಿನ್ನದಗಣಿಯ ನೀರುಸರಬರಾಯಿ ಕಾಂಗಾರಿಯು ಕಾರ್ಯತಃ ಮುಗಿಯಿತು. ಬೇತಮಂಗಲದ ಕೆರೆಮಾತ್ರ ಒಡೆಯದೆಇದ್ದಲ್ಲಿ ಗತವರ್ಷವೇ ಗಣಿಗೆ ನೀರು ಸರಬರಾಯ್ಮಾಡಬಹುದಾಗಿತ್ತು. ಈವರ್ಷ ಅವಶ್ಯಕವಾದಷ್ಟು ನೀರುಬಂದಕೂಡಲೆ ನೀರುಸರಬರಾಯನ್ನು ಪ್ರಾರಂಭಿಸಲಾಗುತ್ತದೆ.

ಕಳೆದ ನವೆಂಬರ್‌ನಲ್ಲಿ ಬಂದ ಪ್ರವಾಹದಿಂದ ಚಾಮರಾಜೇಂದ್ರ ಕೆರೆಯೂ ಅದರ ಹತ್ತಿರದಲ್ಲಿಯೆ ಮೇಲುಗಡೆ ಇರುವ ಕಾಕೋಳದ ಕೆರೆಯೂ ಬಹಳವಾಗಿ ಶಿಥಿಲವಾದವು. ಅವುಗಳ ಶಿಥಿಲವಾದ ಕೋಡಿಗಳ ದುರಸ್ತಿ ಮತ್ತು ಮಂಜೂರಾದ ಇತರ ಅಭಿವೃದ್ಧಿಯ ಕೆಲಸಗಳೂ ಬಹಳ ಜಾಗ್ರತೆಯಾಗಿಯೂ ತೃಪ್ತಿಕರವಾಗಿಯೂ ಪೂರೈಸಲ್ಪಟ್ಟವೆ.

ಬೆಂಗಳೂರಿನ ಮಲ್ಲೇಶ್ವರದ ಶಾಖೆಗೋಸ್ಕರ ಮಂಜೂರಾದ ಚರಂಡಿಕಾಂಗಾರಿಯು ಸ್ವಲ್ಪಮಟ್ಟಿಗೆ ನಡೆದಿದೆ.

ಚಾಮರಾಜೇಂದ್ರ ನೀರಾವರಿ ಕೆಲಸದ ಸಾಲಿಯಾನ ದುರಸ್ತಿ ಬಗ್ಗೆ ಆಗುವ ಖರ್ಚನ್ನು ಯಾರು ವಹಿಸಿಕೊಳ್ಳಬೇಕೆಂದು ಬಹಳ ದಿವಸದಿಂದ ಚರ್ಚೆಯಲ್ಲಿದ್ದ ವಿಷಯವು ಗತವರ್ಷದಲ್ಲಿ ಗೊತ್ತಾಗಿ ಇತ್ಯರ್ಥಮಾಡಲ್ಪಟ್ಟಿತು. ಅದೇನೆಂದರೆ,—ನೀರು ತೆರಿಗೆಯಿಂದಲೂ "ಟೋಲ್" ದರಿಗೆಯಿಂದಲೂ ನಿಜವಾಗಿ ಉತ್ಪತ್ತಿಯಾಗುವ ಒಟ್ಟು ಮೊಬಲಗನ್ನು ಮಾತ್ರ ಮ್ಯುನಿಸಿಪಲ್ ಫಂಡಿನಿಂದ ಈ ಕೆಲಸಕ್ಕಾಗಿ ಕೊಡಬೇಕೆಂದೂ, ಉಳಿದ ಮೊಬಲಗನ್ನು ಸರ್ಕಾರದವರು ವಹಿಸಬೇಕೆಂದೂ ಗೊತ್ತು ಮಾಡಲಾಯಿತು.

ಚಿನ್ನದ ಗಣಿಯವರು ಕೇಳಿಕೊಂಡಮೇರೆ ಕಾವೇರೀ ಪ್ರಪಾತದಲ್ಲಿ 2,000 ಅಶ್ವಬಲದಷ್ಟು ವೈದ್ಯುತ ಶಕ್ತಿಯ ದ್ವಿತೀಯಸ್ಥಾಪನೆಯ ಕೆಲಸವು ಕ್ಷಿಪ್ರವಾಗಿ ನಡೆಯಿತು. ಇದಕ್ಕಾಗಿ ಮಂಜೂರಾದ 13,10,000 ರೂಪಾಯಿ ಅಂದಾಜಿನಪೈಕಿ ಈವರ್ಷ ಈಕೆಲಸಕ್ಕಾಗಿ 6,44,968 ರೂಪಾಯಿ ಖರ್ಚಾಯಿತು. ಎಲ್ಲಾ ಹೊಸಕಟ್ಟಡಗಳೂ ತಯಾರಾದವು. ಬೇಕಾದ ಯಂತ್ರಸಾಮಗ್ರಿಗಳೆಲ್ಲಾ ಪ್ರಾಯಃ ಅಲ್ಲಿಗೆ ಬಂದು ಬಿದ್ದಿವೆ.

ಚಿನ್ನದಗಣಿಗೆ ಸರಬರಾಯಾಗಿ ನಿಂತ ವೈದ್ಯುತ ಶಕ್ತಿಯನ್ನು ಬೆಂಗಳೂರು ಸಿಟಿ ಮತ್ತು ಸಿವಿಲ್ ಎಂಡ್ ಮಿಲಿಟರಿಸ್ಟೇಷನ್‌ಗೆ ವೈದ್ಯುತ ದೀಪವನ್ನು ಒದಗಿಸಿಕೊಡುವ ಕೆಲಸಕ್ಕಾಗಿಯೂ ಉಳಿದ ಶಕ್ತಿಯನ್ನು ಕೈಗಾರಿಕೆ ಕೆಲಸಗಳಿಗೆ ಸರಬರಾಯಿಮಾಡುವುದಕ್ಕಾಗಿಯೂ 6 ಲಕ್ಷ ರೂಪಾಯಿ ಅಂದಾಜನ್ನು ಈಚೆಗೆ ಮಂಜೂರ್‌ಮಾಡಲಾಯಿತು.

ಈ ಕೆಲಸವು ಉಪಕ್ರಮಿಸಿತು, ಬೆಂಗಳೂರಿಗೆ ಶಕ್ತಿವಾಹಕ ತಂತಿಹಾಕುವ ಮಾರ್ಗದ ಸರ್ವೆಯೂ ಮುಗಿಯಿತು. ಯಂತ್ರ ಸಾಮಗ್ರಿಗಳು ಬಂದಕೂಡಲೆ ಅವುಗಳನ್ನು ಸ್ಥಾಪಿಸುವುದಕ್ಕೆ ಬೇಕಾದ ಕಟ್ಟಡಗಳೂ ಸಿದ್ಧವಾಗಿವೆ.

ಈಗಿರುವ ನಾಲೆಗಳನ್ನು ಸರಿಯಾಗಿ ನೋಡಿಕೊಳ್ಳುವುದಕ್ಕಾಗಿಯೂ ಅವುಗಳ ಒಡಾವಣೆಮತ್ತು ಅಭಿವೃದ್ಧಿಗಳಿಗಾಗಿಯೂ ಬಂದು ಹೊಸ ನಾಲೆಡಿವಿಜನನ್ನು ಈಚೆಗೆ ಏರ್ಪಡಿಸಲಾಯಿತು.

ಸ್ವಲ್ಪಕಾಲಕ್ಕೆ ಹಿಂದೆ ಮೊಕರರ್ ಮಾಡಿದ ಟ್ಯಾಂಕ್ ಕಮಿಟಿಯವರು ತಮ್ಮ ಆಲೋಚನೆಗಳನ್ನು ಪೂರ್ತಿಮಾಡಿ ರಿಪೋರ್ಟನ್ನು ಕಳುಹಿಸಿದರು. ಅದರ ಆಧಾರದಮೇಲೆ ಕೆಲಸವನ್ನು ಉಪಕ್ರಮಿಸಿತು. ಸರ್ಕಾರದವರು ಈವಿಷಯದಲ್ಲಿ ಮಾಡಬೇಕೆಂದಿರುವ ಏರ್ಪಾಡನ್ನು ಸಂಗ್ರಹವಾಗಿ ವಿವರಿಸುತ್ತೇನೆ. ರೈತರು ಕೆರೆಗಳಿಗೆ ಮಟ್ಟಿ ಕಾಂಗಾರಿ ಮಾಡಬೇಕೆಂದು ವಿಧಿಸುವ 1873ನೆಯ ಇಸವಿಯ ನಿಬಂಧನೆಗಳನ್ನು ಬದಲಾಯಿಸತಕ್ಕ ಅವಶ್ಯಕವಿಲ್ಲವೆಂದು ತಿಳಿಯಬಂದಿದೆ. ಆದರೆ ರೈತರು ಮಾಡಬೇಕಾದ ಕೆಲಸದ ಪರಿಮಾಣವನ್ನು ನಿರ್ಧರಿಸುವುದಕ್ಕಾಗಿ ಖುಷ್ಕಿ ಅಥವಾ ಮೊಹತರ್ಫಾ ಕಂದಾಯದ ಒಂದು ರೂಪಾಯಿಗೆ ಒಂದು ರೂಪಾಯಿನ್ನು ತರಿಬಾಗಾಯ್ತು ಕಂದಾಯದ ¼ ಭಾಗ ರೂಪಾಯಿಗೆ ಸಮವೆಂದು ಎಣಿಸಬೇಕೆಂಬುದಾಗಿ ಒಂದುವಾಕ್ಯವನ್ನು 3ನೆಯ ನಿಬಂಧನೆಗೆ ಹೆಚ್ಚಾಗಿ ಸೇರಿಸಲಾಯಿತು. ಮತ್ತು ರೈತರು ಕೆಲಸ ಮಾಡುವ ವಿಷಯದಲ್ಲಿ ಈಗ ಜಾರಿಯಲ್ಲಿರುವ ಪದ್ಧತಿಯನ್ನು ಕಾನೂನಿಗೆ ಬಳಪಡಿಸುವುದಕ್ಕಾಗಿ ಒಂದು ರೆಗ್ಯುಲೇಷನನ್ನು ಮಾಡುವುದಾಗಿ ಉದ್ದೇಶಿಸಿದೆ. ನಾಲೆಗಳನ್ನು ಸರಿಯಾಗಿ ಇಟ್ಟುಕೊಳ್ಳುವ ವಿಷಯದಲ್ಲಿ ಇನಾಂದಾರರ ಜವಾಬ್ದಾರಿಯು ಕಂದಾಯಕೊಡುವ ರೈತರ ಜವಾಬ್ದಾರಿಗೆ ಮೀರಕೂಡದೆಂದು ನಿರೂಪಿಸಿದೆ. ಆದ್ದರಿಂದ ಈ ಜವಾಬ್ದಾರಿಯು ಸೊಪ್ಪುಸೆದೆಗಳನ್ನು ತೆಗೆದುಹಾಕುವ ಕಾರ್ಯಕ್ಕೆಮಾತ್ರ ಅನ್ವಯಿಸುತ್ತದೆಯೇ ಹೊರತು ಬದಿ ತೆಗೆದುಹಾಕುವ ಕೆಲಸಕ್ಕೆ ಅನ್ವಯಿಸುವದಿಲ್ಲ. ಸರ್ಕಾರದವರು ವಹಿಸಿಕೊಂಡಿರುವ ನಾಲೆಯ ಪೋಷಣೆಬಗ್ಗೆ ಇನಾಂದಾರರಿಂದ ಬಾಕಿ ಬರಬೇಕಾದ ಹಣವನ್ನು ಮಾಫ್ ಮಾಡಲಾಗುತ್ತದೆ.

ಚಿಲ್ಲರೆ ಕೆರೆಗಳೆಂದು ಕರೆಯಲ್ಪಡುವ ಕೆರೆಗಳ ದುರಸ್ತಿ, ಪೋಷಣೆ ಇವು ಮುಂದೆ ವಿಚಾರಿಸತಕ್ಕ ಮುಖ್ಯಾಂಶಗಳಾಗಿವೆ. ಪ್ರಕೃತದಲ್ಲಿ, 100 ರೂಪಾಯಿಗೂ ಅದಕ್ಕೆ ಕಡಿಮೆಯಾಗಿಯೂ ವರಮಾನವುಳ್ಳ ಕೆರೆಗಳಿಗೂ 100 ರೂಪಾಯಿ ಅದಕ್ಕೆ ಕಡಿಮೆಯಾಗಿಯೂ ವರಮಾನವುಳ್ಳ ಕೆರೆಗಳಿಗೂ ಭೇದವನ್ನು ಏರ್ಪಡಿಸಿಕೊಂಡಿದೆ. ಈ ಯೆಂಡನೆಯ ದರಜಾ ಕೆರೆಗಳ ವಿಷಯದಲ್ಲಿ ಸರಕಾರದವರು ಇದುವರೆಗೂ ಯಾವ ಖರ್ಚನ್ನೂ ವಹಿಸಿಕೊಳ್ಳುತ್ತಿರಲಿಲ್ಲ; ಮೊದಲನೆಯ ದರಜಾ ಕೆರೆಗಳ ವಿಷಯದಲ್ಲಿ ಮಾತ್ರ ರೈತರು ಮಟ್ಟಿಕಾಂಗಾರಿ ಮಾಡಿದರೆ ಸರ್ಕಾರದವರು ಗಾರೆ ಮತ್ತು ಕಲ್ಲು ಕೆಲಸಗಳನ್ನು ಮಾಡಿಸುತ್ತಿದ್ದರು. ಇಲ್ಲಿಂದ ಮುಂದೆ ಈ ಭೇದವನ್ನು ತೆಗೆದು ಹಾಕಿ ಮೇಲ್ಕಂಡ ಷರತ್ತಿನಮೇಲೆ ಸರ್ಕಾರದವರೇ ಎಲ್ಲಾ ಕಲ್ಲು ಮತ್ತು ಗಾರೆ ಕೆಲಸಗಳನ್ನೂ ತಾವೇ ಮಾಡಿಸುವರು. ಆದರೆ ಮಟ್ಟಿ ಕಾಂಗಾರಿಯು ಖರ್ಚು ರೈತರಿಗೆ ಬಹಳ ಭಾರವಾಗಿದ್ದಲ್ಲಿ—ಎಂದರೆ ಸರ್ಕಾರಲ್ಲಿ ¾ ಭಾಗಕ್ಕೆ ಮೀರಿದ ಪಕ್ಷಕ್ಕೆ—ಡೆಪ್ಯೂಟಿ ಕಮೀಷನರು ತಮ್ಮ ಇಷ್ಟಾನುಸಾರ ಸ್ವಲ್ಪ ರಿಯಾಯಿತಿ ತೋರಿಸಬಹುದೆಂದು ಅವರಿಗೆ ಅಧಿಕಾರಕೊಟ್ಟಿದೆ. ರೈತರಿಗೆ ವಿಶೇಷ ಶ್ರಮವುಂಟಾಗುವ ಸಂದರ್ಭದಲ್ಲಿ, ಸರ್ಕಾರದವರು ಮುಂಗಡಕೊಟ್ಟು ಸುಲಭವಾದ ಕಿಸ್ತುಬಂದಿಯಮೇರೆ ವಸೂಲ್ಮಾಡಿಕೊಳ್ಳುವರು. ನಾನು ಹಿಂದೆ ಸೂಚಿಸಿದ ರೀತಿಯಲ್ಲಿ ಚಿಲ್ಲರೆ ಕೆರೆಗಳ ದುರಸ್ತಿಗಾಗಿ ಈ ವರ್ಷ ಶ್ರೀಮನ್ಮಹಾರಾಜರವರು ಪ್ರತ್ಯೇಕವಾಗಿ 1 ಲಕ್ಷ ರೂಪಾಯನ್ನು ಮಂಜೂರ್ಮಾಡಿದ್ದಾರೆ. ಡಿಸ್ಟ್ರಿಕ್ಟಿನ ಮತ್ತು ಸ್ಥಳದ ಅಧಿಕಾರಿಗಳು ಜಾಗರೂಕರಾಗಿ ಈ ಏರ್ಪಾಡುಗಳನ್ನು ಮನಃಪೂರ್ವಕವಾಗಿ ಕಾರ್ಯತಃ ಜಾರಿಗೆ ತಂದಹೊರತು ಈ ಕಾರ್ಯದಲ್ಲಿ ಯಾವ ನಿಜವಾದ ಅಭಿವೃದ್ಧಿಯೂ ಉಂಟಾಗಲಾರದು. ಆದ್ದರಿಂದ ನಮಗೆಲ್ಲ ಅತ್ಯಂತ ಉಪಯುಕ್ತವಾಗಿಯೂ, ಶ್ರೇಷ್ಠವಾದ ಪಿತ್ರಾರ್ಜಿತ ಸ್ವತ್ತಿನಂತೆಯೂ ಇರುವ ಈ ಕೆರೆಗಳು ಕ್ಷೀಣಸ್ಥಿತಿಗೆ ಬಾರದ ಹಾಗೆ ನೋಡಿಕೊಳ್ಳುವ ವಿಷಯದಲ್ಲಿ ಜನಗಳೆಲ್ಲರೂ ಸಂಪೂರ್ಣವಾದ ಸಹಾಯವನ್ನು ಮಾಡುವರೆಂದು ಕೋರುತ್ತೇವೆ.

ರೈಲ್ವೆ.—ರೈಲ್ವೆ ಒಂಡವಾಳದಮೇಲೆ ಆದ ಸೇಕಡ ನಿವ್ವಳ ಹುಟ್ಟುವಳಿಯ ಕ್ರಮವೆಂತೆಂದರೆ—

			1902-03.	1903-04.
ಮೈಸೂರು—ಬರಿಹರ	...	...	3·62	3·74
ಬೆಂಗಳೂರು—ಹಿಂದೂಪುರ	...	...	3·50	4·88
ಮೈಸೂರು—ನಂಜನಗೂಡು	...	...	1·79	2·31
ಬೀರೂರು—ಶಿವಮೊಗ್ಗ	...	...	0·95	1·10
ಕೋಲಾರದ ಚಿನ್ನದ ಗಣಿ ರೈಲ್ವೆ...		...	6·73	6·96

ಗತವರ್ಷದಲ್ಲಿ ಒಟ್ಟು ಹುಟ್ಟುವಳಿಯ ಮೇಲೆ ಸೇಕಡ 60·60ರಂತೆ ಕೆಲಸಕಾರ್ಯಗಳಿಗೆ ಖರ್ಚಾಯಿತು; 1902-03 ರಲ್ಲಿ 6[illegible]·77 ರಂತೆ ಖರ್ಚಾಗಿತ್ತು.

ಬೆಂಗಳೂರು ಚಿಕ್ಕಬಳ್ಳಾಪುರದ ಸಣ್ಣ ರೈಲ್ವೆಕಂಪೆನಿಯವರಿಂದ ಆ ಕೆಲಸದ ವಿಷಯವಾಗಿ ಸಂಕ್ಷೇಪವಾದ ಅಂದಾಜುಪಟ್ಟಿಯೊಡನೆ ಒಂದು ಪ್ರಾಥಮಿಕ ರಿಪೋರ್ಟು ಬಂದಿದೆ. ಇದು ಸ್ಥಳೀಯ ಸಂಘದಿಂದ ನಿರ್ವಾಹವಾಗುವ ಒಳ್ಳೆಕೆಲಸವಾದುದರಿಂದ ಪ್ರೋತ್ಸಾಹಾರ್ಹವಾಗಿದೆ. ಇದು ಮಂಜೂರಾತಿಬಗ್ಗೆ ಇಂಡಿಯಾ ಸರ್ಕಾರಕ್ಕೆ ಕಳುಹಿಸಲ್ಪಡುವುದಾಗಿದೆ.

ಲೆಜಿಸ್ಲೇಷನ್.—ಗತ ವರ್ಷ ಈ ಕೆಳಗೆ ನಮೂದಿಸುವ ಮುಖ್ಯವಾದ ರೆಗ್ಯುಲೇಷನ್‌ಗಳು ಮಂಜೂರಾದವು. ಅವುಯಾವವೆಂದರೆ:— 1555

(1) 1903ನೆಯ ವರ್ಷದ IIನೆಯ ರೆಗ್ಯುಲೇಷನ್.—ಇದು ಸರ್ಕಾರಕ್ಕೆ ಬರಬೇಕಾಗಿರುವ ಬಾಕಿಯನ್ನು ಕಂದಾಯದ ಬಾಕಿಯಂತೆ ವಸೂಲ್ಮಾಡುವದಕ್ಕೆ "ಮೆಮೊರಾಂಡಂ ಆಫ್ ಅಸೋಸಿಯೇಷನಿನ" 24ನೆಯಕಲಮಿನಲ್ಲಿರುವ ನಿಯಮವನ್ನು ಕಾರ್ಯತಃ ಜಾರಿಗೆ ತರುವ ಏರ್ಪಾಡೇ ಹೊರತು ಬೇರೆಯೇನೂ ಅಲ್ಲ.

(2) 1903ನೆಯ IIIನೆಯ ರೆಗ್ಯುಲೇಷನ್.—ನಾನು ಹೋದವರ್ಷದ ಉಪನ್ಯಾಸದಲ್ಲಿ ಸೂಚಿಸಿದಂತೆ ಇದು ಮೈಸೂರು ಪಟ್ಟಣದ ಆರೋಗ್ಯವರ್ಧಕ ಕಾರ್ಯನಿರ್ವಾಹಾಧಿಕಾರವನ್ನು ಕಾನೂನಿಗೆ ಬಳಪಡಿಸುತ್ತದೆ. ಈ ಕಾನೂನಿನ ಪ್ರಕಾರ ಒಂದು ಟ್ರಸ್ಟ್ ಬೋರ್ಡನ್ನು ಏರ್ಪಡಿಸಿ ಅವರ ವಶದಲ್ಲಿ ಕೊಟ್ಟಿರುವ ಹಣವನ್ನು ವಿನಿಯೋಗಿಸುವುದಕ್ಕೂ ಸಾಮಾನ್ಯವಾಗಿ ಅಭಿವರ್ಧಕ ಕಾರ್ಯ ನಡಿಸುವದಕ್ಕೂ ಆ ಬೋರ್ಡಿಗೆ ವಿಶೇಷಾಧಿಕಾರ ಕೊಟ್ಟಿದೆ. ಜನರ ಪ್ರೀತಿ ವಿಶ್ವಾಸಗಳನ್ನು ಪಡೆದುಕೊಳ್ಳುವ ಉದ್ದೇಶದಿಂದಲೇ ಈ ಬೋರ್ಡಿಗೆ ಜನರಲ್ಲಿ ಮುಖಂಡರಾದ ಕೆಲವು ಮೆಂಬರುಗಳನ್ನು ಸೇರಿಸಿದೆ.

ಈ ಅಭಿವೃದ್ಧಿಗಳನ್ನು ಜಾರಿಗೆ ತರುವಾಗ ಮನೆಗಳು ಒತ್ತೊತ್ತಾಗಿರುವುದನ್ನು ತಪ್ಪಿಸಬೇಕಾದ ಆವಶ್ಯಕ ಕಂಡುಬಂತು. 1904ನೆಯ IV ನೆಯ ರೆಗ್ಯುಲೇಷನಲ್ಲಿ ಇದಕ್ಕೆ ಬೇಕಾದ ಏರ್ಪಾಡುಮಾಡಿದೆ. ಲೆಜಿಸ್ಲೆಟಿವ್ ಇಲಾಖೆಯಲ್ಲಿ ಬಹಳವರ್ಷಗಳಿಂದ ಪರ್ಯಾಲೋಚನೆಯಲ್ಲಿದ್ದ ಪೀನಲ್‌ಕೋಡೂ ಕ್ರಿಮಿನಲ್ ಪ್ರೊಸೀಜರ್ ಕೋಡೂ ಗತವರ್ಷದಲ್ಲಿ ಮಂಜೂರಾದದ್ದು ತೃಪ್ತಿಕರವಾಗಿದೆ. ಇವುಗಳಲ್ಲಿ ಅನೇಕ ಅವಶ್ಯವಾದ ಬದಲಾವಣೆಗಳನ್ನೂ ಪರಿಷ್ಕಾರಗಳನ್ನೂ ಮಾಡಲಾಯಿತು. ಈ ರೆಗ್ಯುಲೇಷನುಗಳಲ್ಲಿರುವ ಕಾನೂನುಗಳು ಈ ತಾರೀಖುವರೆಗಿನ ಹೊಸವಿಷಯಗಳನ್ನೆಲ್ಲಾ ಒಳಕೊಂಡು ಬ್ರಿಟಿಷ್ ಇಂಡಿಯಾದಲ್ಲಿರುವಕಾನೂನಿಗೆ ಸರಿಸಮಾನವಾಗಿವೆ.

"ಚೀಫ್‌ಕೋರ್ಟು ರೆಗ್ಯುಲೇಷನ್" ಮತ್ತು "ವಿಪ್ಪಿಂಗ್ ರೆಗ್ಯುಲೇಷನ್" ಎಂಬಿವೆರಡೂ ಮಂಜೂರಾದವು. ಲೋಕಲ್ ಬೋರ್ಡು ರೆಗ್ಯುಲೇಷನ್‌ಗಳಿಗೆ ಬಳಪಟ್ಟ ನಿಬಂಧನೆಗಳೂ 1903 ನೆಯ ಸೆಪ್ಟೆಂಬರ್ ತಿಂಗಳಲ್ಲಿ ಪ್ರಕಟಿಸಲ್ಪಟ್ಟವು. ಈ ಹೊಸಕಾನೂನಿನ ಪ್ರಕಾರ ಒಂದೊಂದು ಡಿಸ್ಟ್ರಿಕ್ಟಿನಲ್ಲಿ ಒಂದೊಂದರ ಮೇರೆ ಎಂಟುಡಿಸ್ಟ್ರಿಕ್ಟ್ ಬೋರ್ಡುಗಳೂ, ಒಂದೊಂದು ತಾಲ್ಲೂಕು ಅಥವಾ ಸಬಿತಾಲ್ಲೂಕಿಗೆ ಒಂದರಮೇರೆ 77 ತಾಲ್ಲೂಕು ಬೋರ್ಡುಗಳೂ ಮತ್ತು 38 ಯೂನಿಯನುಗಳೂ ಏರ್ಪಡಿಸಲ್ಪಟ್ಟವೆ. ಈ ಯೂನಿಯನ್‌ಗಳೆಲ್ಲಾ ಪೂರ್ವದಲ್ಲಿ ಚಿಲ್ಲರೆ ಮ್ಯೂನಿಸಿಪಾಲಿಟಿಗಳಾಗಿದ್ದವು. ಪ್ರಜಾಸಂಖ್ಯೆ 3,000ಕ್ಕಿಂತ ಕಡಿಮೆಯಾಗಿದ್ದ ಆಗ್ರಾಮಗಳನ್ನು ಈಗ ಗ್ರಾಮಸಂಘಗಳನ್ನಾಗಿ ಮಾರ್ಪಡಿಸಲಾಯಿತು.

ಗತವರ್ಷಾಂತ್ಯದಲ್ಲಿ ಮುಖ್ಯತಮವಾಗಿಯೂ ಪ್ರಯೋಜನಕರವಾಗಿಯೂ ಇದ್ದ ಹಲವು ಮಸೂದೆ ರೆಗ್ಯುಲೇಷನ್‌ಗಳೂ ನಿಬಂಧನೆಗಳೂ ವಿಚಾರದಲ್ಲಿದ್ದವು. ಇವುಗಳ ಪೈಕಿ ಮೈಸೂರು ಮುನಿಸಿಪಲ್ ರೇಗ್ಯುಲೇಷನೂ, ಪೊಲೀಸ್ ರೆಗ್ಯುಲೇಷನೂ ಮುಖ್ಯವಾಗಿ ಸೂಚಿಸಲರ್ಹವಾಗಿವೆ. ಮೊದಲನೆಯ ರೆಗ್ಯುಲೇಷನು ಪ್ರಕಟನೆಗೆ ಸಿದ್ಧವಾಗಿ, ಇಂಡಿಯಾ ಸರ್ಕಾರದವರ ಸಮ್ಮತಿಯನ್ನು ನಿರೀಕ್ಷಿಸುತ್ತಿದೆ. ಅದರ ವಿಶೇಷಸ್ವರೂಪವೇನೆಂದರೆ:—ಪ್ರಥಮತಃ; ಮೈಸೂರು ಬೆಂಗಳೂರು ಪಟ್ಟಣಗಳಲ್ಲಿ ಜಾರಿಯಲ್ಲಿದ್ದು, ಈಗ ವೃದ್ಧಿಯಾಗುತ್ತಿರುವ ಆ ಪಟ್ಟಣಗಳ ಕಾರ್ಯಗಳಿಗೆ ಸರಿಬೀಳದೆ ಇರುವ ಮ್ಯೂನಿಸಿಪಲ್ ಕಾನೂನಿಗೆ ಪ್ರತಿಯಾಗಿರುವದೇ. ಎರಡನೆಯದು; ಈ ಸಂಸ್ಥಾನದಲ್ಲಿರುವ ಚಿಲ್ಲರೆ ಮ್ಯೂನಿಸಿಪಾಲಿಟಿಗಳ ಕರ್ತವ್ಯವನ್ನೂ ಅಧಿಕಾರವನ್ನೂ ಸ್ಪಷ್ಟವಾಗಿ ನಿರ್ಣಯಿಸುವ ಕಾನೂನುಗಳನ್ನೂ ಬದಗಿಸಿಕೊಟ್ಟು ಅವುಗಳು ಕಾನೂನಿಗನುಸಾರವಾದ ಸಂಘಗಳಾಗಿವೆಯೆಂಬುದನ್ನೂ ಅಂಗೀಕರಿಸಿ, ಅವುಗಳನ್ನು ಆರೋಗ್ಯಕಾರ್ಯನಿರ್ವಾಹದಲ್ಲಿ ಸಮರ್ಥವಾದ ಸಹಕಾರಿಗಳನ್ನಾಗಿಯೂ ಮಾಡುವುದಲ್ಲದೆ ಮ್ಯೂನಿಸಿಪಲ್ ಕಾರ್ಯನಿರ್ವಾಹದಲ್ಲಿ ಸರ್ಕಾರಿ ನೌಕರರಲ್ಲದ ಮೆಂಬರುಗಳೂ ಕೂಡ ಅನ್ವಯಿಸಿ ಚೆನ್ನಾಗಿ ಕೆಲಸಮಾಡುವಂತೆ ಆ ಮ್ಯೂನಿಸಿಪಲ್ ಬೋರ್ಡುಗಳ ಸ್ಥಿತಿಯನ್ನು ಪರಿಷ್ಕರಿಸುವದರಲ್ಲಿ ಸಹಕಾರಿಯಾಗುವುದು—ಇವೇ. ಈ ರೆಗ್ಯುಲೇಷನ್ ಮಂಜೂರಾಗಿ ಪ್ರಟ್ಟಾಗ ಮ್ಯೂನಿಸಿಪಲ್ ಆಡಳಿತಗಳ ಚರಿತ್ರೆಗಳಲ್ಲಿ ಒಂದು ಹೊಸಕ್ರಮವೇ ಏರ್ಪಟ್ಟಂತೆ ಭಾವಿಸಬಹುದು. ಇದು ಕಳೆದ ಇಪ್ಪತ್ತು ವರ್ಷಗಳಿಂದ ಇದ್ದ ಕೊರತೆಗಳನ್ನು ಪರಿಹರಿಸುತ್ತದೆ.

ಪೋಲೀಸ್ ಮುಸೂದೆ ರಗ್ಯುಲೇಷನು ಅನುಭವಶಾಲಿಗಳಾದ ಅಧಿಕಾರಿಗಳುಳ್ಳ ಒಂದು ಪ್ರತ್ಯೇಕವಾದ ಕಮಿಟಿಯಿಂದ ಪರಿಷ್ಕರಿಸಲ್ಪಡುತ್ತಿದೆ; ಅದು ಜಾಗ್ರತೆಯಾಗಿಯೇ ಸರ್ಕಾರದವರ ಪರ್ಯಾಲೋಚನೆಗೆ ಬರುವುದಾಗಿದೆ.

ಜುಡಿಷಲ್.—ಗತವರ್ಷ ಸಿವಿಲ್ ಮೊಕದ್ದಮೆಗಳಲ್ಲಿ, 10,190 ಒರಿಜಿನಲ್ ಮೊಕದ್ದಮೆಗಳೂ 8,567 ಸ್ಮಾಲ್‌ಕಾಸ್ ಮೊಕದ್ದಮೆಗಳೂ ದಾಖಲ್ಮಾಡಲ್ಪಟ್ಟವು. 1902—3ರಲ್ಲಿ 10,919 ಒರಿಜಿನಲ್‌ಮೊಕದ್ದಮೆಗಳೂ 7,613 ಸ್ಮಾಲ್‌ಕಾಸ್ ಮೊಕದ್ದಮೆಗಳೂ ದಾಖಲಾಗಿದ್ದವು. ಹೀಗಾಗಿ ಒಟ್ಟುಶೇಕಡ 1·21ರಂತೆ ಮೊಕದ್ದಮೆಗಳು ಹೆಚ್ಚಿದವು. ಈವರ್ಷ 18,901 ಮೊಕದ್ದಮೆಗಳು ಫೈಸಲಾದವು—ಎಂದರೆ ಕಳೆದವರ್ಷಕ್ಕಿಂತ 377 ಹೆಚ್ಚಾಗಿದೂ ಕಳೆದವರ್ಷ ದಾಖಲಾದ ಮೊಕದ್ದಮೆಗಳಿಗಿಂತ 111 ಹೆಚ್ಚಾಗಿಯೂ ಇದ್ದವು. ವರ್ಷಾಂತ್ಯದಲ್ಲಿ 6,000 ಮೊಕದ್ದಮೆಗಳು ಫೈಸಲಾಗದೆ ನಿಂತಿದ್ದವು; ಹಿಂದಿನ ವರ್ಷ 6,191 ಫೈಸಲಾಗದಿದ್ದವು.

ಸೆಕಂಡ್ ಅಪ್ಪೀಲ್‌ಗಳ ಸಂಖ್ಯೆಯೂಸೇರಿ ಕ್ರಮವಾದ ಅಪೀಲ್‌ಗಳ ಸಂಖ್ಯೆಯು 1,260. ಹಿಂದಿನದು 1,166. ಈ ಪೈಕಿ 1,154 ಮೊಕದ್ದಮೆಗಳು ಫೈಸಲಾದವು; ಹಿಂದಿನವರ್ಷ ಫೈಸಲಾದದ್ದು 1014. ಹಿಂದಿನವರ್ಷ ಫೈಸಲಾಗದೆ ನಿಂತಿದ್ದ 1,617 ಮೊಕದ್ದಮೆಗಳಿಗೆ ಪ್ರತಿಯಾಗಿ ಗತವರ್ಷದಲ್ಲಿ 1,091 ಮೊಕದ್ದಮೆಗಳು ಫೈಸಲಾಗದೆ ನಿಂತಿದ್ದವು, ಎಂದರೆ 74 ಹೆಚ್ಚಾಗಿತ್ತು.

ಮಾಲೂರು, ಬೌರಿಂಗ್‌ಪೇಟೆ, ಮುಳಬಾಗಲು ಈ ಮೂರು ತಾಲ್ಲೂಕುಗಳನ್ನು ಕೋಲಾರದ ಮುನಸಿಫರ ಅಧಿಕಾರದಿಂದ ತಪ್ಪಿಸಿ ಇವುಗಳಮೇಲೆ ಅಧಿಕಾರವುಳ್ಳ ಒಂದು ಹೊಸ ಮುನಸಿಫ್ ಕೋರ್ಟನ್ನು ಕೋಲಾರದ ಚಿನ್ನದ ಗಣಿಯಲ್ಲಿ ಸ್ಥಾಪಿಸಲಾಯಿತು.

ಗತವರ್ಷದಲ್ಲಿ ಘೋರವಾದ ಮತ್ತು ಸಾಮಾನ್ಯವಾದ ಒಟ್ಟು ಅಪರಾಧಗಳು 13,375 ಇದ್ದದ್ದು 11,009 ಕ್ಕೂ, ಅದಕ್ಕೆ ಸಂಬಂಧಪಟ್ಟವರಸಂಖ್ಯೆಯು 27,692 ಇದ್ದದ್ದು 22,638ಕ್ಕೂ ಇಳಿಯಿತು. ಇದರಿಂದ ತಪ್ಪಿತಗಳು ಸೇಕಡ 17·63 ರಂತೆಯೂ, ಸಂಬಂಧಪಟ್ಟವರಸಂಖ್ಯೆ 18·25 ರಂತೆಯೂ ಇಳಿದಹಾಗಾಯಿತು.

ಪೋಲೀಸ್.—ಈ ವರ್ಷ ರಿಪೋರ್ಟಾದ ವಾರಂಟಿಲ್ಲದೆ ಹಿಡಿಯಬಹುದಾದ ಮೊಕದ್ದಮೆಗಳ ಸಂಖ್ಯೆಯು 5,211, ಎಂದರೆ ಹಿಂದಿನ ವರ್ಷಕ್ಕಿಂತ 871 ಕಡಮೆಯಾಗಿತ್ತು.

ಒಳದೇಶವಾಸಿಗಳಾದ ಕಳ್ಳಜಾತಿಯವರ ಗುಂಪನ್ನು ಕ್ರಮವಾದ ಪೋಲೀಸಿನವರ ಸಹಾಯದಿಂದ ಗ್ರಾಮ ಪೋಲೀಸಿನವರು ಎಂದಿನಂತೆ ಕಾದುಕೊಂಡಿದ್ದರು. ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿರುವ ಕಲಗುಂಪಿನವರೂ ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿರುವ ಸುಮಾರು 100 ಮನೆತನದವರೂ ಹೊಲಗದ್ದೆಗಳಲ್ಲಿ ಕೆಲಸಗಾರರಾಗಿಯೂ ಬೇಸಾಯಗಾರರಾಗಿಯೂ ಆಗಿ ನ್ಯಾಯವಿರುದ್ಧವಲ್ಲದ ಕಾರ್ಯಗಳಲ್ಲಿ ಅನ್ವಯಿಸಿದ ಪ್ರಯುಕ್ತ ಅವರನ್ನು ಗ್ಯಾಂಗ್ ನಿಬಂಧನೆಗಳಿಂದ ವಿನಾಯಿಸಲಾಯಿತು.

ಮೈಸೂರು ದೇಶದಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಪ್ರದೇಶಗಳು ದೊರಕುವ ಕಡೆಯಲ್ಲೆಲ್ಲ ಈ ಜಾತಿಯಜನರನ್ನು ನಿಲ್ಲಿಸಿ ವಸತಿಗಳನ್ನು ಕಲ್ಪಿಸುವ ಪ್ರಯತ್ನಕ್ಕೆ ಸರಕಾರವು ಒದಗಿಬಂದಿರುವಂತೆ ಕಾಣುತ್ತದೆ. ಆದರೆ ಇದನ್ನು ಕಾರ್ಯತಃ ಜಾರಿಗೆತರುವ ವಿಷಯವು ಜಾಗರೂಕತೆಯಿಂದ ಪರ್ಯಾಲೋಚಿಸತಕ್ಕದ್ದಾಗಿದೆ. ಇದನ್ನು ಜಾಗ್ರತೆಯಾಗಿಯೇ ವಿಚಾರಮಾಡುವಂತೆ ಉದ್ದೇಶಿಸಿದೆ.

ರಿಜಿಸ್ಟ್ರೇಷನ್.—ಈ ಇಲಾಖೆಯನ್ನು ಕ್ರಮಪಡಿಸುವುದಕ್ಕೂ ಸ್ಪೆಷಲ್ ಸಬ್‌ರಿಜಿಸ್ಟ್ರಾರ್‌ಗಳಿಗೆ ಮುಂದೆ ಸಂಬಳಗಳನ್ನು ಹೆಚ್ಚಿಸುವುದಕ್ಕೂ ಶಿಕಾರಿಪುರ, ನಗರ, ಸೊರಬ ಮತ್ತು ಆಲೂರು ಈ ಊರುಗಳಲ್ಲಿ ಸ್ಪೆಷಲ್ ಸಬ್‌ರಿಜಿಸ್ಟ್ರಿ ಆಫೀಸುಗಳನ್ನಿಡುವುದಕ್ಕೂ ಒಂದು ಏರ್ಪಾಡನ್ನು ಸಾಲಿಯಾನ 8,220 ರೂಪಾಯಿಗೆ ವಿಸ್ತರದ ಹೆಚ್ಚು ಖರ್ಚಿನಮೇಲೆ ಮಂಜೂರ್ಮಾಡಲಾಯಿತು. ಈ ಆಫೀಸುಗಳ ಅಜಮಾಯಿಷಿ ಕೆಲಸ ಸರಿಯಾಗಿ ನಡೆಯುವದಕ್ಕೋಸ್ಕರ ಅಸಿಸ್ಟೆಂಟ್ ಕಮಿಷನರರುಗಳನ್ನು ರಿಜಿಸ್ಟ್ರೇಷನ್ ಆಫೀಸುಗಳ ಇನ್‌ಸ್ಪೆಕ್ಟರುಗಳಾಗಿಯೂ ಯೋಗಿಸಿದೆ.

ವಿದ್ಯಾಭ್ಯಾಸ.—ಪಾಠಶಾಲೆಗೆ ಹೋಗತಕ್ಕ ವಯಸ್ಸಿನ ಹುಡುಗರ ಮತ್ತು ಹುಡುಗಿಯರ ಒಟ್ಟು ಸಂಖ್ಯೆಯಲ್ಲಿ ಓದುತ್ತಿದ್ದವರ ಸಂಖ್ಯೆಯು ಸೇಕಡ 87 ರಷ್ಟು ಕಡಿಮೆಯಾಯಿತು. ಆದರೆ ಈ ಕಡಿಮೆಗೆ ನಿಯತವಾದ ಕಾರಣಗಳು ಯಾವವೂ ಇಲ್ಲವೆಂದು ತಿಳಿಯ ಬಂದಿದೆ. 1554

ಹೊಸದಾಗಿ ಸ್ಥಾಪಿಸಿದ ಮೌಲ್ವಿಪರೀಕ್ಷೆಯಲ್ಲಿ ಮೂವರು ಮಹಮ್ಮದೀಯ ವಿದ್ಯಾರ್ಥಿಗಳು ಈವರ್ಷ ಮೊದಲನೆಯವರಲ್ಲಿ ತೇರ್ಗಡೆಯಾದರು.

ಇದೇ ವರ್ಷದಲ್ಲಿ ಬಾಲನಿದ್ಯಾಭ್ಯಾಸದ ಪ್ರಚಾರವೂ ಅಭಿವೃದ್ಧಿಯೂ ಸರ್ಕಾರದವರ ವಿಶೇಷವಾದ ಪರ್ಯಾಲೋಚನೆಯಲ್ಲಿದ್ದವು.

ವಿದ್ಯಾಭ್ಯಾಸದ ಫಂಡಿನ ಅಭಿವೃದ್ಧಿಗಾಗಿ "ಲೋಕಲ್‌ಫಂಡ್ ಜನರಲ್" ಇಂದ ಕೊಡಬೇಕಾದ ಹಣವನ್ನು ಸೇಕಡ 25 ರಿಂದ 33 ಕ್ಕೆ ಹೆಚ್ಚಿಸಿದ ಅಂಶವನ್ನು ನನ್ನ ಕಳೆದವರ್ಷದ ಉಪನ್ಯಾಸದಲ್ಲಿ ತಮಗೆ ತಿಳಿಸಿದೆನಷ್ಟೆ. ಅದೇಕಾಲದಲ್ಲಿಯೇ 30,000 ರೂಪಾಯಿ ಖರ್ಚು ತಗಲುವ ನಾರ್ಮಲ್‌ಸ್ಕೂಲೇ ಮೊದಲಾದ ಕೆಲವು ಸ್ಕೂಲುಗಳ ಖರ್ಚನ್ನು ವಿಲ್ಲೇಜ್‌ಸ್ಕೂಲ್ ಫಂಡಿನಿಂದ ನಿವೃತ್ತಿ ಮಾಡಲಾಯಿತು. ಈ ಕೆಲಸಕ್ಕೋಸ್ಕರ ವರಮಾನವನ್ನು ಇನ್ನೂ ಹೆಚ್ಚಿಸುವದಕ್ಕಾಗಿ ಸ್ಕೂಲುಗಳಲ್ಲಿಯೂ ಕಾಲೇಜುಗಳಲ್ಲಿಯೂ ವಸೂಲ್ಮಾಡುತ್ತಿದ್ದ ಫೀ ದರವನ್ನು ಪುನಃ ಮಿಮರ್ಶೆ ಮಾಡಿದ್ದೇ ಮತ್ತೊಂದು ವಿಶೇಷಕಾರ್ಯವಾಗಿದೆ. 1895ನೆಯ ಇಸವಿಯಿಂದ ಪರ್ಯಾಲೋಚನೆಯಲ್ಲಿದ್ದ ಈ ವಿಷಯವನ್ನು ಕ್ಷಿಪ್ರದಲ್ಲಿಯೇ ತೀರ್ಮಾನಿಸುವದು ಅತ್ಯಾವಶ್ಯಕವಾಗಿತ್ತು. ಲೋಅರ್ ಸೆಕೆಂಡರಿ ಮತ್ತು ಪ್ರೈಮರಿ ಸ್ಕೂಲ್ ಉಪಾಧ್ಯಾಯರುಗಳ ಸಂಬಳಗಳ ದರವನ್ನು 30ವರ್ಷಕ್ಕೆ ಹಿಂದೆ ಗೊತ್ತುಮಾಡಿತು. ಆಹಾರ ಧಾನ್ಯಗಳ ಬೆಲೆ ಹೆಚ್ಚಿದ ಈ ಕಾಲಕ್ಕೆ ಅದು ಸಾಲದ ಪ್ರಯುಕ್ತ ಕಾರಣಾಂತರವಿಲ್ಲದಿದ್ದರೂ ಅವರ ಸಂಬಳವನ್ನು ಹೆಚ್ಚಿಸುವದಕ್ಕೆ ಬೇಕಾದ ಹಣವನ್ನು ಒದಗಿಸುವದ ಕ್ಕೋಸ್ಕರವೇ ಆದರೂ ಲೋಅರ್ ಸೆಕೆಂಡರಿ ಮತ್ತು ಪ್ರೈಮರಿಸ್ಕೂಲುಗಳಲ್ಲಿ ಯಥಾಯೋಗ್ಯವಾಗಿ ಫೀಗಳನ್ನು ಹಾಕಬೇಕಾಯಿತು. ಅನೇಕ ಸಲಹೆಗಳನ್ನು ತೆಗೆದುಕೊಂಡು ವಿಶೇಷವಾಗಿ ಪರ್ಯಾಲೋಚನೆಮಾಡಿದ ಬಳಿಕ, ಕಳೆದ ಜನವರಿ ತಿಂಗಳಿಂದ ಫೀ ರುಸುಮಿನ ಹೊಸದರವನ್ನು ಜಾರಿಗೆ ತರಲು ನಿರ್ಣಯಿಸಲಾಯಿತು. ಕಾಲೇಜುಗಳ ಎಫ್. ಎ. ಮತ್ತು ಬಿ. ಎ. ತರಗತಿಗಳಲ್ಲಿ ಒಂದೊಂದು ರೂಪಾಯಿ ಹೆಚ್ಚು ಫೀಯನ್ನೂ ಹೈಸ್ಕೂಲು ತರಗತಿಗಳಲ್ಲಿ ಅರ್ಧರ್ಧ ರೂಪಾಯಿ ಹೆಚ್ಚು ಫೀಯನ್ನೂ ಹಾಕಲಾಯಿತು. ಲೋಅರ್ ಸೆಕಂಡರಿ ತರಗತಿಗಳಲ್ಲಿ ನಾಲ್ಕಾಣೆ ಫೀ ಹೆಚ್ಚಿಸಿತು. ತಾಲ್ಲೂಕು ವರ್ನಾಕ್ಯುಲರ್ ಸ್ಕೂಲುಗಳಲ್ಲಿ ತರಗತಿಗೆ ಒಂದೊಂದಾಣೆ ಯಷ್ಟುಮಾತ್ರವೇ ಹೆಚ್ಚಿಸಿತು. ಗ್ರಾಮಪಾಠಶಾಲೆಗಳಲ್ಲಿ ಅಪ್ಪರ್ ಪ್ರೈಮರಿ ಮತ್ತು ಮಿಡಲ್ ಸ್ಕೂಲ್ ತರಗತಿಗಳಲ್ಲಿ ಹೊಸತಾಗಿ ಒಂದಾಣೆ ಮತ್ತು ಎರಡಾಣೆ ಫೀಯನ್ನು ವಸೂಲ್ಮಾಡುವಂತೆ ಅಪ್ಪಣೆ ಮಾಡಲಾಯಿತು. ಇದೂ ಅಲ್ಲದೆ ಎಲ್ಲಸ್ಕೂಲ್‌ಗಳಲ್ಲಿಯೂ ಫೀಯನ್ನು 6 ತಿಂಗಳಿಗೆ ಒಂದಾವೃತ್ತಿ ವಸೂಲ್ಮಾಡದೆ ತಿಂಗಳು ತಿಂಗಳಿಗೆ ವಸೂಲ್ಮಾಡುವಂತೆಯೂ ಏರ್ಪಡಿಸಲಾಯಿತು. ಗ್ರಾಮ ಪಾಠಶಾಲೆಯಲ್ಲಿ ಲೋಅರ್ ಪ್ರೈಮರಿ ಸ್ಟ್ಯಾಂಡರ್ಡ್ ವರೆಗೂ ಧರ್ಮಾರ್ಥವಾಗಿ ಪಾಠಹೇಳಿ ಅಲ್ಲಿಂದ ಮುಂದಕ್ಕೆ ಮಾತ್ರ ಫೀ ವಸೂಲ್ಮಾಡುತ್ತದೆ. ಈ ಏರ್ಪಾಡಿನ ಫಲಿತಾಂಶವನ್ನು ಸದ್ಯಃ ತಿಳಿಯಲಾಗುವದಿಲ್ಲವಾದರೂ ಇದರಿಂದ ಸರ್ಕಾರಿ ಗ್ರಾಂಟಿನ ಸಹಾಯವನ್ನು ಪಡೆದುಕೊಂಡು ಪ್ರಕೃತದಲ್ಲಿ ಹಿಂದೆಗೆಯುತ್ತಿರುವ ಜನರುಗಳು ಸಾಹಸಮಾಡಿ ಪಾಠಶಾಲೆಗಳನ್ನು ಏರ್ಪಡಿಸುವದಕ್ಕೆ ಅವಕಾಶವುಂಟಾಗುವುದು.

ಇನ್‌ಸ್ಪೆಕ್ಷನ್ ಸಿಬ್ಬಂದಿಯನ್ನು ಉತ್ತಮಸ್ಥಿತಿಗೆ ತರುವದು ಅವಶ್ಯಕವಾದ್ದರಿಂದ ಈ ವಿಚಾರವನ್ನು ಕ್ಷಿಪ್ರದಲ್ಲಿಯೇ ಪರ್ಯಾಲೋಚಿಸಬೇಕಾಗಿದೆ.

ಮುಜರಾಯಿ—ಹಿಂದೆ ಇನಾಂ ಸೆಟಲ್‌ಮೆಂಟು ಕಾಲದಲ್ಲಿ ಶಿಥಿಲವಾಗಿದ್ದ ಪ್ರಯುಕ್ತ ತಸ್ತೀಕನ್ನು ಜಪ್ತಿ ಮಾಡಿದ್ದ ಸಾಲಗಾಮಿಯೇ ಮೊದಲಾದ ಆರು ಸ್ಥಳಗಳ ದೇವಸ್ಥಾನಗಳು ಈಚೆಗೆ ಸಂಪೂರ್ಣವಾಗಿ ಜೀರ್ಣೋದ್ಧಾರ ಮಾಡಲ್ಪಟ್ಟು ಅವುಗಳಲ್ಲಿ ಪೂಜೆ ಪುನಃ ನಡೆಯುವಂತೆ ತಿಳಿದುಬಂದ ಕಾರಣ ಗತವರ್ಷದಲ್ಲಿ ಸದರಿ ತಸ್ತೀಕನ್ನು ಪುನಃ ಮಂಜೂರ್ಮಾಡಲಾಯಿತು.

ಅನೇಕ ವರ್ಷಗಳಿಂದ ಮುಜರಾಯಿ ಇಲಾಖೆಯ ಲೆಕ್ಕಗಳು ಕಂಟ್ರೋಲರವರ ಆಫೀಸಿನಲ್ಲಿ ತೃಪ್ತಿಕರವಾಗಿ ಅಜಮಾಯಿಷಿ ಮಾಡಲ್ಪಡದೆ ಇದ್ದುದರಿಂದ ಆಯಾ ಸತ್ಯ ದೇವಸ್ಥಾನಗಳ ಸರಿಯಾದ ಶಿಲ್ಕು ಮೊಬಲ

ಗಳು ಸುಲಭವಾಗಿ ಗೊತ್ತಾಗುತ್ತಿರಲಿಲ್ಲ. ಡಿಸ್ಟ್ರಿಕ್ಟ್ ಖಜಾನೆಯ ಲೆಕ್ಕಗಳೂ ಕಂಟ್ರೋಲರ್ ಆಫೀಸಿನ ಲೆಕ್ಕದೊಡನೆ ತಾಳೆ ಬಿಳುತ್ತಲೂ ಇರಲಿಲ್ಲ. ಲೆಕ್ಕದ ಅಜಮಾಯಿಷಿಗೆ ಸಂಬಂಧಪಟ್ಟ ಇವೇ ಮುಂತಾದ ಕುಂದುಕೊರತೆಗಳನ್ನೆಲ್ಲಾ ಸರಿಮಾಡಿ ಮುಜರಾಯಿ ಸೆಕ್ರೆಟರಿಯವರ ಆಫೀಸಿನಲ್ಲಿ ತಾಳೆ ನೋಡುವದಕ್ಕೂ ಕಂಟ್ರೋಲರ ಆಫೀಸಿನಲ್ಲಿ ಕ್ರಮವಾಗಿ ಅಜಮಾಯಿಷಿ ಮಾಡುವದಕ್ಕೂ ತಕ್ಕ ಏರ್ಪಾಡುಗಳನ್ನು ಮಂಜೂರು ಮಾಡಲಾಯಿತು.

ವೈದ್ಯ ಮತ್ತು ಆರೋಗ್ಯಾಭಿವೃದ್ಧಿ.—ಹಿಂದಿನ ವರ್ಷ ನಾನಾ ಆಸ್ಪತ್ರೆಗಳಲ್ಲಿಯೂ ಡಿಸ್ಪೆನ್ಸರಿಗಳಲ್ಲಿಯೂ ಚಿಕಿತ್ಸೆಹೊಂದಿದ ರೋಗಿಗಳ ಸಂಖ್ಯೆಯು 9,93,176 ಇದ್ದದ್ದು ಈ ವರ್ಷ 11,31,250ಕ್ಕೆ ಏರಿತು. ಗತವರ್ಷಾಂತ್ಯದಲ್ಲಿ ಆಸ್ಪತ್ರೆಗಳೂ ಡಿಸ್ಪೆನ್ಸರಿಗಳೂ ಸೇರಿ ಒಟ್ಟು 136 ಇದ್ದವು—ಎಂದರೆ 41,032 ಜನಕ್ಕೆ ಒಂದರಂತೆಯೂ 205 ಚದರ ಮೈಲಿಗೆ ಒಂದರಂತೆಯೂ ಇದ್ದವು. ಪ್ರತಿವೈದ್ಯಶಾಲೆಯಲ್ಲಿಯೂ ಚಿಕಿತ್ಸಿತರಾದ ರೋಗಿಗಳ ಸರಾಸರಿ ಸಂಖ್ಯೆಯು 8,379 ಆಗಿತ್ತು.

ಜನನ ಸಂಖ್ಯೆಯು ಹಿಂದಿನವರ್ಷ 95,155 ಇದ್ದದ್ದು ಗತವರ್ಷ 84,626 ಕ್ಕೆ ಇಳಿಯಿತು. ಮರಣ ಸಂಖ್ಯೆಯು 1,09,496 ಇದ್ದದ್ದು 1,20,918ಕ್ಕೆ ಏರಿತು—ಎಂದರೆ 10,000 ಕ್ಕೆ 18·53 ರಂತೆ ಜನನಸಂಖ್ಯೆಯೂ 17·11ರಂತೆ ಮರಣಸಂಖ್ಯೆಯೂ ಆದವು.

ಕಾಲರಾ ಸಿಡುಬು ಪ್ಲೇಗು ಈ ಜಾಡ್ಯಗಳಿಂದ ಆದ ಮರಣಸಂಖ್ಯೆಯು ಬಹಳ ಕಡಿಮೆಯಾಯಿತು. ಹಿಂದಿನ ವರ್ಷ ಕಾಲರಾದಿಂದಲೂ ಸಿಡುಬಿನಿಂದಲೂ ಆದ ಮರಣಗಳು 202 ಮತ್ತು 4,416 ಇದ್ದದ್ದು ಗತವರ್ಷ 121 ಮತ್ತು 1,261 ಮಾತ್ರವೇ ಆಗಿದ್ದವು. ಜ್ವರದಿಂದ ಆದ ಮರಣ ಸಂಖ್ಯೆಯು 44,679 ರಿಂದ 52,384 ಕ್ಕೆ ಏರಿತು, ಎಂದರೆ 1897--98 ರಲ್ಲಿ ಪ್ರಾಪ್ತವಾದ ಅತ್ಯಧಿಕ ಮರಣಸಂಖ್ಯೆಯಾದ 58,907 ಕ್ಕೆ ಮಾತ್ರವೇ ಕಡಿಮೆಯಾಗಿತ್ತು. ಮೈಸೂರು ದೇಶದಲ್ಲಿ ಜ್ವರವೇ ಬಹಳ ಮರಣಕ್ಕೆ ಕಾರಣವಾಗಿರುವದರಲ್ಲಿ ಸಂದೇಹವಿಲ್ಲ. ಕಳೆದ ಎರಡು ಪಂಚವಾರ್ಷಿಕಗಳ ಸರಾಸರಿಯು 14,053 ಮತ್ತು 43,300 ಆಗಿದ್ದವು.

ಪ್ಲೇಗು ತಗುಲಿದವರ ಸಂಖ್ಯೆಯು 36,088 ರಿಂದ 26,893 ಕ್ಕೂ ಪ್ಲೇಗುಮರಣಸಂಖ್ಯೆಯು 26,573 ರಿಂದ 20,014 ಕ್ಕೂ ಇಳಿಯಿತು. ಪ್ಲೇಗುತಗುಲಿದವರ ಸಂಖ್ಯೆಯು 9,000 ಕ್ಕಿಂತ ಹೆಚ್ಚಾಗಿ ಕಡಿಮೆಯಾಯಿತು; ಮರಣಸಂಖ್ಯೆಯು 6,000 ಕ್ಕಿಂತ ಹೆಚ್ಚಾಗಿ ಕಡಿಮೆಯಾಯಿತು, ಎಂದರೆ ಹಿಂದಿನವರ್ಷಕ್ಕಿಂತ ಒಟ್ಟು ಪ್ರಜಾಸಂಖ್ಯೆಗೆ ·17 ರಂತೆಯೂ ·12 ರಂತೆಯೂ ಕಡಿಮೆಯಾಯಿತು.

ಮೈಸೂರು ದೇಶದ ನಗರವಾಸಿಗಳೂ ಗ್ರಾಮವಾಸಿಗಳೂ ಸಹ ಪ್ಲೇಗಿನ ಸ್ವರೂಪವನ್ನು ವಿಶೇಷವಾಗಿ ತಿಳಿದುಕೊಂಡಿರುವಕಾರಣ ಅದು ಕಾಣಿಸಿಕೊಳ್ಳುವ ಚಿಹ್ನೆಯಾಗಲಿಲ್ಲವಾ ಪುನಃ ಬರುವ ಚಿನ್ಹೆಗಳಾಗಲಿ ಕಂಡುಬಂದಕೂಡಲೆ ದಿಗಿಲುಬೀಳದೆ ತಾವಾಗಿಯೇ ರೋಗ ತಗುಲಿದ ಸ್ಥಳಗಳನ್ನು ಬಿಟ್ಟು ಅನೇಕವಾಗಿ ಸ್ವಂತಖರ್ಚಿನಿಂದಲೇ ಗುಡಿಸಲುಗಳನ್ನು ಹಾಕಿಕೊಂಡು ಹೊರಗೆ ವಾಸಮಾಡುವ ವಿಷಯವು ನಿಮಗೆ ತಿಳಿದೇಇದೆ. ಹೀಗೆ ಸ್ಥಳಬಿಡುವುದಕ್ಕಿಂತ ಸ್ವಲ್ಪ ಬಲಹೀನವಾದ ಡಿಸಿನ್ಫೆಕ್ಷನ್ ಪ್ರತಿಕ್ರಿಯೆಯನ್ನು ಎಲ್ಲಾಕಡೆಯಲ್ಲಿಯೂ ನಡೆಸುತ್ತಿದೆ. ಆದರೆ ಪ್ಲೇಗು ಕಾಣಿಸಿಕೊಂಡ ತರುಣದಲ್ಲಿ ನಡೆಸಿದ ಹಿಂದಿನ ಅನುಭವದಿಂದ ಅಸಾಧ್ಯವೆಂದೂ ಬಹಳ ಧನವ್ಯಯ ಸಾಧ್ಯವೆಂದೂ ಗೊತ್ತಾದ ರಸಾಯನ ಪದಾರ್ಥಗಳಿಂದ ಡಿಸಿನ್ಫೆಕ್ಷನ್ ಮಾಡುವದನ್ನು ಬಿಟ್ಟು ಸುಡುವ ಮತ್ತು ಸುಣ್ಣಬಳಿಯುವ ಸುಲಭೋಪಾಯಗಳಿಂದ ನಡೆಸುತ್ತಿದೆ. ಪ್ಲೇಗು ನಿರೋಧೋಪಾಯಗಳು ಪ್ರಥಮತಃ ಸಮಗ್ರವಾಗಿ ನಡೆದ 1899—1900ರಲ್ಲಿ 4½ಲಕ್ಷಕ್ಕೆ ಮೀರಿದ ಭಾರಿ ಮೊಬಲಗು ಖರ್ಚಾಯಿತು. ಈ ಮೈಕಿ 1½ಲಕ್ಷಕ್ಕೆ ಮೀರಿ ಮೇಲ್ವಿಚಾರಣೆಯ ಭಾರಿ ಸಿಬ್ಬಂದಿಗಾಗಿಯೇ ಖರ್ಚಾದಂತೆ ಲೆಕ್ಕಗಳಿಂದ ತಿಳಿಯಬರುತ್ತದೆ. ಜನರಿಗೆ ಜಾಡ್ಯದಅನುಭವ ಹೆಚ್ಚಿ ನಿರೋಧಸೂಚಕೋಪಾಯಗಳನ್ನು ತಾವಾಗಿಯೇ ಮಾಡಿಕೊಳ್ಳುತ್ತಾ ಬಂದದ್ದರಿಂದಲೂ ಸರ್ಕಾರದ ನೌಕರರಿಗೂ ಈ ಜಾಡ್ಯದ ವಿಷಯದಲ್ಲಿ ಪರಿಚಯವೂ ಅನುಭವವೂ ಹೆಚ್ಚಿದ್ದರಿಂದಲೂ ಹಿಂದೆ ಕೊಡುತ್ತಿದ್ದ ಸಂಬಳ ವೇತನಗ

ಳಲ್ಲಿ ಬಹಳವಾಗಿ ಮಿಗಿಸುವುದಕ್ಕೂ ಖಾಯಂಸಿಬ್ಬಂದಿಗೇ ಈ ಕೆಲಸದ ಬಹಳಭಾಗವನ್ನು ವರ್ಗಾಯಿಸುವುದಕ್ಕೂ ಸಾಧ್ಯವಾಯಿತು. ಈ ಏರ್ಪಾಡುಗಳಿಂದ ಖರ್ಚು ಸಹಜವಾಗಿಯೇ ಕಡಿಮೆಯಾಗಿ ಈಗ ನಡೆಯುತ್ತಿರುವಂತೆ $\frac{3}{4}$ ಲಕ್ಷಕ್ಕೆ ಇಳಿಯಿತು. ಇದೇ ಕಾರಣದಿಂದಲೂ ಹಿಂದೆ ಸೆಗ್ರಿಗೇಷನ್ ಕ್ಯಾಂಪುಗಳಿಗಾಗಿ ಕೆಲವು ಶಾಶ್ವತವಾದ ಕಟ್ಟಡಗಳನ್ನು ಕಟ್ಟಿದ್ದರಿಂದಲೂ ಈಗ ಜನರು ಗುಡಿಸಲು ಸಾಮಾನುಗಳನ್ನು ಮಾತ್ರವೇ ಕೇಳುವುದರಿಂದ ಕೇವಲ ಬಡವರಿಗೆಮಾತ್ರ ಅದನ್ನು ಧರ್ಮಕ್ಕೆ ಕೊಟ್ಟು ಉಳಿದವರಿಗೆಲ್ಲಾ ರಿಯಾಯಿತಿ ದರಕ್ಕೆ ಮಾರುವದರಿಂದಲೂ ಈ ಬಾಬಿನ ಖರ್ಚು ಮೊಬಲಗಿನಲ್ಲಿ ಮುಕ್ಕಾಲರಷ್ಟಕ್ಕೆ ಮೇಲೆ ಮಿಗಿಸಲಾಯಿತು. ಇಟ್ಟಿಗೆಗಾರೆ ಮನೆಗಳಿಗೆ ಮಾತ್ರ ರಸಾಯನ ಪದಾರ್ಥಗಳಿಂದ ಡಿಸಿನ್‌ಫೆಕ್ಷನ್‌ಮಾಡಿ ಮಣ್ಣು ಮನೆಗಳಿಗೆ ಬೆರಣಿ ಸುಡುವದರಮೂಲಕವಾಗಿಯೂ ಸುಣ್ಣ ಬಳಿಯುವುದರಮೂಲಕವಾಗಿಯೂ ಡಿಸಿನ್‌ಫೆಕ್ಷನ್ ಮಾಡುವಕಾರಣ ಈ ಬಾಬಿನ ಖರ್ಚುಸುಮಾರು ಅರ್ಧದಷ್ಟು ಕಡಿಮೆಯಾಯಿತು. ಇದಲ್ಲದೆ ಪೂರ್ವದಲ್ಲಿ ರೈಲ್ವೆ ಪ್ರಯಾಣಿಕರ ಪರೀಕ್ಷೆಗಾಗಿಸಲ್ಲುತ್ತಿದ್ದ ಹೆಚ್ಚು ಖರ್ಚನ್ನು ಬಹಳಮಟ್ಟಿಗೆ ಕಡಿಮೆಮಾಡಲಾಯಿತು. ಈ ಕಾರಣಗಳಿಂದ 1903—04ನೆಯ ವರ್ಷದ ಪ್ಲೇಗುಖರ್ಚು 1,15,000 ರೂಪಾಯಿ ಆಯಿತು. ಈ ಪೈಕಿ 12,000 ರೂಪಾಯನ್ನು ಹಳ್ಳಿಗಾಡುಗಳಲ್ಲಿ ಮನೆಯೊಡೆಯುವುದಕ್ಕೂ ಇತರ ಆರೋಗ್ಯಾಭಿವರ್ಧಕಕಾರ್ಯಗಳಿಗೂ ಖರ್ಚು ಮಾಡಲಾಯಿತು.

ಈ ಮೊಬಲಗೇ ಆರೋಗ್ಯಾಭಿವೃದ್ಧಿಕಾರ್ಯಗಳಿಗೆ ಖರ್ಚುಮಾಡಿದ ಒಟ್ಟು ಮೊಬಲಗಲ್ಲ. ಬಾವಿಗಳು ಚರಂಡಿಗಳು, ಗ್ರಾಮಪಾಕೀಜು, ಅನಾರೋಗ್ಯಕರವಾದ ಹಳ್ಳಗಳನ್ನು ಮುಚ್ಚಿಸುವುದು, ಜಾತ್ರೆಯೇ ಮೊದಲಾದ ಹಬ್ಬಹಾಡ್ಯಗಳಲ್ಲಿ ಜನ ಸೇರುವಕಡೆಗಳಲ್ಲಿ ಆರೋಗ್ಯಾಭಿವರ್ಧಕಕಾರ್ಯಗಳನ್ನು ಮಾಡಿಸುವುದು, ಪಾಯಿಖಾನೆಗಳನ್ನು ಕಟ್ಟಿಸುವುದು, ಪಾಪಾಸಕಳ್ಳಿಯನ್ನು ಕಿತ್ತುಹಾಕಿಸುವದು ಇನ್ನೂ ಇತರಕೆಲಸಗಳು, ಇವುಗಳ ಖರ್ಚಿಗಾಗಿ ಒಟ್ಟು 74,000 ರೂಪಾಯನ್ನು ಡಿಸ್ಟ್ರಿಕ್ಟ್ ಫಂಡಿನಿಂದ ತೆಗೆದಿಟ್ಟಿತ್ತು. ಗ್ರಾಮಮ್ಯೂನಿಸಿಪಾಲಿಟಿಗಳು 75,000 ರೂಪಾಯಿ ಮುಟ್ಟಿಸಿ ಆರೋಗ್ಯವರ್ಧಕಕಾರ್ಯಗಳನ್ನು ನಡಿಸಿದವು. ಈ ಪೈಕಿ 53,000 ರೂಪಾಯಿಗಳನ್ನು ಚರಂಡಿಗಳಿಗೂ ಸುಮಾರು 12,000 ರೂಪಾಯಿಗಳನ್ನು ನೀರುಸರಬರಾಯಿ ಅಭಿವೃದ್ಧಿಗೂ ಉಳಿದದ್ದನ್ನು ನಾನಾವಿಧವಾದ ಮರಹಮತ್ ಕೆಲಸಗಳಿಗೂ ಖರ್ಚು ಮಾಡಲಾಯಿತು. ಬಾವಿಗಳು, ನೀರು ಸರಬರಾಯಿ ಮತ್ತು ಇತರ ಆರೋಗ್ಯವರ್ಧಕ ಕಾರ್ಯಗಳಿಗಾಗಿ ಸರ್ಕಾರದವರು "ಲೋಕಲ್‌ಫಂಡ್ ಜನರಲ್" ಇಂದ 44,000 ರೂಪಾಯಿಗಳನ್ನು ಮಂಜೂರ್ಮಾಡಿದರು. ನೀರುಸರಬರಾಯಿ, ಕೆರೆಗಳ ದುರಸ್ತು ಮತ್ತು ಪೋಷಣೆ, ಚರಂಡಿಗಳು, ಹೊಸಬಡಾವಣೆಗಳು, ರಸ್ತೆಗಳು ಇವೇ ಮೊದಲಾದ ಮರಹಮ್ಮತ್ ಇಲಾಖೆಯ ಮೂಲಕ ನಡೆದ ಆರೋಗ್ಯವರ್ಧಕಕಾರ್ಯಗಳಿಗಾಗಿ $1\frac{3}{4}$ ಲಕ್ಷಕ್ಕಿಂತ ಹೆಚ್ಚಾಗಿ ಸಂಸ್ಥಾನದ ಫಂಡಿನಿಂದ ಖರ್ಚು ಮಾಡಲಾಯಿತು. ಈಪ್ರಕಾರ ಮೈಸೂರು ಬೆಂಗಳೂರುಗಳನ್ನುಳಿದ ಇತರ ಪ್ರದೇಶಗಳಲ್ಲಿ ಆರೋಗ್ಯವರ್ಧಕಕಾರ್ಯಗಳಿಗಾಗಿ ಖರ್ಚುಮಾಡಿದ ಒಟ್ಟುಮೊಬಲಗುಸುಮಾರು 4ಲಕ್ಷದಷ್ಟಾಯಿತು.

ಮೈಸೂರು ನಗರಾಭಿವೃದ್ಧಿಗಾಗಿ ಸಾಲೀಯಾನಾ 3 ಲಕ್ಷ ರೂಪಾಯಿ ಮಂಜೂರ್ಮಾಡಿರುವುದು ನಿಮಗೆ ವೇದ್ಯವಾಗಿಯೇ ಇದೆಯಷ್ಟೆ. ಈ ಪೈಕಿ ಟ್ರಸ್ಟ್ ಬೋರ್ಡಿನವರು 1,12,000 ರೂಪಾಯನ್ನು ಆಗಲೇ ಖರ್ಚು ಮಾಡಿದ್ದಾರೆ. ಬೆಂಗಳೂರು ನಗರಾಭಿವೃದ್ಧಿಗಾಗಿ ಇದೇಮೇರೆ ಮುಂದೆ 5 ವರ್ಷಗಳವರೆಗೆ ಸಾಲೀಯಾನಾ ಒಂದು ಲಕ್ಷ ರೂಪಾಯಿ ಖರ್ಚು ಮಾಡುವಂತೆ ಶ್ರೀಮನ್ಮಹಾರಾಜರವರು ಅಪ್ಪಣೆ ದಯಪಾಲಿಸಿದ್ದಾರೆ. ಅಲ್ಲದೆ ಈ ಮ್ಯೂನಿಸಿಪಾಲಿಟಿಗಳು ಮುಖ್ಯವಾಗಿ ಆರೋಗ್ಯವರ್ಧಕಕಾರ್ಯಗಳಿಗೋಸ್ಕರ ಸರ್ಕಾರದಿಂದ ಪಡೆದುಕೊಂಡಿದ್ದ $2\frac{1}{2}$ ಲಕ್ಷ ರೂಪಾಯಿ ಸಾಲದ ಭಾರವನ್ನು ಕೂಡ ತಪ್ಪಿಸಲಾಯಿತು. ಬೆಂಗಳೂರು ಚಾಮರಾಜೇಂದ್ರ ನೀರುಸರಬರಾಯಿ ಕಾರ್ಯಗಳಿಗೋಸ್ಕರ ವರ್ಷಂಪ್ರತಿ ಖರ್ಚುಮಾಡಬೇಕಾದ ಮೊಬಲಗು 1902—03ರವರೆಗೆ $3\frac{1}{2}$ ಲಕ್ಷ ರೂಪಾಯಿ ಒರಬೇಕಾಗಿತ್ತು. ಇದರ ವಿಲೆವಾರಿ ವಿಷಯದಲ್ಲಿ ಸರ್ಕಾರದವರು ತಮ್ಮ ಹಕ್ಕನ್ನು ಬಿಟ್ಟುಬಿಟ್ಟು ಮ್ಯೂನಿಸಿಪಾಲಿಟಿಗೆ ಅನುಕೂಲವಾಗುವಂತೆ ತೀರ್ಮಾನಮಾಡಿದ್ದರಿಂದ ಹೀಗೆ ಮಿಕ್ಕಹಣವನ್ನು ಮ್ಯೂನಿಸಿಪಾಲಿಟಿಯವರು ಇನ್ನೂ ಅಭಿವೃದ್ಧಿಕಾರ್ಯಗಳಿಗೆ ವಿನಿಯೋಗಿಸಲು ಅನುಕೂಲವಾಯಿತು. ಬೆಂಗಳೂರಿನಲ್ಲಿಯೂ ಮೈಸೂರಿನಲ್ಲಿಯೂ ಚರಂಡಿಮತ್ತು ನೀರುಸರಬರಾಯಿ ಇವುಗಳಿಗಾಗಿ 50,000 ರೂಪಾಯಿ ಕೂಡ ಖರ್ಚುಮಾಡಿತು. ಈಚೆಗೆ ಶಿವಮೊಗ್ಗೆಯ ಅಭಿವೃದ್ಧಿಗಾಗಿ 30,000 ರೂಪಾಯನ್ನು ಮಂಜೂರ್ಮಾಡಲಾಯಿತು.

ನಾವು ಈ ಜಾಡ್ಯದ ನಿರೋಧವಿಷಯದಲ್ಲಿ ತಕ್ಕ ಪ್ರಯತ್ನವನ್ನು ಮನಃಪೂರ್ವಕವಾಗಿ ಮಾಡದಿರಲಿಲ್ಲವೆಂಬ ಅಂಶವು ತೃಪ್ತಿಕರವಾಗಿದ್ದಾಗ್ಯೂ ಈ ಜಾಡ್ಯವು ಇಂಡಿಯಾದಲ್ಲಿ ಉಪಕ್ರಮಿಸಿದ ಏಳನೆಯ ವರ್ಷದಲ್ಲಿ

ಲಾರ್ಡ್ ಕರ್ಜನ್‌ರವರು ವರ್ಣಿಸಿದಂತೆ ಅದು "ಹೀಗೆಂದು ತಿಳಿಯಲಶಕ್ಯವಾಗಿಯೂ ವೈದ್ಯರ ಕೌಶಲವನ್ನೂ ಸರ್ಕಾರದವರ ಸಾಹಸವನ್ನೂ ಭಂಗಪಡಿಸತಕ್ಕದ್ದಾಗಿಯೂ ಹ್ಯಾಗೆ ಉಂಟಾಗುವದೂ ತಿಳಿಯಕೂಡದ್ದಾಗಿಯೂ ದಯಾರಹಿತವಾಗಿ ನಾಶಮಾಡತಕ್ಕದ್ದಾಗಿಯೂ ಅನೇಕ ಸಂದರ್ಭಗಳಲ್ಲಿ ದಿನವೊಂದಕ್ಕೆ ಸಾವಿರಾರು ಮಂದಿಗಳನ್ನೂ ವಾರವೊಂದಕ್ಕೆ ಹತ್ತಾರುಸಾವಿರ ಜನರನ್ನೂ ಹೊತ್ತುಕೊಂಡು ಹೋಗತಕ್ಕದ್ದಾಗಿಯೂ" ಇರೆ ಎಂಬಂಶವನ್ನು ನಿಮ್ಮ ಅವಧಾನಕ್ಕೆ ತರದೆ ಇರಲಾಗುವದಿಲ್ಲ. ಆದರೂ ಇದರ ನಿರೋಧವಿಷಯದಲ್ಲಿ ನಮ್ಮ ಪ್ರಯತ್ನಗಳನ್ನು ಸ್ವಲ್ಪವೂ ಕಡಿಮೆಮಾಡಲಾಗದು. ಇದಕ್ಕೆ ದೃಷ್ಟಾಂತವಾಗಿ, ಈ ಘೋರವಾದ ಜಾಡ್ಯವನ್ನು ನಿರ್ಮೂಲಿಸುವುದಕ್ಕೆ ವಿಶೇಷ ಪ್ರಯತ್ನಗಳು ನಡೆದ ಬೊಂಬಾಯಿಲ್ಲಿ ರೋಗತಗುಲಿದವರ ಸಂಖ್ಯೆಯೂ ಮರಣಸಂಖ್ಯೆಯೂ ಜನಸಂಖ್ಯೆಯಲ್ಲಿ ಸೇಕಡ 12 ರಂತೆಯೂ 18 ರಂತೆಯೂ ಹೆಚ್ಚಾದವು. ಸರಾಸರಿ ಮರಣಸಂಖ್ಯೆಯು ಮೈಸೂರಿನಲ್ಲಿ ಹತ್ತುಸಾವಿರ ಜನಕ್ಕೆ 2·46 ರಂತೆ ಆಗುತ್ತಿರುವಲ್ಲಿ ಬೊಂಬಾಯಿನಲ್ಲಿ 4·1 ರಂತೆ ಆಗುತ್ತಿತ್ತು. ಮದ್ರಾಸಿನಲ್ಲಿಯೂ ಜಾಡ್ಯನಿರೋಧಕ್ಕಾಗಿ ಸರ್ವಪ್ರಯತ್ನಗಳೂ ನಡೆಯುತ್ತಿದ್ದಾಗ್ಯೂ ಕೂಡ ಕಳೆದ 5 ವರ್ಷಗಳಿಂದ ವರ್ಷವರ್ಷಕ್ಕೂ ರೋಗತಗುಲಿದವರ ಸಂಖ್ಯೆಯೂ ಮರಣಸಂಖ್ಯೆಯೂ ಹೆಚ್ಚುತ್ತ ಬಂದಿವೆ. ಸಭಿಕರಿರಾ, ಹಿಂದೂ ದೇಶದ ಪ್ರಜೆಗಳಿಗೆಲ್ಲಾ ಏಕವೈರಿಯಾಗಿಯೂ ಇಂಡಿಯಾದೇಶದ ಎಲ್ಲಾ ಸರ್ಕಾರದವರೂ ಇದುವರೆಗೂ ಮಾಡಿದ ನಿರೋಧೋಪಾಯಗಳನ್ನೆಲ್ಲಾ ಧಿಕ್ಕರಿಸಿ ಭಯಂಕರವಾಗಿ ವಿಸ್ತರಿಸಿಕೊಂಡು ಪ್ರಾಣಘಾತಿಮಾಡುವುದಾಗಿಯೂ ಇರುವ ಈ ಘೋರವಾದ ಜಾಡ್ಯವನ್ನು ನಿರ್ಮೂಲಮಾಡುವ ವಿಷಯದಲ್ಲಿ ಪ್ರತಿ ಗಂಡಸೂ ಪ್ರತಿ ಹೆಂಗಸೂ ತಮ್ಮತಮ್ಮ ಶಕ್ತ್ಯನುಸಾರ ಸಹಾಯಮಾಡುವಂತೆ, ಪ್ರಜಾಪ್ರತಿನಿಧಿಗಳಾಗಿಯೂ ಅಲ್ಲಲ್ಲಿ ಮುಖಂಡರಾಗಿ ಗೌರವಾರ್ಹರಾಗಿಯೂ ಇರುವ ನೀವು, ನಿಮ್ಮ ಮಾತು ನಡೆಯುವ ಕಡೆಗಳಲ್ಲೆಲ್ಲಾ ಜನರಿಗೆ ಒಳ್ಳೆಹೇಳುವುದರ ಮೂಲಕ ಸಂಪೂರ್ಣವಾದ ಬತ್ತಾಸೆಯನ್ನೂ ಸಲಹೆಗಳನ್ನೂ ಕೊಡಬೇಕೆಂದು ಕೋರುತ್ತೇನೆ.

ಈ ಪ್ರಸ್ತಾವದಲ್ಲಿ ಅಸಿಸ್ಟೆಂಟ್ ಇಂಜನಿಯರುಗಳಲ್ಲಿ ಒಬ್ಬರಾದ ಮೆ॥ ಘೋರ್ ಎಂಬವರನ್ನು ಪ್ರಕೃತದಲ್ಲಿ ಯೂರೋಪ್ ಖಂಡದಲ್ಲಿ ಪ್ರಚಾರದಲ್ಲಿರುವ ಸ್ಯಾನಿಟರಿ ಇಂಜನಿಯರಿಂಗ್ ವಿದ್ಯೆಯನ್ನು ವಿಶೇಷವಾಗಿ ಅಭ್ಯಾಸಮಾಡಲು ಇಂಗ್ಲಂಡಿಗೆ ಕಳುಹಿಸಿರುವ ಅಂಶವನ್ನು ಇಲ್ಲಿ ಸೂಚಿಸಬಹುದು.

ಉರಸುಂಕ.—ಸಭಿಕರಿರಾ, ಇದೇ ಶ್ರೀಮನ್ಮಹಾರಾಜರವರ ರಾಜ್ಯಭಾರದ ದ್ವಿತೀಯವರ್ಷದಲ್ಲಿ ನಡೆದ ಮುಖ್ಯಕಾರ್ಯಗಳ ಸಂಕ್ಷೇಪ ವರ್ಣನೆಯು. ಈವರ್ಷ ಶ್ರೀಮನ್ಮಹಾರಾಜರವರು ಕಳೆದವರ್ಷಕ್ಕಿಂತ 370 ಹೆಚ್ಚಾಗಿ ಎಂದರೆ 1,100 ವಿಷಯಗಳನ್ನು ಪರ್ಯಾಲೋಚಿಸಿದರು. ಈರೀತಿಯಾಗಿ ಶ್ರೀಮನ್ಮಹಾರಾಜರವರು ಸಂಸ್ಥಾನದ ಮುಖ್ಯಮುಖ್ಯವಾದ ಕಾರ್ಯಗಳನ್ನೆಲ್ಲಾ ಸ್ವಾಧೀನತ್ವಾಗಿ ಸಫಲವಾಗಿ ಪರಾಮರ್ಶಿಸಿದ್ದು ಶ್ರೀಮನ್ಮಹಾರಾಜರವರಿಗೆ ಪ್ರಜೆಗಳ ಕ್ಷೇಮಲಾಭದಲ್ಲಿರುವ ಅವರಾತಿಶಯಕ್ಕೆ ಪ್ರತ್ಯಕ್ಷವಾದ ನಿದರ್ಶನವಾಗಿದೆ. ಶ್ರೀಮನ್ಮಹಾರಾಜರವರು ಹೀಗೆ ತೋರ್ಪಡಿಸಿದ ಪ್ರೋತ್ಸಾಹಕರವಾದ ಸಿದ್ಧಾಂತದಿಂದ ಈ ಸಂಸ್ಥಾನದ ರಾಜ್ಯಕಾರ್ಯದಲ್ಲಿ ಅನ್ವಯಿಸಿದವರಿಗೆಲ್ಲಾ ಉಂಟಾದ ಉಪಕಾರವನ್ನು ಇಷ್ಟೆಂದು ಪರಿಚ್ಛೇದಿಸಿ ಹೇಳಲು ಅಸಾಧ್ಯವಾಗಿದೆ. ಶ್ರೀ ಯುವರಾಜರವರು ಈಚೆಗೆ ಅಜ್ಮೀರಿನಲ್ಲಿ ಅಸ್ವಸ್ಥರಾಗಿದ್ದಾಗ ಈ ದೇಶದ ಪ್ರಜೆಗಳೆಲ್ಲರೂ ಅತ್ಯಂತ ವ್ಯಾಕುಲಚಿತ್ತರಾಗಿ ಇದ್ದದ್ದೂ ಬಳಿಕ ಭಗವದನುಗ್ರಹದಿಂದ ಅವರಿಗೆ ಆರೋಗ್ಯಭಾಗ್ಯವುಂಟಾಗಿ ಅವರು ಇಲ್ಲಿಗೆ ದಯಮಾಡಿಸಿದಾಗ ಜನರು ಅಪರಿಮಿತಸಂತೋಷದಿಂದ ಉತ್ಸವಪುರಸ್ಸರವಾಗಿ ಅವರ ಆಗಮನವನ್ನು ಅಭಿನಂದಿಸಿದ್ದೂ ಶ್ರೀಮಹಾರಾಜರವರೂ ಅವರ ಬಂಧುವರ್ಗದವರೂ ಪ್ರಜೆಗಳ ಪ್ರೇಮಾತಿಶಯಕ್ಕೆ ಪಾತ್ರರಾಗಿರುವ ಅಂಶವನ್ನು ವಿಶೇಷವಾಗಿ ದೃಢೀಕರಿಸುತ್ತವೆ.

ಪಿ. ಯನ್. ಕೃಷ್ಣಮೂರ್ತಿ,
ಮೈಸೂರು ಸಂಸ್ಥಾನದ ದೀವಾನರು.

ಗಳು.

	ವ್ಯತ್ಯಾಸ.	ಷರಾ.
	ರೂ.	
a	— 2,09,239	(a) ಜವಾಬುದಿಯು ಸುಮಾರು ಒಂದು ಲಕ್ಷ ರೂಪಾಯಿನಷ್ಟು ಕಡಿಮೆಯಾದ್ದರಿಂದಲೂ, ಮೊಹತರ್ಫಾಬಾಬಿಗೆ 73,000 ರೂಪಾಯಿಗಳನ್ನು ವರ್ಗಾಯಿಸಿದ್ದರಿಂದಲೂ, ಮತ್ತು ಹಿಡುವಳಿ ಜಪ್ತಿನುಗಳ ಮಾರಾಟದ ಹುಟ್ಟುವಳಿಯಲ್ಲಿ 33,066 ರೂಪಾಯಿಗಳು ಕಡಿಮೆಯಾದ್ದರಿಂದಲೂ, ಈ ಬಾಬಿನಲ್ಲಿ 2,09,239 ರೂಪಾಯಿ ಕಡಿಮೆ ಯಾಯಿತು.
	— 681	
b	+ 20,860	(b) ಮುಖ್ಯವಾಗಿ ಸ್ಟಾಂಪುಗಳಮೇಲೂ ಮತ್ತು ಸ್ಟಾಂಪು ಸಾಲದೆ ಇರುವ ಪತ್ರಗಳ ಮೇಲೂ ವಸೂಲಾದ ತೆರಿಗೆಯಿಂದ 20,860 ರೂಪಾಯಿ ಹೆಚ್ಚಾಯಿತು.
c	+ 68,500	
	+ 2,319	
	+ 1,282	
	+ 72,101	(c) ಮುಖ್ಯವಾಗಿ ಸಾರಾಯಿಮೇಲೆ ಹಾಕಿದ ಸ್ಟಿಲ್ ಹೆಡ್ ಡ್ಯೂಟಿಯಿಂದ ನಿವ್ವಳ ಹೆಚ್ಚು 72,101 ರೂಪಾಯಿ.
d	— 47,569	(d) ಸುಪಾರಿ ಹಾಳೆತೆದಲ್ಲಿ ಕಡಿಮೆ ಹುಟ್ಟುವಳಿಯಾದ್ದರಿಂದ ಈ ಬಾಬಿನಲ್ಲಿ 47,569 ರೂಪಾಯಿ ಕಡಿಮೆ.
e	+ 39,194	(e) ಗಂಧದ ಮರ ಮತ್ತು ಚೌಬೀನಿಬಾಬಿನಲ್ಲಿ $1\frac{1}{4}$ ಲಕ್ಷ ರೂಪಾಯಿ ಜಾಸ್ತಿ ಹುಟ್ಟುವಳಿ ಯಾದ್ದರಲ್ಲಿ ಇತರ ಜಂಗಲ್ ಬಾಬು ಮತ್ತು ಖಡ್ಡಾಗಳ ಉತ್ಪತ್ತಿಯಲ್ಲಿ 45,000 ರೂಪಾಯಿ ಕಡಿಮೆ ಯಾದದ್ದು ಜಾತಾ ನಿವ್ವಳ ಹೆಚ್ಚು 79,247ರೂಪಾಯಿ.
	+ 60,684	
	+ 63,440	
	— 18,484	
	— 26,593	
	+ 79,247	
	+ 4,712	
f	— 7,603	(f) ಅಮೃತಮಹಲ್ ಗೊಳಿಗಳ ಮಾರಾಟದ ಹುಟ್ಟುವಳಿ ಕಮ್ಮಿ ಬಂದ ಬಾಬತು ಕಡಿಮೆ 7,603 ರೂಪಾಯಿ.
g	— 6,238	(g) ಫೀ, ದಂಡ ತೆರುವುದು, ಮತ್ತು ಜುಲ್ಮಾನೆ, ಇವುಗಳ ಹುಟ್ಟುವಳಿಯಲ್ಲಿ ಕಮ್ಮಿ ಬಂದದ್ದರಿಂದ ಕಡಿಮೆ 6,238 ರೂಪಾಯಿ.
h	— 6,525	(h) ಜೈಲಿನಲ್ಲಿ ಮಾಡುವ ಕೈಗಾರಿಕೆ ಕಸಬಿನಿಂದ ಆಗುವ ಹುಟ್ಟುವಳಿಯಲ್ಲಿ ಕಮ್ಮಿ ಬಂದದ್ದರಿಂದ ಕಡಿಮೆ 6,525ರೂಪಾಯಿ.
	— 12,763	
i	+ 33,472	(i) ಕೋಲಾರದ ಚಿನ್ನದ ಗಣಿ ಕಂಪನಿಯವರು ಡಿಟೆಕ್ಟಿವ್ ಪೋಲಿಸ್ ಖರ್ಚಿಗಾಗಿ 13,379 ರೂಪಾಯಿ ಹೆಚ್ಚಾಗಿ ಚಂದಾ ಪಾವತಿ ಮಾಡಿದ್ದರಿಂದಲೂ ಮತ್ತು ದಕ್ಷಿಣ ಮಹಾರಾಷ್ಟ್ರ ರೈಲ್ವೆ ಕಂಪನಿಯವರಿಂದ 1896ನೆಯ ಇಸವಿ ಏಪ್ರಿಲ್ ತಾರೀಖು 1ರ ಲಾಗಾಯಿತು 1903ನೆಯ ಇಸವಿ ಮಾರ್ಚಿ ಆಖೈರು ವರಿಗೆ ಆಗುವ ರೈಲ್ವೆ ಪೋಲಿಸ್ ಖರ್ಚುಬಾಬತು 2,3289 ರೂಪಾಯಿ ವಾಪಸು ಜಮಾ ಬಂದದ್ದರಿದಲೂ ಹೆಚ್ಚು 33,472 ರೂಪಾಯಿ.
j	+ 2,160	(j) ಸ್ಕೂಲ್ ಫೀದರವನ್ನು ಹೆಚ್ಚಿಸಿದ್ದರಿಂದ 2,160 ರೂಪಾಯಿ ಹೆಚ್ಚಾಗಿದೆ.
k	+ 26,975	(k) 'ಲಾನೊಲ್ಯೆನಿಲಿಂಫ್' ಎಂಬ ಸಿಡಬು ರಸದ ಮಾರಾಟದಿಂದ ಬಂದ 2,385 ರೂಪಾಯಿ ಮುನಿಸಿಪಲ್ ಫಂಡುಗಳಿಂದ ಬಂದ ಚಂದಾ ಮೊಬಲಗು 30,980 ರೂಪಾಯಿ ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ನಿಗೆ ಸಂಬಧಪಟ್ಟ ಹುಚ್ಚರ ಮತ್ತು ಕುಷ್ಠರೋಗಿಗಳ ಪೋಷಣೆ ಖರ್ಚಿಗಾಗಿ ಜಮಾಬಂದ ಮೊಬಲಗು 1,963 ರೂಪಾಯಿ ಈ ಹುಟ್ಟುವಳಿಯಲ್ಲಿ ಔಷದ ಮಾರಾಟದಲ್ಲಿ ಕಡಿಮೆಯಾದ 8,353 ರೂಪಾಯಿ ಜಾತಾ 26,975 ರೂಪಾಯಿ ಹೆಚ್ಚು ತೋರಿಸಿದೆ.
l	+ 4,011	
	— 111	
	— 3,637	
	+ 5,725	
m	— 1,09,477	(l) ಮುಖ್ಯವಾಗಿ ಬೆಂಗಳೂರು ಸಿಟಿ ಅಭಿವೃದ್ಧಿ ಕೆಲಸಕ್ಕೆ ಪ್ರಾರಂಭಿಸಿದಲಾಗಾಯಿತು 1902ನೆ ಜೂನ್ ಆಖೈರುವರಿಗೆ ಖರ್ಚಾದ 1,01,780ರೂಪಾಯಿಗಳನ್ನು ಮುನಿಸಿಪಾಲಿಟಿಗೆ ಸಾಲವಾಗಿ ಖರ್ಚುಹಾಕಿದ್ದನ್ನು 1902—03ರಲ್ಲಿ ಮಿಸಲೇನಿಯಸ್‌ಬಾಬಿಗೆ ಜಮೆಬೀಳುವಹಾಗೆ ಏರ್ಪಡಿಸಿದ್ದರಿಂದಲೂ, ಹಕ್ಕುದಾರರಿಲ್ಲದ ಡಿಪಾಜಿಟ್‌ಮೊಬಲಗು 1902—1903ರಲ್ಲಿ ಬಹಳವಾಗಿ ಜಮೆಗೆ ದಾಖಲಾದ್ದರಿಂದಲೂ ಈ ಬಾಬಿನಲ್ಲಿ ಈವರ್ಷ ಕಡಿಮೆ ತೋರಲು ಕಾರಣವಾಯಿತು.
	— 1,02,623	
m	— 38,897	(m) ಬಡ್ಡಿಗೆ ಹಾಕಿದ ಮತ್ತು ಬ್ಯಾಂಕಿನಲ್ಲಿ ಇಟ್ಟಿರುವ ಸರ್ಕಾರಿ ಹಣದಲ್ಲಿ ನಿವ್ವಳ ಹೆಚ್ಚು 714ರೂಪಾಯಿ ಮಾತ್ರವೇ ಮೈಸೂರು ರೇಲ್ವೆ ಡಿಬೆಂಚರ್‌ಪತ್ರಗಳ ಸಾಲತೀರಿಸುವದಕ್ಕಾಗಿಯೂ ಮತ್ತು ಇತರ ಕೆಲಸಗಳಿಗಾಗಿಯೂ ಹಿಂದಿನವರ್ಷದಲ್ಲಿ ಮಾರಿದ ಇಂಡಿಯಾಗವರ್ನಮೆಂಟಿನ 21,69,700 ರೂಪಾಯಿನ ಪತ್ರಗಳು ಕಡಮೆಯಾದ್ದರಿಂದ ಸರ್ಕಾರಿಪತ್ರಗಳ ಬಡ್ಡಿ ಮೊಬಲಗು ಬಹಳ ಕಡಿಮೆಯಾಗುವದಕ್ಕೆ ಕಾರಣವಾಯಿತು. ಅಲ್ಲದೆ ಮದ್ರಾಸು ಬ್ಯಾಂಕಿನೊಡನೆ ಹಿಂದೆ ಮಾಡಿದ್ದ ಒಪ್ಪಂದವನ್ನು ಆವರ್ಷ ಪುನರಾಚರಣೆಗೆ ತಂದದ್ದರಿಂದ ಬ್ಯಾಂಕಿನಲ್ಲಿಟ್ಟಿರುವ ಸರ್ಕಾರಿ ಹಣದ ಬಡ್ಡಿ 40,102 ರೂಪಾಯಿ ಹೆಚ್ಚಲು ಕಾರಣವಾಯಿತು.
	+ 40,102	
	— 491	
n	— 13,850	
	— 13,136	
o	+ 1,45,540	(n) ಸಾಲಗಾರರಾದ ಜಹಗೀರುದಾರರಿಂದಲೂ ಮ್ಯುನಿಸಿಪಾಲಿಟಿಗಳಿಂದ ಬರತಕ್ಕ ಬಡ್ಡಿ ಕಡಮೆಯಾದ್ದರಿಂದ ಕಮ್ಮಿ.
p	+ 2,86,072	(o) ಎಲ್ಲಾ ಲೈನುಗಳಲ್ಲಿಯೂ ಅಧಿಕವಾಗಿ ಉತ್ಪತ್ತಿಯಾದ್ದರಿಂದಲೂ, ಮತ್ತು ಕೋಲಾರದ ಚಿನ್ನದಗಣಿ ರೈಲ್ವೆಯಿಂದ 1902—03ನೆ ಇಸವಿಯ ದ್ವಿತೀಯಾರ್ಧಭಾಗದಲ್ಲಿ ಉತ್ಪತ್ತಿಯಾದ ಮೊಬಲಗನ್ನು ಆವರ್ಷದ ಲೆಕ್ಕಕ್ಕೆ ಜಮಾಕಟ್ಟುವದಕ್ಕಾಗದೆ, 1903—04ನೇಇಸವಿಯ ಹುಟ್ಟುವಳಿಯೊಡನೆ ಸೇರಿಸಿ ಜಮಾಪಟ್ಟಿಗೆ ದಾಖಲ್ಮಾಡಿದ್ದರಿಂದ 1,45,540 ರೂಪಾಯಿ ಹೆಚ್ಚಿಗೆಗೆ ಕಾರಣವಾಗಿದೆ.
q	+ 3,26,263	
	— 24,558	
	+ 3,01,705	
	+ 7,20,181	(p) ಚಿನ್ನದ ಗಣಿ ಕಂಪನಿಯವರು ವೈದ್ಯುತಶಕ್ತಿಯನ್ನು ಹೆಚ್ಚು ಉಪಯೋಗಿಸಿಕೊಂಡದ್ದರಿಂದ 2,86,072ರೂಪಾಯಿ ಹೆಚ್ಚು ಹುಟ್ಟುವಳಿ ಆಗಿದೆ.
	+ 6,17,558	(q) ಗತವರ್ಷದಲ್ಲಿ ಚಿನ್ನದ ಉತ್ಪತ್ತಿಯು ಜಾಸ್ತಿಯಾದ್ದರಿಂದ ಹೆಚ್ಚು 3,26,263ರೂಪಾಯಿ.

ವ್ಯಯದ ವಿವರ.	ನಿಶ್ಚಿತ, 1902-03	ಪ್ರಾಥಮಿಕ 1903-04
ಪೊಗದಿ	35,00,000	35,00,000
ಅರಮನೆ ವ್ಯಯ	14,00,000	16,00,000
ರಾಜವಂಶೀಯರ ಪೋಷಣೆ ವೇತನಗಳು	2,40,000	2,40,000
ರಾಜರಿಯ ಪೋಷಣೆ ವೇತನಗಳು (ಜಹಗೀರಿಗಳಿಗೆ ಬದಲಾಗಿ ಕೊಟ್ಟವುಗಳು ಸೇರಿ) . .	86,828	84,500
ಒಟ್ಟು ...	52,26,828	54,24,500
ಹಿಂದಕ್ಕೆ ಬಂದ ಆದಾಯಗಳು—ಲಂಡ್ ರೆವೆನ್ಯೂವಿನಲ್ಲಿ ಸೇರಿ ಹೋಗಿರುವ ಇರಿಗೇಷನ್ ಸೆಸ್	1,56,444	1,56,444
ಇತರ ಅಂಶಗಳು	89,643	55,41
ಒಟ್ಟು ...	2,46,087	2,11,85
ಭೂಮಿಯ ಆಯಕಟ್ಟಿಗಾಗಿ ಆದ ವ್ಯಯಗಳು—ಡೆಪ್ಯೂಟಿ ಕಮಿಷನರುಗಳೂ ಸಿಬ್ಬಂದಿಗಳೂ	1,89,302	1,96,56
ಸಬ್ ಡಿವಿಜನ್ ಅಧಿಕಾರಿಗಳೂ ಸಿಬ್ಬಂದಿಗಳೂ	24,062	1,52,07
ಅಸಿಸ್ಟೆಂಟ್ ಕಮಿಷನರುಗಳೂ ಸಿಬ್ಬಂದಿಗಳೂ	85,330	92,95
ತಾಲ್ಲೂಕು ಸಿಬ್ಬಂದಿಗಳು	4,01,947	4,03,[illegible]
ಸರ್ವೆ ಮತ್ತು ಸೆಟ್ಲ್‌ಮೆಂಟ್	1,67,415	1,66,54[illegible]
ಇನಾಂ	7,908	8,1[illegible]
ಗ್ರಾಮಾಧಿಕಾರಿಗಳ ಕಚ್ಚಿ ಮತ್ತು ಪಕ್ಕಾ ಪೋಟಿಗಿಗಳು ...	7,80,229	7,66,07
ವಿವಿಧ ವಿಷಯಗಳು ..	56,761	41,05
ಒಟ್ಟು ...	17,13,044	16,89,92
ಸ್ವಾಂಪು	27,400	26,94[illegible]
ಅಬಕಾರಿ	3,26,176	3,27,07[illegible]
ಸಾಯರು	14,413	15,537
ಜಂಗಲುಗಳು (ಕಟ್ಟಿಗೆ ಸೇರಿ)	4,81,290	5,21,98[illegible]
ರಿಜಿಸ್ಟ್ರೇಷನ್	79,697	81,42[illegible]
ಅಮೃತ ಮಹಲ್	31,799	30,436
ಒಟ್ಟು. ...	9,61,275	10,04,019
ರಾಜ್ಯದ ಮೇಲ್ವಿಚಾರಣೆ ಸಿಬ್ಬಂದಿ	4,96,378	4,81,37[illegible]
ನ್ಯಾಯವಿಮರ್ಶೆ — ಕೋರ್ಟುಗಳು	9,06,658	9,09,38[illegible]
ನ್ಯಾಯವಿಮರ್ಶೆ — ಬಂದೀಖಾನೆಗಳು	1,08,661	95,232
ಪೊಲೀಸು	10,13,477	9,78,059
ವಿದ್ಯಾಭ್ಯಾಸ	6,96,167	7,26,062
ಮುಜರಾಯಿ	3,27,702	3,23,4[illegible]
ವೈದ್ಯ	4,97,137	5,67,055
ಗವರ್ನಮೆಂಟ್ ಮನೆಗಳು	96,154	1,13,767
ವಿಜ್ಞಾನಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು	2,88,272	2,68,958
ಒಟ್ಟು ...	44,30,606	44,06,9[illegible]
ವಿವಿಧ ಖರ್ಚುಗಳು — ಸರ್ವೋಚ್ಚಕಕ್ಕಾಗಿ ಕೊಟ್ಟ ಪೋಷಣೆ ಮತ್ತು ಗ್ಯಾರಂಟಿ ವೇತನಗಳು ..	3,69,967	4,24,160
ಕೇಷನ ಸಾಧನಗಳು ಮತ್ತು ಅಕ್ಕಿ ಹಾಕುವುದು	1,48,102	1,68,657
ಇಂಡಿಯಾ ಗವರ್ನಮೆಂಟ್ ಕಿತ್ರಗಳನ್ನು ಕೊಂಡದ್ದಕ್ಕಾಗಿ ಕೊಟ್ಟ ರುಸುಂ ವಗೈರೆ...	57,303	4,203
ಇತರ ಅಂಶಗಳು	11,92,344	9,67,276
ಒಟ್ಟು ...	17,68,016	15,64,190
ಸೈಗು	1,10,551	1,15,061
ಕ್ಷೇಮವಾರಿಯರ	7,945	408
ಮರಮುಟ್ಟು, ಅಲಂಕಾರಿಕವೂ ಸೇರಿ	26,73,182	4[illegible]
ಸೈನ್ಯ	14,48,729	1[illegible],21,843
ಒಟ್ಟು .	1,85,86,163	1,98,22,175
ಬಡ್ಡಿ — ಮೈಸೂರು ಡಿಬೆಂಚರ್ ಸೂಲ 20 ಲಕ್ಷದ ಮೇಲಿನ ಬಡ್ಡಿ	96,801	1,07[illegible]
ಸೇವಿಂಗ್ಸ್ ಬ್ಯಾಂಕಿನವರ್ಗಿಟ್ಟಿರುವ ಹಣದ ಬಡ್ಡಿ	2,14,870	2,37,778
ಧರ್ಮದ ಹಣದ ಬಡ್ಡಿ	16,910	17,091
ಬೇರೆ ಹಣದ ಬಡ್ಡಿ	26,958	29,896
ಒಟ್ಟು ...	3,14,569	3,86,440
ರಾಜ್ಯದ ಲೋಕೋಪಯೋಗಗಳು — ಮೈಸೂರು—ಹರಿಹರ ಮಾರ್ಗದ ಮೂಲಧನದಲ್ಲಿ ವ್ಯಯವಾದ ಭಾಗದಬಡ್ಡಿ	6,47,065	6,93,832
ಇತರ ಲೋಕೋಪಯೋಗಗಳ ಮೂಲಧನದ ಲೆಕ್ಕ	39,748	1,27,02[illegible]
ಒಟ್ಟು ...	6,87,113	7,20,86[illegible]
ಬಂಡವಾಳ ಖರ್ಚಿನ ವ್ಯಯ ಸರ್ಕಾರಿಯಾಯ	8,08,262	10,49,81[illegible]
ಚಿನ್ನದ ಗಣಿ	13,215	17,37[illegible]
ದೊಡ್ಡ ಒಟ್ಟು ...	[illegible]	9,18,96,150

ವ್ಯಯಗಳು.

130

1563

ವ್ಯತ್ಯಾಸ.	ಷರಾ.
...	a. ಅರಮನೆ ವ್ಯಯವನ್ನು 14ಲಕ್ಷದಿಂದ 16ಲಕ್ಷಕ್ಕೆ ಹೆಚ್ಚಿಸಿದ್ದರಿಂದ ಜಾಸ್ತಿ. b. ಇದು ಹೆಚ್ಚು ಕಡಮೆಯಾಗತಕ್ಕ ಬಾಬು.
+ 2,00,000 (a)	
...	
— 2,268	c. ಮುಖ್ಯವಾಗಿ ಪಟೇಲ ಶ್ಯಾನುಭೋಗರಿಗೆ ಹಂಗಾಮಿನ ಮತ್ತು ಖಾಯಂ ಪೋಟಗಿಯ ಕಮ್ಮಿ ಪಾವತಿಯಿಂದಲೂ (ರೂ. 14154) ಚಿಲ್ಲರೆ ಬಾಬಿನಲ್ಲಿ ಕಡಿಮೆ ಖರ್ಚಾದ್ದರಿಂದಲೂ (ರೂ. 12,706), ರೆವಿನ್ಯೂಕೆಲಸಗಳಿಗಾಗಿ ತೆಗೆದುಕೊಂಡ ಜಮೀನಗಳ ಕ್ರಯಕ್ಕೋಸ್ಕರ ಭಾರಿ ಮೊಬಲಗು ಕಳೆದವರ್ಷ ಪಾವತಿಯಾದ ಹಾಗೆ ಈ ವರ್ಷ ಆಗದೆ ಇದ್ದದ್ದರಿಂದಲೂ 23,123
+ 1,97,732	ರೂಪಾಯಿ ನಿವ್ವಳ ಕಡಮೆಯಾಯಿತು ಇತರ ಬಾಬುಗಳಲ್ಲಿ 5745 ರೂಪಾಯಿನಷ್ಟು ಹೆಚ್ಚು ಆಯಿತು.
... (b)	
— 34,230	d. 'ಕಸರ್ವೆನ್ಸಿ ಮತ್ತು ಎಕ್ಸಾಸ್' ಬಾಬಿನಲ್ಲಿ ಮುಖ್ಯವಾಗಿ ಹೆಚ್ಚಾಯಿತು. ಆದರೆ ಶಿಬ್ಬಂದಿ ಬಾಬಿನಲ್ಲಿ ಸ್ವಲ್ಪ ಕಡಿಮೆಯಾಯಿತು.
— 34,230	e. ಈವರ್ಷದಲ್ಲಿ ಕೌನ್ಸಿಲರ್‌ಗಳ ಪೈಕಿ ಒಬ್ಬ ಕೌನ್ಸಿಲರ್ ಕೆಲಸವನ್ನು ವಜಾಮಾಡಿದ್ದರಿಂದ 11502 ರೂಪಾಯಿ ಕಡಿ
+ 4,171(c)	ಮೆಯಾದ್ದರಿಂದಲೂ, ಜನರಲ್ ಮತ್ತು ರೆವಿನ್ಯೂ ಸೆಕ್ರಟೆರಿಯಟ್‌ನಲ್ಲಿ 4086ರೂಪಾಯಿ. ಟ್ಯೂಟರ್ ಮತ್ತು ಗವರ್ನರ
— 8,857	ವರ ತಲಬಿನಪೈಕಿ 9107ರೂಪಾಯಿ, ಅಗ್ರಿಕಲ್‌ಚರಲ್‌ಬ್ಯಾಂಕ್ಸ್‌ನೌಕರರ ಬಾಬತು 6946ರೂಪಾಯಿ, ಚಿಲ್ಲರೆ ಬಾಬಿ
+ 7,626	ನಲ್ಲಿ 560ರೂಪಾಯಿ ಉಳಿದ್ದರಿಂದಲೂ, 15007 ರೂಪಾಯಿ ಕಡಿಮೆಯಾಯಿತು. ಆದರೆ ಹೊಸದಾಗಿ ಒಬ್ಬ ರೆವಿ
+ 1,448	ನ್ಯೂಕಮೀಷನರವರನ್ನು ನೇಮಕಮಾಡಿದ್ದರಿಂದ 14,798ರೂಪಾಯಿ ವಿದ್ಯಾರ್ಥಿವೇತನಗಳನ್ನು ಕೊಟ್ಟದ್ದರಿಂದ
— 874	2,196ರೂಪಾಯಿ ಹೆಚ್ಚಾಗಿ ಖರ್ಚಾಯಿತು.
+ 223	
— 14,154	f. ಛೀಫ್‌ಜಡ್ಜರಾದ ಮೆ॥ ಬೆಸ್ಟ್ರರವರು ಕೆಲಸದಿಂದ ನಿವೃತ್ತರಾದ ಬಳಿಕ ಮತ್ತೊಬ್ಬರು ಕಮ್ಮಿ ತಲಬಿನಲ್ಲಿ ಆ ಕೆಲಸಕ್ಕೆ
— 12,706	ನೇಮಿಸಲ್ಪಟ್ಟದ್ದರಿಂದ 7000ರೂಪಾಯಿ ಮತ್ತು ಈ ಬಾಬಿಗೆ ಸೇರತಕ್ಕ ಲ್ಯಾಂಡ್‌ರೆವಿನ್ಯೂ ಖರ್ಚಿನಲ್ಲಿ 7545ರೂಪಾಯಿ
— 23,123	ಕಡಿಮೆ ಆಯಿತು. ಆದರೆ ನೂತನವಾಗಿ ಮೂರು ಸಬ್‌ಕೋರ್ಟುಗಳು ಸ್ಥಾಪಿಸಲ್ಪಟ್ಟದ್ದರಿಂದಲೂ ಇತರ ಬಾಬುಗಳಲ್ಲಿ
— 457	ಸ್ವಲ್ಪ ಹೆಚ್ಚು ಖರ್ಚಾದ್ದರಿಂದರಿಂದಲೂ ನಿವ್ವಳ 3326ರೂಪಾಯಿ ಹೆಚ್ಚು ಖರ್ಚಿಗೆ ಕಾರಣವಾಯಿತು.
+ 1,215	g. ಶಿವಮೊಗ್ಗ ಜೈಲು ವಜಾಆದ್ದರಿಂದ, ಜೈಲು ಸೂಪರಿಂಟೆಂಡೆಂಟರ ಸಿಬ್ಬಂದಿ ಬಾಬಿನಲ್ಲೂ, ಜೈಲಿನ ಊಟದ ಖರ್ಚಿನ
+ 1,124	ಬಾಬಿನಲ್ಲೂ ಕಮ್ಮಿ ಆಯಿತು. ಜೈಲಿನ ಊಟದ ಖರ್ಚಿನ ಬಾಬಿನಲ್ಲೂ, ಜೈಲುಕಾರ್ಖಾನೆಗೆ ಕಚ್ಚಾಪದಾರ್ಥಗಳನ್ನು
+ 40,692(d)	ಕೊಂಡುಕೊಳ್ಳುವ ಬಾಬಿನಲ್ಲೂ ಕಡಿಮೆಯಾಯಿತು. ಇತರ ಬಾಬುಗಳಲ್ಲಿ 702ರೂಪಾಯಿವರಿಗೆ ಜಾಸ್ತಿಯಾಗಿ ನಿವ್ವಳ
+ 1,530	10,429ರೂಪಾಯಿ ಕಡಮೆಯಾಯಿತು.
— 1,360	h. ಟೌನ್ ಮತ್ತು ಗ್ರಾಮ.ಪೋಲೀಸ್ ಶಿಬ್ಬಂದಿಬಾಬಿನಲ್ಲಿ ಹಣ ಉಳಿದ್ದರಿಂದಲೂ ಕೋಲಾರ್ ಚಿನ್ನದಗಣಿಗಳ ಕಟ್ಟಡಗಳು
+ 42,744	ಹಿಂದಿನ ವರ್ಷದಲ್ಲಿಯೇ ಪೂರೈಸಲ್ಪಟ್ಟದ್ದರಿಂದಲೂ ಕಮ್ಮಿ,
— 15,007 (e)	i. ಮೆಲ್ವಿಚಾರಣೆ ಮತ್ತು ಪರೀಕ್ಷೆ ಬಾಬಿನಲ್ಲಿ ಸಿಬ್ಬಂದಿಗಳನ್ನು ಹೆಚ್ಚಿಸಿದ್ದರಿಂದಲೂ ವಿಲ್ಲೇಜ್ ಸ್ಕೂಲ್ ಫಂಡಿಗೆ ಶೇರುತ್ತಿದ್ದ
+ 3,326(f)	ನಾರ್ಮಲ್ ಸ್ಕೂಲ್‌ಗಳ ಖರ್ಚನ್ನು ಈ ಬಾಬಿಗೆ ಶೇರಿಸಿದ್ದರಿಂದಲೂ ಹೆಚ್ಚು ಖರ್ಚು.
— 10,429(g)	
— 35,425(h)	j. ಮುಜರಾಯಿ ಕಟ್ಟಡಗಳನ್ನು ರಿಪೇರಿಮಾಡುವದಕ್ಕೆ ತಗಲಿದ ಖರ್ಚು ಹೋದವರ್ಷಕ್ಕಿಂತ ಈವರ್ಷ ಕಡಿಮೆಯಾದ್ದ
+ 29,895(i)	ರಿಂದ ಕಮ್ಮಿ.
— 4,216 (j)	
+ 69,918(k)	k. ಲೋಕಲ್‌ಫಂಡ್ ಡಿಸ್ಪೆನ್ಸರಿಗಳ ಖರ್ಚಿನ ಬಾಬತು ಹಣವನ್ನು ಈ ಬಾಬಿಗೆ ವರ್ಗಾಯಿಸಿದ್ದರಿಂದಲೂ, ಯೂರೋಪಿಯ ಔಷಧಗ
+ 17,613(l)	ಳನ್ನು ಕೊಂಡುಕೊಂಡದ್ದನಲ್ಲಿ32,712ರೂಪಾಯಿ ಜಾಸ್ತಿಯಾದ್ದರಿಂದಲೂ ಹೆಚ್ಚಿಗೆ ಕಾರಣ. ಡಾಕ್ಟರ್ ಬರ್ನರ
— 19,284(m)	ವರು ಬ್ರಿಟಿಷ್ ಸರ್ವಿಸಿಗೆ ವರ್ಗಾಯಿಸಲ್ಪಟ್ಟದ್ದರಿಂದ, ಸೀನಿಯರ್ ಸರ್ಜರವರ ತಲಬಿನ ಪೈಕಿ ಸ್ವಲ್ಪ ಉಳಿಯಿತು,
+ 36,391	l. ಹೊಸಬಂಡಿ ಕುದುರೆಗಳಿಗಾಗಿಯೂ, ಅತಿಥಿಗಳ ಸತ್ಕಾರಕ್ಕಾಗಿಯೂ, ಗವರ್ನಮೆಂಟಿಗೆ ಬಂಗ್ಲೆಗಳನ್ನು ಭೂಮಿಗಳನ್ನು
+ 54,493(n)	ಕೊಂಡುಕೊಳ್ಳುವದಕ್ಕಾಗಿಯೂ ಮುಖ್ಯವಾಗಿ ಜಾಸ್ತಿ ಖರ್ಚಾಯಿತು.
+ 20,255(o)	
— 53,100	m. ಸೆನಸಸ್ ಬಾಬಿನಲ್ಲಿ ಕಮ್ಮಿ ಖರ್ಚಾದ್ದರಿಂದಲೂ ಜಿಯೊಲಾಜಿಕಲ್ ಲೈಬ್ರರಿ ಮತ್ತು ಲೆಬೊರೇಟರಿ ಬಾಬಿನಲ್ಲಿ ಯಾವ
—2,25,074(p)	ಖರ್ಚು ಇಲ್ಲದ್ದರಿಂದಲೂ ಕಮ್ಮಿ.
— 2,03,426	n. ಪೆನ್‌ಷನ್ ಬಾಕಿ ಪಾವತಿ ಸಬಬು ಮುಖ್ಯವಾಗಿ ಜಾಸ್ತಿ.
+ 4,710	o. ಅಚ್ಚುಹಾಕುವ ಮತ್ತು ಯೂರೋಪಿನ ಬರಿಯುವ ಸಾಮಾನುಗಳನ್ನು ಜಾಸ್ತಿಯಾಗಿ ಕೊಂಡುಕೊಂಡದ್ದರಿಂದಲೂ,
— 7,537	ಗೆಜೆಟ್ ಮತ್ತು ಅಚ್ಚುಕಾರ್ಖಾನೆಯ ಶಿಬ್ಬಂದಿಯನ್ನು ಸ್ವಲ್ಪ ಹೆಚ್ಚಿಸಿದ್ದರಿಂದ ಮುಖ್ಯವಾಗಿ ಹೆಚ್ಚು.
+ 13,50,037(q)	p. ರಾಜ್ಯಭಾರವಾಹನ, ಜಿಲ್ಲಾ ಕ್ಯಾಂಪ್ ವಗೈರೆ ಬಾಬುಗಳಲ್ಲಿ ಕಳೆದ ವರ್ಷ ಆದಂತೆ ಖರ್ಚಾಗದೆ ಇದ್ದದ್ದರಿಂದ ಕಮ್ಮಿ.
— 1,26,886 (r)	q. ಕೋಲಾರದ ಚಿನ್ನದ ಗಣಿಗಳಿಗೆ ನೀರಿನ ಸರಬರಾಯಿಗಾಗಿಯೂ ಬೇತಮಂಗಲ ಮತ್ತು ಹೆಸರಘಟ್ಟ ಕೆರೆಗಳ ರಿಪೇರಿಗಾಗಿ
+ 12,36,412	ಯೂ 9 ಲಕ್ಷ ರೂಪಾಯಿ, ಬಂಗಳೂರು ಮುನಿಸಿಪಾಲಿಟಿಯಿಂದ ಚಾವ.ರಾಜೇಂದ್ರ ನೀರಿನ ಸರಬರಾಯಿ ಕೆಲಸ
— 55,126(s)	ಗಳ ಸಂರಕ್ಷಣೆ ಬಗ್ಗೆ ಬರಬೇಕಾಗಿದ್ದ ಸುಮಾರು 3 ಲಕ್ಷ ರೂಪಾಯನ್ನು ಸಂಸ್ಥಾನದ ಖರ್ಚಿಗೆ ಶೇರಿಸಿದ್ದರಿಂ
+ 22,908(t)	ದಲೂ ಹೆಚ್ಚು ಖರ್ಚು.
+ 181 (u)	r. ಇಂಪೀರಿಯಲ್ ಟ್ರಾನ್ಸಪೋರ್ಟ್ ಕೋರಿನ ಕಟ್ಟಡಗಳಿಗೋಸ್ಕರ ತಗಲಿದ ಖರ್ಚನ್ನು ಪಬ್ಲಿಕ್ ವರ್ಕ್ಸ್‌ಗೆ ವರ್ಗಾಯಿ
+ 3,838	ಸಿದ್ದರಿಂದ ಕಮ್ಮಿ. ಇಂಪೀರಿಯಲ್ ಮತ್ತು ಲೋಕಲ್ ಸರ್ವಿಸ್ ರಿಜಿಮೆಂಟ್, ಕಾಣಿಗಲ್ ಫಾರಂ ಚಿಲ್ಲರೆ ಖರ್ಚು
— 28,199	ಈ ಬಾಬುಗಳಲ್ಲಿ ಹಣ ಉಳಿಯಿತು. ಬಾರ್, ಮಿಲಿಟರಿ ಸ್ಟೋರ್ಸ್, ಪಯೋಧಿಕಕ್ಕಾಗಿ ಅಲೋವೆನ್ಸುಗಳು, ಅರಮನೆ
— 54,333(v)	ಸೈನ್ಯ ಇವುಗಳಲ್ಲಿ ಹೆಚ್ಚು ಖರ್ಚಾಯಿತು.
+ 87,280	s. 1882ನೆಯ ಇಸವಿಯ ಮೈಸೂರು ರೇಲ್ವೆ ಸಾಲದಲ್ಲಿ ಪ್ರಾಯಃ ಎಲ್ಲಾ ಡಿಬೆಂಚರ್‌ಗಳನ್ನು ಪೂರ್ತಿಯಾಗಿ ಪಾವತಿಮಾಡಿದ್ದ
+ 32,947	t. ಡಿಪಾಜಿಟ್ ಹೆಚ್ಚಾದ್ದರಿಂದ ಜಾಸ್ತಿ. [ರಿಂದ ಕಮ್ಮಿ.
+ 2,41,548(w)	u. ಲೈಫ್‌ಇನ್‌ಷ್ಯೂರೆನ್ಸ್ ಹಣವು ಹೆಚ್ಚಾಗಿ ಆಬಾಬತು ಬಡ್ಡಿ ಜಾಸ್ತಿಯಾಯಿತು.
+ 4,125	v. ಬಡ್ಡಿಯನ್ನು ಹಿಂದಿನ ವರ್ಷದಲ್ಲಿ 11 ತಿಂಗಳಿಗೂ ಕಳೆದವರ್ಷ 10 ತಿಂಗಳಿಗೆಮಾತ್ರವೂ ಕೊಟ್ಟದ್ದರಿಂದ, ಕಮ್ಮಿ
+ 14,86,833	ಆಯಿತು w. ಎರಡನೆಯ ವೈದ್ಯತಶಕ್ತಿ ಸ್ಥಾಪನೆಗಾಗಿ ಖರ್ಚು.

ಆದಾಯಗಳ ವಿವರಗಳು.	ನಿಶ್ಚಿತ, 1902-03.	ಪ್ರಾಥಮಿಕ, 1903-04.
	ರೂ.	ರೂ.
ಜಮೀನು ಕಂದಾಯ	100,29,861	98,20,622
ಉಪ್ಪಿನ ಮೋಳ	21,722	21,041
ಸ್ಟಾಂಪ್	7,15,386	7,56,246
ಅಬ್ಕಾರಿ—(ಎ) ಸಾರಾಯಿ	18,15,984	18,8[illegible],481
(ಬಿ) ಜೂಜ	17,05,162	17,07,481
(ಸಿ) ವಿವಿಧ ವಿಷಯಗಳು	1,30,577	1,31,859
ಅಬ್ಕಾರಿಯ ಒಟ್ಟು.....	36,51,723	37,23,824
ಸಾಯರು	4,00,159	3,52,590
ಮೊಹತರ್ಫಾ	2,05,499	2,44,[illegible]
ಜಂಗಲು—(ಎ) ಗಂಧದ ಮರ	9,52,384	10,43,068
(ಬಿ) ನಾಟು ಮತ್ತು ಸೌದೆ	1,56,254	2,[illegible]9,094
(ಸಿ) ಇತರ ಜಂಗಲಿನ ಬಾಬುಗಳು	3,18,187	2,99,7[illegible]
(ಡಿ) ಬಿಡ್ಡ	27,651	1,958
ಜಂಗಲು ಒಟ್ಟು.....	15,11,476	15,93,723
ರಿಜಿಸ್ಟ್ರೇಷನ್	1,07,273	1,11,985
ಅವ್ಯಾತ ಮಹಾಲ್	46,527	38,924
ನ್ಯಾಯವಿಮರ್ಶೆ— ಕೋರ್ಟುಗಳು	56,159	50,724
ನ್ಯಾಯವಿಮರ್ಶೆ— ಬಂದಿಖಾನೆಗಳು	33,083	26,558
ನ್ಯಾಯ ವಿಮರ್ಶೆಯ ಒಟ್ಟು....	89412	766[illegible]7
ಪೊಲೀಸ	26,848	60,32[illegible]
ವಿದ್ಯಾಭ್ಯಾಸ	1,01040	1,03,200
ವೈದ್ಯ...	41,304	68,2[illegible]9
ಶಾಸ್ತ್ರೀಯ ಮತ್ತು ಇತರ ಸಣ್ಣ ಇಲಾಖೆಗಳು	9,864	13,875
ರಾಜ್ಯದ ಮೇಲ್ವಿಚಾರಣೆಯ ಖರ್ಚು—		
ಲೇಖನಸಾಧನಗಳು ಮತ್ತು ಅಚ್ಚುಹಾಕುವುದು	6,000	5,869
ಗವರ್ನಮೆಂಟ ಬಂಗಲೆಗಳ ವರಮಾನಗಳು	4,604	367
ಮರಕಸ್ಮತ್ತು ಇಲಾಖೆ	24,925	30,650
ಇತರಬಾಬುಗಳು	2,74,758	1,65,281
ಒಟ್ಟು.....	1,72,70811	1,71,68,1[illegible]8
ರಾಜ್ಯದ ಅರ್ಥಾಪ್ರಯೋಗ ಮತ್ತು ಬ್ಯಾಂಕಿನಲ್ಲಿಟ್ಟಿರುವ ಹಣಗಳು—		
(ಎ) ಗವರ್ನಮೆಂಟ ಪತ್ರಗಳ ಮೇಲಿನ ಬಡ್ಡಿ . .	1,90,332	1,51,43[illegible]
(ಬಿ) ಮದರಾಸ ಬ್ಯಾಂಕಿನಲ್ಲಿಟ್ಟಿರುವ ಹಣದಮೇಲಿನ ಬಡ್ಡಿ	...	40,102
(ಸಿ) ಇಂಡಿಯಾ ಗವರ್ನಮೆಂಟ ಪತ್ರ ವಿಕ್ರಯದಿಂದ ಬಂದ ಲಾಭ ..	491	..
ಸಾಲಗಳ ಮತ್ತು ಕಂದಾಯದ ಬಾಕಿಗಳ ಬಡ್ಡಿ	71,368	57,51[illegible]
ರಾಜ್ಯದ ಲೋಕಮಾರ್ಗ (ರೇಲ್ವೆ) ಗಳು—	2,62,191	2,49,[illegible]55
ಒಟ್ಟು.....	5,63,256	7,08,796
ರೆವಿನ್ಯೂ ಲೆಕ್ಕ	11,85,148	14,71,220
ಕಾವೇರಿ ಪ್ರಪಾತದ ವೈದ್ಯುತ ಶಕ್ತಿ ವಾಹೋಪಾಯ	14,93,786	18,20,049
ಚಿನ್ನದಗಣಿ—(ಎ) ನೂರಕ್ಕೆ ೧೫ ರಂತೆ ರಾಯಲ್ಟಿ	28,315	137[illegible]5
(ಬಿ) ಖನಿಜಶೋಧನೆಯ ಲೈಸೆನ್ಸುಗಳು ಮತ್ತು ಹೊಸಗುತ್ತಿಗೆ ಒಪ್ಪಂದಗಳತರಗ..		
ಚಿನ್ನದಗಣಿ ಒಟ್ಟು.....	15,32,099	18,33,804
ಒಟ್ಟು	35,42,694	42,62,875
ದೊಡ್ಡ ಒಟ್ಟು.....	208,13,505	214,31,063

ಸ್ಥಳೀಯ ಆದಾಯ.

132

1565

ನಂಬರು.	ಬಾಬುಗಳು.	ಆದಾಯ			ವ್ಯಯ.			ಷರಾ
		1902-03. ನಿಶ್ಚಿತ.	1903-04. ಪ್ರಾಥಮಿಕ.	ವ್ಯತ್ಯಾಸ.	1902-03. ನಿಶ್ಚಿತ.	1903-04. ಪ್ರಾಥಮಿಕ.	ವ್ಯತ್ಯಾಸ.	
I.	ಡಿಸ್ಟ್ರಿಕ್ಟ್ ಫಂಡ್ ..	6,62,798	6,84,857	+ 22,059	5,83,101	6,64,204	+ 81,103	
	ಶೇಷ ...	2,90,286	3,69,983	+ 79,697	3,69,983	3,90,636	+ 20,653	
	ಒಟ್ಟು	9,53,084	10,54,840	+1,01,756	9,53,084	10,54,840	+1,01,756	
II.	ಲೋಕಲ್‌ಫಂಡ್ ಜನರಲ್ ...	1,10,432	1,06,392	— 4,040	50,504	1,70,145	+1,19,641	
	ಶೇಷ .	2,44,000	3,03,928	+ 59,928	3,03,928	2,40,175	— 63,753	
	ಒಟ್ಟು ...	3,54,432	4,10.320	+ 55,888	3,54,432	4,10,320	— 55,888	
III.	ಗ್ರಾಮಪಾಠಶಾಲೆಗಳ ಫಂಡ್ ...	2,25,844	2,36,686	+ 10,842	2,67,471	2,41,328	— 26,143	
	ಶೇಷ ...	1,97,784	1,56,157	— 41,627	1,56,157	1,51,515	— 4,642	
	ಒಟ್ಟು ...	4,23,628	3,92,843	— 30,785	4,23,628	3,92,843	— 30,785	
IV.	ಮ್ಯೂನಿಸಿಫಲ್ ಫಂಡ್ ..	7,46,342	8,33,680	+ 87,338	7,52,251	7,60,645	+ 8,394	
	ಶೇಷ ...	3,31,054	3,25,145	— 5,909	3,25,145	3,98,180	+ 73,035	
	ಒಟ್ಟು.....	10,77,396	11,58,825	+ 81,429	10,77,396	11,58,825	+ 81,429	

ಪರಿಶಿಷ್ಟ.

1904-05ನೆಯ ವರ್ಷದ ಆದಾಯವ್ಯಯದ ಪಟ್ಟಿ (ಬಡ್ಜೆಟ್).

ಆದಾಯಗಳ ವಿವರ.	1902-03. ನಿಶ್ಚಿತ ಲೆಖ್ಖಗಳು	1903-04. ಪುನರ್ವಿಮರ್ಶೆ ಆದ ಅಂದಾಜು.	1904-05. ಬಡ್ಜೆಟ್ ಅಂದಾಜು
	ರೂ.	ಪ್ರಾಥಮಿಕ. ರೂ.	ರೂ.
ದಾಯದ ಮುಖ್ಯಬಾಬುಗಳು —			
1. ಜಮೀನ್ ಕಂದಾಯ	100,29,861	99,25,000	99,06,000
2. ಗಿಡಗಳ ಕಾಯಿಯ ಮತ್ತು ಗುತ್ತಿಗೆಗಳು.	18,32,099	18,00,000	17,00,000
3. ಜಂಗಲುಗಳು	15,14,476	14,88,000	16,58,000
4. ಅಬ್ಕಾರಿ	36,51,723	37,25,000	36,77,000
5. ತೆರಿಗೆಗಳು	2,05,499	2,15,000	2,15,000
6. ಸಾಯರು ತೆರಿಗೆ	4,00,159	4,00,000	3,65,000
7. ಉಪ್ಪಿನ ಮೋಳೆ	21,722	19,000	19,000
8. ಸ್ಟಾಂಪು	7,15,386	7,29,000	7,50,000
9. ರಿಜಿಸ್ಟ್ರೇಷನ್	1,07,273	1,13,000	1,12,000
ಬಡ್ಡಿ —			
10. ಬಡ್ಡಿ	71,368	75,000	1,15,000
11. ಲಾಭಅಥವಾ ನಷ್ಟ	1,90,823	1,93,000	2,96,000
12. ಟಂಕಸಾಲೆ	...	...	..
ಸಿವಿಲ್ ಇಲಾಖೆ ವರಮಾನ—			
13. ಮೇಲ್ವಿಚಾರಣೆಗೆ ಸಂಬಂಧಿ	10,004	6,000	6,000
14. ನ್ಯಾಯ { ಕೋರ್ಟು	56,359	54,000	54,000
ವಿಮರ್ಶೆ { ಜೈಲುಗಳು	33,083	22,000	51,000
15. ಪೊಲೀಸು	26,848	59,000	15,000
16. ವಿದ್ಯಾಭ್ಯಾಸ	1,61,040	1,05,000	1,23,000
17. ವೈದ್ಯ	41,304	1,00,000	1,08,000
18. ಚಿಕಿತ್ಸಾಲಯ ಮತ್ತು ಇತರ ಸಣ್ಣ ಇಲಾಖೆಗಳು	56,391	51,000	43,000
ವಿವಿಧವಾದವು —			
19. ಪಯೋಧಿಕಕ್ಕಾಗಿ ಕೊಡುವ ಪೆನ್ಷನ್ಗಾಗಿ ಬಂದದ್ದು...	2,783	3,000	3,000
20. ವಿವಿಧ ವಾಪಸುಗಳು.	2,50,126	1,43,000	1,26,000
21. ಸೈನ್ಯ	21,849	49,000	37,000
22. ಕಾವೇರಿ ಪ್ರಪಾತದ ವೈದ್ಯುತ ಶಕ್ತಿ ಮಾರೋಪಾಯ.	11,85,148	14,60,000	16,00,000
23. ಸರ್ಕಾರಿ ಲೋಕಪಯೋಗಗಳು. ಹುಟ್ಟುವಳಿಯ ಲೆಕ್ಕ	5,63,256	6,21,000	5,01,000
24. ಮರಹಮ್ಮತ್ತು	24,925	25,000	25,000
ಒಟ್ಟು ಆದಾಯಗಳು	2,08,13,005	2,13,80,000	2,14,60,000

ವ್ಯಯಗಳ ವಿವರ.	1902-03. ನಿಶ್ಚಿತ ಲೆಖ್ಖಗಳು.	1903-04. ಪುನರ್ವಿಮರ್ಶೆ ಆದ ಅಂದಾಜು	1904-05. ಬಡ್ಜೆಟ್ ಅಂದಾಜು.
	ರೂ.	ರೂ	ರೂ.
ಆದಾಯಕ್ಕಾಗಿಯೇ ಆಗುವ ವ್ಯಯಗಳು—			
1. ವಾಪಸು ಜಮಾ	89,643	2,35,000	2,40,000
ವಸೂಲಿ ಖರ್ಚು—			
2. ಜಮೀನ್ ಕಂದಾಯ	18,69,488	17,03,000	18,33,000
3. ಜಂಗಲುಗಳು	4,81,210	4,88,000	6,09,000
4. ಅಬ್ಕಾರಿ	3,26,476	3,22,000	3,35,000
5. ತೆರಿಗೆಗಳು	...	...	...
6. ಸಾಯರು	14,413	13,000	15,000
7. ಉಪ್ಪಿನ ಮೋಳೆ	...	...	...
8. ಸ್ಟಾಂಪು	27,400	27,000	28,000
9. ರಿಜಿಸ್ಟ್ರೇಷನ್	79,897	83,000	86,000
ಬಡ್ಡಿ —			
10. ಸಾಮಾನ್ಯ ಸಾಲದ ಬಡ್ಡಿ	56,801	2,000	10,000
11. ಇತರ ಬಡ್ಡಿ	2,57,838	2,57,000	2,70,000
12. ಲಾಭ ಅಥವಾ ನಷ್ಟ	57,303	5,000	6,000
13. ಟಂಕಸಾಲೆ	..	...	...
ಸಿವಿಲ್ ಇಲಾಖೆಗಳ ಸಂಬಳಗಳು—			
14. ಮೇಲ್ವಿಚಾರಣೆಸಂಬಂಧಿ.	7,40,934	7,60,000	7,84,000
15. ಆರಮನೆಖರ್ಚು—	14,00,000	16,00,000	16,00,000
16. ನ್ಯಾಯ { ಕೋರ್ಟು	9,06,658	9,09,000	9,58,000
ವಿಮರ್ಶೆ { ಜೈಲುಗಳು.	1,08,661	96,000	1,18,000
17. ಪೊಲೀಸು	10,13,477	9,74,000	10,31,000
18. ವಿದ್ಯಾಭ್ಯಾಸ	7,09,588	7,42,000	8,06,000
19. ಘುಜರಾಯಿ	3,27,702	3,29,000	3,28,000
20. ವೈದ್ಯ	4,97,137	5,86,000	6,35,000
21. ಚಿಕಿತ್ಸಾಲಯ, ಇತರ ಸಣ್ಣ ಇಲಾಖೆಗಳು.	3,06,650	2,92,000	2,83,000
ವಿವಿಧವಾದ ಸಿವಿಲ್ ಖರ್ಚು.			
22. ಖರಾರುಗಳ ಪ್ರಕಾರ ಕೊಡತಕ್ಕ ಡಿ. ವಗೈರೆ	38,26,828	38,25,000	39,29,000
23. ಪಯೋಧಿಕಕ್ಕಾಗಿ ಅಲೋವನ್ಸುಗಳು ಮತ್ತು ಪೆನ್ಷನ್ಗಳು.	3,69,967	4,15,000	3,72,000
24. ವಿವಿಧವಾದ ಖರ್ಚುಗಳು	13,23,885	8,69,000	7,60,000
25. ಸೈನ್ಯ	14,18,729	13,10,000	13,93,000
26. ಕ್ಷಾಮ ಸಂಹಾರ	...	1,000	1,000
27. ಕಾವೇರಿ ಪ್ರಪಾತದ ವೈದ್ಯುತಶಕ್ತಿ ಮಾರೋಪಾಯ.	8,08,266	11,80,000	11,90,000
28. ಸರ್ಕಾರಿ ಲೋಕಪಯೋಗಗಳು	6,87,413	7,95,000	8,33,000
29. ಮರಹಮ್ಮತ್ತು	26,73,182	38,00,000	35,22,000
ಒಟ್ಟು ವ್ಯಯ	2,01,09,020	2,16,17,000	2,19,75,000

1567

134

ಮೈಸೂರ ಗೆಜಿಟ್.

ನಂ. 39.] ಸರ್ಕಾರದಿಂದ ಘೋಷಿತ ಆಜ್ಞೆ. [ನಂ. 42.

ಬೆಂಗಳೂರು, ಗುರುವಾರ, ಅಕ್ಟೋಬರ್ ತಾ॥ 27, ಸನ 1904.

IIನ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಚೀಫ ಜಡ್ಜ್‌ರು ವಗೈರೆರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ಸಂದಲ್ ಹರಾಜು ನೋಟಿಫಿಕೇಷನ್.

ತಾರೀಖು 18ನೆ ಆಗಸ್ಟ್ 1904ನೆ ಇಸವಿ.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲೆಯಾನ ನಡಿಯುತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋರಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು :—

ಡಿಸ್ಟ್ರಿಕ್ಟ್.	ಕೋರಿ.	ಹರಾಜು ತಾರೀಖು.		ಸೊತ್ತಿನ ಟನ್‌ಗಳು ಸಂದಲ್ ಕಡ್ಡಿ ಸಂಖ್ಯೆ.	ಷರಾ.
ಮೈಸೂರು ...	ಹುಣಸೂರು ...	1904ನೆ ಇಸವಿ ನವಂಬರ್ ತಾರೀಖು	19	500	
ಡಿಟೋ	ಶ್ರೀರಂಗಪಟ್ಟಣ	ಡಿಟೋ ಡಿಟೋ	23	240	
ಬೆಂಗಳೂರು ...	ಬೆಂಗಳೂರು ..	ಡಿಟೋ ಡಿಟೋ	26	120	ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟ್ ಸಂದಲ್ ಶೇರಿರುತ್ತೆ.
ಹಾಸನ ...	ಹಾಸನ ..	1904ನೆ ಇಸವಿ ಡಿಸೆಂಬರ್ ತಾರೀಖು	1	200	
ಕಡೂರು ..	ಚಿಕ್ಕಮಗಳೂರು ..	ಡಿಟೋ ಡಿಟೋ	5	200	
ಡಿಟೋ ..	ತರೀಕೆರೆ ..	ಡಿಟೋ ಡಿಟೊ	8	250	
ಶಿವಮೊಗ್ಗ ...	ಶಿವಮೊಗ್ಗ ...	ಡಿಟೋ ಡಿಟೋ	12	440	ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಸಂದಲ್ ಶೇರಿರುತ್ತೆ.
ಡಿಟೋ ..	ಸಾಗರ ..	ಡಿಟೋ ಡಿಟೋ	15	175	
ಡಿಟೋ ..	ತೀರ್ಥಹಳ್ಳಿ ..	ಡಿಟೋ ಡಿಟೋ	19	175	ಕಡೂರು ಡಿಸ್ಟ್ರಿಕ್ಟ್ ಸಂದಲ್ ಶೇರಿರುತ್ತೆ.

2. ಪ್ರತಿಒಂದು ಕೋರಿಯಲ್ಲಿಯು ಹರಾಜು ಮಾಡಲ್ಪಡುವ ಸಂದಲ್ ಲಾಟು ಮತ್ತು ಮೊತ್ತ ವಗೈರೆ ತಪಶೀಲು ಐಯಿಂದ ಇದೇ ಸಾಲ ಅಕ್ಟೋಬರು ಆಖೈರು ವಳಗಾಗಿ ಘೋಷಿಸು ಮಾಡಲ್ಪಡುತ್ತದೆ.

ಎಂ. ಮುತ್ತಣ್ಣ,
ಕನಸರ್ವೇಟರ್ ಆಫ್ ಫಾರೆಸ್ಟ್ಸ್ ಇನ್ ಮೈಸೂರು.

ನೋಟಿಫಿಕೇಷನ್.

ತಾರೀಖು 13ನೆ ಅಕ್ಟೋಬರ್ 1904.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :— ಈ ಕೆಳಗೆ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟ್ ಮತ್ತು ಸ್ಟೇಟ್ ಫಾರೆಸ್ಟ್ ಗಳಲ್ಲಿಯೂ ಆಕಾರ ಕಂಡ ಬಂಜರು ಜಮೀನುಗಳಲ್ಲಿಯೂ ಗ್ರಾಮ ಬೇಲಿಗಳ ಅವರಾಯಿ ಮತ್ತು ಅವರಾಯಿ ಬೇಲಿಗಳಲ್ಲಿಯೂ, ಅವೃತವಾಹಲ್ ಕಾವಲ್‌ಗಳಲ್ಲಿಯೂ ದೊರಿಯುವ ಕೆಳಗೆ ವಿವರಿಸುವ ಪಸಾರೆ ಜಿನಸುಗಳನ್ನು 1904—05ನೆ ಸಾಲಿಗೆ ಜಮಾಯಿಸುವ ಹಕ್ಕನ್ನು ಬಹಿರಂಗವಾಗಿ ಕೆಳಗಿನ ತಪಸೀಲ್ ಪಟ್ಟಿಯಲ್ಲಿ ಕಾಣುವ ಆಫಿಸರರಿಂದ ಹರಾಜು ಹಾಕಲ್ಪಡುತ್ತೆ :—

ತಾಲ್ಲೂಕಿನ ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡುವ ಆಫಿಸರರ ಹೆಸರು.
ಮೂಡಿಗೆರೆ	9—11—1904	ಅಯಾಯಾ ತಾಲ್ಲೂಕು ಕಛೇರಿಯಲ್ಲಿ	ಅಯಾಯಾ ತಾಲ್ಲೂಕು ಶಿರಸ್ತೆದಾರರು ಮತ್ತು ಫಾರೆಸ್ಟ್ ಆಫಿಸರರಿಂದ.
ಚಿಕ್ಕಮಗಳೂರು	10—11—1904		
ಕಡೂರು	11—11—1904		
ತರೀಕೆರೆ	12—11—1904		
ಆಡೇಹಳ್ಳಿ ಸಬ್ ತಾಲ್ಲೂಕು	14—11—1904		
ಕೊಪ್ಪ	15—11—1904		

ಪಸಾರೆ ಜಿನಸಿಗಳ ತಪಶೀಲ್.

1. ತಾರೇಕಾಯಿ, 2. ಶೀಗೆಕಾಯಿ, 3. ಅಂಟುವಾಳದಕಾಯಿ, 4. ದಿಂಡಗ ಗೋಂದು, 5. ಕಾಡು ಅರಿಸಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಬಾರಂಗು, 9. ಪತಂಗ, 10. ಮಡ್ಡಿ, 11. ಚಿಲ್ಲದ ಬೀಜ. 12. ಚಗಚೆ ಬೀಜ, 13. ಹೊಂಗೇ ಬೀಜ, 14. ಗೇರು ಬೀಜ, 15. ಹಾಲುಮಡ್ಡಿ, 16. ಸಾರಗದ ಕೊಂಬು, 17. ಗುಗ್ಗಳ, 18. ಬ್ಯಾಲದ ಹಣ್ಣು, 19. ಸೀತಾಫಲದ ಹಣ್ಣು, 20. ಅಳಲೇಕಾಯಿ, 21. ಹುಣಸೇಹಣ್ಣು, 22 ಸಿರ ಈಚಲು, 23. ಗೇರು, 24. ಕಲ್ಲುಹುವ್ವು, 25. ಕಲ್ಲುನಾರು, 26. ಕಾಡು ಯಾಲಕ್ಕಿ.

2. ಚಡೆ ದರಖಾಸ್ತುದಾರನು ಹರಾಜು ಮಂಜೂರಾದ ಕೂಡ್ಲೆ ಸೇಕಡಾ 25ರಂತೆ ಆಗುವ ಮೊಬಲಗನ್ನು ಶೇವಣಿ ಕಟ್ಟತಕ್ಕದ್ದು. ಅಲ್ಲದೆ ಕಂಟ್ರಾಕ್ಟ್ ಷರತ್ತು ಮೇರೆ ನಡಿಯಲು ತಕ್ಕ ಖಾತರಿ ಜಾಮೀನು ಸಹ ಕೊಡಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಕೂಡ್ಲೆ ಜಾಬು 2ನೆ ದಫಾ ಹರಾಜು ಮಾಡಲ್ಪಟ್ಟು ಉಂಟಾಗುವ ನಷ್ಟಕ್ಕೆ ಅವನನ್ನೆ ಗುರಿಪಡಿಸುತ್ತೆ. ಮತ್ತು ಸದರಿ ಲುಕ್ಸಾನ್ ರೆವಿನ್ಯೂ ಡಿವ್ಯಾಂಡನಂತೆ ವಸೂಲ್ ಮಾಡಿಕೊಳ್ಳಲ್ಪಡುತ್ತೆ.

3. ದರಖಾಸ್ತುದಾರನಿಗೆ ಹರಾಜು ಮಂಜೂರಾದ ಸಂಗತಿಯನ್ನು ತಿಳಿಸಿದ ಒಂದು ತಿಂಗಳ ವಳಗಾಗಿ ಬಾಕಿ ಮೊಬಲಗನ್ನೆಲ್ಲಾ ಪಾವತಿ ಮಾಡಬೇಕು. ತಪ್ಪಿದರೆ ಮೊದಲು ಕೊಟ್ಟ $\frac{1}{4}$ ಹಿಸ್ಸೆ ಹಣವನ್ನು ಸರ್ಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳುವದಲ್ಲದೆ ಬಾಕಿ ಆಗುವ ಹಣವನ್ನು ರೆವಿನ್ಯೂ ಕಂದಾಯದ ಬಾಕಿಯಂತೆ ವಸೂಲ್ ಮಾಡಲ್ಪಡುತ್ತೆ.

4. ಹರಾಜು ಮೊಬಲಗ್ಗೆ ರೂಪಾಯಿ 1ಕ್ಕೆ ಒಂದಾಣೆ ಲೋಕಲ್ ಸೆಸ್ಸು ಕೊಡತಕ್ಕದ್ದು.

5. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅವರಾಯಿಗಳಲ್ಲಿ ದೊರಿಯುವ ಫಸಲನ್ನು ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಂದಾರ ಸ್ಥಿರಪಟ್ಟ ಹಕ್ಕುದಾರೀ ವಿಷಯದಲ್ಲಿ ಇಜಾರೆದಾರನು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅವರಾಯಿ ಫಲದ ಉತ್ಪತ್ತಿ ಮೇಲ್ಕಂಡ ಹರಾಜಿಗೆ ಸೇರಿರುವದಿಲ್ಲ.

8. ಹರಾಜು ಕಡೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

ಎಂ. ಜಿ ರಾಮರಾವ್,
ಫಾರೆ ಡೆಪ್ಯೂಟಿ ಕಮಿಷನರ್ ಕಡೂರು ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟ್.

ತಾರೀಖು 22ನೆ ಸೆಪ್ಟಂಬರ್ 1904ನ ಇಸವಿ.

ಕೋಲಾರ ತಾಲ್ಲೂಕಿಗೆ ಶೇರಿದ * ಮಾರ್ಜಾನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು ಸರ್ಕಾರಕ್ಕೆ ಬರಬೇಕಾದ ಬಾಕೀ ಮೊಬಲಗಿಗೋಸ್ಕರವಾಗಿ ತಾಲ್ಲೂಕು ಅಮಲ್‌ದಾರ್ ಕಛೇರಿಯಲ್ಲಿ 1904ನ ಇಸವಿ ನವಂಬರ್ ಮಾಹೆ 10ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

*1. ಬಾಯಿಮಂಗುತ್ತಾ ಜೊಕ್ಕಹಳ್ಳಿ	ವಕ್ಕಲೇರಿ ಹೋಬಳಿ.
2. ಜೋಡಿ ತಲಗುಂದ	
3. ಬಾಯಿಮಂಗುತ್ತಾ ಪಾರೇ ಹೊಸಹಳ್ಳಿ	ಹುತ್ತೂರು ಹೋಬಳಿ.

(ಹೆಚ್ಚು ತಪಶೀಲ್ ಬಗ್ಗೆ 1904ನೆ ಮಾರ್ಚ್ತಿಂ 40ನೆ ನಂಬರ್ ಮೈಸೂರ ಗೆಜೆಟ್ 2ನೆ ಭಾಗದ 575, 576, 574ನೆ ನಂಬರ ಪೇಜ ನೋಡತಕ್ಕದ್ದು.)

ನೋಟಿಸ.

ತಾರೀಖು 4ನೆ ಮಾಹ ನವಂಬರ್ 1904ನೆ ಇಸವಿ.

ಗವರ್ನಮೆಂಟ್ 1903ನೆ ಇಸವಿ ನವಂಬರ್ 13ನೆ ಮಾರ್ಚ್ತಿಂ 1256—65ನೆ ನಂಬರ್ ಪ್ರೊಸಿಡಿಂಗ್ಸ್ ಪ್ರಕಾರ ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಆಫೀಸುಗಳಲ್ಲಿ ವಿಲೆ ಇಟ್ಟಿರುವ ನಿಷ್ಪ್ರಯೋಜನವಾದ ಮತ್ತು ಅಮುಖ್ಯವಾದ ರೆವಿನ್ಯೂ ರಿಕಾರ್ಡುಗಳನ್ನು ನಾಶಪಡಿಸಲ್ಪಡುತ್ತೆ. ಯಾರಾದರು ದಸ್ತೈವಜುಗಳು ವಗೈರೆ ರಿಕಾರ್ಡುಗಳು ದಾಖಲೆ ಬಗ್ಗೆ ಹಾಜರ್ಮಾಡಿದ್ದರೆ ಅಂಥವುಗಳನ್ನು 1904ನೆ ಇಸವಿ ಡಿಸೆಂಬರ್ 31ನೆ ತಾರೀಖಿನ ವಳಗಾಗಿ ಸಂಬಂಧಪಟ್ಟ ಆಫಿಸರಿಗೆ ಅಪ್ಲಿಕೇಷನ್ ಮಾಡಿ ಡಿಟೋ ದಸ್ತೈವಜುಗಳನ್ನು ವಾಪಸು ಪಡಿಯಬಹುದು. ಅಲ್ಲದೆ ಮೇಲ್ಕಂಡ ರಿಕಾರ್ಡಿನ ಕಾಪಿ ಬೇಕಾಗಿದ್ದರೂ ಡಿಟೋ ತಾರೀಖಿನ ಒಳಗಾಗಿ ಖಾಯಿಷ್ ಮಾಡಿ ಪಡಿಯಬಹುದು.

ಕೆ. ಪಿ. ಪುಟ್ಟಣ್ಣ ಚೆಟ್ಟಿ, ಡೆಪ್ಯೂಟಿ ಕಮಿಷನರ್.

136

1569

ಮೈಸೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ಪ್ರಸಿದ್ಧಪತ್ರಿಕೆ.

ತಾರೀಖು 13ನೆ ಅಕ್ಟೋಬರ 1904.

1. ಕಂದಾಯದ ಬಾಕೀದಾರರಾದ ಕಲಿಯೂರು ಗ್ರಾಮದ ವೃತ್ತಿವಂತರುಗಳಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟ್ ಟಿ ನರಸೀಪುರ ತಾಲ್ಲೂಕು ಕಲಿಯೂರು ಗ್ರಾಮದಲ್ಲಿ ಸಂ 1904ನೆ ಇಸವಿ ನವಂಬರ್ 14ನ ತಾರೀಖಿನಲ್ಲಿ ಒಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ. ಈ ಹರಾಜು ನಂಜನಗೂಡು ಡಿ|| ಸೀನಿಯರ್ ಅ|| ಕಲೆಕ್ಟರವರಿಂದ ನಡಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—1904ನೆ ಸಾಲ್ ವರಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ ರೂಪಾಯಿ 160—2—3 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜು ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕಿ ಮೊಬಲಗು ಹರಾಜು ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುಖ್ತಾರೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕಂತಲೂ, ಇತರರಿಗೋಸ್ಕರ ಮುಖ್ತಾರೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವನು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವನು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬುದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯೂಟಿ ಕಮೀಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟಿರುವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಕಟ್ಟಡಗಳು. ಕಟ್ಟಡದ ಹೆಸರು.	ಕಂದಾಯದ ಕಟ್ಟಳೆ.	ಜಮೀನು. ನಂಬರ್ ಅಥವಾ ಜಿಮೀನಿನ ಹೆಸರು.	ಖಾಸ್ಗಿ ಸರ್ವೆ ಅಥವಾ ಬಾಗಾಯತಿ.	ವಿಸ್ತೀರ್ಣ.	ಆಕಾರ.	ಸದರಿ ಸ್ವತ್ತಿನ ತಪ್ಶೀಲ್. ಸದರಿ ಬರಬೇಕಾದ ಕಂದಾಯ ಮತ್ತು ಇತರ ಖರ್ಚುಗಳ ಮೊಬಲಗು.
								ಎ. ಗು.	ರೂ. ಆ. ಪೈ.	
ನರಸೀಪುರ	ತಲ್ಲೂರು	ಕಲಿಯೂರು	ಜೋಡಿ ಸಾಮಯ್ಯನವರು ಮತ್ತು ಸಾಮಯ್ಯನವರ ಮಗ ಚಿಕ್ಕಯ್ಯ ಇವರು ಸಂ 53	ಸೇದಾಂತ್ರ	ರೂ. ಆ. ಪೈ.	ಗ್ರಾಮವನ್ನೆ ಜಪ್ತಿ ಮಾಡಿ ಇದೆ. ಒಟ್ಟು ವಿಸ್ತೀರ್ಣ		1843 34		
							ಸಾಬಕ ಬೇರೀಜಾ		545 14 9	

ಜೋಡಿ ಕಲಿಯೂರು ಗ್ರಾಮ.

	ರೂ.	ಆ.	ಪೈ.
ಬರೋ ಬಡ್ಡಿ	802	13	3
ಮಸೂಲ್	644	3	0
ಜಾತಾ ಬಾಕಿ	158	10	3
ಐ ಜೋಡಿ	158	10	3
ನೋಟಿಸ್ ಫೀ ವಗೈರೆ	1	8	0
	160	2	3

ಬಡ್ಡಿ ಸಹ

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡಿ ಬೂದಹಳ್ಳಿ ಗ್ರಾಮದ ಜೋಡಿದಾರ ಶ್ರೀನಿವಾಸರಾಘವಾಚಾರ್ಯರಿಂದ ಬರಬೇಕಾದ ಜಮೀನ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟ್ ತಿ॥ ನರಸಿಪುರದ ತಾಲ್ಲೂಕು ಜೋಡಿ ಬೂದಹಳ್ಳಿ ಗ್ರಾಮದಲ್ಲಿ 1904ನ ನವಂಬರು 15ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜಾಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ಆ ದಿವಸ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ. ಹರಾಜು ನಂಜನಗೂಡು ಡಿ॥ ಸೀನಿಯರ್ ಅ॥ ಕಾ॥ ಸಾಹೇಬರವರಿಂದ ನಡಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—1904ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 271—14—0 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಹಾಗೂ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ ಮಾಡುತ್ತಾರೆಯೆ ಯಾ ಪಿದಂಟು ಯಾ ಮುಖ್ತಾರೀಕರಾಗಿ ಸವಾಲ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುಖ್ತಾರೀಕರಾಗಿ ಸವಾಲ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗೆದರೂ ನಿಲ್ಲಿಸಲ್ಪಡುವದಕ್ಕೆ ಮುಂಚೆತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಋಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಸರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟು ಕೂಡಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರಿ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈನ್ ಮೊಹರ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಕಾಲಿತ್ಯಗಳಿಗೆ ಗವರ್ನಮೆಂಟನವರು ಜವಾಬ್ದಾರರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟಿರುವಾಯಿದೆಯಲ್ಲಿ ಗವರ್ನಮೆಂಟನವರಿಗೆ ಅಪ್ಪೀಲ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು. ಹೋಬಳಿ. ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಿನ ಕಿಮ್ಮತ್ತು.	ಜಮೀನು. ನಂಬರ ಅಥವಾ ಸರ್ವೆನಂಬರ ಹೆಸರು.	ಮುಮ್ಮೆಳೆ ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.	ಸರಾಜಿನಲ್ಲಿ ಬರಬೇಕಾದ ನೆಲೇ ಬಟ್ಟೆ ಸೇಲ ಸಗ್ಗುರಿ ಸಹಿತವಾದ ಬಾಕಿ ಮೊಬಲಗು.
			ರೂ. ಆ. ಪೈ.			ಎ. ಗು.	ರೂ. ಆ. ಪೈ.	ರೂ. ಆ. ಪೈ.
ತಿ॥ ನರಸೀಪುರ ನೋಗಲೆ	ಜೋಡಿ ಬೂದಹಳ್ಳಿ ಜೋಡಿದಾರ ಶ್ರೀನಿವಾಸರಾಘವಾಚಾರಿ	...	...	ಗ್ರಾಮದಾಗಿನ	...	836 10	626 1 0	270 6 0 ಜೋಡಿ 1 8 0 ಖರ್ಚು 271 14 0 ಹರಾಜು ತಾರೀಖಿನ ವರೆಗೆ ಆಗುವ ಬಡ್ಡಿ.

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

138

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ತಲ್ಕಾಡು ಗ್ರಾಮದ ಇನಾಂದಾರ್ ಕೋಟಿಕನ್ಯಾದಾನಂ ನರಸಿಹ್ಮಾಚಾರ್ಯ, ಕಲ್ಯಾಣಮ್ಮ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟ್ ಟಿ. ನರಸೀಪುರ ತಾಲ್ಲೂಕು ಸ|| ಮಡವಾಡಿ ಗ್ರಾಮದಲ್ಲಿ 1904ನೆ ನವಂಬರ 16ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚೆಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ. ಈ ಹರಾಜು ನಂಜನಗೂಡು ಡಿವೀಜನ್ ಸೀನಿಯರ್ ಅಸಿಸ್ಟೆಂಟ್ ಕಮೀಷನರವರಿಂದ ನಡಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 538—7—2 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕೀಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರನು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮೀಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕರ್ನೂನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕಿಮ್ಮತ್ತು.	ಜಮೀನು. ನೆಂಬರ್ ಅಥವಾ ಜಿಮೀನಿನ ಹೆಸರು.	ಮುಸ್ತೆ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
					ರೂ. ಆ. ಪೈ.		ಗ್ರಾಮವನ್ನೆ ಜಪ್ತಿ ಮಾಡಿ ಇಧೆ.	ಎ. ಗು.	ರೂ. ಆ. ಪೈ.	ರೂ. ಆ. ಪೈ.
ಟಿ. ನರಸೀಪುರ.	ತಲ್ಕಾಡು.	ಸ|| ಮಡವಾಡಿ.	ಕೋಟಿ ಕನ್ಯಾದಾನಂ ನರಸಿಹ್ಮಾಚಾರಿ, ಕಲ್ಯಾಣಿಮ್ಮನವರು ವಗೈರೆ.	...	...	...	ಖುಷ್ಕಿ	608 17	ಸಾಬಕಬೇರೀಜ್ 336 5 10	536 15 2 ಇಂ 1 8 0 ನೋಟಿಸ್ ವಗೈರೆ
							ತರಿ ..	226 34		
							ಬಾಗಾಯತು.	4 33		
							ಖರಾಬ್ ..	561 28		538 7 2
								1401 32		ಬಡ್ಡಿ ಸಹಾ

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಸರ್ವಮಾನ್ಯ ಹಳಿಯೂರು ಗ್ರಾಮದ ಇನಾಂದಾರ್ರು ನಾರಾಯಣ ಜೋಯಿಸರು ಗ್ರಾಮಣಿ ಕೊವಾರ ತಿರನಾರಾಯ್ಯಂಗಾರ್ರು ವಗೈರೆ 18 ಜನರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಮೈಸೂರು ಡಿಸ್ಟ್ರಿಕ್ಟ್ ಯಡತೊರೆ ತಾಲ್ಲೂಕು ಸರ್ವಮಾನ್ಯ ಹಳಿಯೂರು ಗ್ರಾಮದಲ್ಲಿ 1904ನೆ ಇಸವಿ ನವಂಬರ್ 16ನೆ ತಾರೀಖಿನಲ್ಲಿ ಒಬಿರಂಗೆಮಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ಗ್ರಾಮದಲ್ಲಿ ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1904ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಅದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಫ್ಸೀಲ್ ಮೇರಿಗೆ ರೂಪಾಯಿ (54—0—6) ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜುದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಇದು ಮಾತ್ರ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಲ್ಲಿ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೋ ಯಾ ಪಿಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೋ ಎಂಬ ಅಂಶವನ್ನು ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ಅವ್ಮ ಯಾಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನು ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಅತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಋಣವನ್ನು ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ್ ಅವನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಖಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬದಾರ್ರಲ್ಲವೆಂಬ ಅಂಶವನ್ನು ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯೂಟಿ ಕಮಿಷನರವರು ಅಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪೀಲಿನಲ್ಲಿ ಆಗುವ ಫೈಸಲೆ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ಮಾಲ್ಗುಡಿ ಹೋಬಳಿ. ಗ್ರಾಮದ.	ಬಾಕೀದಾರರ ಹೆಸರು.	ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜು ಕಿಮತ್ತು.	ಜಮೀನು. ಸರ್ವೆ ನಂಬರ್ ಅಥವಾ ಹಿಸ್ಸಾ ನಂಬರ್ ಅಥವಾ ಬಾಗಾಯತು ಯಾತ್ರೆ.	ಜಮೀನು. ಎಕರೆ.	ಜಮೀನು. ಗುಂಟೆ.	ಜಮೀನು. ಆಕಾರ.	ಸದರಿ ರಕ್ಕ ಬರಬೇಕಾದ ನೆಲೇ ಬಿಟ್ಟ ಹೆಗ್ಗಳೆ ಸಹಿತವಾದ ಬಾಕೀ ಮೊಬಲಗು.			
			ರೂ. ಆ. ಪೈ.		ಎ.	ಗು.	ರೂ.	ಆ.	ಪೈ.	ರೂ.	ಆ. ಪೈ.
ಯಡತೊರೆ	ಚಕ್ಕಂಚಕನಕಟ್ಟೆ ಸರ್ವಮಾನ್ಯ ಹಳಿಯೂರು ಇನಾಂದಾರರು ನಾರಾಯಣ ಜೋಯಿಸರು ಗ್ರಾಮಣಿ ತಿರನಾರಾಯ್ಯಂಗಾರ ರು ಗೈರ್ ಹಾಜರಿ 18 ಜನ.	..	..	ಸರ್ವೆ ನಂಬರ್ ಗಳು.	ಬಾಗಾಯತು	4411	201	0	0	53	0 0 ಬಾಕಿ
					ಖುಷ್ಕಿ	1459 6	1111	0	0	0	8 0 ಪೋಟಸ್ ಫೀ
					ತರಿ	189 20	1267	12	0	0	8 0 ಹರಾಜು ಫೀ
					ಖರಾಬು	487 17	...	...	...		
					ಜುಮ್ಲಾ ...	2180 14	2579	12	0	54	0 6

		216	ಹಂದನಕೆರೆ
		217	ಹನುಮಾಳು
		218	ಕಲ್ಲೇಹೊಸಹಳ್ಳಿ
		219	ಹೆಬ್ಬಳ್ಳಿ
		220	ಕುಂಬಾರಗಟ್ಟೆ
		221	ಹರೂರು
		222	ಆಯ್ನಾಪುರ
	ಹೊಳಲ್ಕೆರೆ.	223	ವಿರಾಪುರ
		224	ನೂಲೆನೂರು
		225	ಚಿತ್ರಹಳ್ಳಿ
		226	ಶಿವಗಂಗೆ
		227	ಈಚಘಟ್ಟ
		228	ನಾಗರಘಟ್ಟ
		229	ಪೊಂಬಾಪುರ
		230	ಅರಳೀಕೆರೆ
		231	ಕನ್ನೇನಹಳ್ಳಿ
		232	ಲಿಂಗದಹಳ್ಳಿ
		233	ಬ್ರಂಹಪುರ
		234	ತೊಡರನಾಳು
		235	ಒನವನಪುರ ಯಾ ಬಿಜ್ಜನಹಾಳು
ಹೊಸದುರ್ಗ.	ಹೊಳಲ್ಕೆರೆ.	236	ಮಹದೇವಪುರ
		237	ಅಮಲಾಪುರ
		238	ಅಮೃತಾಪುರ
		239	ತಿರುಮಲಾಪುರ
		240	ಕಾಶೀಪುರ
		241	ಗೌರಾಪುರ
		242	ಕೊಂಡಾಪುರ
		243	ಬಂಜಗೊಂಡನಹಳ್ಳಿ
		244	ಪೋರೇನಹಳ್ಳಿ
		245	ನೆಲ್ಲೀಕಟ್ಟೆ
	ಹೊಸದುರ್ಗ.	246	ಕಸಬಾ ಹೊಸದುರ್ಗ
		247	ಭೈರಾಪುರ
		248	ದಾಸರಹಳ್ಳಿ
		249	ತಣಿವೀಸಂಗೇನಹಳ್ಳಿ
		250	ಗೊರವೀಗೊಂಡಿಹಳ್ಳಿ
		251	ಕರ್ಲಮಾವಿನಹಳ್ಳಿ
		252	ಕನ್ನಾಗೊಂಡು
		253	ಕ್ಯಾದಿಗೆರೆ
		254	ಅಡವೀಸಂಗಿಹಳ್ಳಿ
		255	ಮಾಚೇನಹಳ್ಳಿ
		256	ಕೊರಟಿಗೆರೆ
		257	ಕೊಮಾರನಕಣಿವೆ
		258	ಕ್ಯಾದಿಗೆರೆ ಕಾವಲು
		259	ಶಿವನಕಟ್ಟೆ
		260	ಚಿನ್ನಾಪುರ
		261	ಹೊಸಹಳ್ಳಿ
		262	ರಂಗವ್ವನಹಳ್ಳಿ
		263	ಮಸಣಿಹಳ್ಳಿ
		264	ಜವಾಪುರ
		265	ಅತ್ತಿಗಟ್ಟೆ
		266	ಕಲ್ಲೋಡು
		267	ಗೂರವನಕಲ್ಲು
		268	ಕುರುಬರಹಳ್ಳಿ
		269	ಹುಣಿವಿನದಾವು
		270	ಹೊನ್ನೇನಹಳ್ಳಿ
		271	ಕಂಡಿಕಟ್ಟೆ
		272	ನರಸೀಪುರ
		273	ಗಲಬೇನಹಳ್ಳಿ
	ಹಿರಿಯೂರು.	274	ಹಾಗಲಕೆರೆ
		275	ಮುತ್ತಾಗೋಡಿ
		276	ಲಿಂಗದಹಳ್ಳಿ
		277	ಗಂಜಿಕೆರೆ
		278	ಕಡ್ಲೇಕಂಸಾಗರ
		279	ಜೋಗಮ್ಮನಹಳ್ಳಿ
		280	ಗೊಂದಿಹಳ್ಳಿ
		281	ತಿಪ್ಪೇನಹಳ್ಳಿ
		282	ಕಾಟಾಪುರ
		283	ಅರೇಹಳ್ಳಿ
		284	ಬೆಳವಾಯಿಹಳ್ಳಿ
		285	ಮುದಗೊಂಡನಹಳ್ಳಿ
		286	ಮತ್ತೋಡು
		287	ತೊಗರೀಗೊಂದಿ

355

1295

ಹಿಂದಿನ ತಾಲ್ಲೂಕು.	ಈಗಿನ ತಾಲ್ಲೂಕು.	ನಂಬರ.	ಗ್ರಾಮದ ಹೆಸರು.	ಹಿಂದಿನ ತಾಲ್ಲೂಕು.	ಈಗಿನ ತಾಲ್ಲೂಕು.	ನಂಬರ.	ಗ್ರಾಮದ ಹೆಸರು.
ಹಿರಿಯೂರು.	ಹೊಸದುರ್ಗ.	288	ಈಟಿಗೊಂಡನಹಳ್ಳಿ	ಚಿತ್ರದುರ್ಗ.	ಹೊಳಲ್ಕೆರೆ.	307	ಪುತ್ತಿಗೆಟ್ಟು
		289	ಹಟ್ಟಿ			308	ರಾಮೇನಹಳ್ಳಿ
		290	ಬಂಟನಗವಿ				
		291	ಹಗೇದಕಾಳ್ಳಿ			309	ಕಸವನಹಳ್ಳಿ
		292	ಕಪ್ಪಗೆರೆ			310	ನಂದೀಹಳ್ಳಿ
		293	ಮಣಿತನನಡುವು			311	ಗೊಂದೀಹಳ್ಳಿ
		294	ನಿಲವಗಲ್ಲು			312	ನಂಜನಜೊಸೂರು
		295	ಕಾರೇಹಳ್ಳಿ			313	ಕೆರಯಾಗಳಹಳ್ಳಿ
		296	ಹೊತ್ತರಗೊಂಡನಹಳ್ಳಿ			314	ಚಾಡಗೊಂಡನಹಳ್ಳಿ
		297	ಅಜ್ಜೀಕಾಮಸಾಗರ			315	ಸಂಗೇನಹಳ್ಳಿ
		298	ಜೂವ್ವನಹಳ್ಳಿ			316	ಗೊಪ್ಪೇನಹಳ್ಳಿ
		299	ಸೊಡರನಹಳ್ಳಿ			317	ಕಣಿವೇಹಳ್ಳಿ
		300	ಅತ್ತಿಮಗ್ಗಿ			318	ಗುಂಡೀಕೆರೆ
		301	ಮೂಡದಕೆರೆ			319	ಗಿಡ್ಡನ್ನಹಳ್ಳಿ
		302	ಜೇನಿನಹಳ್ಳಿ			320	ಬರಗೇನಹಳ್ಳಿ
		303	ಎಕ್ಕಗೊಂದಿ			321	ಹೂಲೀಕೆರೆ
		304	ಅರೇಮಡು			322	ಪಾಪೇನಹಳ್ಳಿ
		305	ಮಲ್ಲಾಪುರ			323	ಕುಮ್ಮಗಟ್ಟು
		306	ರಾಮೇಜೆನಹಳ್ಳಿ ಕಾವಲು			324	ಕಣಿವೇಜೋಗಿಹಳ್ಳಿ

ತಾರೀಖು 24ನೆ ನವಂಬರ 1904.

ನಂ. ರೆ. 4531 – ಲ್ಯಾ. ರೆ. 248—04-3, ಸನ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ, ಹೊಸ ಗ್ರಾಮವನ್ನುಂಟುಮಾಡಲಿಕ್ಕೆ ಬೇಕಾಗಿರುತ್ತದೆ. ಮತ್ತು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಡೆಪ್ಯುಟಿ ಕಮೀಷನರವರು ಸದರೀ ಜಮೀನನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಜಿಲ್ಲೆ.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು	ಸರ್ವೆ ನಂ.	ವಿಸ್ತೀರ್ಣ.		ಆಕಾರ.			ಕೇಂದ್ರಸರ್ಕಾರದ ಜಮೀನು ಇದ್ದಲ್ಲಿ ಅದರ ವಿಸ್ತೀರ್ಣ.		ಚಕ್ಕುಬಂದಿ.			
						ಎ.	ಗು.	ರೂ.	ಆ.	ಪೈ.	ಎ.	ಗು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ.	ಚಿಕ್ಕಬಳ್ಳಾಪುರ.	ಮಂಡಿಕಲ್ಲು.	ರೂಪಗಾನಹಳ್ಳಿ.	ಗೋಲ್ಡ್ ಫಿಲ್ಡ್ಸ್.	ಖಸ್ಸಿ 26	6	15	6	8	0	0	20	ಸರ್ವೆ ನಂ. 25	ಸರ್ವೆ ನಂ. 26	ಸರ್ವೆ ನಂ. 24	ಸರ್ವೆ ನಂ. 23 ಮತ್ತು 27

ತಾರೀಖು 2ನೆ ಡಿಸೆಂಬರ 1904.

ನಂ. ರೆ. 4765—ಲ್ಯಾ. ಸ. 24—04-2, ಲ್ಯಾಂಡ್ ರೆವಿನ್ಯೂ ಕೋಡಿನ 236ನೆ ಸೆಕ್ಷನ್ ಅನುಸರಿಸಿ ಟಿ. ನರಸೀಪುರ ತಾಲ್ಲೂಕಿನ ಸೋಸಲೆಯಲ್ಲಿರುವ ಶ್ರೀವ್ಯಾಸರಾಯಸ್ವಾಮಿ ಮಠಕ್ಕೆ ಮಾನ್ಯವಾಗಿ ಕೊಡಲ್ಪಟ್ಟ ತಿಪಟೂರು ತಾಲ್ಲೂಕಿನಲ್ಲಿರುವ ಸಾರತವಳ್ಳಿ ಮತ್ತು ಹಾಲಕುರ್ತಿ ಇನಾಂ ಗ್ರಾಮಗಳಿಗೆ ಮೇಲ್ಕಂಡ ಕೋಡಿನ VIII ರಿಂದ X ವರಿಗಿನ ಅಧ್ಯಾಯಗಳ ನಿಯಮಗಳನ್ನು ಲಗುವು ಮಾಡುವ ಬಗ್ಗೆ ಮೈಸೂರ ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರವವರು ಅಪ್ಪಣೆ ಕೊಡುತ್ತಾರೆ.

ತಾರೀಖು 2ನೆ ಡಿಸೆಂಬರ್ 1904.

ನಂ. ರೆ. 4780—ಲ್ಯಾ. ರೆ. 48—04-9, ಎಕ್‌ಸ್ಟ್ರಾ) ಅಸಿಸ್ಟೆಂಟ್ ಕಮಿಷನರಾದ ಮೆ|| ಬಿ. ಕೃಷ್ಣರಾಯರಿಗೆ 1904ನೆ ಸೆಪ್ಟಂಬರ್ 15ನೆ ಮತ್ತು ರೆ. 2356—ಲ್ಯಾ. ರೆ. 48—04-7ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 20 ದಿನಗಳ ಪ್ರಿವಿಲೇಜ್ ರಜಾವನ್ನು ಅವರು 1904ನೆ ಆಗಸ್ಟ್ 21ನೆ ತಾರೀಖಿನ ಮಧ್ಯಾಹ್ನತ್ತರ ಉಪಯೋಗಿಸಿಕೊಂಡು 1904ನೆ ಸೆಪ್ಟಂಬರ್ 10ನೆ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗವಂದರೆ 1 ದಿವಸ ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 2ನೆ ಡಿಸೆಂಬರ್ 1904.

ನಂ. ರೆ. 4798—ಲ್ಯಾ. ರೆ. 118—04-6, ಶ್ರಿಂಗೇರಿ ಜಹಗೀರಿಗೆ ಕುಮುಕಿಯಾಗಿ ಕೊಡಲ್ಪಟ್ಟ ಡೆಪ್ಯುಟಿ ಅಮಲ್‌ದಾರ್ರಾದ ಆರ್. ರಾಮರಾಯರಿಗೆ 1904ನೆ ಜೂನ್ 29ನೆ ಮತ್ತು ರೆ. 4181ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಮತ್ತು 1904ನೆ ಆಗಸ್ಟ್ 22ನೆ ಮತ್ತು ರೆ. 1620—118-2—1904-5ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಪುನಹ ಊರ್ಜಿತಪಡಿಸಲ್ಪಟ್ಟ 15 ದಿನಗಳ ಪ್ರಿವಿಲೇಜ್ ರಜಾ ಇನ್ನೂ 1 ತಿಂಗಳು 14 ದಿನಗಳು ಜಾಸ್ತಿ ಮಾಡಲ್ಪಟ್ಟಿತ್ತು. ಮೊದಲಿನ ಇಸ್ತಿಹಾರ್ನಾಮೆಯಲ್ಲಿ ಕೆಲಸ ನಡಿಯಲಿಕ್ಕೆ ಮಂಜೂರ್ಮಾಡಲ್ಪಟ್ಟಿದ್ದ ಪಿರ್ಯಾಡುಗಳಂತೆಯೇ ಸದರೀ ರಜಾ ಕಾಲದಲ್ಲಿತ್ತು.

ತಾರೀಖು 3ನೆ ಡಿಸೆಂಬರ್ 1904.

ನಂ. ಫೈ. 3381—ಬಿ. 11—04—9, ಸನ್ 1902ನೆ ಏಪ್ರಿಲ್ ಗುರ್ರೆ ತಾರೀಖಿನಲ್ಲಿ ಸರ್ಕಾರ ನೌಕರಿಯಿಂದ ಬರತರಫ್ ಮಾಡಲ್ಪಟ್ಟ ಬೆಂಗಳೂರ ಸಿಟಿ ಮ್ಯುನಿಸಿಪಾಲಿಟಿದು ಮಾಜಿ ರೈಲ್ವೆ ಆಕ್ಸಿಡಿಂ ಇನ್‌ಸ್ಪೆಕ್ಟರಾದ ಬಿ. ರಾಮಸ್ವಾಮಯ್ಯನು ಪುನಹ ಸರಕಾರ ನೌಕರೀಗೆ ಅರ್ಹನಲ್ಲವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ತಾರೀಖು 5ನೆ ಡಿಸೆಂಬರ್ 1904.

ನಂ. ರೆ. 4949—ಲ್ಯಾ. ರೆ. 270—04—3, ಸನ್ 1894ನೆ ಇನವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಹೊಸ ಗ್ರಾಮವನ್ನುಂಟುಮಾಡಲಿಕ್ಕೆ ಬೇಕಾಗಿರುತ್ತೆ. ಮತ್ತು ಚಿಕ್ಕಬಳ್ಳಾಪುರ ಮತ್ತು ಇತರ ತಾಲ್ಲೂಕುಗಳ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಕೊಂಡುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತೆ :—

ಡಿಸ್ಟ್ರಿಕ್ಟು. ತಾಲ್ಲೂಕು. ಹೋಬಳಿ. ಗ್ರಾಮ.	ಖಾತೇದಾರರ ಹೆಸರು.	ಸರ್ವೆ ನಂಬರ್.	ಜಮೀನಿನ ವಿಸ್ತೀರ್ಣ.	ಆಕಾರ.	ಗ್ರಾಮವನ್ನುಂಟುಮಾಡುವ ಮತ್ತು ಹೊಸ ಗ್ರಾಮಕ್ಕೆ ಬೇಕಾದ ಜಮೀನಿನ ವಿಸ್ತೀರ್ಣ.	ಚಕ್ಕುಬಂದಿ.			
						ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ ಗೌರಿಬಿದನೂರು ಪೆಂಚಲೀನಹಳ್ಳಿ ಕೊಂಡಿನಹಳ್ಳಿ	ಬಗ್ಗನಪ್ಪ ಬಿನ್ ನರಸಂಣಿ	1 ಮುಸ್ತೆ	ಎ. ಗು. 17—3½	ರೂ. ಎ. ಪೈ. 12—0—0	ಎ. ಗು. 1—20	ಸರ್ವೆ ನಂ. 3	ಉಳಿದ ಹೆಸ್ತೆ 5 ನದಿ	ಬಿಸಲುಕಲ್ಲಿಯ ಎಲೆ	ನಾಗೇನಹಳ್ಳಿಯ ಎಲೆ

ತಾರೀಖು 6ನೆ ಡಿಸೆಂಬರ್ 1904.

ನಂ. ರೆ. 4979—ಫಾ. 20-04-8, ಸನ್ 1904ನೆ ಆಗಸ್ಟ್ 26ನೆ ಮತ್ತು ರೆ. 1694—ಫಾ. 20-04-5ನೆ ನಂಬರ್ ಗವರ್ನಮೆಂಟಿನ ಇಸ್ತಿಹಾರ್ನಾಮೆಯಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ತಾಬೆಯಲ್ಲಿ ಕೆಲಸಕ್ಕೆ ಮೈಸೂರ ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿದ್ದ ಫಾರೆಸ್ಟ್ ಸಬ್ ಅಸಿಸ್ಟೆಂಟ್ ಕನಸರ್ವೇಟರಾದ ಮೆ|| ಎಂ. ಶ್ರೀನಿವಾಸರಾಯರು, ಉಳಿಸಿಕೊಳ್ಳಲಿಕ್ಕೂ ಕೂಡದ ಪ್ರದೇಶಗಳನ್ನು ಚುನಾಯಿಸುವ ಬಗ್ಗೆ, ಸದರೀ ಪ್ರದೇಶಗಳ ಪ್ರಾರಂಭದ ಹದ್ದು ಎಂಗಡಿಸುವ ಬಗ್ಗೆ, ವ ನಕ್ಷೆಗಳನ್ನು ಮತ್ತು ಮೈಸೂರ ಫಾರೆಸ್ಟ್ ರೆಗ್ಯುಲೇಷನಿನ 4ನೆ ಸೆಕ್ಷನ್ ಅನುಸರಿಸಿ ಮಸೂದೆ ಇಸ್ತಿಹಾರ್ನಾಮೆಗಳನ್ನು ತಯಾರು ಮಾಡುವ ಬಗ್ಗೆ ಶಿವಮೊಗ್ಗ ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತಾರೆ.

ಹುಕುಂ ಬಮೋಜಿಬ್,

ಬಿ. ಕೆ. ವೆಂಕಟನರಸಿಂಹಯ್ಯಂಗಾರ್,

ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

357
1797

ಜಿಯೋಲಾಜಿಕಲ್.

ಇಸ್ತಿಹಾರ್ನಾಮೆ.

ತಾರೀಖು 5ನೆ ಡಿಸೆಂಬರ್ 1904.

ನಂ. 510—ಎಸ್., ಮೈಸೂರ ಜಿಯೋಲಾಜಿಕಲ್ ಇಲಾಖೆಯ ಅಸಿಸ್ಟೆಂಟ್ ಭೂರಚನಾ ಶಾಸ್ತ್ರಜ್ಞರಾದ ಮೆ|| ಎ. ಟಿ. ಸೆಟ್ಲೂರ್, ಎಲ್. ಸಿ. ಇ., ಯವರು 1903ನೆ ಡಿಸೆಂಬರ ಗುರ್ತ್ರ ತಾರೀಖಿನಾರಭ್ಯ ಎರಡನೇ ಕ್ಲಾಸಿನಿಂದ ಮೊದಲನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜಿಬ್,
ಡಬ್ಲ್ಯೂ. ಎಫ್. ಸ್ಮೀತ್,
ಜಿಯೋಲಾಜಿಕಲ್ ಇಲಾಖೆಯ ಗವರ್ನಮೆಂಟ್ ಸೆಕ್ರಿಟರಿ.

ಮಿಲಿಟರಿ.

ಇಸ್ತಿಹಾರ್ನಾಮೆ.

ತಾರೀಖು 7ನೆ ಡಿಸೆಂಬರ್ 1904.

ನಂ. 1804-6, ಮೈಸೂರ ಸೀಮೆಯ ಘನವನ್ನೆತ್ತಿದ ಶ್ರೀಮನ್ ಮಹಾರಾಜರವರು 1904ನೆ ಅಕ್ಟೋಬರ್ ಗುರ್ತ್ರ ಲಾಗಾಯತು ಮೈಸೂರ ಪೈದಲ್ ಫೌಜಿನ ಎರಡನೆ ಪಟಾಲಮಿನಲ್ಲಿ ಇದರಡೀ ಕಂಡ ಬಡ್ತಿಗಳನ್ನು ಮಂಜೂರ್ಮಾಡಿರುತ್ತಾರೆ.:—

ಹೆಸರು.	ಯಾವ ದರ್ಜೆಯಿಂದ.	ಯಾವ ದರ್ಜೆಗೆ.
1. ಆರೋಕ್ಯಂ ..	ಮೊದಲನೇ ಗ್ರೇಡಿನ ಜಮೇದಾರ್ ..	ಎರಡನೇ ಗ್ರೇಡಿನ ಸುಬೇದಾರ
2. ಧರ್ಮಸಿಂಗ್ ...	ಡಿಟೋ ...	ಡಿಟೋ
3. ಹಿಮ್ಮತ್‌ಸಿಂಗ್ ..	ಡಿಟೋ ..	ಡಿಟೋ

ಹುಕುಂ ಬಮೋಜಿಬ್,
ಆರ್. ಜೆ. ಜೋನ್ಸ್, ಲೆಫ್‌ಟನೆಂಟ್ ಕರ್ನಲ್,
ಮಿಲಿಟರಿ ಅಸಿಸ್ಟೆಂಟ್.

358

ಮೈಸೂರ ಗೆಜಿಟ್.

ಸಂ. 39.] ಸರ್ಕಾರದಿಂದ ಪ್ರಾಯಿಸ್ ಆದ್ದು. [ನಂ. 48.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 8, ಸನ 1904.

IIನೆ ಭಾಗ.

ಇಂಡ್ಯೂಗೆವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಮೈಸೂರ ರೆವಿನ್ಯೂ ಸರ್ವೆ ಮತ್ತು ಸೆಟ್ಲಮೆಂಟ್ ಇಲಾಖಾ.

ಇಸ್ತಿಹಾರ್‌ನಾಮೆ.

ನಂಬರು 549, ತಾರೀಖು 16ನೆ ನವಂಬರ 1904.

ಸಮಸ್ತ ಜನಗಳಿಗೂ ಇದರಿಂದ ಪ್ರಕಟಿಸಲ್ಪಡುವದೇನಂದರೆ,—ಚಿತ್ರದುರ್ಗ ಡಿಸ್ಟ್ರಿಕ್ಟು (ಈಗಿನ ಹೊಳದುರ್ಗ ತಾಲ್ಲೂಕು ಏರ್ಪಾಡಾಗುವದಕ್ಕೆ ಹತ್ತೂರ್ವದಲ್ಲಿದ್ದ) ಹೊಳಲಕೆರೆ ತಾಲ್ಲೂಕಿನ 324 ಸರಕಾರಿ ಗ್ರಾಮಗಳ ರಿವಿಜನ್ ಸರ್ವೆ ಆಕಾರದ ದರಗಳನ್ನು ಪ್ರಸಿದ್ಧಪಡಿಸುವಿಕೆಯೂ, ಕಸಬಾ ಹೊಳಲಕೆರೆ ಮೊಕ್ತಾಮಿನಲ್ಲಿ ಬರುವ ತಿಂಗಳು (ಡಿಸೆಂಬರ್) 16ನೆ ತಾರೀಖಿನಲ್ಲಿ ಅಥವಾ ಆ ಸುಮಾರಿನಲ್ಲಿ ಪ್ರಾರಂಭಿಸಲ್ಪಡುವದು.

ನಂಬರ 584, ತಾರೀಖು 22ನೆ ನವಂಬರ 1904.

ಸಮಸ್ತ ಜನಗಳಿಗೂ ತಿಳಿಯತಕ್ಕ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, ಚಿತ್ರದುರ್ಗ ಡಿಸ್ಟ್ರಿಕ್ಟು ಜಗಲೂರ ತಾಲ್ಲೂಕಿನ 168 ಸರಕಾರಿ ಗ್ರಾಮಗಳ ರಿವಿಜನ್ ಸರ್ವೆ ಆಕಾರದ ದರಗಳನ್ನು ಪ್ರಸಿದ್ಧಪಡಿಸುವಿಕೆಯೂ, ಕಸಬಾ ಜಗಲೂರ ಮೊಕ್ತಾಮಿನಲ್ಲಿ ಬರುವ ತಿಂಗಳು ಡಿಸೆಂಬರ್ 10ನೆ ತಾರೀಖಿನಲ್ಲಿ ಅಥವಾ ಆ ಸುಮಾರಿನಲ್ಲಿ ಪ್ರಾರಂಭಿಸಲ್ಪಡುವದು.

ನಂಬರು 600, ತಾರೀಖು 25ನೆ ನವಂಬರ 1904ನೆ ಇಸವಿ.

ಸಮಸ್ತ ಜನಗಳಿಗೂ ತಿಳಿಯತಕ್ಕ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, 1904ನೆ ಇಸವಿ ಡಿಸೆಂಬರ 15ನೆ ತಾರೀಖು ಅಥವಾ ಆ ಸುಮಾರಿನಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ಸಾಗರ ತಾಲ್ಲೂಕಿನಲ್ಲಿ ರಿ॥ ಸರ್ವೆ ಕೆಲಸಗಳು ಪ್ರಾರಂಭಿಸಲ್ಪಡುವವು.

ಜೆ. ಪಿ. ಗ್ರಾಂಟ್,
ಸರ್ವೆ ಮತ್ತು ಸೆಟಲಮೆಂಟ್ ಕಮಿಶನರ್, ಮೈಸೂರು.

ಫಾರೆಸ್ಟ್ ಇಲಾಖಾ.

ಸಂದಲ್ ಹರಾಜು ನೋಟಿಫಿಕೇಷನ್.

ತಾರೀಖು 18ನೆ ಆಗಸ್ಟು 1904ನೆ ಇಸವಿ.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲೆಯಾನ ನಡಿಯತಕ್ಕ ಹರಾಜು ಈ ಕೆಳಗೆ ನಮೂದಿಸಿರುವ ಕೋಶಿಗಳಲ್ಲಿ ಅದರದರ ಬಾಜಾದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಶನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರುಗಳಿಂದ ನಡಿಸಲ್ಪಡುವದು :—

ಡಿಸ್ಟ್ರಿಕ್ಟ್.	ಕೋಶಿ.	ಹರಾಜು ತಾರೀಖು.			ಸುಮಾರು ಟನ್ ಗಳು ಇರುವ ಸಂದಲ್ ಕಡಿದದ್ದು	ಷರಾ.
ಮೈಸೂರು ...	ಹುಣಸೂರು ...	1904ನೆ ಇಸವಿ ನವಂಬರ್ ತಾರೀಖು		19	500	
ಡಿಟೋ ...	ಶ್ರೀರಂಗಪಟ್ಟ ...	ಡಿಟೋ	ಡಿಟೋ	23	240	
ಬೆಂಗಳೂರು ...	ಬೆಂಗಳೂರು ..	ಡಿಟೋ	ಡಿಟೋ	26	120	ಕೋಲಾರ ಮತ್ತು ತುಮಕೂರು ಡಿಸ್ಟ್ರಿಕ್ಟ್ ಸಂದಲ್ ಶೇರಿರುತ್ತೆ.
ಹಾಸನ ...	ಹಾಸನ ..	1904ನೆ ಇಸವಿ ಡಿಶಂಬರ್ ತಾರೀಖು		1	200	
ಕಡೂರು ..	ಚಿಕ್ಕಮಗಳೂರು ..	ಡಿಟೋ	ಡಿಟೋ	5	200	
ಡಿಟೋ ..	ತರೀಕೆರೆ	ಡಿಟೋ	ಡಿಟೋ	8	250	
ಶಿವಮೊಗ್ಗ ..	ಶಿವಮೊಗ್ಗ ...	ಡಿಟೋ	ಡಿಟೋ	12	440	ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟ್ ಸಂದಲ್ ಶೇರಿರುತ್ತೆ.
ಡಿಟೋ ..	ಸಾಗರ ..	ಡಿಟೋ	ಡಿಟೋ	15	175	
ಡಿಟೋ ..	ತೀರ್ಥಹಳ್ಳಿ ..	ಡಿಟೋ	ಡಿಟೋ	19	175	ಕಡೂರು ಡಿಸ್ಟ್ರಿಕ್ಟ್ ಸಂದಲ್ ಶೇರಿರುತ್ತೆ.

2. ಪ್ರತಿಯೊಂದು ಕೋಶಿಯಲ್ಲಿಯು ಹರಾಜು ಮಾಡಲ್ಪಡುವ ಸಂದಲ್ ಲಾಟು ಮತ್ತು ಮೊತ್ತ ವಗೈರೆ ತಪಶೀಲು ಐಯಿಂದ ಇವೇ ಸಾಲೆ ಆಕ್ಶೋಟರು ಆಖ್ಶೆರು ಎಳಗಾಗಿ ಫಾಯಿಷು ಮಾಡಲ್ಪಡುತ್ತದೆ.

ಎಂ. ಮುತ್ತಣ್ಣ,
ಕಂಸರ್ವೇಟರ್ ಆಫ್ ಫಾರೆಸ್ಟ್ಸ್ ಇನ್ ಮೈಸೂರು.

1904ನೆ ಇಸವಿ ಜುಲೈ 15ನೆ ಮಾರ್ಕಂ R. 129—30—26—4ನೆ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಕೊಡೋಣಾದ ಇಸ್ತಿಹಾರ್ನಾಮೆ :—

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ — ಬೆಂಗಳೂರು ಡಿಸ್ಟ್ರಿಕ್ಟ್ ಕ್ಲೋಸ್ಡ್ ಫಾರೆಸ್ಟ್ ರೇಂಜಿಗೆ ಸೇರಿದ ಸ್ಟೇಟ್ ಫಾರೆಸ್ಟ್ಗಳಲ್ಲಿ ಈ ಕೆಳಗೆ ವಿವರಿಸುವ ಮೇರೆ ದಾರಿಗಳು ಮತ್ತು ಜಲಾಶಯಗಳಿಗೆ ಮಾರ್ಗಗಳು ಜನೋಪಯೋಗಕ್ಕಾಗಿ ಬಿಡಲ್ಪಟ್ಟಿವೆ.

1 ಸಾವನದುರ್ಗ ಫಾರೆಸ್ಟ್—ಮಾಗಡಿ ತಾಲ್ಲೂಕು.

(ಎ) ಸಾವನದುರ್ಗ ಬ್ಲಾಕ್.

(1) ನಾಯಕನ ಪಾಳ್ಯದಿಂದ ತಗಚೆಗುಪ್ಪೆಗೆ ಹೋಗುವ ಕಾಲುದಾರಿ.—ಇದು 2 ಗಜ ಅಗಲವೂ ಮತ್ತು 3 ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 1ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ನಾಯಕನ ಪಾಳ್ಯದ 22ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದ ಎಲ್ಲೆಕಟ್ಟಿನಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರ ಮತ್ತು ಈಶಾನ್ಯಮಾರ್ಗವಾಗಿ ಹೋಗಿ, ಡಿಮಾರ್ಕೇಷನ್ ಲೈನಿನ 5ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಬಾಚನಹಟ್ಟಿಯ 13ನೆ ಸರ್ವೆ ನಂಬರಿನ ನೈರುತ್ಯ ಪಾರ್ಶ್ವದ ಎಲ್ಲೆಯನ್ನು ಪ್ರವೇಶಿಸುತ್ತದೆ.

(2) ಗುಡ್ಡಹಳ್ಳಿಯಿಂದ ನೆಲಪಟ್ಟಣಕ್ಕೆ ಹೋಗುವ ಕಾಲು ದಾರಿ.—ಇದು 2 ಗಜ ಅಗಲವೂ ಮತ್ತು $1\frac{1}{2}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 4ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಗುಡ್ಡಹಳ್ಳಿಯ 33ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣ ಮತ್ತು ಪೂರ್ವ ಮಾರ್ಗವಾಗಿ ಹೋಗಿ, ನೆಲಪಟ್ಟಣದ 2ನೆ ಸರ್ವೆ ನಂ. ಪಶ್ಚಿಮ ಪಾರ್ಶ್ವವನ್ನು ಪ್ರವೇಶ ಮಾಡುತ್ತದೆ.

(3) ಕಲ್ಯಾಣದೇವರ ಮಟದಿಂದ ನೆಲಪಟ್ಣಕ್ಕೆ ಹೋಗುವ ಬಂಡೀದಾರಿ.—ಇದು 4 ಗಜ ಅಗಲವೂ ಮತ್ತು 1 ಮೈಲಿ ಉದ್ದ ವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 22ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಕಲ್ಯಾಣದೇವರ ಮಟದ 2ನೆ ಸರ್ವೆ ನಂಬರಿನ ಈಶಾನ್ಯ ಮೂಲೆಯಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಈಶಾನ್ಯಮಾರ್ಗವಾಗಿ ಹೋಗಿ ನೆಲಪಟ್ಣದ 1ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವವನ್ನು ಪ್ರವೇಶ ಮಾಡುತ್ತದೆ.

(4) ಕಲ್ಯಾಣದೇವರ ಮಟದಿಂದ ಡುಬ್ಬಗುಳಿಗೆ ಹೋಗುವ ಕಾಲುದಾರಿ.—2 ಗಜ ಅಗಲವೂ ಮತ್ತು $1\frac{1}{4}$ ಮೈಲಿ ಉದ್ದವುಳ್ಳದ್ದು. ಇದು ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 21ನೆ ಮೈಲಿಯ 8ನೆ ಫರ್ಲಾಂಗಿನಲ್ಲಿ ಕಲ್ಯಾಣದೇವರ ಮಟದ 7ನೆ ಸರ್ವೆ ನಂಬರಿನ ಈಶಾನ್ಯ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪೂರ್ವ ಮತ್ತು ಈಶಾನ್ಯ ಮಾರ್ಗವಾಗಿ ಹೋಗಿ, ಡಿವಾರ್ಕೇಷ್ ಲೈನಿನ 10ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಡುಬ್ಬಗುಳಿಯ 35ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(5) ಮಟದಿಂದ ಮಂಚನಬೆಲೆಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ ಮತ್ತು 3 ಮೈಲಿ ಉದ್ದವುಳ್ಳದ್ದು. ಇದು ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 20ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ, ಮಟದ 17ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದಿಂದ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸಿ, ಆಗ್ನೇಯ ಮಾರ್ಗವಾಗಿ ಹೋಗಿ, ಡಿವಾರ್ಕೇಷ್ ಲೈನಿನ 13ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಮಂಚನಬೆಲೆ ಗ್ರಾಮದ 70ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(6) ಮಟದಿಂದ ಧೂಪಕಲ್ಲಿಗೆ ಹೋಗುವ ಕಾಲು ದಾರಿ.—ಇದು 2 ಗಜ ಅಗಲವೂ ಮತ್ತು 2 ಫರ್ಲಾಂಗು ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 18ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಮಟದ 33ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಈಶಾನ್ಯ ಮಾರ್ಗವಾಗಿ ಹೋಗಿ ಧೂಪಕಲ್‌ನಲ್ಲಿ ಮೇಲೆ ಹೇಳಿದ 5ನೆ ನಂಬರಿನ ಬಂಡೀದಾರಿಯನ್ನು ಶೇರಿ ಫಾರೆಸ್ಟಿನಲ್ಲಿ ಖೈದಾಗುತ್ತದೆ.

(7) ಡುಬ್ಬಗುಳಿಯಿಂದ ಸಂಕೇನಹಳ್ಳಿ ಬೈಲಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ ಮತ್ತು 1 ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 12ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಡುಬ್ಬಗುಳಿಯ 11ನೆ ಸರ್ವೆ ನಂಬರಿನ ಪಶ್ಚಿಮ ಎಲ್ಲೆಯಿಂದ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮಕ್ಕೆ ಹೋಗಿ, ಸಂಕೇನಹಳ್ಳಿ ಬೈಲಿನಲ್ಲಿ ಮೇಲೆ ಹೇಳಿದ 5ನೆ ನಂಬರಿನ ಬಂಡೀದಾರಿಯನ್ನು ಶೇರಿ ಫಾರೆಸ್ಟಿನಲ್ಲೇ ಖೈದಾಗುತ್ತದೆ.

(8) ಅಡಿಕೆಮಾರನಹಳ್ಳಿಯಿಂದ ನೆಲಪಟ್ಣಕ್ಕೆ ಹೋಗುವ ಕಾಲು ದಾರಿ.—2 ಗಜ ಅಗಲವೂ 2 ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 7ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ 27ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ನೈರುತ್ಯ ಮಾರ್ಗವಾಗಿ ಹೋಗಿ, 12ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಲ್ಲಿ ನೆಲಪಟ್ಣವನ್ನು ಪ್ರವೇಶಿಸುತ್ತದೆ.

(9) ವೀರಾಪುರದಿಂದ ನೆಲಪಟ್ಣಕ್ಕೆ ಹೋಗುವ ಕಾಲುದಾರಿ.—2 ಗಜ ಅಗಲವೂ ಮತ್ತು $1\frac{1}{2}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 19ನೆ ಮೈಲಿಯ 3ನೆ ಫರ್ಲಾಂಗಿನಲ್ಲಿ ವೀರಾಪುರದ 19ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮ ಮಾರ್ಗವಾಗಿ ಹೋಗಿ, ಮೇಲೆ ಹೇಳಿದ 8ನೆ ನಂಬರಿನ ಕಾಲುದಾರಿಯನ್ನು ಶೇರಿ ಖೈದಾಗುತ್ತದೆ.

(10) ಜೋಡಿಕಟ್ಟೆದಿಂದ ನಾಯಿಕನ ಪಾಳ್ಯಕ್ಕೆ ಹೋಗುವ ಕಾಲುದಾರಿ.—2 ಗಜ ಅಗಲವೂ 3 ಫರ್ಲಾಂಗು ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 5ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ, ಕರ್ಣಮಂಗಲ ಗ್ರಾಮದ 102ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪೂರ್ವ ಮಾರ್ಗವಾಗಿ ಹೋಗಿ, 2ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಅಂಚೆಗುಪ್ಪೆ ಗ್ರಾಮದ 13ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(11) ಕ್ಲೋಸ್‌ಪೇಟೆಯಿಂದ ಮಾಗಡಿಗೆ ಹೋಗುವ ಹೈರೋಡು.—ಇದು ರೋಡಿನ 1ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ, ಡಿವಾರ್ಕೇಷ್ ಲೈನಿನ 1ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ವಾಯವ್ಯ ಮಾರ್ಗವಾಗಿ ಸುಮಾರು 1 ಮೈಲಿಯ ವರೆಗೆ ಹೋಗಿ, ರೋಡಿನ 18ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಮತ್ತು ಡಿವಾರ್ಕೇಷ್ ಲೈನಿನ 3ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಡುತ್ತದೆ. ಇದು ಸಾರ್ವಜನಿಕ ರಸ್ತೆಯಾಗಿದ್ದು, ಜನರಿಗೂ ಮತ್ತು ವ್ಯಾಪಾರಕ್ಕೂ ಬಿಡಲ್ಪಟ್ಟಿದೆ. ಇದು 18 ಅಡಿ ಅಗಲವಾಗಿದೆ.

ಜಲಾಶಯಗಳು.

(ಎ) ಬಿದರಕಟ್ಟೆ.—ಇದು ನೆಲಪಟ್ಣದಿಂದ ಸುಮಾರು $1\frac{1}{2}$ ಫರ್ಲಾಂಗುಗಳ ಫಾಸಲೆಯಲ್ಲಿ ಸ್ಟೇಟ್ ಫಾರೆಸ್ಟಿನಲ್ಲಿ ಇದೆ. ಮತ್ತು ಇದರ ನೀರು ನೆಲಪಟ್ಣ, ಕಲ್ಯಾಣದೇವರ ಮಟ, ನಾಯಕನಪಾಳ್ಯ ಮತ್ತು ವೀರೇಗೌಡನದೊಡ್ಡಿ ಗ್ರಾಮಗಳ ಜಾನುವಾರುಗಳಿಂದಲೂ ಮತ್ತು ನೆಲಪಟ್ಣದಲ್ಲಿರುವ ನರಸಿಂಹದೇವರಸ್ವಾಮಿ ಮತ್ತು ವೀರಭದ್ರಸ್ವಾಮಿ ದೇವಸ್ಥಾನಗಳಿಗೆ ಹೋಗುವ ಯಾತ್ರಿಕರ ಜಾನುವಾರುಗಳಿಂದಲೂ ಉಪಯೋಗಿಸಲ್ಪಡುತ್ತದೆ.

(ಬಿ) ಸಂಕೋನಹಳ್ಳಿ ಬೈಲುಕಟ್ಟೆ.—ಇದು ಡಿವಾರ್ಕೇಷನ್ ಲೈನಿನಿಂದ ಸುಮಾರು 1½ ಮೈಲಿ ಫಾಸಲೆಯಲ್ಲಿ ಫಾರೆಸ್ಟಿನಲ್ಲಿದೆ. ಇದರ ನೀರು ಡುಬ್ಬಗುಳಿ ಮತ್ತು ಮಂಚನಬೆಲೆ ಗ್ರಾಮಗಳ ಜಾನುವಾರುಗಳಿಂದ ಉಪಯೋಗಿಸಲ್ಪಡುತ್ತದೆ.

(ಸಿ) ಚನ್ನೈಯ್ಯನ ಕಟ್ಟೆ.—ಇದು ಡಿವಾರ್ಕೇಷನ್ ಲೈನಿನಿಂದ 1 ಮೈಲಿ ಫಾಸಲೆಯಲ್ಲಿ ಫಾರೆಸ್ಟಿನಲ್ಲಿದೆ. ಮತ್ತು ಇದರ ನೀರು ಕಲ್ಯಾಣದೇವರಮಟ, ಡುಬ್ಬಗುಳಿ ಮತ್ತು ಮಂಚನಬೆಲೆ ಗ್ರಾಮಗಳ ಜಾನುವಾರುಗಳಿಂದ ಉಪಯೋಗಿಸಲ್ಪಡುತ್ತದೆ.

ಫಾರೆಸ್ಟಿನಲ್ಲಿ ಸೇರಿರುವ ಗ್ರಾಮಗಳು.

(1) ನೆಲಪಟ್ಟಣ.—ಫಾರೆಸ್ಟಿನಲ್ಲಿದೆ. ಇದರ ಸುತ್ತಲೂ 7 ಗಜ ಅಗಲವುಳ್ಳ ಡಿವಾರ್ಕೇಷನ್ ಲೈನು ಇದೆ. ಇದು ರಿಜರ್ವೇಷನಿಂದ ರಹಿತವಾದದ್ದು.

(ಬಿ) ಸಿದ್ದೇದೇವರ ಬೆಟ್ಟ ಬ್ಲಾಕ್.

(1) ನಾಗಮಂಗಲದಿಂದ ಅಜ್ಜನಹಳ್ಳಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 1 ಮೈಲಿ ಉದ್ದ ವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ ಇದು ಡಿವಾರ್ಕೇಷನ್ ಲೈನಿನ 2ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ, ನಾಗಮಂಗಲ ಗ್ರಾಮದ 28ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣ ಮಾರ್ಗವಾಗಿ ಹೋಗಿ, ಡಿವಾರ್ಕೇಷನ್ ಲೈನಿನ 7ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು ಅಜ್ಜನಹಳ್ಳಿ ಗ್ರಾಮದ 32ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(2) ಅಣ್ಣೀಕಾರನಹಳ್ಳಿಯಿಂದ, (ಅಜ್ಜನಹಳ್ಳಿ ದಾಖಲೆ) ಹೊಸದೊಡ್ಡಿಗೆ ಹೋಗುವ ಬಂಡೀ ದಾರಿ.—ಸುಮಾರು 4 ಗಜ ಅಗಲವೂ 1 ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷನ್ ಲೈನಿನ 3ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಅಣ್ಣೀಕಾರನಹಳ್ಳಿಯ 32ನೆ ಸರ್ವೆ ನಂಬರಿನ ನೈರುತ್ಯ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣ ಮಾರ್ಗವಾಗಿ ಹೋಗಿ, ಡಿವಾರ್ಕೇಷನ್ ಲೈನಿನ 5ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ಅಜ್ಜನಹಳ್ಳಿ ಗ್ರಾಮದ ಸರ್ವೆ ನಂ. 61ನೇದರ ಉತ್ತರ ಪಾರ್ಶ್ವವನ್ನು ಶೇರುತ್ತದೆ.

(3) ಮೇಗಳ ದೊಡ್ಡಿ (ಅತ್ತಿಂಗೆರೆ ದಾಖಲೆಯಿಂದ ಹೊಸದೊಡ್ಡಿ (ಅಜ್ಜನಹಳ್ಳಿ ದಾಖಲೆ) ಗೆ ಹೋಗುವ ಕಾಲುದಾರಿ.—2 ಗಜ ಅಗಲವೂ 1 ಮೈಲಿ ಉದ್ದ ವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷನ್ ಲೈನಿನ 4ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಅತ್ತಿಂಗೆರೆಯ 66ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ನೈರುತ್ಯ ಮಾರ್ಗವಾಗಿ ಹೋಗಿ, ಡಿವಾರ್ಕೇಷನ್ ಲೈನಿನ 5ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ಅಜ್ಜನಹಳ್ಳಿ ಗ್ರಾಮದ 49ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(4) ಕಾಮಂಗುತ್ತಾ ಗುದ್ದಲಹಳ್ಳಿಯಿಂದ ಮಾಡಬಾಳಕ್ಕೆ ಹೋಗುವ ಕಾಲುದಾರಿ.—2 ಗಜ ಅಗಲವೂ 1 ಮೈಲಿ ಉದ್ದ ವುಳ್ಳದ್ದು. ಇದು ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷನ್ ಲೈನಿನ 1ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಉತ್ತರ ಮಾರ್ಗವಾಗಿ ಹೋಗಿ, 15ನೆ ಮೈಲಿಯ 4ನೆ ಫರ್ಲಾಂಗಿನ ಬಳಿ ಫಾರೆಸ್ಟನ್ನು ಬಿಟ್ಟು ಮಾಡಬಾಳದ 41ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(5) ಕಾಮಂಗುತ್ತಾ ಗುದ್ದಲಹಳ್ಳಿಯಿಂದ ಲಕ್ಕಸಂದ್ರಕ್ಕೆ ಹೋಗುವ ಕಾಲು ದಾರಿ. 2 ಗಜ ಅಗಲವೂ ¾ ಮೈಲಿ ಉದ್ದ ವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷನ್ ಲೈನಿನ 6ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮ ಮಾರ್ಗವಾಗಿ ಹೋಗಿ, 10ನೆ ಮೈಲಿಯ 3ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ಲಕ್ಕಸಂದ್ರದ 32ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(6) ಶಂಭುದೇವನಹಳ್ಳಿಯಿಂದ ಅಜ್ಜನಹಳ್ಳಿಗೆ ಹೋಗುವ ಕಾಲುದಾರಿ.—2 ಗಜ ಅಗಲವೂ ಮತ್ತು 1 ಮೈಲಿ ಉದ್ದ ವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷನ್ ಲೈನಿನ 16ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ, ಮಾಡುಬಾಳುಗ್ರಾಮದ 38ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣವಾಗಿ ಹೋಗಿ, ಸಟ್ಟೆಕಟ್ಟೆಯಬಳಿ ಮೇಲೆ ಹೇಳಿದ 1ನೆ ನಂ. ಬಂಡಿದಾರಿಯಲ್ಲಿ ಖೈದಾಗುತ್ತದೆ.

(7) ಮಾಡುಬಾಳದಿಂದ ನಾಗಮಂಗಲಕ್ಕೆ ಹೋಗುವ ಬಂಡೀದಾರಿ.—ಸುಮಾರು 4 ಗಜ ಅಗಲವೂ 6 ಫರ್ಲಾಂಗು ಉದ್ದ ವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷನ್ ಲೈನಿನ 17ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಮಾಡುಬಾಳಗ್ರಾಮದ 38ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಈಶಾನ್ಯ ಮಾರ್ಗವಾಗಿ ಹೋಗಿ, 19ನೆ ಮೈಲಿಯ 3ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು ನಾಗಮಂಗಲಗ್ರಾಮದ 59ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನು ಪ್ರವೇಶಿಸುತ್ತದೆ.

ಜಲಾಶಯಗಳು.

(1) ಸಟ್ಟೆಕಟ್ಟೆ.—ಇದು ಮೇಲೆ 6ನೆ ನಂಬರಿನಲ್ಲಿ ವಿವರಿಸಿದಂತೆ ಸ್ಟೇಟ್ ಫಾರೆಸ್ಟಿನಲ್ಲಿದೆ. ಇದರ ನೀರು ಶಂಭುದೇವನಹಳ್ಳಿ, ಅಜ್ಜನಹಳ್ಳಿ, ನಾಗಮಂಗಲ ಮತ್ತು ಮಾಡುಬಾಳುಗ್ರಾಮಗಳ ಜಾನುವಾರುಗಳಿಂದ ಉಪಯೋಗಿಸಲ್ಪಡುತ್ತದೆ.

1803

II ಚಿಕ್ಕ ಮಣ್ಣುಗುಡ್ಡಿ (ಕೃಷ್ಣರಾಜಪೇಟೆ ಸಬ್ ತಾಲ್ಲೂಕು).

(1) ಮಂಚಟಹಳ್ಳಿಯಿಂದ ವಿಭೂತಿಕೆರೆ ದಾಖಲೆ ದೇವರಬೊಡ್ಡಿಗೆ ಹೋಗುವ ಬಂಡೀದಾರಿ.—ಸುಮಾರು 4 ಗಜ ಅಗಲವೂ 1½ ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 1ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ, ವಿಭೂತಿಕೆರೆ ದಾಖಲೆ ಮಂಚಟಹಳ್ಳಿಯ 348ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಆಗ್ನೇಯವಾಗಿ ಹೋಗಿ, 6ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ವಿಭೂತಿಕೆರೆ ದಾಖಲೆ ದೇವರಬೊಮ್ಮಿಯ 101ನೆ ಸರ್ವೆ ನಂಬರಿನ ಆಗ್ನೇಯ ಪಾರ್ಶ್ವವನ್ನು ಪ್ರವೇಶಿಸುತ್ತದೆ.

III ದೊಡ್ಡ ಮಂಣುಗುಡ್ಡಿ (ಕೃಷ್ಣರಾಜಪೇಟೆ ಸಬ್ ತಾಲ್ಲೂಕು).

(1) ಕೃಷ್ಣರಾಜಪೇಟೆ ಚನ್ನಪಟ್ಟಣ ರಸ್ತೆಯಲ್ಲಿರುವ ಚನ್ನಪಟ್ಟಣದ ಕೆಂಗಲ್‌ರಾಯ ಹನುಮಂತದೇವರ ದೇವಸ್ಥಾನದ ಬಳಿಯಿಂದ ಗೊಲ್ಲರದೊಡ್ಡಿಗೆ ಹೋಗುವ ಕಾಲುದಾರಿ. 2 ಗಜ ಅಗಲವೂ ಮತ್ತು 1½ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 1ನೆ ಮೈಲಿಯ 7ನೆ ಫರ್ಲಾಂಗಿನಿಂದ ಸುಮಾರು 100 ಗಜಗಳ ಫಾಸಲೆಯಲ್ಲಿ, ಮಂದಾರಗುಪ್ಪೆಗ್ರಾಮದ 20ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಉತ್ತರಮಾರ್ಗವಾಗಿ ಹೋಗಿ, 7ನೆ ಮೈಲಿಯ 3ನೆ ಫರ್ಲಾಂಗಿನ ಬಳಿ ಫಾರೆಸ್ಟನ್ನು ಬಿಟ್ಟು, ಗೊಲ್ಲರದೊಡ್ಡಿ (ಬಿಳಿಗುಂಬಾ ದಾಖಲೆ) ಯ 177ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(2) ಗೊಲ್ಲರದೊಡ್ಡಿಯಿಂದ ದನಾಯಕಪುರಕ್ಕೆ ಹೋಗುವ ಬಂಡೀದಾರಿ.—ಸುಮಾರು 4 ಗಜ ಅಗಲವೂ 5 ಫರ್ಲಾಂಗು ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 6ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ (ಬಿಳಿಗುಂಬಾ ದಾಖಲೆ) ಗೊಲ್ಲರದೊಡ್ಡಿಯ 177ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮವಾಗಿ ಹೋಗಿ, 5ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ದನಾಯಕನಪುರದ 177ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(3) ಕೃಷ್ಣರಾಜಪೇಟೆಯಿಂದ ಶಾನುಭೋಗನಹಳ್ಳಿಗೆ ಹೋಗುವ ಬಂಡೀದಾರಿ.—ಸುಮಾರು 4 ಗಜ ಅಗಲವೂ 2 ಫರ್ಲಾಂಗು ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 6ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ ಗೊಲ್ಲರದೊಡ್ಡಿ (ಬಿಳಿಗುಂಬಾ ದಾಖಲೆ) ಯ 177ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರಕ್ಕೆ ಹೋಗಿ, 6ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು ಶಾನುಭೋಗನಹಳ್ಳಿಯ 13ನೆ ಸರ್ವೆ ನಂಬರಿನ ಆಗ್ನೇಯ ಪಾರ್ಶ್ವವನ್ನು ಪ್ರವೇಶಿಸುತ್ತದೆ.

IV ಮಾಕಳಿ ಫಾರೆಸ್ಟು (ಕೃಷ್ಣರಾಜಪೇಟೆ ಸಬ್ ತಾಲ್ಲೂಕು).

(1) ಬ್ಯಾಡರಹಳ್ಳಿಯಿಂದ ಮಾಕಳಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 4 ಫರ್ಲಾಂಗು ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 18ನೆ ಮೈಲಿ 6ನೆ ಫರ್ಲಾಂಗಿನಲ್ಲಿ ಬ್ಯಾಡರಹಳ್ಳಿಯ (ಕುಣಿಗಲ್ ತಾಲ್ಲೂಕು) 17ನೆ ಸರ್ವೆ ನಂಬರಿನ ಆಗ್ನೇಯ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪೂರ್ವ ಮಾರ್ಗವಾಗಿ ಹೋಗಿ, ಮಾಕಳಿ ಗ್ರಾಮದ 186ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಲ್ಲಿ ಫಾರೆಸ್ಟನ್ನು ಪ್ರವೇಶಿಸುತ್ತದೆ.

(2) ವಿರುಪಸಂದ್ರದಿಂದ ಮಾಕಳಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 1 ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 20ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ ವಿರುಪಸಂದ್ರದ 14ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣ ಮಾರ್ಗವಾಗಿ ಹೋಗಿ, ಮಾಕಳಿ ಗ್ರಾಮದ 198ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(3) ಹೊಂಬೇಗೌಡನ ದೊಡ್ಡಿ (ವಿರುಪಸಂದ್ರ ದಾಖಲೆ) ಯಿಂದ ಮಾಕಳಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 1¼ ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 20ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ವಿರುಪಸಂದ್ರದ 14ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣಕ್ಕೆ ಹೋಗಿ, ಮಾಕಳಿ ಗ್ರಾಮದ 198ನೆ ಸರ್ವೆ ನಂಬರಿನ ಈಶಾನ್ಯ ಪಾರ್ಶ್ವದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(4) ದೊಡ್ಡ ಗಂಗವಾಡಿಯಿಂದ ನಾಯಡೊಲೆ ದ್ವಾರಾ ಮಾಕಳಿಗೆ ಹೋಗುವ ಬಂಡೀದಾರಿ 4 ಗಜ ಅಗಲವೂ ಮತ್ತು 1¼ ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 21ನೆ ಮೈಲಿಯ 3ನೆ ಫರ್ಲಾಂಗಿನಲ್ಲಿ, 40ನೆ ಮತ್ತು 33ನೆ ಸರ್ವೆ ನಂಬರುಗಳ ಮಧ್ಯದಲ್ಲಿರುವ ಖರಾಬು ಜಾಗದಿಂದ ಫಾರೆಸ್ಟನ್ನು ಪ್ರವೇಶಿಸಿ, ನೈರುತ್ಯವಾಗಿ ಹೋಗಿ, 198ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಲ್ಲಿ ಮಾಕಳಿ ಗ್ರಾಮವನ್ನು ಪ್ರವೇಶಿಸುತ್ತದೆ. ಈ ಬಂಡೀದಾರಿಯು ನಾಯಡೊಲೆಯ ಸರ್ವೆ ನಂ. 2ನೆದರ ಉತ್ತರ ಪಾರ್ಶ್ವದಲ್ಲಿ ನಾಯಡೊಲೆ ಎಲ್ಲೆಯನ್ನು ಪ್ರವೇಶಿಸಿ, 9ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಲ್ಲಿ ಅದನ್ನು ಬಿಡುತ್ತದೆ.

(5) ಕ್ಯಾತಘಟ್ಟಪುರದಿಂದ ದೊಡ್ಡ ಗಂಗವಾಡಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ ಮತ್ತು 1¼ ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 24ನೆ ಮೈಲಿಯ 7ನೆ ಫರ್ಲಾಂ

ಗಿನಲ್ಲಿ ಕ್ಯಾಸಾಪುರದ 60ನೆ ಸರ್ವೆ ನಂಬರಿನ ಈಶಾನ್ಯ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರವಾಗಿ ಹೋಗಿ, 22ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು 46ನೆ ಸರ್ವೆ ನಂಬರಿನ ನೈರುತ್ಯ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(6) ಕ್ಯಾಸಾಪುರದಿಂದ ಮಾಕಳಿಗೆ ಹೋಗುವ ಬಂಡಿದಾರಿ.—4 ಗಜ ಅಗಲವೂ ಮತ್ತು 2 ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 1ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ, 60ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮಕ್ಕೂ ಮತ್ತು ವಾಯವ್ಯಕ್ಕೂ ಹೋಗಿ ಮಾಕಳಿ ಗ್ರಾಮದ 133ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(7) ದಾಸವಾರದಿಂದ ಮಾಕಳಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ ಮತ್ತು 2 ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 3ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ದಾಸವಾರದಿಂದ 11 ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರ ಮಾರ್ಗವಾಗಿ ಹೋಗಿ ಮಾಕಳಿ ಗ್ರಾಮದ 141ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(8) ನಾಗವಾರದಿಂದ ಮಾಕಳಿಗೆ ಹೊಗುವ ಬಂಡೀದಾರಿ.—4 ಗಜ ಅಗಲವೂ 2 ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 4ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ನಾಗವಾರದ 181ನೆ ಸರ್ವೆ ನಂಬರಿನ ಈಶಾನ್ಯ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರ ಮಾರ್ಗವಾಗಿ ಹೋಗಿ 146ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಲ್ಲಿ ಮಾಕಳಿ ಗ್ರಾಮದ ಎಲ್ಲೆಯನ್ನು ಪ್ರವೇಶಿಸುತ್ತದೆ.

(9) ಅಂಬಹಳ್ಳಿ ದೊಡ್ಡಿಯಿಂದ ಎಲೆಕಡಕಲ್ಲಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ ಮತ್ತು 3 ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 10ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಅಂಬಹಳ್ಳಿ ದೊಡ್ಡಿಯ 20ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರವಾಗಿ ಹೋಗಿ, 14ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ 34ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಲ್ಲಿ ಎಲೆಕಡಕಲ್ಲ (ಕುಣಿಗಲ್ ತಾಲ್ಲೂಕು) ನ್ನು ಪ್ರವೇಶಿಸುತ್ತದೆ.

(10) ಹೊಸಹಳ್ಳಿ (ಮಾಕಳಿ) ಯಿಂದ ನಾಯಡೊಲಿಗೆ ಹೋಗುವ ಕಾಲುದಾರಿ (ಫಾರೆಸ್ಟಿನಲ್ಲಿ ಬೈದಾಗುತ್ತದೆ).—2 ಗಜ ಅಗಲವೂ ¾ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಮಾಕಳಿ ಗ್ರಾಮದ 198ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಪೂರ್ವಮಾರ್ಗವಾಗಿ ಹೋಗಿ, 9ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಲ್ಲಿ ನಾಯಡೊಲಿಯನ್ನು ಪ್ರವೇಶಿಸುತ್ತದೆ.

ದೇವಸ್ಥಾನ.

ಹೆಸರು—ಕೃಷ್ಣದೇವರ ಚಟ್ಟಿ.

ಇರುವ ಸ್ಥಳ—ಇದು ಕ್ಯಾಸಾಪುರ, ದಾಸವಾರ ಮತ್ತು ಮಾಕಳಿ ಗ್ರಾಮಗಳ ಮಧ್ಯದಲ್ಲಿದೆ.

ಈ ಕೆಳಗೆ ವಿವರಿಸಿರುವ ಮಾರ್ಗಗಳು ಬಿಡಲ್ಪಟ್ಟಿವೆ:—

(1) ಡಿವಾರ್ಕೇಷ್ ಲೈನಿನ 1ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಕ್ಯಾಸಾಪುರದ 60ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರ ಮಾರ್ಗವಾಗಿ ¼ ಮೈಲಿ ವರೆಗೆ ಹೋಗುವ ಕಾಲುದಾರಿ. ಇದು 4 ಅಡಿ ಅಗಲವುಳ್ಳದ್ದಾಗಿ ಜನರಿಗೆ ಮಾತ್ರ ಬಿಡಲ್ಪಟ್ಟಿದೆ.

(2) ಡಿವಾರ್ಕೇಷ್ ಲೈನಿನ 2ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ, ದಾಸವಾರದ 104ನ ಸರ್ವೆ ನಂಬರಿನಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರಕ್ಕೆ 1 ಮೈಲಿಯ ವರೆಗೆ ಹೋಗುವ ಕಾಲುದಾರಿ ಇದು 4 ಅಡಿ ಅಗಲ ಉಳ್ಳದ್ದಾಗಿ ಜನರಿಗೆ ಮಾತ್ರ ಬಿಡಲ್ಪಟ್ಟಿದೆ.

(3) ಮಾಕಳಿ ಗ್ರಾಮದ 139ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಿಂದ, ದಕ್ಷಿಣ ಮಾರ್ಗವಾಗಿ ಫಾರೆಸ್ಟಿನಲ್ಲಿ ಹೋಗುವ ಕಾಲುದಾರಿ.—ಇದು 4 ಅಡಿ ಅಗಲವುಳ್ಳದ್ದು ಮತ್ತು ½ ಮೈಲಿ ಉದ್ದವಿದೆ. ಜನರ ಉಪಯೋಗಕ್ಕೆ ಮಾತ್ರ ಬಿಡಲ್ಪಟ್ಟಿದೆ.

ಜಲಾಶಯಗಳು.

(ಎ) ರಾಮಾನುಚ್ಚೈಯ್ಯನ ಕಟ್ಟೆ.—ಇದು ಮಾಕಳಿ ಗ್ರಾಮದ ಸರಹದ್ದಿನ 139ನೆ ಸರ್ವೆ ನಂಬರಿನಿಂದ ಸುಮಾರು 100 ಗಜ ಫಾಸಲೆಯಲ್ಲಿ ಫಾರೆಸ್ಟಿನಲ್ಲಿದೆ. ಇದರ ನೀರು ನಾಗವಾರ, ದಾಸವಾರ, ಮಾಕಳಿ ಮತ್ತು ಹೊಸಹಳ್ಳಿ ಗ್ರಾಮಗಳ ಜಾನುವಾರುಗಳಿಂದ ಉಪಯೋಗಿಸಲ್ಪಡುತ್ತೆ.

(ಬಿ) ಶ್ರೀನಿವಾಸಯ್ಯನ ಕಟ್ಟೆ.—ಇದು ಡಿವಾರ್ಕೇಷ್ ಲೈನಿನ 4ನೆ ಮೈಲಿ ಕಲ್ಲಿನಿಂದ 1 ಮೈಲಿ ಫಾಸಲೆಯಲ್ಲಿ ಫಾರೆಸ್ಟಿನಲ್ಲಿದೆ. ದಾಸವಾರ, ನಾಗವಾರ ಮತ್ತು ಕ್ಯಾಸಾಪುರ ಜಾನುವಾರುಗಳಿಂದ ಇದರ ನೀರು ಉಪಯೋಗಿಸಲ್ಪಡುತ್ತದೆ.

1805

ಫಾರೆಸ್ಟ್‌ನಲ್ಲಿರುವ ಗ್ರಾಮಗಳು.

(1) ಹೊಸಹಳ್ಳಿ, (2) ನಾಯಿಡೊಲೆ ದಾಖಲೆಗಳೊಂದೊಡಗೂಡಿದ ಮೂಕಳಿ ಗ್ರಾಮ. ಇದರ ಸುತ್ತಲೂ 6 ಅಡಿ ಅಗಲವುಳ್ಳ ಗ್ರೇಜಿಂಗ್‌ಲೈನ್ ಉಳ್ಳದ್ದಾಗಿದೆ.

ಹುಲ್ಲೂರು ಫಾರೆಸ್ಟ್ ಕ್ಲೋಸ್‌ಪೇಟೆ ಸಬ್ ತಾಲ್ಲೂಕು.

(1) ಕೆಂಚನಕುಪ್ಪೆಯಿಂದ ಲಕ್ಕಸಂದ್ರಕ್ಕೆ ಹೋಗುವ ಬಂಡೀದಾರಿ.—4 ಗಜ ಅಗಲವೂ ಮತ್ತು 1 ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 18ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಕೆಂಚನಕುಪ್ಪೆಯ 127ನೆ ಸರ್ವೆ ನಂಬರಿನ ಪಶ್ಚಿಮಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ವಾಯವ್ಯ ಮಾರ್ಗವಾಗಿ ಹೋಗಿ, 4ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ, ಫಾರೆಸ್ಟನ್ನು ಬಿಟ್ಟು ಲಕ್ಕಸಂದ್ರದ 36ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(2) ಕಾಕರಾಮನಹಳ್ಳಿಯಿಂದ ಗುಡ್ಡದಹಳ್ಳಿಗೆ ಹೋಗುವ ಬಂಡಿದಾರಿ.—4 ಗಜ ಅಗಲವೂ 1 ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 1ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ, ಕಾಕರಾಮನಹಳ್ಳಿಯ 6ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ವಾಯವ್ಯಕ್ಕೂ ಮತ್ತು ದಕ್ಷಿಣಕ್ಕೂ ಹೋಗಿ, 13ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ಹಾಗಲಹಳ್ಳಿಯ 106ನೆ ಸರ್ವೆ ನಂಬರಿನ ಪೂರ್ವಪಾರ್ಶ್ವವನ್ನು ಪ್ರವೇಶಿಸುತ್ತದೆ.

(3) ಗಾಣಕಲ್ಲಿನಿಂದ ಹಾಗಲಹಳ್ಳಿಗೆ ಹೋಗುವ ಕಾಲುದಾರಿ.—2 ಗಜ ಅಗಲವೂ ½ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 15ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ 17ನೆ ಸರ್ವೆ ನಂಬರಿನ ಪಶ್ಚಿಮಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣಕ್ಕೆ ಹೋಗಿ, ಮೇಲೆ ಹೇಳಿದ 2ನೆ ನಂಬರಿನ ಬಂಡಿದಾರಿಯಲ್ಲಿ ಖೈದಾಗುತ್ತದೆ.

VI ಕುಂಬಳಗೋಡ್ ರಿಜರ್ವ್.

(1) ಮಾಚನಾಯಕನಹಳ್ಳಿಯಿಂದ ಬನ್ನಿಕುಪ್ಪೆಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 2 ಫರ್ಲಾಂಗು ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷ್ ಲೈನಿನ 1ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ, ಬನ್ನಿಕುಪ್ಪೆಯ 97ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮ ಮಾರ್ಗವಾಗಿ ಹೋಗಿ, 3ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ಬನ್ನಿಕುಪ್ಪೆಯ 93ನೆ ಸರ್ವೆ ನಂಬರಿನ ಪೂರ್ವಪಾರ್ಶ್ವವನ್ನು ಪ್ರವೇಶಿಸುತ್ತದೆ.

(2) ಕುರುಬರ ಕರೇನಹಳ್ಳಿಯಿಂದ ಕನ್ನಿನಿಕೆಗೆ (ಕಾಯಂಗುತ್ತಾ) ಹೋಗುವ ಬಂಡೀದಾರಿ.— 4 ಗಜ ಅಗಲವೂ 1¼ ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಕುರುಬರ ಕರೇನಹಳ್ಳಿಯ 38ನೆ ಸರ್ವೆ ನಂಬರಿನ ಪೂರ್ವಕ್ಕೆ ; ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಈಶಾನ್ಯಕ್ಕೆ ಹೋಗಿ, 10ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು (ಬೆಂಗಳೂರು ತಾಲ್ಲೂಕು) ಕಾಯಂಗುತ್ತಾ ಕನ್ನಿನಿಕೆ ಗ್ರಾಮದ ಜಮೀನನ್ನು ಪ್ರವೇಶಿಸುತ್ತದೆ

(3) ಕಾಯಂಗುತ್ತಾ ಚಿಕ್ಕ ಕಲ್ಲೂರಿನಿಂದ ಹೆಜ್ಜಾಲಕ್ಕೆ ಹೋಗುವ ಕಾಲುದಾರಿ.—2 ಗಜ ಅಗಲವೂ 1¼ ಫರ್ಲಾಂಗು ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಕಾಯಂಗುತ್ತಾ ಚಿಕ್ಕ ಕಲ್ಲೂರು ಜಮೀನಿಂದ ಡಿವಾರ್ಕೇಷ್ ಲೈನಿನ 9ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣಕ್ಕೆ ಹೋಗಿ, ಹೆಜ್ಜಾಲ ಗ್ರಾಮದ 5ನೆ ಸರ್ವೆ ನಂಬರಿನ ಉತ್ತರಕ್ಕೆ ಡಿವಾರ್ಕೇಷ್ ಲೈನಿನ 11ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಡುತ್ತದೆ.

VII ಹಂದಿಗುಂದಿ ಫಾರೆಸ್ಟ್.

(1) ಹುಣಸಿನಹಳ್ಳಿಯಿಂದ ತುಂಬೀನಹಳ್ಳಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ ¾ ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ತವ್ಮನಾಯಕನಹಳ್ಳಿಯ 19ನೆ ಸರ್ವೆ ನಂಬರಿನ ಈಶಾನ್ಯಕ್ಕೆ ಡಿವಾರ್ಕೇಷ್ ಲೈನಿನ 25ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಆಗ್ನೇಯವಾಗಿ ಹೋಗಿ, ತುಂಬೀನಹಳ್ಳಿಯ (ಹೆಬ್ಬಕೋಡು ದಾಖಲೆ) 4ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(2) ಉರಗಹಳ್ಳಿಯಿಂದ ಹೆಬ್ಬಕೋಡಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 1¼ ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಉರಗಹಳ್ಳಿಯ ಇನಾಮತಿ ಜಮೀನಿಂದ ಡಿವಾರ್ಕೇಷ್ ಲೈನಿನ 9ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮಕ್ಕೆ ಹೋಗಿ, 48ನೆ ಸರ್ವೆ ನಂಬರಿನ ಪೂರ್ವಕ್ಕೆ ಹೆಬ್ಬಕೋಡು ಗ್ರಾಮವನ್ನು ಪ್ರವೇಶಿಸುತ್ತದೆ.

(3) ಮಂಚೇಗೌಡನ ಪಾಳ್ಯದಿಂದ ಹೆಬ್ಬಕೋಡಿಗೆ ಹೋಗುವ ಕಾಲುದಾರಿ.—2 ಗಜ ಅಗಲವೂ $\frac{3}{4}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಮಂಚೇಗೌಡನ ಪಾಳ್ಯದ 48ನೆ ಸರ್ವೆ ನಂಬರಿನ ಪಶ್ಚಿಮಕ್ಕೆ ಡಿಮಾರ್ಕೇಷನ್ ಲೈನಿನ 10ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮಕ್ಕೆ ಹೋಗಿ, ಹೆಬ್ಬಕೋಡು ಗ್ರಾಮದ 48ನೆ ಸರ್ವೆ ನಂಬರಿನ ಆಗ್ನೇಯ ಪಾರ್ಶ್ವದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(4) ಅಣ್ಣಿಹಳ್ಳಿಯಿಂದ ಹುಲ್ಕೆರೆ ಗುನ್ನೂರಿಗೆ ಹೋಗುವ ಕಾಲುದಾರಿ.—2 ಗಜ ಅಗಲವೂ $3\frac{1}{2}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಅಣ್ಣಿಹಳ್ಳಿ ಗ್ರಾಮದ 28ನೆ ಸರ್ವೆ ನಂಬರಿನ ಪಶ್ಚಿಮಕ್ಕೆ ಡಿಮಾರ್ಕೇಷನ್ ಲೈನಿನ 11ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮಕ್ಕೂ ಮತ್ತು ಆಗ್ನೇಯಕ್ಕೂ ಹೋಗಿ, ಹುಲ್ಕೆರೆ-ಗುನ್ನೂರಿನ 1ನೆ ಸರ್ವೆ ನಂಬರಿನ ಈಶಾನ್ಯಕ್ಕೆ 19ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಡುತ್ತದೆ.

(5) ಬೆಳಗುಳಿಯಿಂದ ಹುಲ್ಕೆರೆ-ಗುನ್ನೂರಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ $1\frac{1}{2}$ ಮೈಲಿ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಬೆಳಗುಳಿಯ 10ನೆ ಸರ್ವೆ ನಂಬರಿನ ಪಶ್ಚಿಮಕ್ಕೆ ಡಿಮಾರ್ಕೇಷನ್ ಲೈನಿನ 16ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ವಾಯವ್ಯಕ್ಕೆ ಹೋಗಿ, ಹುಲ್ಕೆರೆ-ಗುನ್ನೂರಿನ 18ನೆ ಸರ್ವೆ ನಂಬರಿನ ಆಗ್ನೇಯಕ್ಕೆ 18ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಡುತ್ತದೆ.

(6) ಕೇತೋಹಳ್ಳಿಯಿಂದ ಉರಗಹಳ್ಳಿಗೆ ಹೋಗುವ ಕಾಲುದಾರಿ.—2 ಗಜ ಅಗಲವೂ $1\frac{1}{4}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಕೇತೋಹಳ್ಳಿಯ 61ನೆ ಸರ್ವೆ ನಂಬರಿನ ದಕ್ಷಿಣಕ್ಕೆ ಡಿಮಾರ್ಕೇಷನ್ ಲೈನಿನ 4ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಆಗ್ನೇಯಕ್ಕೆ ಹೋಗಿ, 7ನೆ ಮೈಲಿಯ 3ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು ಉರಗಹಳ್ಳಿಯ ಕಾಯಂ ಗುತ್ತಾ ಜಮೀನನ್ನು ಪ್ರವೇಶಿಸುತ್ತದೆ.

ಜಲಾಶಯಗಳು.

(1) ಬಾಳಿಕೆರೆ.—14ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ ಡಿಮಾರ್ಕೇಷನ್ ಲೈನಿನಿಂದ 1 ಫರ್ಲಾಂಗು ಫಾನಲಯದಲ್ಲಿ ಫಾರೆಸ್ಟಿನಲ್ಲಿದೆ. ಇದರ ನೀರನ್ನು ಕೋಟಕಲ್, ಪಿಚ್ಕೆರೆ ಮತ್ತು ಕಲ್ಲಬಾಳು ಗ್ರಾಮಗಳ ಜಾನುವಾರುಗಳು ಉಪಯೋಗಿಸುತ್ತವೆ.

(2) ಕಣುವೆ ಹನುಮಂತರಾಯನ ಕಟ್ಟೆ. ಇದು ಡಿಮಾರ್ಕೇಷನ್ ಲೈನಿನ 15ನೆ ಮೈಲಿ ಕಲ್ಲಿನ ಹತ್ತರ ಫಾರೆಸ್ಟಿನಲ್ಲಿದೆ. ಅಂಗಾರನಹಳ್ಳಿ, ಬೆಳಗುಳಿ ಮತ್ತು ಕೋಟಕಲ್ ಗ್ರಾಮದ ಜಾನುವಾರುಗಳು ಇದರ ನೀರನ್ನು ಉಪಯೋಗಿಸುತ್ತವೆ.

(3) ಈರಬಂಡೆಗೌಡನಕೆರೆ.—ಇದು ಡಿಮಾರ್ಕೇಷನ್ ಲೈನಿನ 15ನೆ ಮೈಲಿಯಲ್ಲಿ ಫಾರೆಸ್ಟಿನಲ್ಲಿದೆ. ಹುಲ್ಕೆರೆ-ಗುನ್ನೂರು, ಈರೇಗೌಡನದೊಡ್ಡಿ ಮತ್ತು ಸಿಂಗಸಂದ್ರದ ಜಾನುವಾರುಗಳು ಇದರ ನೀರನ್ನು ಉಪಯೋಗಿಸುತ್ತವೆ.

(4) ಲಿಂಗೇಗೌಡನಕಟ್ಟೆ.—ಹೆಬ್ಬಕೋಡು ಮತ್ತು ಅಣ್ಣಿಹಳ್ಳಿಗಳ ನಡುವೆ ಹಂದಿಗೊಂದಿ ಫಾರೆಸ್ಟಿನ ಮಧ್ಯದಲ್ಲಿದೆ. ಅಣ್ಣಿಹಳ್ಳಿ, ಚೆನ್ನಹಳ್ಳಿ, ಮಂಚೇಗೌಡನಪಾಳ್ಯ, ಹುಚವ್ವನ ದೊಡ್ಡಿ ಮತ್ತು ಹೆಬ್ಬಕೋಡು ಗ್ರಾಮಗಳ ಜಾನುವಾರುಗಳು ಇದರ ನೀರಿಗಾಗಿ ಬರುತ್ತವೆ.

(5) ಬಕ್ಕಸಿದ್ದೇಗೌಡನಕೆರೆ ಅಥವಾ ಹೊಸಕೆರೆ.—ಇದು ಡಿಮಾರ್ಕೇಷನ್ ಲೈನಿನ 13ನೆ ಮೈಲಿಯ 5ನೆ ಫರ್ಲಾಂಗಿನ ಹತ್ತರ ಫಾರೆಸ್ಟಿನಲ್ಲಿದೆ. ಅಣ್ಣಿಹಳ್ಳಿ ಮತ್ತು ಪಿಚನಕೆರೆ ಜಾನುವಾರುಗಳು ಇದರ ನೀರನ್ನು ಕುಡಿಯುತ್ತವೆ.

ಫಾರೆಸ್ಟಿನಲ್ಲಿರುವ ಗ್ರಾಮಗಳು.

(1) ತುಂಬೇನಹಳ್ಳಿಯಿಂದೊಡಗೂಡಿದ ಹೆಬ್ಬಕೋಡು.—ಇದು ಸ್ಟೇಟ್ ಫಾರೆಸ್ಟಿನಲ್ಲಿದ್ದು, ಇದರ ಸುತ್ತಲೂ 6 ಅಡಿ ಅಗಲವುಳ್ಳ ಗ್ರೇಜಿಂಗ್ ಲೈನ್ ಇರುತ್ತದೆ.

(2) ಕಂಚೇಗೌಡನಹಳ್ಳಿ ಗೈರು (ಕೇತೋಹಳ್ಳಿ ದಾಖಲೆ).—ಇದು ಸ್ಟೇಟ್ ಫಾರೆಸ್ಟಿನಲ್ಲಿದ್ದು ಇದರ ಸುತ್ತಲೂ 7 ಗಜ ಅಗಲವುಳ್ಳ ಗ್ರೇಜಿಂಗ್ ಲೈನ್ ಇರುತ್ತದೆ.

VIII ಅಚಲ್ ಫಾರೆಸ್ಟು.

(1) ಅಚಲ್‌ನಿಂದ ವಿಭೂತಿಕೆರೆಗೆ ಹೋಗುವ ಕಾಲುದಾರಿ.—2 ಗಜ ಅಗಲವೂ $1\frac{1}{4}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 5ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಅಚಲ್ ಗ್ರಾಮದ 60ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮಕ್ಕೆ ಹೋಗಿ, 2ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ವಿಭೂತಿಕೆರೆ ಗ್ರಾಮದ 156ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವವನ್ನು ಸೇರುತ್ತದೆ.

IX ತೆಂಗಿನಕಲ್ಲು ಫಾರೆಸ್ಟು.

(1) ಮಲ್ಲಂಗೆರೆಯಿಂದ ಚಾಗರೆಗೆ ಹೋಗುವ ಕಾಲುದಾರಿ.—2 ಗಜ ಅಗಲವೂ 3 ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 24ನೆ ಮೈಲುಕಲ್ಲಿನ ಹತ್ತರ ಮಲ್ಲಂಗೆರೆಯ 6ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣಕ್ಕೆ ಹೋಗಿ, ಚಾಗರೆ (ಸಿಂಗರಾಜಪುರದಾಖಲೆ)ಯ 18ನೆ ಸರ್ವೆ ನಂಬರಿನ ಉತ್ತರಕ್ಕೆ 6ನೆ ಮೈಲಿಯ 3ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಡುತ್ತದೆ.

(2) ಹೊಸದೊಡ್ಡಿಯಿಂದ ತೆಂಗಿನ ಕಲ್ಲಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 5 ಫರ್ಲಾಂಗು ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷನ್ ಲೈನಿನ 28ನೆ ಮೈಲಿಯ 5ನೆ ಫರ್ಲಾಂಗಿನಿಂದ ಸುಮಾರು 100 ಗಜಗಳ ಫಾಸಲೆಯಲ್ಲಿ ಕಾಡನಕುಪ್ಪೆಯ 43ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಆಗ್ನೇಯವಾಗಿ ಹೋಗಿ, ತೆಂಗಿನಕಲ್ ಗ್ರಾಮದ 42ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(3) ಕಾಡನಕುಪ್ಪೆಯ ಹೊಸದೊಡ್ಡಿಯಿಂದ ಅಳ್ಳಾಳಸಂದ್ರಕ್ಕೆ ಹೋಗುವ ಕಾಲುದಾರಿ.—2 ಗಜ ಅಗಲವೂ $\frac{3}{4}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 21ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಹೊಸ ದೊಡ್ಡಿಯ 43ನೆ ಸರ್ವೆ ನಂಬರಿನ ದಕ್ಷಿಣದಿಂದ ಫಾರೆಸ್ಟನ್ನು ಪ್ರವೇಶಿಸಿ, ಆಗ್ನೇಯಕ್ಕೆ ಹೋಗಿ, ಅಳ್ಳಾಳಸಂದ್ರದ 12ನೆ ಸರ್ವೆ ನಂಬರಿನ ಈಶಾನ್ಯಕ್ಕೆ 9ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಡುತ್ತದೆ.

(4) ಅಮ್ಮಣ್ಣಿಪುರದಿಂದ ತೆಂಗಿನಕಲ್ಲಿಗೆ ಹೋಗುವ ಕಾಲುದಾರಿ.—2 ಗಜ ಅಗಲವೂ ಮತ್ತು $1\frac{1}{4}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಅಮ್ಮಣ್ಣಿಪುರದ 1ನೆ ಸರ್ವೆ ನಂಬರಿನ ದಕ್ಷಿಣಕ್ಕೆ, 19ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ನೈರುತ್ಯಕ್ಕೆ ಹೋಗಿ, ತೆಂಗಿನಕಲ್ಲಿನ 42ನೆ ಸರ್ವೆ ನಂಬರಿನ ಉತ್ತರದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(5) ಮೆಣಸಿನ ಹಳ್ಳಿಯಿಂದ ಬೆಲಿಕೊತ್ತನೂರಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 4 ಫರ್ಲಾಂಗು ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 11ನೆ ಮೈಲಿಯ 5ನೆ ಫರ್ಲಾಂಗಿನಿಂದ ಸುಮಾರು 100 ಗಜಗಳ ದೂರದಲ್ಲಿ ಮೆಣಸಿನ ಹಳ್ಳಿಯ 62ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಪೂರ್ವಕ್ಕೆ ಹೋಗಿ, ಬೆಲಿಕೊತ್ತನೂರಿನ 23ನೆ ಸರ್ವೆ ನಂಬರಿನ ನೈರುತ್ಯ ಪಾರ್ಶ್ವವನ್ನು ಸೇರುತ್ತದೆ.

(6) ಮುರಕಣಿಯಿಂದ ಬೆಲಿಕೊತ್ತನೂರಿಗೆ ಹೋಗುವ ಕಾಲುದಾರಿ.—2 ಗಜ ಅಗಲವೂ $\frac{1}{2}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು 13ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಮುರಕಣಿ (ಕಾನಕಾನಹಳ್ಳಿ ತಾಲ್ಲೂಕು) ಯ 101ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮಕ್ಕೆ ಹೋಗಿ, 23ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಲ್ಲಿ ಬೆಲಿಕೊತ್ತನೂರನ್ನು ಪ್ರವೇಶಿಸುತ್ತದೆ.

ಫಾರೆಸ್ಟಿನಲ್ಲಿರುವ ಗ್ರಾಮಗಳು.

1 ತೆಂಗಿನಕಲ್, (2) ಬೆಲಿಕೊತ್ತನೂರು.—ಇವು ಒಂದಕ್ಕೊಂದು ಸೇರಿಕೊಂಡಿವೆ. ಇವುಗಳ ಸುತ್ತಲೂ, ಇವುಗಳನ್ನು ಸ್ಟೇಟ್ ಫಾರೆಸ್ಟಿನಿಂದ ವಿಂಗಡಿಸುವ 7 ಗಜದ ಅಗಲವುಳ್ಳ ಗ್ರೇಜಿಂಗ್ ಲೈನ್ ಇರುತ್ತದೆ.

X ಮುದಗೆರೆ ಪ್ಲಾಂಟೇಷನ್.

(ಎ) ಮುದಗೆರೆ ಬ್ಲಾಕ್.

(1) ಬಿಳಿಕೆರೆಯಿಂದ ಮುದಗೆರೆಗೆ ಹೋಗುವ ಬಂಡೀದಾರಿ (ಬೆಂಗಳೂರು-ಮೈಸೂರು ಮೇನ್ ರೋಡು).—4 ಗಜ ಅಗಲವೂ 100 ಗಜ ಉದ್ದವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಬಿಳಿಕೆರೆಯ 15ನೆ ಸರ್ವೆ ನಂಬರಿನ ಉತ್ತರದಲ್ಲಿ ಪ್ಲಾಂಟೇಷನ್ನು ಪ್ರವೇಶಿಸಿ, ಉತ್ತರಕ್ಕೆ ಹೋಗಿ 42ನೆ ಮೈಲಿಯ 7ನೆ ಫರ್ಲಾಂಗ್ ಕಲ್ಲಿನಿಂದ 95 ಗಜಗಳ ದೂರದಲ್ಲಿ ಮೇನ್ ರೋಡಿಗೆ ಸೇರುತ್ತದೆ.

(ಬಿ) ಕಾಡುಕೊತ್ತನಹಳ್ಳಿ ಬ್ಲಾಕ್.

(2) ಮುದಗೆರೆಯಿಂದ ಸೂಲೇರಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 5 ಫರ್ಲಾಂಗು 19 ಗಜಗಳ ಉದ್ದವೂ ಇರುತ್ತದೆ. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಕಾಡುಕೊತ್ತನಹಳ್ಳಿಯ 2ನೆ ಸರ್ವೇ ನಂಬರಿನ ದಕ್ಷಿಣದಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣಕ್ಕೆ ಹೋಗಿ, 72ನೆ ಸರ್ವೇ ನಂಬರಿನ ಉತ್ತರ ಪಾರ್ಶ್ವದಲ್ಲಿ ಪ್ಲಾಂಟೇಷನ್ನು ಬಿಡುತ್ತದೆ.

ಸೂಚನೆ:—ಈ ಎರಡು ಬಂಡೀದಾರಿಗಳು ಉಭಯಪಾರ್ಶ್ವಗಳಲ್ಲೂ ಕತ್ತಾಳೆಯನ್ನು ನಾಟಿ ಗುರ್ತು ಮಾಡಲ್ಪಟ್ಟಿವೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್‌ನಾಮೆ.

ತಾರೀಖು 22ನೆ ನವಂಬರು 1904.

ಗುರುಪುರ ಫಾರೆಸ್ಟು.

ಸನ್ 1900ನೆ ಇಸವಿಯ XIನೆ ನಂಬರ್ ಫಾರೆಸ್ಟ್ ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,—4ನೆ ಸೆಕ್ಷನ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗೌರ್ನಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ಸ್ಟೇಟ್

ಘೋಷಿಸ್ತು ಮಾಡಿರುವದಾಗಿ ನಂಬರು ಕೆ. 3471—F. L. 21—03—10 ತಾರೀಖು 27—10—04ನೆ ಗೆಜೆಟ್ಟಿನಲ್ಲಿ ಘೋಷಿಸಲ್ಪಟ್ಟಿರುತ್ತೆ :—

ಷೆಡ್ಯೂಲ್.

ಜಿಲ್ಲೆಗಳು.	ತಾಲ್ಲೂಕು.	ವಿಸ್ತೀರ್ಣ.	ಬ್ಯಾಂಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಮೈಸೂರು	ಹುಣಸೂರು ತಾಲ್ಲೂಕು, ಹೆಗ್ಗಂದೂರ ಹೋಬಳಿ	5,334 ಎಕರೆ, 3 ಗುಂಟೆ	ಗುರುಸ್ವಾಮಿ ಹೆಸರಿನ ಬ್ಯಾಂಕ	ಸ್ಥಳ.—ಹುಣಸೂರು ಟೆರ್ಮಗೆ 6 ಮೈಲಿ ದೂರದಲ್ಲಿಧೆ ಮತ್ತು 5–7ನೆ ಮೈಲಿ ಕಲ್ಲುಗಳ ಮಧ್ಯಭಾಗದ ಹುಣಸೂರು–ಹೆಗ್ಗಡದೇವನಕೋಟೆ ಭಾಟೂ ಮಾರ್ಗದ ಎರಡು ಭಾಗದಲ್ಲಿಯೂ ಇರುತ್ತದೆ. ಉತ್ತರಕ್ಕೆ.— ಪೆಂಜಹಳ್ಳಿ ಕಾವಲ್ 1ನೆ ಸರ್ವೆ ನಂಬರು ನೈರುತ್ಯ ಮೂಲೆಯು ಹನುಮಂತಪುರದ ಕಾಲವೆಯನ್ನು ಸೇರತಕ್ಕ ಸ್ಥಳದಿಂದ, ಹೊರಟು, ಎಲ್ಲೆಯು, ಸದರಿ ಪೆಂಜಹಳ್ಳಿ ಸರ್ವೆ ನಂಬರು 1ರ ದಕ್ಷಿಣ ಪಾರ್ಶ್ವವಾಗಿ ಅದೇ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಅಲ್ಲಿಂದ ಮುರಕಲ್ಲು–ವೀರನ ಹೊಸಹಳ್ಳಿ ರಸ್ತೆಯ ಎಡದ ಪಾರ್ಶ್ವವಾಗಿ ಹನುಮಂತಪುರದ ಕಾಲವೆಯ ಮೇಲ್ಭಾಗದಲ್ಲಿರುವ ಹುಣಸೂರು–ಹೆಗ್ಗಡದೇವನಕೋಟೆ ರಸ್ತೆಯ ಸೇತುವೆವರಿಗೂ ಹೋಗುತ್ತದೆ. ನಂತರ ಸದರೀ ಭಾಟೂ ರಸ್ತೆಯ ಎಡಪಾರ್ಶ್ವವಾಗಿ ಆಸ್ಪತ್ರೆ ಕಾವಲ್ 1ನೆ ಸರ್ವೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ನಂತರ ಸದರೀ ನಂಬರಿನ ದಕ್ಷಿಣ ಪಾರ್ಶ್ವವಾಗಿ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. (ಇಲ್ಲಿ ಮಜರೆಕಾಟೇನಹಳ್ಳಿ ಸರ್ವೆ ನಂಬರು 11ರ ನೈರುತ್ಯ ಮೂಲೆಯೂ ಶಿಕ್ಕುತ್ತೆ). ಪೂರ್ವಕ್ಕೆ.—ನಂತರ ಹನುಮಂತಪುರದ ಕಾಲಿವೆ ಬಲಭಾಗದ ಧಡವನ್ನನುಸರಿಸಿ, ಹೆಗ್ಗಡದೇವನಕೋಟೆ ತಾಲ್ಲೂಕು ಮುಸಕೆರೆ ಗಡಿಯೂ, ಮತ್ತು ಹುಣಸೂರು ತಾಲ್ಲೂಕು ವರಂಚಿ ಮತ್ತು ಗೊಂಡನಹುಂಡಿ ಗ್ರಾಮಗಳ ಗಡಿಯೂ, ಶೇರತಕ್ಕ ಸ್ಥಳಕ್ಕೆ ಹೋಗುತ್ತದೆ. ನಂತರ ಹುಣಸೂರು ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕು ಗಡಿ ಅನುಸರಿಸಿ, ಮುಸಕೆರೆ ಗ್ರಾಮದ 31ನೆ ಸರ್ವೆ ನಂಬರಿನ ಈಶಾನ್ಯಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಸದರೀ ಮುಸಕೆರೆ ಸರ್ವೆ ನಂಬರಿನ ಉತ್ತರ ಪಾರ್ಶ್ವವಾಗಿ ಅದರ ವಾಯವ್ಯ ಮೂಲೆಗೆ ಹೋಗುತ್ತದೆ. ನಂತರ ಭೀಮನಹಳ್ಳಿ ಗ್ರಾಮದ 25ನೆ ಸರ್ವೆ ನಂಬರಿನ ಉತ್ತರಪಾರ್ಶ್ವವಾಗಿ ವರಂಚೀ ಗ್ರಾಮದ 16ನೆ ಸರ್ವೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ನಂತರ ಸದರೀ ಗ್ರಾಮದ 16, 17 ಮತ್ತು 18ನೆ ಸರ್ವೆ ನಂಬರುಗಳ ಪೂರ್ವ ಪಾರ್ಶ್ವವಾಗಿ ಕೊನೇ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ನಂತರ ಅದೇ ಗ್ರಾಮದ 1 ಮತ್ತು 21ನೆ ನಂಬರುಗಳ ದಕ್ಷಿಣಪಾರ್ಶ್ವವಾಗಿ ಕೊನೆ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ನಂತರ ಅದೇ ಸರ್ವೆ ನಂಬರಿನ ಪೂರ್ವ ಪಾರ್ಶ್ವವಾಗಿ ಈಶಾನ್ಯ ಮೂಲೆಗೆ ಹೋಗುತ್ತದೆ. ನಂತರ ಅದೇ ಗ್ರಾಮದ 12ನೆ ಸರ್ವೆ ನಂಬರಿನ ಪೂರ್ವಪಾರ್ಶ್ವವಾಗಿ 13ನೆ ನಂಬರು ಕೆರೆಯ ನೈರುತ್ಯ ಮೂಲೆಗೆ ಹೋಗುತ್ತದೆ. ನಂತರ ಭಂಡಿದಾರಿ ಅನುಸರಿಸಿ ಹುಣಸೂರು–ಹೆಗ್ಗಡದೇವನಕೋಟೆ ರಸ್ತೆಯ ಮೇಲಿರುವ ಫರ್ಲಾಂಗು ಕಲ್ಲಿನ ವರಿಗೂ ಹೋಗುತ್ತದೆ. ನಂತರ ಸದರೀ ರಸ್ತೆಯ ಬಲಭಾಗದಲ್ಲಿ, ರಸ್ತೆಯನ್ನನುಸರಿಸಿ ಹುಣಸೂರು–ಹೆಗ್ಗಡದೇವನಕೋಟೆ ತಾಲ್ಲೂಕು ಎಲ್ಲೆಯ ಕಲ್ಲಿನ ವರಿಗೂ, ಹೋಗುತ್ತದೆ. ನಂತರ ಹೆಗ್ಗಡದೇವನ ಕೋಟೆ ತಾಲ್ಲೂಕು ಭೀಮನಹಳ್ಳಿ ಗ್ರಾಮದ ಸರ್ವೆ ನಂಬರು 7 ಮತ್ತು 8, ಮತ್ತು ರಾಜೆಗೌಡನ ಹುಂಡಿ ಗ್ರಾಮದ 10ನೆ ಸರ್ವೆ ನಂಬರುಗಳ ಉತ್ತರ ಪಾರ್ಶ್ವವಾಗಿ ಆಲ್ಮೈರು ನಂಬರಿನ ವಾಯವ್ಯ ಮೂಲೆಯೂ ತುಪ್ಪದಮಡು ಸರ್ವೆ ನಂಬರು 1ರ ಆಗ್ನೇಯ ಮೂಲೆಯೂ ಶೇರುವ ಸ್ಥಳಕ್ಕೆ ಹೋಗುತ್ತದೆ. ಪಶ್ಚಿಮಕ್ಕೆ.—ತುಪ್ಪದ ಮಡು ಸರ್ವೆ ನಂಬರು 1ರ ಮತ್ತು ಹರಳಹಳ್ಳಿ ಸರ್ವೆ ನಂಬರು 16ರ ಪೂರ್ವ ಪಾರ್ಶ್ವಗಳನ್ನನುಸರಿಸಿ ಹೊರಟ ಸ್ಥಳಕ್ಕೆ ಹೋಗುತ್ತದೆ.

1809

2. ಸದರಿ ಜಂಗಲಿಯನ್ನು ಸ್ಟೇಟು ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾಮೆ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮಾದಲ್ಲಿ ನಮೂದಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀ ಹಕ್ಕಿನಿಂದಲಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಫಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ವಹಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರೆಹಾವಾದ ಹಕ್ಕು ಬಾಧ್ಯತೆಗಳು ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರಿಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರೀಗೋಸ್ಕರ ಗಿಡಗಳ್ಯಾವದನ್ನೂ ಕಡಿಯಲಾಗದು. ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡಿಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟು ಫಾರೆಸ್ಟು ಮಾಡಿದ ತರುವಾಯ, ಅದರಲ್ಲಿ,

(a) ಅತಿಕ್ರಮಪ್ರವೇಶ, ದನಕರವನ್ನು ಮೇಯಿಸುವದು, ದನಗಳನ್ನು ಸ್ಟೇಟು ಫಾರೆಸ್ಟಿನಲ್ಲಿ ಹೋಗಲು ಅಪ್ಪಣೆ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯುವದು ಅಥವಾ ಯಾವ ಮರಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೆಯಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು ನೀರಿನಲ್ಲಿ ಡೈನಾಮೇಟು ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳೆಲ್ಲಾ ಜುರ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪುತಗಳಾಗಿವೆ. ಮತ್ತು ಸದರೀ ಸ್ಟೇಟು ಫಾರೆಸ್ಟಿನಲ್ಲಿ ಇದರಡೀ ಕಂಡ ಕೆಲಸಗಳನ್ನು ಮಾಡುವವರು ಆರು ತಿಂಗಳು ಸಜಾ, ಅಥವಾ 500 ರೂಪಾಯಿಗಳು ಜುರ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪಿತಸ್ಥರಾಗಿರುತ್ತಾರೆ.

(a) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟು ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಗೆಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಗೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗೆದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಂಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಪ್ತಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು ಅಥವಾ ಸಾಗಿಸುವದು.

(f) ಸಾಗುವಳೀಗಾಗಲಿ ಅಥವಾ ಇನ್ನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಸಿದ್ಧಪತ್ರಿಕೆ ಫಾಯಿಷಾಗುವ ತಾರೀಖು ಲಾಗಾಯಿತು ಮೂರುತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇದೆ ಅಥವಾ ಉಂಟು ಎಂತ ಹೇಳುವದು ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇದೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹಮೂಲಕವಾಗಲೀ ಅಥವಾ ರೂಬರೂಬಾಗಲೀ ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಯಾ ಇತರ ರುಜುವಾತನ್ನು ಹಾಜರ್ಮಾಡಬೇಕು.

ಅ. ಆನಂದರಾವ್,
ಫಾರೆಸ್ಟು ಸೆಟಲ್‌ಮೆಂಟ್ ಆಫಿಸರು.

ಹಾಸನ ಡಿಸ್ಟ್ರಿಕ್ಟ್.

1904ನೆ ಇಸವಿ ಸೆಪ್ಟಂಬರ್ ತಾರೀಖು 26ನೆ ಸೋಮವಾರ ದಿವಸ ಹಾಸನ ಡಿಸ್ಟ್ರಿಕ್ಟ್ ಬೋರ್ಡಿನವರು ಕೀರಿ ನಡೆಸಿದ ಸಭೆಯ ನಡವಳಿಕೆಗಳು.

ಹಾಜರು.

ಪಿ. ಆರ್. ಡಬ್ಲ್ಯೂ. ವೆದರಾಲ್ ಎಸ್ಕ್ವಯರ್‌ರವರು (ಪ್ರೆಸಿಡೆಂಟ್).

ಎಕ್ಸ್ ಅಫಿಷಿಯಲ್ ಮೆಂಬರುಗಳು.

ಮೆ॥ ಸಿ. ಎ. ಮಹದೇವಶಾಸ್ತ್ರಿಗಳವರು, ಬಿ. ಎ., ಬಿ. ಸಿ. ಇ., ಹಾಸನ ಡಿವೀಜನ್ ಎಕ್ಸಿಕ್ಯೂಟಿವ್ ಇಂಜನಿಯರ್.
,, ಸೈಯದ್ ಅಮೀರ್ ಹಸನ್‌ಸಾಹೇಬರು, ಸಕಲೇಶಪುರದ ಸೀನಿಯರ್ ಅಸಿಸ್ಟೆಂಟ್ ಕಮೀಷನರ್.
,, ಕೆ. ಚಾಂಡಿಸಾಹೇಬರು, ಬಿ. ಎ., ಹಾಸನ ಡಿ॥ ಜನರಲ್ ಅ॥ ಕಮೀಷನರವರು.
,, ಬಿ. ರಾಮಸ್ವಾಮೈಯ್ಯನವರು, ಬಿ. ಎ., ಬಿ. ಎಲ್, ಹಾಸನ ಡಿ॥ ಟ್ರೆಜರಿ ಅ॥ ಕಮೀಷನರವರು.
,, ಸಿ. ಅಪ್ಪಾದೊರೆ ಮೊದಲಿಯಾರ್ರು, ಹಾಸನ ಡಿ॥ ಅಸಿಸ್ಟೆಂಟ್ ಸರ್ಜನ್‌ರವರು.
,, ಎಂ. ಕೆ. ತಿರುಮಲಾಚಾರ್ಯರವರು, ಬಿ. ಎ., ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟ್ ಸ್ಕೂಲ್ ಡಿ॥ ಇನ್‌ಸ್ಪೆಕ್ಟರು.

ನಾನ್ ಅಫೀಷಿಯಲ್ ಮೆಂಬರುಗಳು.

ಮೆ॥ ಎಸ್. ಶ್ರೀಕಂಠಯ್ಯನವರು.
,, ಜಿ. ತಿರುನಾರಾಯಣಯ್ಯಂಗಾರ್ಯರು.
,, ಕೇಣಿ ಮಹದೇವಪ್ಪನವರು.
,, ಗುರುಲಿಂಗೇಗೌಡರು.
,, ಮಹಲಿಂಗೇಗೌಡರು.
,, ನಂಜಂಣನವರು.
,, ಡಬ್ಲ್ಯೂ. ಎಲ್. ಕ್ಯಾಪರ್ಸಾಹೇಬರು.
ಮೆ॥ ಅಬ್ದುಲ್ಲಾ ಸಾಬರು.
,, ಕೆ. ತಮ್ಮಯ್ಯನವರು.
,, ಸೂರ್ಯನಾರಾಯಣ ಶೆಟ್ಟರು.
,, ಕೆಂಚರಾಯಶೆಟ್ರು.
,, ಕೋನೇರಿ ರಾಮಶೆಟ್ರು.
,, ದಾಸಪ್ಪನವರು.

ಗೈರ್ ಹಾಜರು.

ಮೆ॥ ಹಬೀಬುಲ್ಲಾ ಸಾಹೇಬರು.
,, ಎಸ್. ಡಿ. ವೆಂಕಟ್ರಾಮೈಯ್ಯನವರು.
,, ಎಂ. ಲಕ್ಷ್ಮೀನರಶಿಂಹಯ್ಯಂಗಾರ್ಯರು.
ಮೆ॥ ಪದ್ಮಶೆಟ್ಟರು.
,, ಐಗೂರು ಮಲ್ಲೇಗೌಡರು.

I. 1904ನೆ ಇಸವಿ ಮಾರ್ಚಿ 5ರ ಮುಕ್ತಂ 3366—75 ಎಲ್. ಎಫ್. 105—03ನೆ ನಂಬರ್ ಗವರ್ನಮೆಂಟ್ ಪ್ರೊಸೀಡಿಂಗ್ಸ್ ಮೇರೆ ವಿಧಾಯಕವಾಗಿರುವ ತಖ್ತೆಗಳ ನಿಶಿ ತಯಾರಾದ 1903—04ನೆ ಸಾಲಿನ ಡಿಸ್ಟ್ರಿಕ್ಟ್ ಫಂಡ್ ಅಡ್ಮಿನಿಸ್ಟ್ರೇಷನ್ ರಿಪೋರ್ಟನ್ನು ಓದಲಾಯಿತು.

ತೀರ್ಮಾನ.—ರಿಪೋರ್ಟನ್ನು ಪ್ಯಾಸ್ಮಾಡಿ ಗವರ್ನಮೆಂಟಿಗೆ ರವಾನಿಸಬಹುದೆಂತ ತೀರ್ಮಾನಿಸಲಾಯಿತು.

II. ಜೇಲೂರು ತಾಲ್ಲೂಕು ಹಳೇಬೀಡಿನಲ್ಲಿರುವ ಹಳೇ ಪೊಲೀಸ್ ಸ್ಟೇಷನ್ನು ಪ್ರಯಾಣೀಕರ ಉಪಯೋಗಕ್ಕಾಗಿ ಮುಸಾಫರಿಖಾನಾವಾಗಿ ತೆಗದುಕೊಳ್ಳುವ ಭಾಗವನ್ನು ಸೂಚಿಸಿ ಹಾಸನ ಡಿವೀಜನ್ ಎಕ್ಸಿಕ್ಯೂಟಿವ್ ಇಂಜನಿಯರ್‌ರವರಿಂದ ತಲಪಿದ 26—30-8-04ನೆ ಮುಕ್ತಂನ 355ನೆ ನಂಬರ್ ಡಾಕೆಟನ್ನು ಓದಲಾಯಿತು.

ತೀರ್ಮಾನ.—ಪ್ರಸಕ್ತವಾದ ಕಟ್ಟಡವನ್ನು ಹಳೇಬೀಡಿಗೆ ಬರತಕ್ಕ ಪ್ರಯಾಣೀಕರ ಉಪಯೋಗಕ್ಕಾಗಿ ತೆಗದುಕೊಂಡು ದುರಸ್ತುಪಡಿಸುವ ಬಗ್ಗೆ ಡಿಸ್ಟ್ರಿಕ್ಟ್ ಬೋರ್ಡಿಗೆ ವಹಿಸುವ ವಿಷಯದಲ್ಲಿ ಅಭ್ಯಂತ್ರವೇನಾದರೂ ಉಂಟೆ? ಎಂತ ವಿಚಾರಿಸಿ ಹಾಸನ ಡಿಸ್ಟ್ರಿಕ್ಟ್ ಪೊಲೀಸ್ ಅ॥ ಸೂಪರಿಂಟೆಂಡೆಂಟ್ ಸಾಹೇಬರವರಿಗೆ ಬರಿಸಬೇಕೆಂತ ತೀರ್ಮಾನಿಸಲಾಯಿತು.

III. ಹಾಸನ ತಾಲ್ಲೂಕಿಗೆ ಶೇರಿದ ಗ್ರಾಮದಲ್ಲಿ ಒಂದು ವೈದ್ಯಶಾಲೇ ಅಥವಾ ಆಸ್ಪತ್ರೆಯನ್ನಾಗಲಿ ಸ್ಥಾಪಿಸುವ ವಿಷಯದಲ್ಲಿ ಹಾಸನ ಡಿಸ್ಟ್ರಿಕ್ಟ್ ಬೋರ್ಡಿನವರು 12—4—04ನೆ ಮುಕ್ತಂನಲ್ಲಿ ನಡಿಸಿದ ಮೀಟಿಂಗಿನ ತೀರ್ಮಾನವನ್ನು ಓದಲಾಯಿತು.

ಮೇಲ್ಕಂಡ ವಿಷಯದಲ್ಲಿ ಗ್ರಾಮ ಯೂನಿಯನ್ ಪಂಚಾಯಿತದ ಮತ್ತು ಹಾಸನ ತಾಲ್ಲೂಕು ಬೋರ್ಡಿನ ತೀರ್ಮಾನವನ್ನು ಸಹಾ ಓದಲಾಯಿತು.

ತೀರ್ಮಾನ.—ಮೇಲೆ ಓದಲ್ಪಟ್ಟ ಯೂನಿಯನ್ ಪಂಚಾಯಿತದವರು ಸೂಚಿಸಿರುವಂತೆ ಕ್ರಮವಾದ ಆಸ್ಪತ್ರೆಯನ್ನು ಸ್ಥಾಪಿಸಿ ಪ್ರೊವಿಷಿಯಲ್ ಫಂಡಿನಿಂದ ಹೆಚ್ಚು ಖರ್ಚು ಮಾಡಲು ಅವಕಾಶವಿಲ್ಲವಾಗಿ ಗ್ರಾಮದಲ್ಲಿ ಒಂದು ನೇಟಿವ್ ವೈದ್ಯಶಾಲಾವನ್ನು ಸ್ಥಾಪಿಸಲು ತೀರ್ಮಾನಿಸಲಾಯಿತು.

IV. ಡಿಸ್ಟ್ರಿಕ್ಟ್ ಫಂಡ್ ರಸ್ತೆಗಳಿಗೆ ಮೈಲಿಯಾನಾ ದರಗಳನ್ನು ಹೆಚ್ಚಿಸಬೇಕೆಂತ ಫೈನ್ಯಾನ್ಸ್ ಕಮಿಟಿಯವರು ಅಭಿಪ್ರಾಯಪಟ್ಟು ಕಳುಹಿಸಿದ ಡಿಸ್ಟ್ರಿಕ್ಟ್ ಫಂಡ್ ರಸ್ತೆಗಳ ಪಟ್ಟಿಯನ್ನು 4—6—04ನೆ ಮುಕ್ತಂನಲ್ಲಿ ನಡದ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗ್‌ನಲ್ಲಿ ಓದಿ ತೀರ್ಮಾನ ಮಾಡಿರುವದರಲ್ಲಿ ಭರ್ತವಳ್ಳಿ—ಆಲೂರ್ (ಲೂಪ್) ಅಡ್ಡ ರಸ್ತೆಯನ್ನು ಬಿಟ್ಟಿರುವ ವಿಚಾರ ಕುರಿತು ಗೌರ್ನಮೆಂಟಿನಿಂದ ತಲ್ಪಿರುವ 29—7—04ನೆ ಮುಕ್ತಂ 773-8—ಎಲ್. ಬಿ. 6-04ನೆ ನಂ. ಪ್ರೊಸೀಡಿಂಗ್ಸಿನ 6ನೆ ಪ್ಯಾರಾವನ್ನು ಪುನಹ ಓದಲಾಯಿತು.

ಭರ್ತವಳ್ಳಿ—ಆಲೂರ ಅಡ್ಡರಸ್ತೆಯು ಡಿಸ್ಟ್ರಿಕ್ಟ ಫಂಡ್ ಬಜ್ಜೆಟ ಜೊತೆಯಲ್ಲಿ ಕಳುಹಿಸಲ್ಪಟ್ಟ ಫೈನ್ಯಾನ್ಸ ಕಮಿಟಿಯವರ ರಿಪೋರ್ಟನಲ್ಲಿ ಹಸ್ತದೋಷದಿಂದ ಬಿಡಲ್ಪಟ್ಟದ್ದಾಗಿಯೂ ಸದರಿ ರಸ್ತೆಗೆ ನಮೂದು ಮಾಡಿರುವ ಹೆಚ್ಚಿಗೆ ಧರವು ಪ್ಯಾಸಾಗಬಹುದೆಂ ತಲೂ 24—9—04ನೆ ಮರ್ಕುಂನಲ್ಲಿ ಫೈನ್ಯಾನ್ಸ ಕಮಿಟಿಯವರು ಮಾಡಿರುವ ತೀರ್ಮಾನವನ್ನು ಸಹಾ ಓದಲಾಯಿತು.

ತೀರ್ಮಾನ.—ಭರ್ತವಳ್ಳಿ-ಆಲೂರು ಅಡ್ಡರಸ್ತೆ ರಿಪೇರಿಗೆ ಮೈಲಿ ಬಂದಕ್ಕೆ ಹೆಚ್ಚು ದರವನ್ನು ಒಪ್ಪಿರುವದಾಗಿ ತೀರ್ಮಾನಿಸಲಾಯಿತು.

V. ಡಿಸ್ಟ್ರಿಕ್ಟ ಫಂಡಿನಿಂದ ನಡಿಯಬೇಕಾದ ಕಾಂಗಾರಿಗಳಿಗೆ ಅಂದಾಜಾಗಳಿಗೆ ಸಂಬಂಧಪಟ್ಟ ನಡವಳಿಕೆಗಳನ್ನು ಓದಲಾಯಿತು.

ತೀರ್ಮಾನ.—ಈ ಕೆಳಗೆ ನಮೂದು ಮಾಡಿರುವ ಕೆಲಸಗಳ ಅಂದಾಜಾಗಳನ್ನು ಅವುಗಳ ಎದುರಿಗೆ ನಮೂದಿಸಿರುವ ಮೊಬಲಗ್ಯೆ ಅತಿಕ್ರಮಿಸದಂತೆ ಚಾಲ್ತಿ ಸಾಲಿನಲ್ಲಿ ಅಂದಾಜಾಗಳನ್ನು ಮಂಜೂರು ಮಾಡಬಹುದೆಂತ ತೀರ್ಮಾನಿಸಲಾಯಿತು.

	ಕೆಲಸಗಳ ಹೆಸರು.	ಅಂದಾಜಾ ಮೊಬಲಗು. ರೂ.	ಆ.	ಪೈ.
1.	ಮಂಜರಾಬಾದ ತಾಲ್ಲೂಕು ಹಾರ್ಬಾಳ ಗ್ರಾಮದಲ್ಲಿ ಬಂದು ಭಾವಿ ತೆಗಿಸತಕ್ಕದ್ದು	458	0	0
2.	ಬೆಳಗೋಡು ದೊಡ್ಡಿ ನೆಲಕ್ಕೆ ಕಲ್ಲು ಚಪ್ಪಡಿ ಹಾಸತಕ್ಕದ್ದು ..	149	0	0
3.	ಆಲೂರ ಸಬ ತಾಲ್ಲೂಕು ಪಾಳ್ಯದ ಮುಸಾಫರಖಾನೆಗೆ ಸುಣ್ಣಹಚ್ಚಿಸತಕ್ಕದ್ದು	9	0	0
4.	ಚನ್ನರಾಯಪಟ್ಟಣ ಮುಸಾಫರಖಾನಾ ರಿಪೇರಿ ಮಾಡತಕ್ಕದ್ದು ...	249	0	0
5.	ಹೊಳೆ ನರಸೀಪುರದ ಸೇತ್ವೆಬಳಿ ಇರುವ ಸುಂಕದ ಮನೆ ರಿಪೇರಿ ಮಾಡತಕ್ಕದ್ದು	191	0	0
6.	ಹೊಳೆ ನರಸೀಪುರದ ತಾಲ್ಲೂಕು ಹಿರಿಹಳ್ಳಿ ಕೊಪ್ಪಲ್‌ನಲ್ಲಿ ಬಂದು ಭಾವಿ ತೋಡಿಸತಕ್ಕದ್ದು	360	0	0

VI. ಎಸಳೂರು ಪೇಟೆಯಲ್ಲಿ ಜನಗಳ ಉಪಯೋಗಕ್ಕಾಗಿ ಹಾಲಿ ಗೊತ್ತಾಗಿರತಕ್ಕ ಜಾಗದಲ್ಲಿ ಬಂದು ಭಾವಿಯನ್ನು ತೋಡಿಸುವದು ಅತ್ಯವಶ್ಯಕವೆಂತಲೂ ಸದರಿ ಭಾವಿ ಕಾಂಗಾರಿಗಾಗಿ ಅಪ್ಪಣ್ಣಶೆಟ್ಟರು ಎಂಬುವರು 200 ರೂಪಾಯಿ ಕಂಟ್ರಿಬ್ಯೂಷನ್‌ಯಾನೆ ಚಂದಾವನ್ನು ಡಿಪಾಜಿಟ ಮಾಡಿರುವದ್ದರಿಂದಲೂ ಸಹಾ ಸದರಿ ಕಾಂಗಾರಿಗೋಸ್ಕರ ಕಳುಹಿಸಿರುವ 706 ರೂಪಾಯಿ ಅಂದಾಜಾಕ್ಕೆ ಸಂಬಂಧಪಟ್ಟ ಸಕ್ಲೇಶಪುರದ ಸಬ ಡಿವೀಜನ ಆಫಿಸರವರಿಂದ ಬಂದಿರುವ 30—3—04ನೆ ಮರ್ಕುಂ 781ನೆ ನಂಬರು ಯಾದಿ ಆಜ್ಞೆರುಳ್ಳ ನಡವಳಿಕೆಯನ್ನು ಓದಲಾಯಿತು.

ತೀರ್ಮಾನ.—ಮೇಲ್ಕಂಡ ಕಾಂಗಾರಿ ಅಂದಾಜಾವನ್ನು ಗೌರ್ನಮೆಂಟ ಮಂಜೂರಾತಿ ಬಗ್ಯೆ ಕಳುಹಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

VII. ಚಾಲ್ತಿ ಸಾಲಿನಲ್ಲಿ ಹಳ್ಳಿ ಮೈಸೂರು-ಗುಬ್ಬಿ ರಸ್ತೆಯಲ್ಲಿ ಬಂದು ಹೊಸ ಮೊರಿ ಕಟ್ಟತಕ್ಕ ಕಾಂಗಾರಿಯನು ನಡಿಸತಕ್ಕ ಭಾಗದಲ್ಲಿ ಅಪ್ಪಣೆ ಬೇಡಿ ಹಾಸನ ಡಿಸ್ಟ್ರಿಕ್ಟ ಜನರಲ ಅಸಿಸ್ಟೆಂಟ ಕಮಿಷನರವರಿಂದ ತಲ್ಪಿದ 18—7—04ನೆ ಮರ್ಕುಂ 170ನೇ ನಂಬರ ಯಾದಿ ಆಜ್ಞೆರಾದ ನಡವಳಿಕೆಯನ್ನು ಓದಲಾಯಿತು.

ತೀರ್ಮಾನ.— ಮುಖ್ಯವಾದ ಇತರ ಕೆಲಸಗಳೊಂದಿಗೆ ಮೇಲ್ಕಂಡ ಕೆಲಸವನ್ನು ನಡಿಸಲು ಡಿಸ್ಟ್ರಿಕ್ಟ ಫಂಡನಲ್ಲಿ ಹಣ ಸಾಕಾಗುತ್ತೆಂತ ಕಾಣಬರುವದಿಲ್ಲವಾಗಿ ಸದರಿ ಕೆಲಸವನ್ನು ನಡಿಸುವದನ್ನು ಸಧ್ಯಕ್ಕೆ ನಿಲ್ಲಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

VIII. 500 ರೂಪಾಯಿಗಳು ಮತ್ತು ಅದಕ್ಕೆ ಕಮ್ಮಿ ಮೊಬಲಗಿನಲ್ಲಿ ಲಾಗವಡು ಆಗುವ ಕೆಲಸಗಳನ್ನು ಮಂಜೂರ್ಮಾಡಲು ಲೋಕಲ ಬೋರ್ಡ ರೂಲ್ಸ 138ನೆ ಪ್ಯಾರಾ ಅನುಸರಿಸಿ ಡಿಸ್ಟ್ರಿಕ್ಟ ಬೋರ್ಡಿನವರಿಗೆ ಅಧಿಕಾರ ವಿರುತ್ತೆಯೆ ಹೊರ್ತು ಪ್ರೆಸಿಡೆಂಟರಿಗೆ ಇಲ್ಲವೆಂಬ ಭಾಗವನ್ನ ಸೂಚಿಸಿ ಸೆಕ್ರಿಟರಿಯವರಿಂದ ತಲಪಿದ 19—9—04ನೆ ಮರ್ಕುಂ 2271-116-2—ಎಲ್. ಬಿ. ನೆ ನಂಬರ ಡಾಕೆಟನ್ನು ಓದಿ ವಿಲೇಯಿಡಿಸಲಾಯಿತು.

IX. ಡಿಸ್ಟ್ರಿಕ್ಟ ಬೋರ್ಡ ಮೆಂಬರ ಮೆ॥ ವೆಂಕಟರಾಮ್ಯೆಯ್ಯನವರು, ಹೊಳೇನರಸೀಪುರದಲ್ಲಿ ಗೈರ ಹಾಜರಾಗಿರುವದ್ದರಿಂದ ಡಿಸ್ಟ್ರಿಕ್ಟ ಬೋರ್ಡ ಮೀಟಿಂಗಿನ ನೋಟಿಸ ಜಾರಿ ಮಾಡಿಸಲು ಅವಕಾಶವಿರಲಿಲ್ಲವಾಗಿ ನಮೂದು ಮಾಡಿ ಹೊಳೇನರಸೀಪುರದ ತಾಲ್ಲೂಕು ಅಮಲ್‌ದಾರ್ರಿಂದ ತಲ್ಪಿದ 21 – 9 – 04ನೆ ಮರ್ಕುಂ 98ನೆ ನಂಬರ ರಿಪೋರ್ಟನ್ನು ಓದಿ ವಿಲೇಯಿಡಿಸಲಾಯಿತು.

X. ಮೈಸೂರು ದಸರಾ ಪ್ರಜಾ ಪ್ರತಿನಿಧಿ ಸಭೆಯ ನಡವಳಿಕೆಗಳು ಮೊದಲು ನಿಷ್ಕರ್ಷೆ ಮಾಡಿದ್ದಂತೆ 22—10—04 ತಾರೀಖಿಗೆ ಬದಲಾಗಿ 21—10 – 04ನೆ ತಾರೀಖಿನಲ್ಲಿ ಪ್ರಾರಂಭವಾಗುತ್ತೆಂಬ ವಿಷಯವನ್ನು ಬೋರ್ಡ ಮೆಂಬರುಗಳಿಗೆ ತಿಳಿಸಲಾಯಿತು.

XI. ಮುಂದಿನ ಡಿಸ್ಟ್ರಿಕ್ಟ ಬೋರ್ಡ ಮೀಟಿಂಗನ್ನು ಬರುವ ನವಂಬರ 14ನೆ ತಾರೀಖು ಸೋಮವಾರ ಮಧ್ಯಾನ್ಹ 3 ಘಂಟಿಗೆ ನಡಿಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಪಿ. ಆರ್. ಡಬ್ಲ್ಯೂ. ವೆದರಾಲ್,
ಪ್ರೆಸಿಡೆಂಟ, ಡಿಸ್ಟ್ರಿಕ್ಟ ಫಂಡ ಬೋರ್ಡ.

ಶಿವಮೊಗ್ಗ ಡಿಸ್ಟ್ರಿಕ್ಟ ಜಡ್ಜರವರ ಕೋರ್ಟನಲ್ಲಿ.

ಸನ 1904—05ನೆ ಇಸವಿ ಮಿ॥ ಅರ್ಜೀ ನಂ. 119.

ಅರ್ಜೀದಾರ ನಾರಾಯಣಾವಧಾನಿ, ಮೈನರಾದ ಸುಬ್ಬಮ್ಮ ಮತ್ತೂರು ಸ್ಥಳದ ಕೊಮಾರಾವಧಾನಿಗಳ ಮಗ ರಾಮಾವಧಾನಿಗಳ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಸುಬ್ಬಮ್ಮನಿಗೆ ಪೋಷಕ ಆಗಬೇಕೆಂಬ ಹಕ್ಕಿನ ಮೇಲೆ ಶಿವಮೊಗ್ಗಾ ತಾಲ್ಲೂಕು ಹೊಸಹಳ್ಳಿ ಸ್ಥಳದ ನಾರಾಯಣಾವಧಾನಿ ಎಂಬವರು ಸದರೀ ಮೈನರಿನ ಆಸ್ತೀ ಕಾಪಾಡುವದಕ್ಕೆ ಸರ್ಟಿಫಿಕೇಟ ಬಗ್ಗೆ ಅರ್ಜಿ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ ಬಗ್ಗೆ ಸನ 1904ನೆ ಇಸವಿ ಡಿಸೆಂಬರ ತಾರೀಖು 16ರಲ್ಲು ಮೊಕರರು ಮಾಡಿರುವದಾಗಿ ಇದರಿಂದ ನೋಟಿಸ ಕೊಡಲಾಗಿಧೆ.

ಸನ 1904ನೆ ಇಸವಿ ನವಂಬರ ತಿಂಗಳು 29ನೆ ತಾರೀಖಿನಲ್ಲಿ ಕೋರ್ಟ ಮೊಹರ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ. ವೆಂಕಟವರದಾ ಐಯ್ಯಂಗಾರ,
ಡಿಸ್ಟ್ರಿಕ್ಟ ಜಡ್ಜ.

ಬೆಂಗಳೂರು ಸಬ ಜಡ್ಜರವರ ಕೋರ್ಟನಲ್ಲಿ.

ಸನ 1904—1905ನೆ ಇಸವಿ ಮಿ॥ ಅರ್ಜೀ ನಂಬರ 161.

ಅರ್ಜೀದಾರು ಬೆಂಗಳೂರು ಚಿಕ್ಕಪೇಟೆದಲ್ಲಿ ವಾಸವಾಗಿರುವ ಕೃಷ್ಣಪಂಡಿತ ಮೈನರ, ಗಾರ್ಡಿಯಾ ಅಕ್ಕ ನಂಜಮ್ಮ, ಮೈನರಾದ ಬೆಂಗಳೂರು ಚಿಕ್ಕಪೇಟೆಯಲ್ಲಿ ವಾಸವಾಗಿರುವ ಜ.ನಿಕಮ್ಮನ ಮಕ್ಕಳಾದ ಕೃಷ್ಣಪಂಡಿತ ವ.ತ್ತು ನಂಜುಂಡ ಎಂಬುವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಕೃಷ್ಣಪಂಡಿತ ಮತ್ತು ನಂಜುಂಡ ಎಂಬುವರಿಗೆ ಅಕ್ಕನಾಗಬೇಕೆಂಬ ಹಕ್ಕಿನ ಮೇಲೆ ಮೇಲ್ಕಂಡ ಅರ್ಜೆದಾರ ನಂಜಮ್ಮನು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ ಬಗ್ಗೆ ಅರ್ಜಿ ಕೊಟ್ಟು ಇರುತ್ತಾಳೆ ಸದರೀ ಅರ್ಜಿ ಹಿಯರಿಂಗ ಬಗ್ಗೆ ಸನ 1904ನೆ ಇಸವಿ ಡಿಸೆಂಬರ ತಾರೀಖು 9ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ ಕೊಡೋಣಾಗಿಧೆ.

ಸನ 1904ನೆ ಇಸವಿ ನವಂಬರ ತಿಂಗಳು 28ನೆ ತಾರೀಖಿನಲ್ಲಿ ಕೋರ್ಟ ಮೊಹರ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ 1904–05ನೆ ಇಸವಿ ಮಿ॥ ಅರ್ಜೀ ನಂ. 220.

ಅರ್ಜೀದಾರು ಬೆಂಗಳೂರು ಶೇಷಾದ್ರಿ ಪುರದಲ್ಲಿರುವ ಹೆಸರುಘೆಟ್ಟ ಗ್ಯಾಸ ಫಾರಂ ಹೆಡಕ್ಲಾರ್ಕ P. R. ನರಸಿಂಗರಾವ, ಮೈನರ್ದ ಬೆಂಗಳೂರು ತಾಲ್ಲೂಕು ಅಗರದ ಹೋಬಳಿ ಜರುಗನಹಳ್ಳಿಯಲ್ಲಿ ವಾಸವಾಗಿದ್ದ ಲಕ್ಷ್ಮಿನರಸಪ್ಪನ ಮಗ ಸುಬ್ಬರಾಯನ ಆಸ್ತಿ ವಿಷಯದಲ್ಲಿ—

10. ಕಂಟ್ರಾಕ್ಟುದಾರರಿಗೆ ನಗದಾಗಿ ಅಡ್ವಾನ್ಸ್ ಏನೂ ಕೊಡುವದಿಲ್ಲ. ಸರಬರಾಯಿ ಮಾಡಲ್ಪಟ್ಟಂಥಾ ಸಾಮಾನ್ ಕಿಮ್ಮತು ಪ್ರತಿ ತಿಂಗಳ 1ನೇ ತಾರೀಖು ನಂತರ ಕಂಟ್ರಾಕ್ಟುದಾರರಿಗೆ ಸೆಂಟ್ರಲ್ ಜೈಲ್ ಸೂಪರಿಂಟೆಂಡೆಂಟರವರಿಂದ ಪಾವತಿ ಮಾಡಲ್ಪಡುವದು.

11. ಉಗ್ರಾಣದ ಕೊಠಡಿಗಳ ಸ್ವಾಧೀನ ಕಂಟ್ರಾಕ್ಟುದಾರರಿಗೆ ಕೊಡಲ್ಪಡುವದು. ಅವುಗಳಲ್ಲಿ ಅವರು ಕೆಟ್ಟುಹೋಗದೆ ಇರತಕ್ಕ ಎಲ್ಲಾ ಜಿನಸುಗಳನ್ನೂ ಒಂದು ತಿಂಗಳ ಸರಬರಾಯಿಗೆ ಕಮ್ಮಿ ಇಲ್ಲದಂತೆ ಯಾವಾಗಲೂ ಇಟ್ಟಿರಬೇಕು. ಕೆಟ್ಟುಹೋಗತಕ್ಕಂಥಾ ಪದಾರ್ಥಗಳು ಅಂದರೆ ತರಕಾರಿ ಮುಂತಾದ್ದು ಪ್ರತಿದಿನವೂ ಬೆಳಗಿನ 8 ಘಂಟೆಗೆ ಜೈಲ್‌ನಲ್ಲಿ ಹಾಜರ್ಮಾಡಬೇಕು.

12. ಈ ಕಂಟ್ರಾಕ್ಟು ಬಳಿಗುತ್ತಿಗೆದಾರಿಗೆ ಕೊಡಬಾರದು.

13. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮುಚ್ಚಳಿಕೆಯ ಷರತ್ತಿಗೆ ತಪ್ಪಿ ನಡೆದರೂ ಅಥವಾ ನಾಲಾಯಖಾದ ಸಾಮಾನನ್ನು ಸರಬರಾಯಿ ಮಾಡಿದರೂ ಜೈಲ್ ಸೂಪರಿಂಟೆಂಡೆಂಟರು ಅವರ ಯುಕ್ತಾನುಸಾರ 50 ರೂಪಾಯಿಗೆ ಮೀರದ ಜರ್ಮಾನೆ ಹಾಕುವರು ಮತ್ತು ಪದೇ ಪದೇ ಆ ಮುಚ್ಚಳಿಕೆ ಷರತ್ತಿಗೆ ವಿರೋಧವಾಗಿ ನಡೆದರೆ ಆ ಕಂಟ್ರಾಕ್ಟು ರದ್ದು ಮಾಡಿ ಠೇವಣಾತಿ ಮೊಬಲಗು ಸರ್ಕಾರಕ್ಕೆ ದಂಡವಾಗಿ ತಕ್ಕೊಳ್ಳಲ್ಪಟ್ಟೀತು.

14. ಮುಚ್ಚಳಿಕೆ ಷರತ್ತಿಗೆ ತಪ್ಪಿ ನಡದ ಎಲ್ಲಾ ಪ್ರಮೇಯಗಳಲ್ಲೂ ಸೂಪರಿಂಟೆಂಡೆಂಟರವರಿಂದ ಮಾಡಲ್ಪಟ್ಟ ಫೈಸಲ್ ಆಖೈರಾಗಿರತಕ್ಕದ್ದು.

15. ಕಂಟ್ರಾಕ್ಟುದಾರನು ಕೈದಿಗಳ ಉಪಯೋಗಕ್ಕಾಗಿ ಬೇಕಾಗಿರುವ ಹಾಲನ್ನೂ, ತರಕಾರಿಯನ್ನೂ ಮತ್ತು ತೋಟದ ಬೆಳೆಸನ್ನೂ ಮುಚ್ಚಳಿಕೆಯಲ್ಲಿ ನಮೂದಾಗುವ ದರದಂತೆ ಜೈಲ್‌ನಿಂದ ಕೊಂಡುಕೊಳ್ಳಲು ಬದ್ಧನಾಗಿರುವನು.

16. ಈ ವಿಷಯವಾಗಿ ಇನ್ನೇನಾದರೂ ಹೆಚ್ಚು ವರ್ತಮಾನ ಅಗತ್ಯವಾದಲ್ಲಿ ಸೂಪರಿಂಟೆಂಡೆಂಟರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

17. ಅಂಗೀಕರಿಸಿದ ದರಖಾಸ್ತು ಮೈಸೂರು ದೇಶದ ಜೈಲುಗಳ ಇನ್‌ಸ್ಪೆಕ್ಟರ್ ಜನೆರಲ್‌ರವರ ಮಂಜೂರಾತಿಗೆ ಒಳಪಟ್ಟಿರತಕ್ಕದ್ದು.

ಇವರು ದರಖಾಸ್ತುಗಳು ಎಲ್ಲವನ್ನೇ ಆಗಲಿ ಅಥವಾ ಯಾವ ದರಖಾಸ್ತನ್ನೇ ಆಗಲಿ ತಿರಸ್ಕರಿಸಲು ಅಧಿಕಾರವನ್ನು ಇಟ್ಟುಕೊಂಡಿದಾರೆ.

18. ಕಂಟ್ರಾಕ್ಟುದಾರರು ತಮ್ಮ ಕರಾರು ಮೇರಿಗೆ ನಡೆಯಲು ಇಷ್ಟವಿಲ್ಲದವರಾಗಿದ್ದರೆ, ಅಥವಾ ಶಕ್ತಿ ಇಲ್ಲದವರಾಗಿದ್ದರೆ, ಅವರು ಕೊನೇಪಕ್ಷ ಒಂದು ತಿಂಗಳು ಮುಂಚಿತವಾಗಿ ನೋಟಿಸ್ ಕೊಟ್ಟು ತಮ್ಮ ಠೇವಣಾತಿ ಹಣವನ್ನು ಸರಕಾರಕ್ಕೆ ದಂಡವಾಗಿ ಬಿಟ್ಟುಬಿಡಬೇಕು.

19. ಆ ಪ್ರಕಾರ ಸದರೀ ಕಂಟ್ರಾಕ್ಟುದಾರರು ತಮ್ಮ ಕರಾರಿಗೆ ತಪ್ಪಿದ್ದರಿಂದ ಅಥವಾ ಅವರ ಮುಚ್ಚಳಿಕೆಯಲ್ಲಿ ನಮೂದಾದ ಪದಾರ್ಥಗಳನ್ನು ಸರಕಾರದವರು ಸ್ಥಳೀಯವಾದ ಬಾಜಾರಿನಲ್ಲಿ ಮುಚ್ಚಳಿಕೆ ದರಕ್ಕಿಂತಲೂ ಹೆಚ್ಚು ದರ ಕೊಟ್ಟು ತಕ್ಕೊಳ್ಳುವದರಿಂದ ಸರಕಾರದವರಿಗೆ ಉಂಟಾಗಬಹುದಾದ ನಷ್ಟವನ್ನು ಭರ್ತೀ ಮಾಡುವದಕ್ಕೂ ಸಹ ಬದ್ಧರಾಗಿರಬೇಕು.

ಷರಾ.—ಈ ಕಂಟ್ರಾಕ್ಟುಗಳಲ್ಲಿ ಯಾವ ವಿಧವಾದ ರಿಯಾಯತಿಯನ್ನೂ ಮಾಡೋಣಾಗಲಾರದು.

ಜಿ. ಹ್ಯೂಂ ರೈಟ್,
ಸೂಪರಿಂಟೆಂಡೆಂಟ್.

ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ಈ ಕೆಳಗೆ ನಮೂದಿಸಿರುವ ಪುಸ್ತಕಗಳು ಗವರ್ನಮೆಂಟ ಸೆಂಟ್ರಲ್ ಬುಕ್ ಡಿಪೋವಿನಲ್ಲಿ, ಬಿಕ್ಕರಿಗೆ ಸಿದ್ಧವಾಗಿರುತ್ತವೆ. ಇದರ ಕ್ರಯ ಪ್ರತಿ 1ಕ್ಕೆ 4 ಆಣೆ.

ಮ್ಯಾನ್ಯೂಯಲ್ ಆಫ್ ಹೈಜಿಇ ಎಂಬ ಪುಸ್ತಕವನ್ನು ಹಿಂದುಸ್ತಾನಿಯಲ್ಲಿ ಭಾಷಾಂತರ ಮಾಡಲ್ಪಟ್ಟಿರುವ "ರಕ್ಷಣೂಮಾಯಿ ಸೇಹತ್" ಪುಸ್ತಕ.

ನೋಟಿಸ್, ತಾರೀಖು 18ನೆ ನವಂಬರ್ 1904.

ಈ ಕೆಳಗೆ ನಮೂದಿಸಿರುವ ಪುಸ್ತಕಗಳು ಬಿಕ್ಕರಿಗೆ ಸಿಕ್ಕುತ್ತವೆ. ಪೋಸ್ಟು ಖರ್ಚು ಅಲಾಹಿದಾ ಬೀಳುತ್ತೆ.

ಪುಸ್ತಕಗಳ ಹೆಸರು.	ಖರೀದಿ ಪ್ರತಿ 1ಕ್ಕೆ.		
ಸಂಸ್ಕೃತಭಾಷಾ ಪುಸ್ತಕಗಳು.	ರೂ.	ಆ.	ಪೈ
ಬೋಧಾಯನ ಗೃಹ್ಯಸೂತ್ರ	2	4	0
ಬ್ರಹ್ಮ ವಿದ್ಯಾಮಾಂಸ (ಶೇಕಂಠ ಶಿವಾಚಾರ್ಯರ)	2	0	0
ಕೃಷ್ಣ ಯಜುರ್ವೇದ ಏಕಾಗ್ನಿಕಾಂಡ	1	4	0
ಗೋತ್ರಪ್ರವರನಿಬಂಧ ಕದಂಬ	2	0	0
ವಾಧವೀಯ ಧಾತುವೃತ್ತಿ ವಾಲ್ಯಂ I ಭಾಗ I	2	0	0
ಡಿಟೋ ,, ,, II .. .	2	0	0
ಡಿಟೋ ,, II ,, I	2	0	0
ಡಿಟೋ ,, ,, II .. .	2	0	0
ಮಾಂಡೂಕ ಬ್ರಹ್ಮೋಪನಿಷತ್	0	6	0
ಶಂಕರ ಪ್ರಬಂಧಾವಳಿ ವಾಲ್ಯಂ II	1	4	0
ಡಿಟೋ ,, III	2	0	0
ಡಿಟೋ ,, IV	1	0	0
ತೈತ್ತಿರೀಯ ಆರಣ್ಯಕ ,, I	1	12	0
ಡಿಟೋ ,, II	1	0	0
ಡಿಟೋ ,, III	1	0	0
ತೈತ್ತಿರೀಯ ಸಂಹಿತೆ ವಾಲ್ಯಂ I	2	8	0
ಡಿಟೋ ,, II	2	8	0
ಡಿಟೋ ,, III	3	0	0
ಡಿಟೋ ,, IV	3	0	0
ಡಿಟೋ ,, V	3	0	0
ಡಿಟೋ ,, VIII	3	0	0
ಡಿಟೋ ,, IX	2	4	0
ಡಿಟೋ ,, X	3	0	0
ಡಿಟೋ ,, XI	3	0	0
ಡಿಟೋ ,, XII	1	12	0
ಕನ್ನಡಭಾಷಾ ಪುಸ್ತಕಗಳು.			
ಆದಿಪುರಾಣ	2	8	0
ಜಗನ್ನಾಥವಿಜಯ	2	8	0
ಯೋಗರತ್ನಾಕರ	2	12	0

ನೋಟಿಸ್, ಬತಾರೀಖು 8ನೆ ಡಿಸೆಂಬರ್ 1904.

1905ನೆ ಸಾಲ್ ಲೋವರ್ ಸೆಕಂಡರೀ ಪರೀಕ್ಷೆಯ ಸಂಸ್ಕೃತ ಟೆಕ್ಸ್ಟ್ ಪುಸ್ತಕವು ಈಗ ಡಿಪೋವಿನಲ್ಲಿ ಬಿಕ್ಕರಿಗೆ ಸಿದ್ಧವಾಗಿರುತ್ತೆ. ಕ್ರಯ ಪ್ರತಿ ಒಂದಕ್ಕೆ 2 ಆಣೆಗಳು.

ಎಸ್. ಅಬ್ದುಲ್ ಹೈ, ಕ್ಯೂರೇಟರ್

1867

425

ಮೈಸೂರ ಗೆಜೆಟ್.

ಸಂ. 39] ಸರ್ಕಾರದಿಂದ ಘೋಷಿಸಿದ್ದು. [ನಂ. 49.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ|| 15, ಸನ 1904.

IVನೆ ಭಾಗ.

ಸರ್ಕಾರಿ ಕಾಗದ ಪತ್ರಗಳು.

ಮುಂಬಯಿ ಮಿಡಿತೆಯ ವಿವರಣ.

ಸೆರೆಯಲ್ಲಿಯೂ, ಹೊಲದಲ್ಲಿಯೂ, ಇಡಲ್ಪಟ್ಟ ಮಿಡಿತೆಯ ಮೊಟ್ಟೆಗಳನ್ನು ಪರೀಕ್ಷೆ ಮಾಡಿದ್ದರಲ್ಲಿ, ಮೊಟ್ಟೆಗಳಿಗೆ ಕಾಲಸ್ಥಿತಿಯ ಸಹಾಯವು ಬಹಳ ಮುಖ್ಯವಾಗಿರುವುದಾಗಿ ತಿಳಿಯಬಂದಿರುತ್ತದೆ. ತೇವದ ನೆಲದಲ್ಲಿ ಇಟ್ಟ ಮೊಟ್ಟೆಗಳು ತೇವವಾಗಿಯೇ ಇಡಲ್ಪಟ್ಟರೆ ಅವುಸರಿಯಾಗಿ ಮರಿಯಾಗುವುದಿಲ್ಲ ಮತ್ತು ಮರಿಯಾಗುವುದು ತಡವಾಗುತ್ತದೆ. ನೀರನಲ್ಲಿ ನೆನದ ಭೂಮಿಯನ್ನು ಚನ್ನಾಗಿ ನೆನಿಯುವಹಾಗೆ ಇಟ್ಟಿರುವಲ್ಲಿ, ಮೊಟ್ಟೆಯೊಡೆದು ಮರಿಯಾಗುವ ಕಾಲವೂ ಹೆಚ್ಚುವುದಲ್ಲದೆ, ಸೇಕಡ ಕಡಿಮೆಯಾದ ಸಂಖ್ಯೆಯ ಮೊಟ್ಟೆಗಳು ಮರಿಯಾಗುತ್ತವೆ. ಮೊಟ್ಟೆಯೊಡೆದು ಮರಿಯಾಗುವ ಕಾಲದ ಕಡೆಯ ಅರ್ಧಭಾಗದಲ್ಲಿ ಒಣಗುವಹಾಗೆ ಬಿಡಲ್ಪಟ್ಟಿದ್ದ ಮೊಟ್ಟೆಗಳು ಜಾಗ್ರತೆಯಾಗಿಮರಿಯಾಗುವುದಲ್ಲದೆ ಸೇಕಡ ಯಾವ ಭಾಗವೂ ಮರಿಯಾಗದೇ ತಪ್ಪಿಹೋಗುವುದಿಲ್ಲ.

2. ಈ ಫಲಿತಾಂಶವೂ ಹೊಲದಲ್ಲಿ ಮಾಡಿದ ಪರೀಕ್ಷೆಗಳಿಗೆ ತಾಳೆ ಬೀಳುವುದಲ್ಲದೆ ತಡವಾಗಿ ಮಳೆ ಬೀಳುವುದಕ್ಕೆ ಸರಿಯಾಗಿ ಅನೇಕ ಮಿಡಿತೆಗಳು ಉತ್ಪತ್ತಿ ಆಗುತ್ತವೆ ಎಂದು ತಿಳಿಯಬಂದಿರುವ ಅಂಶವನ್ನು ಧೃಢೀಕರಿಸುತ್ತದೆ. ಈವರೆಗೆ ಮಾಡಿದ ಪರೀಕ್ಷೆಗಳಿಂದ ಜೂನ್ ತಿಂಗಳಲ್ಲಿ ಪ್ರಾರಂಭಿಸುವ ಅಲ್ಪವಾದ ಮಳೆಯೂ, ಆಮೇಲೆ ಮೊಟ್ಟೆ ಇಡುವುದಕ್ಕೆ ಅನುಕೂಲವಾಗುವಷ್ಟು ಭಾರಿ ಮಳೆಗಳೂ ಮುಂದೆ ಮೂರು ವಾರಗಳ ವರೆಗೂ ನೆಲವನ್ನು ತೇವವಾಗಿಮಾತ್ರ ಇಡುವುದಕ್ಕೆ ಸಾಕಾದಷ್ಟು ಮಳೆಗಳೂ ಮೊಟ್ಟೆಗಳನ್ನು ಉತ್ತಮಸ್ಥಿತಿಯಲ್ಲಿ ಇಡುವುದಕ್ಕೆ ತಕ್ಕ ಕಾರಣಗಳಾಗಿ ತೋರುತ್ತವೆ. ಇಡಲ್ಪಟಿದ್ದ ಮೊಟ್ಟೆಗಳು ಆಗ ಒಡೆದು ಮರಿಯಾಗುವುದರಿಂದ ಆಮೇಲೆ ಬರುವ ಅತ್ಯಂತ ಭಾರಿ ಮಳೆಗಳಿಂದ ಮಿಡಿತೆಗಳಿಗೆ ಯಾವ ಕೇಡೂ ಉಂಟಾಗುವುದಿಲ್ಲ. 1903ನೆಯ ವರ್ಷದಲ್ಲಿ ದಕ್ಷಿಣ ಗುಜರಾತ ದೇಶದಲ್ಲಿ ಇದೇರೀತಿಯಾದ ವಿದ್ಯಮಾನಗಳು ಕಂಡು ಬಂದು ಅಪರಿಮಿತವಾದ ಮಿಡತೆಗಳ ಹಿಂಡುಗಳು ಅಲ್ಲಿಂದ ಬಂದವು ಎಂಬ ಅಂಶವನ್ನು ಇಲ್ಲಿ ತೋರಿಸಬಹುದು. ಸ್ವಲ್ಪ ಮಳೆಯು ಮುಂದಾಗಿ ಬಿತ್ತು, ಆಮೇಲೆ ಆರುವಾರಗಳ ವರೆಗೆ ಸಣಸಣ ಮಳೆಗಳುಮಾತ್ರ ಬಿದ್ದವು; ತರುವಾಯ ಮಳೆಯು ಬಲವಾಗಿ ಬಿತ್ತು. ಅಲ್ಲಿ ಅಪಾರವಾದ ಮಿಡಿತೆಗಳು ಮೊಟ್ಟೆಯೊಡೆದುಕೊಂಡು ಬಂದುದರಿಂದ, ಕ್ರಮವಾದ ಮಳೆಯು ಇನ್ನೂ ಮೊದಲೇ ಬಿದ್ದಿದ್ದರೆ ಈ ಮೊಟ್ಟೆಗಳಲ್ಲಿ ಸೇಕಡ ಬಹಳವಾದವು ಒಡೆದು ಮರಿಯಾಗುತ್ತಿರಲಿಲ್ಲವೆಂದು ನಂಬುವುದು ಸರಿಯಾಗಿದೆ.

3. ಪಶ್ಚಿಮ ಮತ್ತು ಮಧ್ಯ ಇಂಡಿಯಾದೇಶದ ಅನೇಕ ಭಾಗಗಳಲ್ಲಿ 1904ನೆಯ ವರ್ಷದಲ್ಲಿ ಬಿದ್ದ ಮಳೆಯು ಮೊಟ್ಟೆಯೊಡೆದು ಮರಿಯಾಗುವುದಕ್ಕೆ ಅನುಕೂಲವಾಗಿರುವಹಾಗೆ ಕಾಣುತ್ತದೆ, ಮಿಡಿತೆಗಳು ಹರಡಿಕೊಂಡು ವಿಸ್ತಾರವಾದ ಪ್ರದೇಶದಲ್ಲಿ ಮೊಟ್ಟೆಗಳನ್ನು ಇಟ್ಟವೆ ಎಂದೂಕೂಡ ತಿಳಿಯಬಂದಿದೆ. ಅಪರಿಮಿತವಾದ ಮಿಡಿತೆಗಳು ಮೊಟ್ಟೆಗಳಿಂದ ಈಚೆಗೆ ಹೊರಡುವುವೆಂದು, ಹುಡುಕಿ ನೋಡಿದಹೊರತು ಕಾಣಿಸುವುದಿಲ್ಲವೆಂದೂ, ನಾಶ ಮಾಡಲ್ಪಟ್ಟಹೊರತು ಗುಂಪು ಗುಂಪುಗಳಾಗಿ ಸೇರಿ 1903ನೆಯ ವರ್ಷದಲ್ಲಿ ಅವು ಮಾಡಿದಹಾಗೆ ಈ ಅಕ್ಟೋಬರ್ ತಿಂಗಳಲ್ಲಿ ಬೇರೆಬೇರೆ ದೇಶಗಳಿಗೆ ಹೊರಟು ಹೋಗುವುವೆಂದೂ, ನೋಟದಿಂದಲೂ, ಪರೀಕ್ಷೆಗಳಿಂದಲೂ, ಹಿಂದಿನ ಕಾಗದಪತ್ರಗಳಿಂದಲೂ, ಊಹಿಸಬೇಕಾಗಿದೆ. ಪ್ರಾಯಃ ಅವು ಕಳೆದ ವರ್ಷದಲ್ಲಿ ಮಾಡಿದಹಾಗೆ ಪಶ್ಚಿಮ ಘಟ್ಟಗಳ ಮೇಲೆ ಬಟ್ಟಾಗಿ ಇಳಿಯುವುವು.

 426

4. 1903ನೆಯ ಮೇ ತಿಂಗಳಲ್ಲಿ, 1903—4ನೆಯ ವರ್ಷದ ಮಿಡಿತೆಗಳು ಹುಟ್ಟಿದ ಮೊಟ್ಟೆ ಇಡುವ ಹಿಂಡುಗಳು ಸಂಖ್ಯಾಸಂಖ್ಯವಾಗಿ ಇದ್ದುದರಿಂದ ವಿಶೇಷವಾಗಿ ಗೋಚರಕ್ಕೆ ಬರಲಿಲ್ಲ. ಆದಾಗ್ಯೂ ಅವುಗಳಿಂದ ಹುಟ್ಟಿದ ಹಿಂಡುಗಳು ಬಹಳ ವಿಸ್ತಾರವಾಗಿದ್ದುದಲ್ಲದೆ ಬಹಳ ನಷ್ಟಪಡಿಸಿದವು. ಮೊಟ್ಟೆ ಒಡೆದು ಮರಿಯಾಗುವುದಕ್ಕೆ ಅನುಕೂಲವಾದ ಕಾರಣಗಳಿರುವ ಪ್ರಯುಕ್ತ ಜೂನ್, ಜುಲೈ ತಿಂಗಳುಗಳಲ್ಲಿ ಇಡಲ್ಪಟ್ಟ ಮೊಟ್ಟೆಗಳಿಂದ ಈವರ್ಷ ಇನ್ನೂ ವಿಸ್ತಾರವಾದ ಹಿಂಡುಗಳು ಹುಟ್ಟುವುವೆಂದು ಊಹಿಸಬಹುದು.

5. ಆದುದರಿಂದ ಮಿಡಿತೆಗಳಿಗೆ ರೆಕ್ಕೆ ಬೆಳೆಯುವುದಕ್ಕೆ ಮುಂಚೆ ಅವುಗಳನ್ನು ನಾಶಮಾಡುವುದಕ್ಕೆ ಅತಿ ಪ್ರಬಲವಾದ ಏರ್ಪಾಡುಗಳನ್ನು ಮಾಡಿದಹೊರತು, 1904ನೆಯ ವರ್ಷದ ಶರತ್ಕಾಲದಲ್ಲಿ ಪ್ರಾಯಃ ಮಿಡಿತೆಗಳ ಅಪಾರವಾದ ಹಿಂಡುಗಳು ಹುಟ್ಟುವುವು. ಆದುದರಿಂದ ನನ್ನ ಅಭಿಪ್ರಾಯವೇನಂದರೆ—ಮಾಡಿಕೆಯಾಗಿ ಬರುತಿದ್ದ ಮಳೆಗಳು ತಪ್ಪಿಹೋದುದರಿಂದ ಮಿಡಿತೆಗಳನ್ನು ನಾಶಮಾಡುವ ಅವಶ್ಯಕತೆಯು ಒಂದಕ್ಕೆ ನೂರರಷ್ಟು ಹೆಚ್ಚಿದೆ. ಅವು ವ್ಯಾಪಿಸಿರುವ ಡಿಸ್ಟ್ರಿಕ್ಟ್‌ಗಳಿಗೆ ಅಪಾಯವು ಬಹಳವಾಗಿದೆ. ರೈತನಿಗೆ ಅನುಕೂಲವಾಗಿಯೂ, ಸುಲಭವಾಗಿಯೂ, ಕಾರ್ಯಸಾಧಕವಾಗಿಯೂ ಇರುವ ಉಪಾಯಗಳಿಂದ ಮಿಡಿತೆಗಳನ್ನು ನಾಶ ಮಾಡಬಹುದು. ಮಿಡಿತೆಗಳ ವಿಶೇಷವಾದ ಬಾಧೆಯನ್ನು ತಪ್ಪಿಸಬೇಕಾಗಿದ್ದರೆ, ಮಿಡಿತೆಗಳು ಕಾಣಿಸಿಕೊಳ್ಳುವ ಕಡೆಯಲ್ಲೆಲ್ಲಾ ಈ ಉಪಾಯಗಳನ್ನು ಕೈಕೊಳ್ಳುವಂತೆ ಗ್ರಾಮಸ್ಥರನ್ನು ಪ್ರೋತ್ಸಾಹ ಪಡಿಸಿ ಬಲವಂತ ಮಾಡಬೇಕು.

6. ದಕ್ಷಿಣ ಗುಜರಾತ್, ಅದರ ನೆರೆಯಲ್ಲಿರುವ ದೇಶಗಳು, (ಇಂದೋರು, ಭೋಪಾಲ, ಮೊದಲಾದವು ಸೇರಿ) ಮಧ್ಯ ಇಂಡಿಯಾ ದೇಶದ ಪಶ್ಚಿಮಭಾಗ ಸೆಂಟ್ರಲ್ ಪ್ರಾವಿನ್ಸೆಸ್‌ಯಾ ಮಧ್ಯಮ ಪ್ರಾಂತಗಳ ಪಶ್ಚಿಮಾರ್ಧಭಾಗ, ಬೆರಾರ್ಸ್ (ಬರ್ಚರದೇಶ) ಹೈದರಾಬಾದಿನ ಪಶ್ಚಿಮ ಬಾಗ (ಪ್ರಾಯಃ ವಿಸ್ತಾರವಾದ ಪ್ರದೇಶದಲ್ಲಿ) ಮದರಾಸ್ ಆಧಿಪತ್ಯದ ವಾಯವ್ಯ ಭಾಗ (ಬಳ್ಳಾರಿ ಮೊದಲಾದವುಗಳು) ಮತ್ತು ಪ್ರಾಯಃ ಮೈಸೂರುದೇಶ—ಈ ಪ್ರದೇಶಗಳ ಮೇಲೆ ಮಿಡಿತೆಗಳು ಪಶ್ಚಿಮ ಘಟ್ಟಗಳಿಂದ ಹರಡಿಕೊಂಡಿರುವುವಾಗಿ ಹೇಳಬಹುದು. ಈ ವಿಸ್ತಾರವಾದ ಪ್ರದೇಶದ ನಾನಾಭಾಗಗಳಲ್ಲಿ ಮಿಡಿತೆಗಳು ಮೊಟ್ಟೆಗಳನ್ನು ಇಟ್ಟುವೆ; ಮೊಟ್ಟೆ ಒಡೆದು ಮರಿಯಾಗುತ್ತಿವೆ; ಆದುದರಿಂದ ನಾಶಮಾಡಲ್ಪಡದೇ ಹೋದರೆ ವಿಸ್ತಾರವಾದ ಹಿಂಡುಗಳಾಗಿ ಪುನಃ ಬೇರೆಬೇರೆ ದೇಶಗಳಿಗೆ ಹೋಗುವುವು.

ಸೂರತ್,
1904ನೆಯ ಆಗಸ್ಟ್ ತಾರೀಖು 13.

(ರುಜು) ಎಚ್. ಎಮ್. ಲಿಫ್ರಾಯ್,
ಇಂಡಿಯಾ ಸರ್ಕಾರದ ಕ್ರಿಮಿ ಶಾಸ್ತ್ರಜ್ಞ.

ಮಿಡಿತೆಗಳನ್ನು ನಾಶಮಾಡುವುದಕ್ಕೆ ಉಪಾಯಗಳು.

ಮಿಡಿತೆಗಳನ್ನು ನಾಶಮಾಡುವುದಕ್ಕೆ ಮಾಡಿದ ಪರೀಕ್ಷೆಗಳಲ್ಲಿ ಈ ಕೆಳಗಿನ ಉಪಾಯಗಳು ಸುಲಭವಾಗಿಯೂ ಕಾರ್ಯಸಾಧಕವಾಗಿಯೂ ಕಂಡುಬಂದಿವೆ. ಕೆಳಗೆ ಬೀಳಿರುವ ಮೇರೆ ಒಂದು ಬಿದುರಿನ ಚೌಕಟ್ಟನ್ನು ತಯಾರ್ಮಾಡಿ, ಅದಕ್ಕೆ 8 ಅಡಿ ಉದ್ದವೂ 2 ಅಡಿ ಅಗಲವೂ ಇರುವ ಒಂದು ಬಾಯಿವುಳ್ಳ ಒಂದು ಚೀಲವನ್ನು ಈ ಕೆಳಗೆ ವಿವರಿಸಿರುವಂತೆ ಕಟ್ಟಿ ಆ ಬಾಯನ್ನು ಮೇಲ್ಗಂಡೆ ಬಿದುರಿನ ಚೌಕಟ್ಟಿನ ಸಹಾಯದಿಂದ ತೆರದಿರುವಂತೆ ಇಡಬೇಕು. ಬಿದುರಿನ ಚೌಕಟ್ಟಿಗೆ ಹಗ್ಗಗಳನ್ನು ಕಟ್ಟಿ ಅದನ್ನು ನೆಲದಮೇಲೆ ಜಾಗ್ರತೆಯಾಗಿ ಎಳೆದುಕೊಂಡು ಹೋಗಬೇಕು. ಮಿಡಿತೆಗಳು ಈ ಚೀಲದೊಳಕ್ಕೆ ಹೋಗುವುದರಿಂದ, ಚೀಲವನ್ನು ಆಗಾಗ್ಗೆ ಈಚೆ ತೆಗೆದು ಅದನ್ನು ನುಲಿಯುವುದರಿಂದ ಅದರೊಳಗಿರುವ ಮಿಡಿತೆಗಳು ನಜ್ಜುಗುಜ್ಜಾಗುತ್ತವೆ—

ಬಿದುರಿನ ಚೌಕಟ್ಟು ಚೀಲವು ಬಹಳ ಲಘುವಾಗಿರುವುದರಿಂದ ಅವನ್ನು ಮಿಡಿತೆಗಳು ಒಳಕ್ಕೆ ಕೊಚ್ಚಿಕೊಂಡು ಹೋಗುವಂತೆ ಒಬ್ಬ ಮನುಷ್ಯನು ಸುಲಭವಾಗಿ ಮೇಲಕ್ಕೂ ಕೆಳಕ್ಕೂ ಬೇಗನೇ ಎಳೆಯಬಹುದು. ಹುಲ್ಲಿನ ನೆಲದಲ್ಲಿಯೂ, ಎಳೆಯ ಪೈರುಗಳಲ್ಲಿಯೂ, ಎಂದರೆ ಪೈರುಗಳು ಅತಿ ಎತ್ತರವಾಗಿ ಬೆಳೆಯದೇ ಇರುವ ಕಡೆಯೆಲ್ಲೆಲ್ಲಾ ಈ ಉಪಾಯವು ಉಪಯೋಗ ಉಳ್ಳದ್ದಾಗಿದೆ. ಬೆಳೆದ ಪೈರುಗಳು, ಪೊದರುಗಳು ಮೊದಲಾದವುಗಳುಳ್ಳ ಭೂಮಿಯಲ್ಲಿ ಚೀಲವನ್ನು ಚೌಕಟ್ಟಿನಿಂದ ಬಿಚ್ಚಿ ತೆಗೆದು, ಚೀಲದ ಬಾಯಿಯ ಪಕ್ಕಗಳಿಗೆ ಎರಡು ಬಿದುರಿನ ಕಡ್ಡಿಗಳನ್ನು ಕಟ್ಟಿ, ಚೀಲಕ್ಕೆ ಹಗ್ಗಗಳನ್ನು ಕಟ್ಟಿ, ಇಬ್ಬರು ಎಳೆಯಬೇಕು. ತರುವಾಯ ಬೆಳೆಗಳು, ಹುಲ್ಲು, ಪೊದರುಗಳು, ಮೊದಲಾದವುಗಳ ಮಧ್ಯೆ ಮತ್ತು ಮೇಲೂ ಅತಿ ಸುಲಭವಾಗಿ ಅದನ್ನು ಕೈಯಿಂದ ಎಳದಾಡಬಹುದು.

ಪ್ರಾಯಃ ಎಲ್ಲಾ ವಿಧವಾದ ಜಮೀನಿನಲ್ಲಿಯೂ ಮಿಡಿತೆಗಳನ್ನು ಬಹಳವಾಗಿ ನಾಶಮಾಡುವುದಕ್ಕೆ ಚೀಲವನ್ನು ಈ ಎರಡು ಕ್ರಮಗಳಲ್ಲಿ ಉಪಯೋಗಿಸಿದರೆ ಸಾಕಾಗುವುದು. ಹುಲ್ಲು ಅಥವಾ ಪೈರುಗಳು ಬೆಳೆದಿರುವ ವಿಸ್ತಾರವಾದ ಪ್ರದೇಶಗಳಲ್ಲಿ ಉಪಯೋಗಿಸುವುದಕ್ಕಾಗಿ, ಇನ್ನೂ ದೊಡ್ಡ ಚೀಲಗಳನ್ನು ತಯಾರ್‌ಮಾಡಿ, ಬಿದುರಿನ ಚೌಕಟ್ಟುಗಳಿಲ್ಲದೆ, ಚೀಲದ ಬಾಯಿ ತೆರದುಕೊಂಡಿರುವುದಕ್ಕಾಗಿ, ಅದರ ಎರಡು ಪಕ್ಕಗಳಿಗೂ, ಬಿದುರಿನ ಕಡ್ಡಿಗಳನ್ನು ಮಾತ್ರ ಕಟ್ಟಿ ಉಪಯೋಗಿಸಬಹುದು.

ಇಲ್ಲಿ ಕೊಟ್ಟಿರುವ ಅಳತೆಗಳು ಒಬ್ಬ ಅಥವಾ ಇಬ್ಬರು ಮನುಷ್ಯರ ಕೆಲಸಕ್ಕೆ ತಕ್ಕವಾಗಿವೆ. ದೊಡ್ಡ ಮೈದಾನಗಳಿಗೆ ಉಪಯೋಗಿಸುವ ದೊಡ್ಡ ಚೀಲಗಳಿಗೆ ಹನ್ನೆರಡು ಅಡಿ ಅಗಲವೂ, ಎರಡು ಅಡಿ ಎತ್ತರವೂ ಇರುವ ಬಾಯಿಯೂ ಎಂಟಡಿ ಉದ್ದವೂ ಇರಬಹುದು. ಈ ಸಂದರ್ಭದಲ್ಲಿ ಚೀಲದ ಬಾಯಿಯ ಕೆಳಗಿನ ಅಂಚಿಗೂ ಚೀಲದ ಹಿಂಭಾಗದ ಮೂಲೆಗಳಿಗೂ ಜೇಬುಗಳನ್ನು ಹೊಲಿಬು ಅವುಗಳಿಗೆ ಮರಳನ್ನು ತುಂಬಿ ಚೀಲವನ್ನು ಭಾರವಾಗುವಂತೆ ಮಾಡಬೇಕು. ಇಬ್ಬರು ಮನುಷ್ಯರು ಅಂತಹ ಚೀಲವನ್ನು ವಿಸ್ತಾರವಾದ ಪ್ರದೇಶದೊಳಗೆಲ್ಲಾ ಕೈಯಿಂದ ಎಳೆಯಬಹುದು.

ಬಾಯಿ ನಾಲ್ಕು ಅಡಿ ಉದ್ದವೂ ಎರಡು ಅಡಿ ಅಗಲವೂ ಇರುವ ಚೀಲವನ್ನೂ ಚೌಕಟ್ಟನ್ನು ತಯಾರ್ ಮಾಡುವ ಕ್ರಮ.

1869

ಹದಿನಾಲ್ಕಡಿ ಉದ್ದವಿರುವ ಸಾಕಾದಷ್ಟು ಗೋಣಿ ಬಟ್ಟೆಯ ತುಂಡುಗಳನ್ನು ತೆಗೆದುಕೊಂಡು, ಅವುಗಳ ಉದ್ದವಾದ ಅಂಚುಗಳನ್ನು ಸೇರಿಸಿ ಹೊಲಿದು, ಹದಿನಾಲ್ಕು ಅಡಿ ಉದ್ದವೂ ಆರಡಿ ಅಗಲವೂ ಇರುವ ಒಂದು ತುಂಡನ್ನು ಮಾಡಿ, ಎರಡು ಕೊನೆಗಳನ್ನು ಆಮೇಲೆ ಸೇರಿಸಿ ಪಕ್ಕಗಳನ್ನು ಹೊಲಿದು ಒಂದು ಚಪ್ಪಟೆಯಾದ ಚೀಲವನ್ನು ಮಾಡಿ, ಅದಕ್ಕೆ ಬಲವಾದ ಬಟ್ಟೆಯ ಕಸೆಗಳನ್ನು, ಎಂದರೆ ಒಂದು ಹೊಲಿಗೆಯ ಕೊನೆಯಲ್ಲಿ ಮೊದಲನೆಯ ಜೊತೆಯ ಕಸೆಗಳನ್ನು, ಅಲ್ಲಿಂದ ಎರಡು ಅಡಿಯಲ್ಲಿ ಎರಡನೆಯ ಜೊತೆಯ ಕಸೆಗಳನ್ನು, ಈ ಎರಡನೆಯ ಜೊತೆಯ ಕಸೆಗಳಿಂದ ಎರಡು ಅಡಿಯಲ್ಲಿ ಮೂರನೆಯ ಜೊತೆಯ ಕಸೆಗಳನ್ನು, ಮೂರನೆಯ ಜೊತೆ ಕಸೆಗಳಿಂದ ಎರಡು ಅಡಿಯಲ್ಲಿ ಎಂದರೆ ಮೊದಲನೆಯ ಜೊತೆಯ ಕಸೆಗಳಿಂದ ಆರು ಅಡಿಯಲ್ಲಿ ನಾಲ್ಕನೆಯ ಜೊತೆಯ ಕಸೆಗಳನ್ನು ಹೊಲಿದು, ಎರಡೆರಡು ಅಡಿ ಉದ್ದವಾದ ಬಿದುರುಗಳನ್ನು ಎರಡು ಅಡಿ ದೂರದಲ್ಲಿರುವ ಎರಡೆರಡು ಜೊತೆಯ ಕಸೆಗಳ ಮಧ್ಯೆ ಇಟ್ಟು ಕಟ್ಟಿ ಚೀಲವನ್ನು ತಯಾರ್ ಮಾಡಬೇಕು (ಎ. ನಕ್ಷೆಯನ್ನು ನೋಡತಕ್ಕದ್ದು);

(೧) ನಾಲ್ಕು ಅಡಿ ಮೂರಂಗುಲ ಉದ್ದವಿರುವ ನಾಲ್ಕು ಬಿದುರಿನ ತುಂಡುಗಳನ್ನು ತೆಗೆದುಕೊಂಡು, ಅವುಗಳಲ್ಲಿ ಎರಡು ಬಿದುರಿನ ತುಂಡುಗಳ ಕೊನೆಗಳಲ್ಲಿ ಮತ್ತೆರಡು ಬಿದುರಿನ ತುಂಡುಗಳ ಕೊನೆಗಳನ್ನು ಚೆಚ್ಚೌಕವಾಗಿ ಇಟ್ಟು, ಐದಡಿ ಎಂಟಂಗುಲ ಉದ್ದವಿರುವ (೨) ಎರಡು ಕೀಳಿದ ಬಿದುರಿನ ತುಂಡುಗಳನ್ನು ಆ ಚೌಕದ ಮೂಲೆಯಿಂದ ಮೂಲೆಗೆ ಅಡ್ಡಲಾಗಿ ಇಟ್ಟು (೩) ಎರಡು ಅಡಿ ಮೂರಂಗುಲಉದ್ದವಿರುವ ಎರಡು ಬಿದುರಿನ ತುಂಡುಗಳನ್ನು ಚೌಕಟ್ಟಿನ ಒಂದುಪಕ್ಕದ ಮೂಲೆಗಳಲ್ಲಿ ನಿಲುವಾಗಿಟ್ಟು (೪) ನಾಲ್ಕಡಿ ಎಂಟಂಗುಲ ಉದ್ದವಿರುವ ಎರಡು ಕೀಳಿದ ಬಿದುರಿನ ತುಂಡುಗಳನ್ನು ಈ ನಿಲುವುಗಳ ತುದಿಗಳಿಂದ ಅವುಗಳಿಗೆ ಸಮೀಪತವುವಾಗಿರುವ ಮೂಲೆಗೆ ಇಟ್ಟು, (೫) ನಾಲ್ಕಡಿ ಮೂರಂಗುಲವುದ್ದವಿರುವ ಅಡ್ಡ ಪಟ್ಟಿಯನ್ನು ಮೇಲ್ಕಂಡ ಎರಡು ನಿಲುವುಗಳ ತುದಿಗಳ ಮೇಲೆ ತರುವಾಯ ಇಡಬೇಕು. (ಬಿ. ನಕ್ಷೆಯನ್ನು ನೋಡತಕ್ಕದ್ದು).

ಬಿದುರು ತುಂಡುಗಳನ್ನು ಅವವುಗಳ ಸ್ಥಳಗಳಲ್ಲಿಡುವಾಗ ಮೇಲ್ಕಂಡ ಕ್ರಮದಲ್ಲಿ ದಾರದಿಂದಾಗಲೀ ಅಥವಾ ನಾರಿನಿಂದ ಲಾಗಲಿ ಅವುಗಳನ್ನು ಕಟ್ಟಬೇಕು. ಕೊನೆಗಳಲ್ಲಿ ಒಟ್ಟಿಗೆ ಕಟ್ಟುವುದಕ್ಕಾಗುವ ಹಾಗೆ ಸಾಕಾದಷ್ಟು ಬಿದುರು ಈಚೆಗೆಹೊರಟು ಕೊಳ್ಳಬೇಕು. ಈ ಪ್ರಕಾರ ಬಿದುರಿನ ಚೌಕಟ್ಟನ್ನು ಮಾಡಿ ಅದರ ಮುಂದಕ್ಕೆ ಮೇಲ್ಕಂಡ ಚೀಲವನ್ನು ಕಸೆಗಳಿಂದ ಕಟ್ಟಬೇಕು.

ಈ ನಕ್ಷೆಗಳಲ್ಲಿ, ಬಿದುರಿನ ತುಂಡುಗಳನ್ನು ಕಟ್ಟುವುದಕ್ಕಾಗುವ ಹಾಗೆ ಮೂರಂಗುಲ ಹೆಚ್ಚು ಉದ್ದವನ್ನು ಬಿಟ್ಟಿದೆ. ಅವುಗಳಿಂದುಂಟಾಗುವ ಚೌಕಟ್ಟು ಚೀಲಕ್ಕೆ ತಕ್ಕ ಪ್ರಮಾಣವುಳ್ಳದ್ದಾಗಿದೆ. ಚೀಲವನ್ನು ತೆರದಿಡುವುದಕ್ಕಾಗಿ ಉಪಯೋಗಿಸುವ ಎರಡೆರಡು ಅಡಿ ಉದ್ದದ ಬಿದುರಿನ ತುಂಡುಗಳನ್ನು ಚೀಲ ಒಂದನ್ನೇ ಉಪಯೋಗಿಸುವಾಗ ಮಾತ್ರವೆ ಸಿಕ್ಕಿಸಬೇಕು; ಚೌಕಟ್ಟಿಗೆ ಚೀಲವನ್ನು ಕಟ್ಟುವಾಗ ಚೀಲವನ್ನು ಈಚೆಗೆ ಕೂಡಲೆ ತೆಗದು ನುಲಿಯುವುದಕ್ಕಾಗುವ ಹಾಗೆ ಈ ಬಿದುರಿನ ಕಡ್ಡಿಗಳನ್ನು ತೆಗೆದು ಹಾಕಿ ಬಟ್ಟೆಯ ಕಸೆಗಳನ್ನು ಚೌಕಟ್ಟಿಗೆ ಕಟ್ಟಬೇಕು. ಬಿದುರಿಗೆ ಬದಲಾಗಿ ಮರದ ಪಟ್ಟಿಗಳನ್ನು ಉಪಯೋಗಿಸಬಹುದು.

ಇಂಡಿಯಾ ಸರಕಾರದ ಕ್ರಿಮಿಶಾಸ್ತ್ರಜ್ಞನ ಆಫಿಸ್.
ಸೂರತ್—1904ನೆಯ ಜುಲೈ ತಾರೀಖು 23

(ರುಜು) ಎಚ್. ಮಾರ್ಕ್ಸ್ ವೆಲ್ಲಿಘ್ರಾಯ್,
ಇಂಡಿಯಾ ಸರಕಾರದ ಕ್ರಿಮಿ ಶಾಸ್ತ್ರಜ್ಞ.



ಎ. ನೆಕ್ಷ-ಬಿದುರುಕಡ್ಡಿಗಳು ಸಹಿತ ಉಪಯೋಗಕ್ಕೆ ಸಿದ್ಧವಾಗಿರುವ ಚೀಲ.



ಬಿ. ನೆಕ್ಷ-ಚೀಲಕ್ಕೆ ಬಿದುರಿನ ಚೌಕಟ್ಟು.

429

ಮೈಸೂರ ಗೆಜಿಟ್.

ವಿಶೇಷ ಪತ್ರಿಕೆ.

ಸರ್ಕಾರದಿಂದ ಘೋಷಿಸಲ್ಪಟ್ಟದ್ದು.

ಬೆಂಗಳೂರು, ಶುಕ್ರವಾರ, ಡಿಸೆಂಬರ್ ತಾ॥ 9, ಸನ 1904.

1904ನೆಯ ಡಿಸೆಂಬರ್ ತಾರೀಖು 9.

ಮೈಸೂರು ಶ್ರೀಮನ್ ಮಹಾರಾಜ ಸಾಹೇಬ ಹಜರವರ ಈ ಕೆಳಗಿನ ಲೇಖನವು ಪ್ರಕಟಿಸಲ್ಪಟ್ಟಿದೆ.

ಬಮೋಜೀಬ್ ಹುಕುಂ,

ಬಿ. ಕೆ. ವೆಂಕಟವರದ್ಯೈಯ್ಯಂಗಾರ್,

ಮೈಸೂರು ಗವರ್ನಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖೆಯ ಸೆಕ್ರೆಟರಿ.

1875

430

ಮೈಸೂರು ಅರಮನೆ,

1904ನೆಯ ಡಿಸೆಂಬರ್ ತಾರೀಖು 8.

ನಮ್ಮ ಪ್ರಿಯ ಸಹೋದರಿಯವರಾದ ಸೌಭಾಗ್ಯವತೀ ಮಹಾರಾಜ ಕುಮಾರಿ ಕೃಷ್ಣಾಜಮ್ಮಣ್ಣಿಯವರು ಅಕಾಲದಲ್ಲಿ ಸ್ವರ್ಗಸ್ಥರಾದ ದುಃಖದ ವೇಳೆಯಲ್ಲಿ ಈ ಸಂಸ್ಥಾನದಲ್ಲಿರುವ ನಮ್ಮ ಸ್ವಂತ ಪ್ರಜೆಗಳಿಂದಲೂ ನಮ್ಮ ದೇಶದ ಹೊರಗೆ ಇರುವ ನಮ್ಮಲ್ಲಿ ಅನುತಾಪ ಉಳ್ಳವರಿಂದಲೂ ನಮಗೆ ತಲಪಿದ ಅನೇಕ ಅನುತಾಪ ದುಃಖ ಸೂಚಕೋಕ್ತಿಗಳಿಂದ ನಮ್ಮ ಮನಸ್ಸು ಬಹಳವಾಗಿ ಕರಗಿತು. ನಮ್ಮ ಕುಟುಂಬದಲ್ಲಿ ಅತ್ಯಂತ ಪ್ರೀತಿಯುಕ್ತರು, ಪತಿಯಲ್ಲಿ ಭಕ್ತಿಯುಳ್ಳವರು, ಮಕ್ಕಳಲ್ಲಿ ಪ್ರೇಮವುಳ್ಳವರು ಆದ ನಮ್ಮ ಸಹೋದರಿಯವರ ವಿಯೋಗವನ್ನು ಎಂದಿಗೂ ಮರೆಯಲಾಗುವುದಿಲ್ಲ. ಇಂತಹ ಕಷ್ಟಕಾಲದಲ್ಲಿ ದುರ್ಜ್ಞೇಯವಾದ ಭಗವಂತನ ಸಂಕಲ್ಪವನ್ನು ಶಿರಸಾವಹಿಸುವುದೇ ನಮ್ಮ ಕರ್ತವ್ಯವೆಂಗಿದೆ. ನಮ್ಮ ಮತ್ತು ನಮ್ಮ ಕುಟುಂಬದ ಸಂಗಡ ಈ ದುಃಖದಲ್ಲಿ ಭಾಗಿಗಳಾಗಿದ್ದು ಸಮಾಧಾನವನ್ನೂ ದುಃಖ ಶಮನವನ್ನೂ ಉಂಟುಮಾಡಿದ ಸರ್ವರಿಗೂ ನಮ್ಮ ಹೃದ್ಗತವಾದ ಕೃತಜ್ಞತೆಯನ್ನು ತಿಳಿಸಲಪೇಕ್ಷಿಸುತ್ತೇವೆ.

ಕೃಷ್ಣರಾಜ ಒಡೆಯರ್.

1877

431

ಮೈಸೂರ ಗೆಜೆಟ.

ಸಂ. 39.] ಸರ್ಕಾರದಿಂದ ಘೋಷಿಸಲ್ಪಟ್ಟದ್ದು. [ನಂ. 50.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 22, ಸನ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರಿಂಟೆಂಡೆಂಟರು, ಕಂಟ್ರೋಲರವರು, ಪಬ್ಲಿಕ್‌ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರಿಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು ; ಪೋಸ್ಟಾಫೀಸ್ ನೋಟಿಸುಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು—ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 29ನೆ ನವಂಬರ್, 1ನೆ ಡಿಸೆಂಬರ್ 1904.

ನಂ. 4620—16-14—ಸ್ಯಾನಿಟೇಷನ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರುವರಿ 10ನೆ ಮಾರ್ಕ್ಕಂ 9383—ಎಂ. ಫೈ. 21—96ನೆ ಮತ್ತು 9384—ಎಂ. ಫೈ. 21—96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.
	ಹಾಸನ.
ಕರೆ ...	ಡಿಟೋ
ಜನಿವಾರ ..	ಡಿಟೋ
ರಾಮಘಟ್ಟ ..	ಡಿಟೋ
ಶಟ್ಟಿಹಳ್ಳಿ ..	ಡಿಟೋ
ಅತ್ತಿಹಳ್ಳಿ ..	ಅರಸೀಕೆರೆ.
ಗಂಗೇನಹಳ್ಳಿ ...	ಡಿಟೋ
ಗಣೇನಹಳ್ಳಿ ...	ಡಿಟೋ
ಜಾವಗಲ್ ..	

ಸ್ಥಳ.	ತಾಲ್ಲೂಕು.
	ಅರಸೀಕೆರೆ.
ದುಮ್ಮನಹಳ್ಳಿ ...	ಡಿಟೋ
ಮಾವಿನಕೆರೆ ...	ಡಿಟೋ
ಬೊಮ್ಮೇನಹಳ್ಳಿ ...	ಡಿಟೋ
ಸೂಳೆಕೆರೆ ..	ಬೇಲೂರು.
ಹಿರೆಕೊಳೆ ..	ಡಿಟೋ
ಬಂತೇನಹಳ್ಳಿ ...	ಡಿಟೋ
ನಾರಣಾಪುರ ...	

ತಾರೀಖು 1—2ನೆ ನವೆಂಬರ 1904.

ನಂ. 4656—18—15—ಸ್ಯಾನಿಟೇರ್ಷ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮುರ್ಖಂ 9383—ಮಿ. ಫೈ. 21—96ನೆ ಮ ಅ॥ 1904—ಮಿ. ಫೈ. 21—96ನೆ ನಂಬರ ಆಸ್ತಿಯಲ್ಲಿ ಮಾಡಿಸಿದ ಕೊಲ್ಲಪ್ಪು ರಗ್ಯುಲೇಷನಗಳ ಅಮ್ಮಲಿಗಾಗಿ ಕೋಲಾರ ಡಿಸ್ಟ್ರಿಕ್ಟನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ	ತಾಲ್ಲೂಕು.	ಸ್ಥಳ.	ತಾಲ್ಲೂಕು
ಕುಡೆನೂರು	ಮಾಲೂರು.	ಪೈಮರಡ್ಡೀಹಳ್ಳಿ	ಚಿಂತಾಮಣಿ.
ಕರವಲಗನಹಳ್ಳಿ	ಕೋರಿಗನೂರು.	ಸೆಲ್ಲಹಳ್ಳಿ	ಸಿಡ್ಲಘಟ್ಟ.
ಗೌಡಗೆರೆ	ಡಿಟೋ	ಗುಡಿಹಳ್ಳಿ	ಡಿಟೋ
ಹುಣಗೊರು	ಡಿಟೋ	ಸುಬ್ರಹ್ಮಣ್ಯಪೇಟೆ	ಬೆಂಗಳೂರ.
ದೊಡ್ಡಮಂಗಹಳ್ಳಿ	ಡಿಟೋ	ಕೋಲಾರ ಟೌನ್	ಕೋಲಾರ
ಬಂಗೇನಹಳ್ಳಿ	ಗುಡಿಬಂಡೆ ರೇಜಾ	ಅರಿಹಳ್ಳಿ	ಡಿಟೋ
ಅನ್ನಸಂದ್ರ	ಮುಳಬಾಗಲು.	ಬೌರಿಂಗಪೇಟೆ ಟೌನ್	ಬೌರಿಂಗಪೇಟೆ.
ಮಾರಂಡಹಳ್ಳಿ	ಡಿಟೋ	ಕೃಷ್ಣಾವಿಜೊಸನಹಳ್ಳಿ	ಡಿಟೋ
ಪಲಮನೂರು	ಡಿಟೋ		

ತಾರೀಖು 29ನೆ ನವೆಂಬರ, 1ನೆ ಡಿಸೆಂಬರ 1904.

ನಂ. 4816—15—10—ಸ್ಯಾನಿಟೇರ್ಷ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮುರ್ಖಂ 9383—ಮಿ. ಫೈ. 21—96ನೆ ಮ ಅ॥ 1904—ಮಿ. ಫೈ. 21—96ನೆ ನಂಬರ ಆಸ್ತಿಯಲ್ಲಿ ಮಾಡಿಸಿದ ಕೊಲ್ಲಪ್ಪು ರಗ್ಯುಲೇಷನಗಳ ಅಮ್ಮಲಿಗಾಗಿ ಬೆಂಗಳೂರ ಡಿಸ್ಟ್ರಿಕ್ಟನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
ಹಿರೇಕೆರೆ	ಚಿತ್ರದುರ್ಗ.	ಬೀರಸಂದ್ರ	ಕೃಷ್ಣರಾಜಪೇಟೆ.
ಕ್ಯಾಸಾಪುರ		ಕೆಳ್ಳಾಪುರ	
ಬೆಲ್ಲಗಟ್ಟ		ದುಗ್ಗನಹಳ್ಳಿ	
ಕೊಡಹಾಳ		ಗೊಲ್ಲರಹಟ್ಟಿ	
ಎಲೂಲೆಕಹಳ್ಳಿ		ಮೆಣಸಿಕಟ್ಟೆ	
ಕೂದಿಕೆರೆ ಪ್ರರ		ಬುಳ್ಳಹಳ್ಳಿ	
ಹಾಲವರ್ತಿ	ದಾವಣಗೆರೆ.	ಚದಗೊಳ	ಬಾಗಳೂರು.
ಬೇತೂರು		ಬೀಂಜೊಡೆ	
ಹರಿಹರ		ತೋರನಗಟ್ಟೆ	
ಗುತ್ತೂರು	ಹರಿಹರ ಸಬ ತಾಲ್ಲೂಕು.	ಜಂಟಿಗೊಳಲು	
ಬೆಳ್ಳೂಡಿ		ಬೀರ್ಸಹಳ್ಳಿ	
ಮಳೆಮಲ್ಲೂರು		ಕುರೂರು	ಹೊಸದುರ್ಗ.
ಹೊಳಲಿಕೇರೆಪುರ		ಹೊಸದುರ್ಗ	
ದೊಗ್ಗನಾಳ		ಹಾಲೇನಹಳ್ಳಿ	
ಸಿಂಗೇನಹಳ್ಳಿ	ಮುಳಬಾಗಲು.	ಬರಾಹಳ್ಳಿ	ಹೊಳಲಕೆರೆ.
ಹುಸ್ಕೂರಹಳ್ಳಿ		ಮುರಡಿ	
ಮುಳಬಾಗಲು			

ತಾರೀಖು 29ನೆ ನವೆಂಬರ, 1ನೆ ಡಿಸೆಂಬರ 1904.

ನಂ. 4816—15—10—ಸ್ಯಾನಿಟೇರ್ಷ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಆಗಾಗ್ಗೆ ರೋಗ ತಗಲಿದ ಪ್ರದೇಶಗಳಾಗಿ ಪ್ರಸಿದ್ಧಪಡಿಸಲ್ಪಟ್ಟ ಇದರಡೀ ಕಂಡ ಸ್ಥಳಗಳು 2 ತಿಂಗಳುಗಳಿಂತ ಜಾಸ್ತಿಯಾಗಿ ಪ್ಲೇಗ ರೋಗವು ಕಂಡ ಇರುವದ್ದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ಸಡಾ ಮಾಡಲ್ಪಟ್ಟಿರುತ್ತವೆ :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
ಅಬ್ಬಿಗೆರೆ	ಹಾಸನ.	ಕೇರಳಾಪುರ	ಅರಕಲಗೂಡು.
[illegible]	[illegible]	[illegible]	[illegible]
ಹೊಸಕೊಟೆ	ಡಿಟೋ	ಮಗೆ	ಡಿಟೋ
ದೊಡ್ಡಎಸವನಹಳ್ಳಿ	ಡಿಟೋ	ಯಡೂರು	ಆಲೂರು ಸಬ ತಾ॥
[illegible]	[illegible]	[illegible]	[illegible]
ಬಳ್ಳೂರು	ಬೇಲೂರು.	ಕೇರಿಹಳ್ಳಿ	ಡಿಟೋ
ಹಬೀಡ	ಡಿಟೋ	ಬಳ್ಳೂರು	ಡಿಟೋ
ಅರಸೀಕೆರೆ ಟೌನ್	ಅರಸೀಕೆರೆ.	ಬಂಸಹಳ್ಳಿ	ಡಿಟೋ
ಬಿಡ್ಡಾರಹಟ್ಟಿ	ಡಿಟೋ	ಹನುಮನಹಳ್ಳಿ	ಡಿಟೋ
ತಿರುಪತಿಹಳ್ಳಿ	ಡಿಟೋ	ಸಿದ್ದಾಪುರ	ಡಿಟೋ
ಚೆನ್ನರಾಯಪಟ್ಟಣ ಟೌನ್	ಚೆನ್ನರಾಯಪಟ್ಟಣ.		

ತಾರೀಖು 12—13ನೆ ಡಿಸೆಂಬರ 1904.

ನಂ. 4081—16—2, ಸ್ಯಾನಿಟೇರ್ಷ, ತುಮಕೂರ ಡಿಸ್ಟ್ರಿಕ್ಟನ ಪಾವಗಡ ತಾಲ್ಲೂಕಿನಲ್ಲಿರುವ ನಾಗಲಮಡಿಕೆಯಲ್ಲಿ ನಡೆಯುವ ನಾಗಲಮಡಿಕೆಯ ಜಾತ್ರೆಯ ಸಂಬಂಧದಲ್ಲಿ ಪ್ಲೇಗ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳದಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರ ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರವವರಿಗೆ ಪ್ರತ್ಯಕ್ಷವಾಗಿ ಕಂಡದ್ದರಿಂದ, 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ ರೆಗ್ಯುಲೇಷನ್ನಿನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರ ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರವವರು 1905ನೆ ಜನವರಿ 10ರ ಲಾಗಾಯತು 15ರ ವರಿಗೆ ಪ್ಲೇಗ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಕ್ಕೆ ಬರುವದನ್ನು ಅಡೀಪಡಿಸುತ್ತಾರೆ.

ಈ ಕಸ್ತೂರಿಯಾಜ್ಞೆಯ ವ್ಯತಿರಿಕ್ತವಾಗಿ ಸದರೀ ಜಾತ್ರೆಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 13—14ನೆ ಡಿಸೆಂಬರ್ 1904.

ನಂ. 5108—18-18—ಸ್ಯಾನಿಟೇರ್ಷ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಆಗಾಗ್ಗೆ ರೋಗ ತಗಲಿದ ಪ್ರದೇಶಗಳಾಗಿ ಪ್ರಸಿದ್ಧಪಡಿಸಲ್ಪಟ್ಟ ಇದರಡೀ ಕಂಡ ಸ್ಥಳಗಳು 2 ತಿಂಗಳುಗಳಿಗಿಂತ ಜಾಸ್ತಿಯಾಗಿ ರೋಗವಿಲ್ಲದೆ ಇರುವದ್ದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವ :—

1879

ಕೋಲಾರ ಡಿಸ್ಟ್ರಿಕ್ಟ್.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
ಮುತ್ತೂರು	.. ಶಿಡ್ಲಘಟ್ಟ.	ಹಳೆ ಗುಡಿಬಂಡೆ	.. ಗುಡಿಬಂಡೆ.
ಅರಣಿಘಟ್ಟ	... ಮಾಲೂರು.	ಕಾಮಸಂದ್ರಹಳ್ಳಿ	.. ಡಿಟೋ
ಹೋರ್ನಹಳ್ಳಿ	... ಡಿಟೋ	ಚಿಕ್ಕನಾಚಿರ್ಲ	... ಡಿಟೋ
ಬುಲುವನಹಳ್ಳಿ	.. ಶಿಡ್ಲಘಟ್ಟ.	ಕಾವರ್ನಹಳ್ಳಿ	.. ಚಿಕ್ಕಬಳ್ಳಾಪುರ.
ಗುಡಿಬಂಡೆ ಟೌನ್	... ಗುಡಿಬಂಡೆ.	ಮಾರಪ್ಪನಹಳ್ಳಿ	.. ಡಿಟೋ
ತಂಬಿಹಳ್ಳಿ	... ಮಾಲೂರು.	ಕಂಬಿಪುರ	.. ಮಾಲೂರು.
ಮಂಚೇನಹಳ್ಳಿ	.. ಗೋರಿಬಿದನೂರು.	ಹಂದಿಗೆರೆ	.. ಚಿಂತಾಮಣಿ.

ತಾರೀಖು 13—14ನೆ ಡಿಸೆಂಬರ್ 1904.

ನಂ. 5110—18-19—ಸ್ಯಾನಿಟೇರ್ಷ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ್ ಅನುಸರಿಸಿ 1898ನೆ ಫಿಬ್ರವರಿ 10ನೆ ಮಾರ್ಕ್ಕಂ 9383—ಮಿ. ಫ್ಯೆ. 21—96ನೆ ಮತ್ತು 9384—ಮಿ. ಫ್ಯೆ. 21—96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇರ್ಷ್‌ಗಳ ಉದ್ದೇಶಗಳಿಗೋಸ್ಕರ ಕೋಲಾರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

	ಸ್ಥಳ.	ತಾಲ್ಲೂಕು.		ಸ್ಥಳ.	ತಾಲ್ಲೂಕು.
1.	ಹೊನ್ನೇನಹಳ್ಳಿ	... ಚಿಕ್ಕಬಳ್ಳಾಪುರ.	7.	ಕಂಬಟಿಪಲ್ಲಿ	.. ಗುಡಿಬಂಡೆ ಸಬ್ ತಾ॥
2.	ತಿಪ್ಪೇನಹಳ್ಳಿ	.. ಡಿಟೋ	8.	ಬ್ರಾಹ್ಮರಹಳ್ಳಿ	... ಡಿಟೋ
3.	ಹಾರೂಬಂಡೆ	.. ಡಿಟೋ	9.	ಮೋಲೂರು	... ಶಿಡ್ಲಘಟ್ಟ.
4.	ಆಗಟ್ಟ	.. ಡಿಟೋ	10.	ಸುಲ್ತಾನ್ ತಿಪ್ಪಸಂದ್ರ	.. ಕೋಲಾರ.
5.	ಗಂಗೈಕಲ್ಲ್	.. ಡಿಟೋ	11.	ಪಾಲಸಂದ್ರ	... ಬಾಗೆಪಲ್ಲಿ.
6.	ವ್ಯಾಕಲಮದ್ದಯ್ಯಗಾರಿಹಳ್ಳಿ.	.. ಗುಡಿಬಂಡೆ ಸಬ್ ತಾಲ್ಲೂಕು.	12.	ಗತಂವಾರಪಲ್ಲಿ	.. ಡಿಟೋ
			13.	ನಾಚಂದಹಳ್ಳಿ	.. ಬೌರಿಂಗ್‌ಪೇಟೆ.

ತಾರೀಖು 15—16ನೆ ಡಿಸೆಂಬರ್ 1904.

ನಂ. 5203—22-54—ಸ್ಯಾನಿಟೇರ್ಷ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ದರಡೀ ಕಂಡ ಉತ್ಸವಕ್ಕೆ ಯಾತ್ರಾರ್ಥವಾಗಿ ಹೋಗುವದನ್ನು ಮದರಾಸು ಗವರ್ನಮೆಂಟಿನವರು ಅಡ್ಡೀಪಡಿಸುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.
				ಯಾವಲಾಗಾಯ್ತು.	ಯಾವ ವರಿವಿಗೆ.	
ಬೂತಬಾಳು ಜುತ್ರೆಯ ಉತ್ಸವ.	ಬೂತಬಾಳು ಗ್ರಾಮ.	ಕೊಳ್ಳೆಗಾಲ.	ಕೊಯಿಮುತ್ತೂರು.	15—2—05	24—2—05	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಂಡಾರ್ಸ್‌ಮೆಂಟ್ ನಂ. 1507 ಪಿ., ತಾ॥ 5—12—04.

ತಾರೀಖು 15—16ನೆ ಡಿಸೆಂಬರ್ 1904.

ನಂ. 5204—22-55—ಸ್ಯಾನಿಟೇರ್ಷ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ರೋಗ ತಗಲಿದ ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನಮೆಂಟಿನವರು ಅಡ್ಡೀಪಡಿಸುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.
				ಯಾವ ಲಾಗಾಯ್ತು.	ಯಾವ ವರಿವಿಗೆ.	
ಮಕರ ಸಂಕ್ರಮಣದ ಉತ್ಸವ.	ಉಡಿಪಿ ..	ಉಡಿಪಿ ..	ದಕ್ಷಿಣಕನ್ನಡ	1—1—05	14—1—05	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎಂಡಾರ್ಸ್‌ಮೆಂಟ್ ನಂ. 1479-ಪಿ., ತಾ॥ 1-12-04

ತಾರೀಖು 2 –3ನೆ ಡಿಸೆಂಬರ 1904.

ನಂ. 4737–49–5—ಮ್ಯು., ಸನ್1894ನೆ ಇಸವಿಯ VIIನೆ ನಂಬರಿ ಲ್ಯಾಂಡ್ ಅಕ್ವಿಜಿಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನುಗಳು ಮತ್ತು ಕಟ್ಟಡಗಳು ಸರ್ಕಾರ ಕೆಲಸಕ್ಕೆ ಅಂದರೆ ಬೆಂಗಳೂರ ಷಹರನಲ್ಲಿರುವ ದೊಡ್ಡ ಪೊಹರಿಯನ್ನು ಅಗಲಪಡಿಸುವ ಬಗ್ಯೆ ಬೇಕಾಗಿರುತ್ತವೆ :—

ಪಂಚಾಯ್ತಿ ನಂ.	ಹೊಲದ ನಂ.	ಮಾಲ್ಕೀಕರ ಹೆಸರು.	ಸ್ವತ್ತಿನ ವಿವರ.	ಅಳತೆ. ಲಾಂಬಿ ಅಡಿಗಳು.	ಅಳತೆ. ರುಂದಿ ಅಡಿಗಳು.	ಜುಮ್ಲಾ.	ಚದರ ಗಜಗಳು ಯಾ ಅಂಕಣಗಳು ಯಾ ಎಕರೆ.	ಚೆಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1	..	ದಿವಾನ್ ಬಹದೂರ್ ರಘುನಾಥ ರಾಮರು.	ಬಾಗಾಯತು ಜಮೀನು.	288	$7\frac{1}{4} + \frac{2\frac{1}{2} + 7\frac{1}{4}}{3}$	...	1 ಗುಂಟೆ ಮತ್ತು 17 ಚದರ ಗಜಗಳು	ಮ್ಯುನಿಸಿಪಲ್ ಜಮೀನು	3ನೆ ಬೀದಿ ಸಿದ್ದಿಕಟ್ಟೆ	ಮಿಕ್ಕ ಜಮೀನು	ದೊಡ್ಡ ಪೊಹರಿ
2	...	ಗಂಧಿಗೆ ಹನುಮಪ್ಪ ..	ಜಮೀನು ಸಹಿತವಾಗಿ ಮಂಣಿನ ಮಾಳಿಗೆ.	15	$\frac{2 + 1\frac{1}{4}}{2}$	28	$\frac{3}{4}$ ಅಂಕಣಗಳು.	ಮಿಕ್ಕ ಮನೆ	ಮ್ಯುನಿಸಿಪಲ್ ಜಮೀನು	ಗುರಪ್ಪನ ಮನೆ	ಬಾಕರಸಾಬಿಯ ಜಮೀನು
3	...	ಕಸಾಯಿ ಬಾಕರಸಾಬ ..	ಖಾಲಿ ನಿವೇಶನ ..	$\frac{20 + 16}{2}$	$\frac{23 + 15}{2}$	..	38 ಚದರ ಗಜಗಳು.	ಮಂಡಿ ಕಾಳಪ್ಪನ ಅಂಗಡಿ	ಡಿಟೋ	ಹನುಮಂತಪ್ಪನ ಮನೆ	ಮ್ಯುನಿಸಿಪಲ್ ಜಮೀನು
4	1—2	ಮಂಡಿ ಕಾಳಪ್ಪ ..	ಜಮೀನು ಸಹಿತವಾಗಿ ಮಂಣಿನ ಮಾಳಿಗೆ.	$20\frac{1}{2}$	12	246	6 ಅಂಕಣಗಳು.	ವೆಂಕಟರಮಣಪ್ಪನ ಅಂಗಡಿ	ಬಾಕರಸಾಬಿಯ ಜಮೀನು	ಮಿಕ್ಕ ಕಟ್ಟಡ	ರಸ್ತೆ
5	246	ವೆಂಕಟರಮಣಪ್ಪ .	ಡಿಟೋ ...	24	11	264	$6\frac{1}{2}$ ಡಿಟೋ	ಅವಿನ್ಯೂ ರಸ್ತೆ	ಕಾಳಪ್ಪನ ಕಟ್ಟಡ	ಮಿಕ್ಕ ಅಂಗಡಿ	ಡಿಟೋ
6	252 ವ 253	ಮಂಡಿ ಮರಿಸಾಮಪ್ಪ ..	ಡಿಟೋ ...	30	$\frac{14 + 7}{2}$	315	$7\frac{3}{4}$ ಡಿಟೋ	ದರ್ಜಿ ಕಾಳಮ್ಮನ ಮನೆ	ಅವಿನ್ಯೂ ರಸ್ತೆ	254ನೆ ನಂ. ಅಂಗಡಿ	ದೊಡ್ಡ ಪೊಹರಿ
			ಖಾಲಿ ಜಮೀನು ...	30	$\frac{8 + \frac{1}{2}}{2}$	...	15 ಚದರ ಗಜಗಳು.				
7	...	ದರ್ಜಿ ಕಾಳಮ್ಮ ..	ಮಂಣಿನ ಮಾಳಿಗೆ ..	$43\frac{1}{2}$	$\frac{7 + 1\frac{1}{2}}{2}$	$184\frac{7}{8}$	$4\frac{1}{2}$ ಅಂಕಣಗಳು.	ಮ್ಯುನಿಸಿಪಲ್ ಪೊಹರಿ	ಮರಿಸಾಮಪ್ಪನ ಜಮೀನು	ಮಿಕ್ಕ ಮನೆ	ಹಯಾತ್‌ಸಾಬಿಯ ಜಮೀನು
8	...	ಹಯಾತ್‌ಸಾಬ್ ..	ಖಾಲಿ ಜಮೀನು ...	$43\frac{1}{2}$	$\frac{13\frac{1}{2} + 8}{2}$	..	$51\frac{8}{9}$ ಚದರ ಗಜಗಳು.	ಡಿಟೋ	ಡಿಟೋ	ಕಾಳಮ್ಮನ ಮನೆ	ದೊಡ್ಡ ಪೊಹರಿ
9	...	ಕಮರುದ್ದೀನ್ ಸೇಟ್ ...	ಮಂಣಿನ ಮಾಳಿಗೆ...	48	$13\frac{1}{2}$	684	$20\frac{7}{8}$ ಅಂಕಣಗಳು.	ರಸ್ತೆ	ಮ್ಯುನಿಸಿಪಲ್ ಪೊಹರಿ	ಮಿಕ್ಕ ಮನೆ	ಡಿಟೋ
			ಡಿಟೋ ...	$18\frac{1}{2}$	$10\frac{3}{4}$	199					
10	...	ಅಬ್ದುಲ್ ಮಜೀದ ..	ಖಾಲಿ ಜಮೀನು	36	$\frac{2\frac{1}{4} + 7}{2}$	$337\frac{1}{2}$	$8\frac{1}{3}$ ಅಂಕಣಗಳು.	ಡಿಟೋ	ಇಸ್ಮಾಲ್‌ಸಾಬಿಯ ಮನೆ	ಡಿಟೋ	ಡಿಟೋ
			ಕಲ್ಲಿನ ಮಾಳಿಗೆ ಕಟ್ಟಡ.	$33\frac{3}{4}$	$\frac{13\frac{1}{2} + 6\frac{1}{2}}{2}$						

11	...	ಮುಹಮ್ಮದ ಇಸ್ಮಾಲ್‌ಸಾಬ್.	ಖಾಲಿ ಜಮೀನು ...	$\frac{2\frac{1}{4}+4\frac{3}{4}}{2}$	$44\frac{3}{4}$	...	18 ಚದರ ಗಜಗಳು.	ಅಬ್ದುಲ್ ಮಜೀದ ದಿನಮನೆ	ರಸ್ತೆ	ಮಿಕ್ಕ ಮನೆ	ದೊಡ್ಡ ಮೊಹರಿ
			ಮಂಣಿನ ಮಾಳಿಗೆ...	$58\frac{3}{4}$	$\frac{2+13\frac{1}{2}}{2}$	445	11 ಅಂಕಣಗಳು.				
12	..	ಇಮಾಂಸಾಬ್ ..	ಖಾಲಿ ಜಮೀನು ..	$7\frac{1}{2}$	$6\frac{1}{2}$	...	$5\frac{1}{2}$ ಚದರ ಗಜಗಳು.	ಮೊಹದ್ದೀಬೇಗಿ ನಮನೆ	ಡಿಟೋ	ಡಿಟೋ	ಡಿಟೋ
			ಮಂಣಿನ ಮಾಳಿಗೆ...	$13\frac{1}{2}$	$10\frac{1}{2}$	145	$3\frac{1}{2}$ ಅಂಕಣಗಳು.				
			ಡಿಟೋ ...	$15\frac{1}{2}$	$13\frac{1}{2}$	209	5 ಅಂಕಣಗಳು.				
			ಖಾಲಿ ಜಮೀನು ..	$18\frac{1}{4}$	$13\frac{1}{2}$	...	$27\frac{1}{2}$ ಚದರ ಗಜಗಳು.				
13	...	ಮೊಹದ್ದೀಬೇಗ ...	ಮಂಣಿನ ಮಾಳಿಗೆ..	40	$\frac{6\frac{1}{2}+14}{2}$	410	$16\frac{2}{9}$ ಅಂಕಣಗಳು.	ರಸ್ತೆ	ಇಮಾಂಸಾಬಿಯ ಮನೆ	ಡಿಟೋ	ಡಿಟೋ
				20	$\frac{10\frac{3}{4}+14}{2}$	247					
14	1	ಲೂನೆಟಿಕ ಅಸೈಲಮಿನ ದಫೇದಾರ್ ಗಾಸಿಖಾನ್.	ಖಾಲಿ ಜಮೀನು ..	14	$13\frac{1}{2}$	...	21 ಚದರ ಗಜಗಳು.	ಮುನಿಸಾಮಪ್ಪನ ತೋಟ	ರಸ್ತೆ	ಡಿಟೋ	ಡಿಟೋ
			ಹಂಚಿನ ಮಾಳಿಗೆ...	15	$13\frac{1}{2}$	..	5 ಅಂಕಣಗಳು.				
15	..	ಮುನಿಸಾಮಪ್ಪ ...	ಬಾಗಾಯತು ಜಮೀನು.	158	15	..	263 ಚದರ ಗಜಗಳು.	ಚಿಕ್ಕ ಮುನಿಸಾಮಯ್ಯನ ತೋಟ	ಗಾಸಿಖಾನಿನ ಮನೆ	ಮಿಕ್ಕ ಜಮೀನು	ಡಿಟೋ
16	...	ಚಿಕ್ಕ ಮುನಿಸಾಮಿ ..	ಡಿಟೋ ...	60	15	..	100 ಚದರ ಗಜಗಳು.	ಮ್ಯುನಿಸಿಪಲ್ ಜಮೀನು	ಮುನಿಸಾಮಿಯ ತೋಟ	ಡಿಟೋ	ಡಿಟೋ
17	..	ಮಿಯಾಸಾಬ್	ಮಂಣಿನ ಮಾಳಿಗೆ...	28	$\frac{8\frac{1}{2}+15+310}{4}$	112	$2\frac{3}{4}$ ಅಂಕಣಗಳು.	ಹುಸೇನ್‌ಸಾಬಿಯ ಜಮೀನು	ಮಹಮದ್ ಅಮೀನ್ ಸಾಬಿಯ ಜಮೀನು	ಮಿಕ್ಕ ಮನೆ	ಡಿಟೋ
			ಹಂಚಿನ ಮಾಳಿಗೆ .	11	$10\frac{1}{2}$	115	$2\frac{3}{4}$ ಡಿಟೋ				
			ಖಾಲಿ ಜಮೀನು	$17\frac{1}{2}$	$\frac{11+6\frac{1}{2}}{2}$	17	17 ಚದರ ಗಜಗಳು.				
			ಸುಟ್ಟ ಇಟಿಗೆ ಗೋಡೆ.	$24\frac{1}{2}$	$\frac{6\frac{1}{2}+1\frac{1}{2}}{2}$	..	239 ಸಲಡಿಗಳು.				
18	...	ಹುಸೇನ್‌ಸಾಬ್	ಬಾಗಾಯತು ...	$56\frac{1}{2}$	$13\frac{1}{2}$	..	$84\frac{2}{3}$ ಚದರ ಗಜಗಳು.	ಮುನಿಸಾಮಿಯ ಜಮೀನು.	ಮಿಯಾಸಾಬಿಯ ಮನೆ	ಮಿಕ್ಕ ಜಮೀನು	ಡಿಟೋ
19	..	ಮುನಿಸಾಮಿ ...	ಡಿಟೋ ..	$70\frac{1}{2}$	$13\frac{1}{2}$	..	105 ಚದರ ಗಜಗಳು.	ಅಪ್ಪಣ್ಣನ ಜಮೀನು	ಹುಸೇನ್‌ಸಾಬಿಯ ಜಮೀನು	ಡಿಟೋ	ಡಿಟೋ
20	..	ಅಪ್ಪಣ್ಣ	ಡಿಟೋ ..	105	$13\frac{1}{2}$	...	157 ಚದರ ಗಜಗಳು.	ಮುನಿಸಾಮಿಯ ಜಮೀನು	ಮುನಿಸಾಮಿಯ ಜಮೀನು	ಡಿಟೋ	ಡಿಟೋ

ತಾರೀಖು 14ನೆ ಡಿಸೆಂಬರ್ 1904.

ನಂ. ಜು. 1537—ಸಿ. 118-7, ಸನ್ 1883ನೆ ಇಸವಿಯ 1ನೆ ನಂಬರ್ ಮೈಸೂರ ಸಿವಿಲ್ ಕೋರ್ಟುಗಳ ರೆಗ್ಯುಲೇಷನ್ನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರ ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದವರು 1905ನೆ ಜನವರಿ ಗುರ್ರು ತಾರೀಖಿನಾರಭ್ಯ ಇದರಡೀ ಕಂಡ ಏರ್ಪಾಡುಗಳನ್ನು ಮಂಜೂರ್ಮಾಡಿರುತ್ತಾರೆ :—

1. ಚಿತ್ರದುರ್ಗದಲ್ಲಿರುವ ಸಬಾರ್ಡಿನೇಟ್ ಜಡ್ಜಿಯವರ ಕೋರ್ಟು ವಜಾ ಮಾಡಲ್ಪಡತಕ್ಕದ್ದು.

2. ಶಿವಮೊಗ್ಗ ಮುನ್‌ಸೀಫರ ಎಖ್ತ್ಯಾರಿಯ ಸ್ಥಳೀಕ ಸರಹದ್ದುಗಳಲ್ಲಿ 100 ರೂಪಾಯಿಗಳ ವರಿಗಿನ ಸ್ಮಾಲ್‌ಕಾಜ ಎಖ್ತ್ಯಾರಿಯೊಡನೆ ಶಿವಮೊಗ್ಗ ವ ಚಿತ್ರದುರ್ಗ ರೆವಿನ್ಯೂ ಡಿಸ್ಟ್ರಿಕ್ಟುಗಳಲ್ಲಿ ಚಲಾಯಿಸುವ ಬಗ್ಗೆ 10,000 ರೂಪಾಯಿಗಳ ವರಿಗಿನ ಒರಿಜನಲ್ ಸಿವಿಲ್ ಎಖ್ತ್ಯಾರಿಯೊಡನೆ ಶಿವಮೊಗ್ಗಾದಲ್ಲಿ ಒಂದು ಸಬಾರ್ಡಿನೇಟ್ ಜಡ್ಜೀಯವರ ಕೋರ್ಟು ಸ್ಥಾಪಿಸಲ್ಪಡತಕ್ಕದ್ದು.

3. ಚಿತ್ರದುರ್ಗದ ವಿಸಿಷ್ಟ ರೆವಿನ್ಯೂ ಡಿಸ್ಟ್ರಿಕ್ಟಿನಲ್ಲಿ ಎಖ್ತ್ಯಾರಿಯೊಡನೆ ಚಿತ್ರದುರ್ಗದಲ್ಲಿ ಒಂದು ಮುನ್‌ಸೀಫರ ಕೋರ್ಟು ಸ್ಥಾಪಿಸಲ್ಪಡತಕ್ಕದ್ದು.

4. ಹೊನ್ನಾಳಿಯಲ್ಲಿರುವ ಮುನ್‌ಸೀಫರ ಕೋರ್ಟು ವಜಾ ಮಾಡಲ್ಪಡತಕ್ಕದ್ದು. ಸದರೀ ಹೊನ್ನಾಳಿ ತಾಲ್ಲೂಕಿನ ಒರಿಜನಲ್ ಎಖ್ತ್ಯಾರಿಯು ಶಿವಮೊಗ್ಗಾ ಮುನ್‌ಸೀಫರಿಗೂ ಮತ್ತು ಷಿಕಾರಿಪುರ ತಾಲ್ಲೂಕಿನ ಇದರ ಬಾಜೂದಲ್ಲಿ ಕಂಡ ಹೋಬಳಿಗಳ ಒರಿಜನಲ್ ಎಖ್ತ್ಯಾರಿಯು ಸಾಗರದ ಮುನ್‌ಸೀಫರಿಗೂ ವರ್ಗ ಮಾಡಲ್ಪಡತಕ್ಕದ್ದು.

1. ಷಿಕಾರಿಪುರದ ಕಸಬಾ ಹೋಬಳಿ.
2. ಮಾಗಲಗೆರೆ ಡಿಟೋ
3. ಹೊಸೂರು ಡಿಟೋ
4. ತಲಗೊಂಡ ಡಿಟೋ
5. ಉಡಗಣಿ ಡಿಟೋ

ತಾರೀಖು 19ನೆ ಡಿಸೆಂಬರ್ 1904.

ನಂ. ಜು. 1585—ಸಿ. 15 1-2, ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಸೆಕ್ಷನ್ ಅನುಸರಿಸಿ ಕೋಲಾರ ಡಿಸ್ಟ್ರಿಕ್ಟ್ ಟ್ರೆಜರಿಯ ಚಾರ್ಜಿನಲ್ಲಿರುವ ಆಕ್ಟಿಂಗ್ ಎಕ್ಸಟ್ರಾ ಅಸಿಸ್ಟೆಂಟ್ ಕಮಿಷನರ್ ವ ಎರಡನೇ ಕ್ಲಾಸು ಮ್ಯಾಜಿಸ್ಟ್ರೇಟರಾದ ಮೆ॥ ಟಿ. ಕೆ. ಸುಂದರರಾಜಯ್ಯಂಗಾರ್ರು ಮೊದಲನೆ ಕ್ಲಾಸಿನ ಮ್ಯಾಜಿಸ್ಟ್ರೇಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 19ನೆ ಡಿಸೆಂಬರ್ 1904.

ನಂ. ಜು. 1612—ಸಿ. 152-2, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188 ವ 206ನೆ ಆರ್ಟಿಕಲ್‌ಗಳನುಸರಿಸಿ, ಶಿವಮೊಗ್ಗ ಡಿವೀಜನಿನ ಡಿಸ್ಟ್ರಿಕ್ಟ ವ ಸೆಷನ್ ಜಡ್ಜ್‌ರಾದ ಮೆ॥ ಎಸ್. ವೆಂಕಟವರದ ಅಯ್ಯಂಗಾರ್ರಿಗೆ ಬರುವ ಕ್ರಿಸ್ಮಸ್ ರಜಾ ದಿನಗಳೊಡನೆ 1905ನೆ ಜನವರಿ 3ನೆ ತಾರೀಖಿನಾರಭ್ಯ ಪೂರಾ ತಲಬಿನಮೇಲೆ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಮೆ॥ ಎಸ್. ವೆಂಕಟವರದ ಅಯ್ಯಂಗಾರ್ರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟಿನ ಡೆಪ್ಯುಟಿ ಸೆಕ್ರಿಟರಿಯವರಾದ ಮೆ॥ ಕೆ. ಎಸ್. ಚಂದ್ರಶೇಖರ ಅಯ್ಯರ್, ಬಿ. ಎ., ಬಿ. ಎಲ್., ಯವರು ಶಿವಮೊಗ್ಗ ಡಿವೀಜನಿನ ಡಿಸ್ಟ್ರಿಕ್ಟ ವ ಸೆಷನ್ ಜಡ್ಜ್‌ರಾಗಿ ಆಕ್ಟಿಂಗ್ ತರೀಕು ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 19—20ನೆ ಡಿಸೆಂಬರ್ 1904.

ನಂ. 5246—110-2—ಮು., ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟಿನ ಸಿವಿಲ್ ಸರ್ಜನ್‌ರಾದ ಮೆ॥ ಪಿ. ಎಸ್. ಕಿಚ್ಚಣ್ಣರಾಯರಿಗೆ 1905ನೆ ಜನವರಿ 3ನೆ ತಾರೀಖಿನಾರಭ್ಯ 6 ವಾರಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಅಸಿಸ್ಟೆಂಟ್ ಸರ್ಜನ್‌ರಾದ ಮೆ॥ ಟಿ. ವಿ. ಕೃಷ್ಣಸ್ವಾಮಿ ಮೊದಲಿಯಾರ್ರು, ಮೆ॥ ಅಚ್ಯುತರಾಯರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಮೈಸೂರ ಡಿಸ್ಟ್ರಿಕ್ಟಿನ ಸಿವಿಲ್ ಸರ್ಜನ್‌ರಾಗಿ ಆಕ್ಟಿಂಗ್ ತರೀಕು ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 15ನೆ ಡಿಸೆಂಬರ್ 1904.

ನಂ. ರೆ. 5266—ಫಾ. 105—04—3, ಸನ್ 1904ನೆ ಡಿಸೆಂಬರ್ ಗುರ್ರು ಲಾಗಾಯತು ಇದರಡೀ ಕಂಡ ಬಡ್ತಿಗಳು ಹುಕುಂ ಮಾಡಲ್ಪಟ್ಟಿರುತ್ತವೆ :—

1. ಮೊದಲನೇ ಕ್ಲಾಸಿನ ರೇಂಜರಾದ ಮೆ॥ ಜಿ. ಕೃಷ್ಣಮೂರ್ತಿನಾಯಿಡುಯವರು ಫಾರೆಸ್ಟಿನ ಸಬ್ ಅಸಿಸ್ಟೆಂಟ್ ಕನಸರ್ವೇಟರಾಗಿರತಕ್ಕದ್ದು.

2. ಎರಡನೇ ಕ್ಲಾಸಿನ ರೇಂಜರಾದ ಮೆ॥ ಪಿ. ಎಸ್. ಗೋವಿಂದರಾಯರು ಫಾರೆಸ್ಟಿನ ಸಬ್ ಅಸಿಸ್ಟೆಂಟ್ ಕನಸರ್ವೇಟರಾಗಿರತಕ್ಕದ್ದು.

437
1883

ತಾರೀಖು 5ನೆ ಡಿಸೆಂಬರ್ 1904.

ನಂ. ರೆ. 4949—ಲ್ಯಾ. ರೆ. 270-04-3, ಸನ 1894ನೆ ಇಸವಿಯ VIIನೆ ನಂಬರ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಹೊಸ ಗ್ರಾಮವನ್ನುಂಟುಮಾಡಲಿಕ್ಕೆ ಬೇಕಾಗಿರುತ್ತೆ. ಮತ್ತು ಚಿಕ್ಕಬಳ್ಳಾಪುರ ಮತ್ತು ಇತರ ತಾಲ್ಲೂಕುಗಳ ಚಾರ್ಜಿನಲ್ಲಿರುವ ಅಸಿಸ್ಟಂಟ್ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರ್ರ ಹೆಸರು.	ಸರ್ವೆ ನಂಬರ.	ಎಷ್ಟೆ ಗುಂಟೆ ಇದೆ.	ಆಕಾರ.	ಎಷ್ಟೆ ಗುಂಟೆ ಹೊಡೆಯಿಕೊಳ್ಳಬೇಕೆಂದು ಗುರುತು ಎಷ್ಟೆ.	ಚಕ್ಕುಬಂದಿ.			
									ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ	ಗೋರಿಬಿದನೂರು	ನಂಜೀನಹಳ್ಳಿ	ಕೊಂಡಿನಹಳ್ಳಿ	ಬಂಗ್ರಪ್ಪ ಬಿನ್ ನರಸಂಣ	1 ಖುಷ್ಕಿ+	ಎ. ಗು. 17—36	ರೂ. ಆ. ಪೈ. 12—0—0	ಎ. ಗು. 1—20	ಸರ್ವೆ ನಂ. 3	ಬಂಡೆ ರ ಹೆಸ್ಕ್ಯೆ ನದಿ	ಬಿಸಲಹಳ್ಳಿಯ ಎಲೆ	ನಾಗೇನಹಳ್ಳಿಯ ಎಲೆ

ತಾರೀಖು 8ನೆ ಡಿಸೆಂಬರ್ 1904.

ನಂ. ರೆ. 5039—ಲ್ಯಾ. ರೆ. 269—04-3, ಸನ 1894ನೆ ಇಸವಿಯ VIIನೆ ನಂಬರ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಹೊಸ ಗ್ರಾಮವನ್ನುಂಟುಮಾಡಲಿಕ್ಕೆ ಬೇಕಾಗಿರುತ್ತೆ. ಮತ್ತು ಕೋಲಾರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹೆಸರು.	ಸರ್ವೆ ನಂ.	ಇನಾಮ ಇಷ್ಟೆ ಇದೆ.	ಎಷ್ಟೆ.	ಆಕಾರ.	ಬೇಕಾಗಿರುವ ಇಷ್ಟೆ.	ಚಕ್ಕುಬಂದಿ.			
										ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಎ. ಗು.	ರೂ. ಆ. ಪೈ.						
ಕೋಲಾರ	ಶಿಡ್ಲಘಟ್ಟ	ಗಂಜಿಗುಂಟೆ	ಹೋಲನಾಯಿಕನಹಳ್ಳಿ	ವೆಂಕಟರಾಯ ...	8 ಖುಷ್ಕಿ	2 16	3 0 0	2—16	ಸರ್ವೆ ನಂ. 79	ಸರ್ವೆ ನಂ. 1	ಸರ್ವೆ ನಂ. 7	ಗ್ರಾಮ.	

ತಾರೀಖು 13ನೆ ಡಿಸೆಂಬರ್ 1904.

ನಂ. ರೆ. 5194—ಲ್ಯಾ. ರೆ. 281—04—3, ಸನ 1894ನೆ ಇಸವಿಯ VIIನೆ ನಂಬರ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಗೋರಿಬಿದನೂರು ತಾಲ್ಲೂಕಿನಲ್ಲಿರುವ ಇಡಗೂರು ಕೆರೆಯ ಒಳಗೆರೆಗೆ ಸೇರಿಸಿಕೊಳ್ಳುವ ಬಗ್ಯೆ ಬೇಕಾಗಿರುತ್ತೆ. ಚಿಕ್ಕಬಳ್ಳಾಪುರವ ಇತರ ತಾಲ್ಲೂಕುಗಳ ಚಾರ್ಜಿನಲ್ಲಿರುವ ಅಸಿಸ್ಟಂಟ್ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರ್ರ ಹೆಸರು.	ಸರ್ವೆ ನಂ.	ಇನಾಮ ಇಷ್ಟೆ ಇದೆ.	ಎಷ್ಟೆ.	ಆಕಾರ.	ಒಳಗೆರೆಯಾಗಿ ಸೇರಿಸಿ ಎಷ್ಟೆ.	ಚಕ್ಕುಬಂದಿ.			
										ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
						ಎ. ಗು.	ರೂ.	ಎ. ಗು.					
ಕೋಲಾರ	ಗೋರಿಬಿದನೂರು	ಹೊಸೂರು	ನೂರಲೂರು	ವೆಂಕಟನರಸಪ್ಪ ಬಿನ್ ಭಾಸ್ಕರಪ್ಪ	110 1-2	3 16	11	0 21		ಎಸ್. ನಂ. 91	ಎಸ್. ನಂ. 111	ಎಸ್. ನಂ. 88	ಎಸ್. ನಂ. 107

ತಾರೀಖು 8ನೆ ಡಿಸೆಂಬರ್ 1904.

ನಂ. ರ. 5048—ಮಿ. 468—04-3, ಸನ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಆಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಹೊಸ ಗ್ರಾಮ ನಿವೇಶನವನ್ನುಂಟುಮಾಡಲಿಕ್ಕೆ ಬೇಕಾಗಿರುತ್ತದೆ. ಮತ್ತು ಚಿಕ್ಕಬಳ್ಳಾಪುರ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರ್ರ ಹೆಸರು.	ಸರ್ವೆ ನಂ.	ಒಟ್ಟು ವಿಸ್ತೀರ್ಣ.	ಆಕಾರ.	ಬೇಕಾಗಿರುವ ವಿಸ್ತೀರ್ಣ.	ಆಕಾರ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ	ಚಿಕ್ಕಬಳ್ಳಾಪುರ	ನಂದಿಗಿರಿ	ಬೀಚಕನಹಳ್ಳಿ, ಮಾಯಿರ ನಾರಿಪ್ಪನಹಳ್ಳಿ	ನಂದಪ್ಪಗೌಡ	19	೨. — ಗು. 2—4	ರೂ. ಅ. ಪೈ. 1—8—0	೨. — ಗು. 0—29	...	ಸರ್ವೆ ನಂ. 20	ಗಲ್ಲಿ	ಕೊಂಡದ ನಂಜೆ	ಸರ್ವೆ ನಂ. 19

ತಾರೀಖು 8ನೆ ಡಿಸೆಂಬರ್ 1904.

ನಂ. ರ. 5051 ಮಿ. 445—04-8, ಸನ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಆಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಕೋಲಾರ ಪೂರ್ವ ಬಡಾವಣೆ ಬಗ್ಯೆ ಬೇಕಾಗಿರುತ್ತೆ. ಮತ್ತು ಡಿವೀಜನಲ್ ಆಫಿಸರವರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರ್ರ ಹೆಸರು.	ಸರ್ವೆ ನಂ.	ಒಟ್ಟು ವಿಸ್ತೀರ್ಣ.	ಆಕಾರ.	ಬೇಕಾಗಿರುವ ವಿಸ್ತೀರ್ಣ.	ಆಕಾರ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ	ಕೋಲಾರ	ಕೋಲಾರ	ಕೋಲಾರ	ಗಜಲಕ್ಷ್ಮಿ	15—2	೨. — ಗು. 3—4	ರೂ. ಅ. ಪೈ. 8—1—0	೨. — ಗು. 1—0	..	ಗ್ರಾಮಸಂಸ್ಥೆಯ	ಸರ್ವೆ ನಂ. 13 ಮತ್ತು 14 ಮೊತ್ತ ಕೋಟಿಕಲ್ಲು	ಸರ್ವೆ ನಂ. 16 ಮಸ್ಕಿಯಗೆರೆ-ಸೋಲೂರ ಸ್ಥಳ ರಸ್ತೆ	ಗ್ರಾಮದ ಸಿಮೆಯ

ತಾರೀಖು 16ನೆ ಡಿಸೆಂಬರ್ 1904.

ನಂ. ರ. 5318 ಲ್ಯಾ. ರೆ. 289—04-2, ಮೈಸೂರ ಸರ್ವೀಸ್ ರೆಗ್ಯುಲೇಷನ್‌ಗಳ 219ನೆ ಆರ್ಟಿಕಲ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟು ಯಡತೊರೆ ತಾಲ್ಲೂಕಿನ ಅಮಲ್‌ದಾರ್ರಾದ ಮಿ|| ಸಿ. ಕೃಷ್ಣರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 5 ತಿಂಗಳ ಸ್ವಂತ ಕೆಲಸಗಳ ಮೇಲಣ ರಜಾ ಕೊಡಲ್ಪಟ್ಟಿರುತ್ತೆ.

2. ಮೇಲ್ಕಂಡ ರಜಾ ಕಾಲದಲ್ಲಿ ಯಾವ ತೊಂದರೆ ಹುಕುಂ ಕೊಡುವ ಪರಿಯಂತ, ರೆವಿನ್ಯೂ ಪ್ರೊಬೇಷನರಾದ ಮಿ|| ಎಸ್. ರಾಮರಾವ್, ಬಿ. ಎ., ಬಿ. ಎಲ್., ಯವರು ಯಡತೊರೆ ತಾಲ್ಲೂಕಿನ ಅಮಲ್‌ದಾರ್ ವ ಮೂರನೇ ಕ್ಲಾಸಿನ ಮ್ಯಾಜಿಸ್ಟ್ರೇಟರಾಗಿ ಆಫ್ಟಿಂಗು ತೀಕು ಕೆಲಸ ನೋಡತಕ್ಕದ್ದು.

439

1885

ತಾರೀಖು 8ನೆ ಡಿಸೆಂಬರ 1904.

ನಂ. ರೆ. 5068–ವಿ. 469–04–2, ಸನ್1894ನೆ ಇಸವಿಯ VIನೆ ನಂಬರ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ, ಮೈಸೂರ ಡಿಸ್ಟ್ರಿಕ್ಟ ಮೈಸೂರ ತಾಲ್ಲೂಕು ಈಸಬಾ ಹೋಬಳಿಯಲ್ಲಿನ ವೀರನಗೆರೆ ಗ್ರಾಮದಲ್ಲಿರುವ ಇದರಡಿ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಮೈಸೂರ ಷಹರಿನ ಸ್ಮಶಾನ ಭೂಮಿಗೋಸ್ಕರ ಬೇಕಾಗಿರುತ್ತವೆ. ಮತ್ತು ಡೆಪ್ಯುಟಿ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ತಿಪ್ಪು ಹೆಸರು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೇದಾರರ ಹೆಸರು.	ಮಾಲೀಕರ ಹೆಸರು.	ಜಮೀನಿನ ತಪಸೀಲು.				ಚಕ್ಕುಬಂದಿ.				ಷರಾ.
						ನಂಬರ.	ವಿಸ್ತೀರ್ಣ.	ಆಕಾರ.		ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.	
ಮೈಸೂರು	ಮೈಸೂರು	ಮೈಸೂರು	ವೀರನಗೆರೆ	ಕಿರಗಾಣಿಗರ ನಂಜಿ	ನಂಜುಂಡ ಸೆಟ್ಟಿ ಬಿನ್ ತುಂಗಾ.	35	ಬಾಗಾಯ ತು. ಎ. ಗು. 0—6	ರೂ. ಆ. ಪೈ 0 4 0	ಸರ್ವೆ ನಂ. 36	ಸರ್ವೆ ನಂ. 34	ಗಲ್ಲಿ	ವೀರನ ಕೊಟ್ಟಿಗೆ	ಸರ್ಕಾರೀಕನು ಸಿವಿಲ್ ಕೋರ್ಟು ಹರಾಜಿನಲ್ಲಿ ಜಮೀನನ್ನು ಕೊಂಡುಕೊಂಡಿರುತ್ತಾನೆ
					ಆದಪ್ಪ ಸೆಟ್ಟಿ ...		ಖುಷ್ಕಿ ಎ. ಗು. 2–27	2 12 0						

ತಾರೀಖು 16ನೆ ಡಿಸೆಂಬರ 1904.

ನಂ. ರೆ. 5315—ಲ್ಯಾ. ರೆ. 215 – 04–5, ಸನ್ 1894ನೆ ಇಸವಿಯ VIನೆ ನಂಬರ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಶಿವಮೊಗ್ಗಾ ತಾಲ್ಲೂಕಿನಲ್ಲಿರುವ ಇದರಡಿ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಶಿವಮೊಗ್ಗೆಯಲ್ಲಿರುವ ರೈಲ್ವೆ ಸ್ಟೇಷನಿನ ಸಮೀಪದಲ್ಲಿ ಫಾರೆಸ್ಟ ಡಿಪೋವಿಗೆ ಬೇಕಾಗಿರುತ್ತವೆ. ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿವಿಜನ್ ನಂ.	ಡಿಸ್ಟ್ರಿಕ್ಟ ಹೆಸರು.	ತಾಲ್ಲೂಕು ಹೆಸರು.	ಹೋಬಳಿಯ ಹೆಸರು.	ಗ್ರಾಮದ ಹೆಸರು.	ಖಾತೇದಾರ್ರ ಹೆಸರು.	ಜಮೀನು.				ಬೇಕಾಗಿರುವ ಜಮೀನು.		ಚಕ್ಕುಬಂದಿ.			
						ನಂಬರ.	ಗುಂಟೆ.	ವಿಸ್ತೀರ್ಣ.	ಆಕಾರ.	ವಿಸ್ತೀರ್ಣ.	ಆಕಾರ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1	ಶಿವಮೊಗ್ಗೆ	ಶಿವಮೊಗ್ಗೆ	ಶಿವಪುರಿ	ಶಿವಮೊಗ್ಗ	ಪಟೇಲ್ ಉಜನಯ್ಯ.	20	ಖುಷ್ಕಿ ಪಟೇಲ್ ಉಂಬ್ಳಿ	ಎ. ಗು. 1–19	ರೂ ಆ. ಪೈ. 1–0–0	ಎ. ಗು. 1–19	ರೂ. ಆ. ಪೈ. 1–0–0	ಸರ್ವೆ ನಂ. 19	ರೈಲ್ವೆ ರಸ್ತೆ	ಸರ್ವೆ ನಂ. 21	ರೈಲ್ವೆ ರಸ್ತೆ
					ಬಾತ್ಮಿ ಭೀಮರಾವು ಬಿನ್ ನಾಗೇಶರಾವು	21	ಡಿಟೋ	8–12	3–8–0	2–27	..	ಸರ್ವೆ ನಂ. 24	ಸರ್ವೆ ನಂ. 21ರ ಮಿಕ್ಕ ಭಾಗ	ಅದೇ ನಂಬರಿನಲ್ಲಿರುವ ಹಳೇ ಡಿಸ್ಪೆಲೇರಿ ಕಟ್ಟಡ	ಸರ್ವೆ ನಂ. 19 ವ 20

ತಾರೀಖು 17ನೆ ಡಿಸೆಂಬರ 1904.

ನಂ. ರೆ. 5326, ಮೊದಲನೇ ಕ್ಲಾಸಿನ ಡೆಪ್ಯುಟಿ ಕಮೀಷನರಾದ ಮೆ॥ ಎಚ್. ಎಚ್. ಸ್ಪಾರ್ಕ್ಸ್ ಯವರು ಫರ್ಲೋ ರಜಾದಿಂದ ವಾಪಸು ಬಂದಿರೋಣದರಿಂದ—

ಮೊದಲನೇ ಕ್ಲಾಸಿನಲ್ಲಿ ಆಕ್ಟಿಂಗ್ ತರೀಕು ಕೆಲಸ ನೋಡುತಲಿದ್ದ ಎರಡನೇ ಕ್ಲಾಸಿನ ಡೆಪ್ಯುಟಿ ಕಮೀಷನರಾದ ಮೆ॥ ಎಂ. ಎಸ್. ನಾರಾಯಣರಾಯರು ಎರಡನೇ ಕ್ಲಾಸಿಗೆ ವಾಪಸು ಹೋಗತಕ್ಕದ್ದು.

ಎರಡನೇ ಕ್ಲಾಸಿನಲ್ಲಿ ಆಕ್ಟಿಂಗ್ ತರೀಕು ಕೆಲಸ ನೋಡುತಲಿದ್ದ ಮೂರನೇ ಕ್ಲಾಸಿನ ಡೆಪ್ಯುಟಿ ಕಮೀಷನರಾದ ಮೆ॥ ಎಚ್. ರಾಮಾನುಜಯ್ಯಂಗಾರ್ರು ಮೂರನೇ ಕ್ಲಾಸಿಗೆ ವಾಪಸು ಹೋಗತಕ್ಕದ್ದು.

ಮೂರನೇ ಕ್ಲಾಸಿನ ಡೆಪ್ಯುಟಿ ಕಮೀಷನರಾಗಿ ಆಕ್ಟಿಂಗ್ ತರೀಕು ಕೆಲಸ ನೋಡುತಲಿದ್ದ ಸಕ್ಲೇಶಪುರದ ಸಬ್ ಡಿವೀಜನ್ ಆಫೀಸರಾದ ಮೆ॥ ಪಿ. ಆರ್. ಡಬ್ಲ್ಯೂ. ವೆದರಾಲ್ ಯವರು ತಮ್ಮ ಕೆಲಸಕ್ಕೆ ವಾಪಸು ಹೋಗತಕ್ಕದ್ದು, ಮತ್ತು

ಹಾಲಿ ಸಕ್ಲೇಶಪುರದ ಡಿವೀಜನಿನ ಚಾರ್ಜಿನಲ್ಲಿರುವ ಸೀನಿಯರ್ ಅಸಿಸ್ಟೆಂಟ್ ಕಮೀಷನರಾದ ಮೆ॥ ಸೈಯಾದ್ ಅಮೀರ್‌ಹಸನ್ ಯವರು ಕಡೂರ ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ತಾರೀಖು 17ನೆ ಡಿಸೆಂಬರ್ 1904.

ನಂ. ರ. 5349—ಲ್ಯಾ. ರ. 40—04-7, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ, ತುಮಕೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾದ ಮೌ॥ ಕೆ. ಎಸ್. ದೊರಸ್ವಾಮಿ ಅಯ್ಯಂಗರ್ ಯವರಿಗೆ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಮೇಲ್ಕಂಡ ರಜಾ ಕಾಲದಲ್ಲಿ ಡಿಸ್ಟ್ರಿಕ್ಟಿನಲ್ಲಿರುವ ಸೀನಿಯರ್ ಅಸಿಸ್ಟೆಂಟ್ ಕಮಿಷನರವರು ಸದರೀ ಡಿಸ್ಟ್ರಿಕ್ಟಿನ ಚಾರ್ಜಿನಲ್ಲಿರತಕ್ಕದ್ದು.

ತಾರೀಖು 19ನೆ ಡಿಸೆಂಬರ್ 1904.

ನಂ. ರ. 5333—ಲ್ಯಾ. ರ. 290—04-2, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ, ಕಡೂರು ಡಿಸ್ಟ್ರಿಕ್ಟ್ ಟ್ರೆಜರಿಯ ಚಾರ್ಜಿನಲ್ಲಿರುವ ಎಕ್ಸಟ್ರಾ ಅಸಿಸ್ಟೆಂಟ್ ಕಮಿಷನರಾದ ಮೌ॥ ಎ. ವೇದಾಂತದೇಸಿಗಂ ಅಯ್ಯಂಗಾರ್ರಿಗೆ ಬರುವ ಕ್ರಿಸ್ತಮಸ್ ರಜಾದಿನಗಳೊಂದಿಗೆ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 19ನೆ ಡಿಸೆಂಬರ್ 1904.

ನಂ. ರ. 5336—ಲ್ಯಾ. ರ. 157—04-8, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ, ಚೆಂಗಳೂರ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರಾದ ಮೌ॥ ಡಿ. ದೇವರಾಜೆ ಅರಸಿನವರಿಗೆ 1904ನೆ ನವಂಬರ್ 28ನೆ ತಾರೀಖಿನಾರಭ್ಯ 5 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ಸದರೀ ರಜಾ ಕಾಲದಲ್ಲಿ ಸೀನಿಯರ್ ಅಸಿಸ್ಟೆಂಟ್ ಕಮಿಷನರಾದ ಮೌ॥ ಎಂ. ಚೆಂಗಯ್ಯಚೆಟ್ಟಿ, ಬಿ. ಎ., ಯವರು ಸದರೀ ಡಿಸ್ಟ್ರಿಕ್ಟಿನ ಚಾರ್ಜಿನಲ್ಲಿದ್ದರು.

ತಾರೀಖು 19ನೆ ಡಿಸೆಂಬರ್ 1904.

ನಂ. ರ. 5372—ಲ್ಯಾ. ರ. 299-04-4, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ, ಕೃಷ್ಣರಾಜಪೇಟೆ ಡಿವೀಜನಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರಾದ ಮೌ॥ ಎ. ಸುಬ್ರಹ್ಮಣ್ಯ ಅಯ್ಯರ್, ಬಿ. ಎ., ಯವರಿಗೆ 2½ ತಿಂಗಳುಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

2. ಹಾಲಿ ಶಿವಮೊಗ್ಗದಲ್ಲಿರುವ ಎಕ್ಸಟ್ರಾ ಅಸಿಸ್ಟೆಂಟ್ ಕಮಿಷನರಾದ ಮೌ॥ ಸಿ. ನಾರಾಯಣಾಯರು ಕೃಷ್ಣರಾಜಪೇಟೆ ಡಿವೀಜನಿನ ಚಾರ್ಜಿನಲ್ಲಿರಲಿಕ್ಕೆ ಮೈಸೂರ ಡಿಸ್ಟ್ರಿಕ್ಟಿಗೆ ನೇಮಿಸಲ್ಪಟ್ಟಿರುತ್ತಾರೆ. ಕೂಡ್ಲೆ ಕಲಕ್ಕೆ ದಾಖಲಾಗತಕ್ಕದ್ದು.

ಹುಕುಂ ಬಮೋಜಿಬ್,

ಬಿ. ಕೆ. ವೆಂಕಟವರದಯ್ಯಂಗಾರ್,

ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರೆಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 14ನೆ ಡಿಸೆಂಬರ್ 1904.

ನಂ. 1341—7422, ಮೈಸೂರ ಪಬ್ಲಿಕ್ ವರ್ಕ್ಸ್ ಇಲಾಖೆಯ ಲೋಕಲ್ ಅಪ್ಪರ್ ಸಬಾರ್ಡಿನೇಟ್ ಸಿಬ್ಬಂದಿಯಲ್ಲಿ ಇದರಡೀ ಕಂಡ ಬಡ್ತಿಗಳು 1904ನೆ ಸೆಪ್ಟಂಬರ್ 9ನೆ ತಾರೀಖಿನಾರಭ್ಯ ಮಾಡಲ್ಪಟ್ಟಿರುತ್ತವೆ :—

ಡಿವೀಜನ್.	ಹೆಸರು.	ಹಾಲಿ ಕ್ಲಾಸು.	ಜೀತ.	ಬಡ್ತಿ ಮಾಡಲ್ಪಟ್ಟ ಕ್ಲಾಸು.	ಜೀತ.	ಬಡ್ತಿಯ ಸ್ಥಾನ.	ಷರಾ.
			ರೂ.		ರೂ.		
ಚಾನಲ್	ಮೌ॥ ಎಲ್. ಕೆ. ಸ್ವಾಮಿನಾಥ ಅಯ್ಯರ್ ರು	ಮೂರನೆ ಕ್ಲಾಸಿನ ಸೂಪರ್‌ವೈಜರ್	150	ಎರಡನೇ ಕ್ಲಾಸಿನ ಸೂಪರ್‌ವೈಜರ್	200	ಕಾಯಂ	ಮೃತಪಟ್ಟ ಎರಡನೆ ಕ್ಲಾಸಿನ ಸೂಪರ್ ವೈಜರಾದ ಮೌ॥ ಬಿ. ವೆಂಕಟಪ್ಪನವರಿಗೆ ಬದಲಾಗಿ
ಹಾಸನ	ಮೌ॥ ಆರ್. ಸಿ. ಷರ್ವಾಡಿ ಯವರು	ಮೊದಲನೆ ಕ್ಲಾಸಿನ ಓವರ್ಸೀರ್	100	ಮೂರನೆ ಕ್ಲಾಸಿನ ಸೂಪರ್‌ವೈಜರ್	150	ಡಿಟೋ	
ಕೋಲಾರ...	ಎಂ. ಕೃಷ್ಣರಾಯರು	ಎರಡನೆ ಕ್ಲಾಸಿನ ಓವರ್ಸೀರ್	80	ಮೊದಲನೆ ಕ್ಲಾಸಿನ ಓವರ್ಸೀರ್	100	ಡಿಟೋ	
ಚಾನಲ್ ..	ಎಚ್. ಎಸ್. ನರಸಿಂಹಯ್ಯಂಗಾರ್ರವರು	ಹಂಗಾಮಿ ಮೂರನೆ ಕ್ಲಾಸಿನ ಓವರ್ಸೀರ್	60	ಮೂರನೆ ಕ್ಲಾಸಿನ ಓವರ್ಸೀರ್	60	ಡಿಟೋ	

1887

ತಾರೀಖು 15ನೆ ಡಿಸೆಂಬರ್ 1904.

ನಂ. 1344—7450, ಹಾಸನದ ಡಿವೀಜನಿನ ಎಕ್ಸಿಕ್ಯೂಟಿವ್ ಇಂಜನಿಯರಾದ ಮೆ॥ ಸಿ. ಎ. ಮಹದೇವಶಾಸ್ತ್ರಿ, ಬಿ. ಎ. ಪ ಬಿ. ಸಿ. ಇ., ಯವರಿಗೆ ಮಾಹೆ ಮಜಕೂರು 22ನೆ ತಾರೀಖಿನಾರಭ್ಯ ಎರಡು ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜಿಬ್,
ಡಬ್ಲ್ಯೂ. ಮೊಕ್ ಹರ್ಕೇ,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರ ಗವರ್ನಮೆಂಟ್ ಸೆಕ್ರಿಟೆರಿ.

ಮುಜರ್ಯೆ.

ಇಸ್ತಿಹಾರ್ನಾಮೆ.

ತಾರೀಖು 12ನೆ ಡಿಸೆಂಬರ್ 1904.

ನಂ. 2190, ಸನ್ 1898ನೆ ಡಿಸೆಂಬರ್ 21ನೆ ಮಾರ್ಕಂ 789ನೆ ಮತ್ತು 1901ನೆ ಮೇ 4ನೆ ಮಾರ್ಕಂ 1111ನೆ ನಂಬರ್ ಇಸ್ತಿಹಾರ್ನಾಮೆಗಳಿಗೆ ಬದಲಾಗಿ ಇದರಡೀ ಕಂಡ ಜನಗಳು, ಕಾಲಾತಿಕ್ರಮಣ ವ ಇತರ ಕಾರಣಗಳಿಂದ ತೆಗೆದು ಹಾಕಲ್ಪಟ್ಟವರಿಗೆ ಬದಲಾಗಿ, ಹಿರಿಯೂರಿನಲ್ಲಿರುವ ಶ್ರೀ ತ್ಯಾಗರಮಲ್ಲೇಶ್ವರ ಸ್ವಾಮಿ ದೇವಸ್ಥಾನದ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವ ಬಗ್ಯೆ ಧರ್ಮದರ್ಶಿಗಳಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ :—

1. ಮಾ॥ ರಾ॥ ರಾ॥ ಯಲೆ ಬಸಪ್ಪನವರು.
2. ,, ಪಟೇಲ್ ವೆಂಕಂಣನವರು.
3. ,, ಶಾನಭೋಗ ರಂಗಂಣನವರು.
4. ಮಾ॥ ರಾ॥ ರಾ॥ ಪಟ್ನಸೆಟ್ಟಿ ತ್ಯಾಗರಪ್ಪನವರು.
5. ,, ಸಿ. ಎಸ್. ಕೃಷ್ಣಪ್ಪನವರು.

ಹುಕುಂ ಬಮೋಜಿಬ್,
ಎಲ್. ಅನಂತಸ್ವಾಮಿರಾವ್,
ಮುಜರ್ಯೆ ಇಲಾಖೆಯ ಸೆಕ್ರಿಟೆರಿ.

ಜಿಯೋಲಾಜಿಕಲ್.

ಇಸ್ತಿಹಾರ್ನಾಮೆ.

ತಾರೀಖು 20ನೆ ಡಿಸೆಂಬರ್ 1904.

ನಂ. 573—ಎಸ್., ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ XIII Aನೆ ಅಧ್ಯಾಯದ XIX A (II)ನೆ ಆರ್ಟಿಕಲ್‌ಗಳನು ಸರಿಸಿ, ಮೈಸೂರ ಸೀಮೆಯ ಘನಿಗಳ ಇನ್‌ಸ್ಪೆಕ್ಟರಾದ ಮೆ॥ ಆರ್. ಬೊಕೆಟ್ ಯವರಿಗೆ 1904ನೆ ಏಪ್ರಿಲ್ 14—16ನೆ ಮಾರ್ಕಂ 603 ಎಸ್. ನೇ ನಂಬರ್ ಗವರ್ನಮೆಂಟಿನ (ಜಿಯೋಲಾಜಿಕಲ್) ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಸ್ವಂತ ಕೆಲಸಗಳ ಮೇಲಣ ಸ್ಪೆಷಿಯಲ್ ರಜಾ ಸೇರಿರುವ ಪ್ರಿವಿಲೇಜ್ ರಜಾದೊಂದಿಗೆ, 1904ನೆ ನವಂಬರ್ 25 ವ 26ನೆ ತಾರೀಖುಗಳಲ್ಲಿ ಎರಡು ದಿನಗಳ ಸಬ್‌ಸಿಡಿಯರಿ ರಜಾ ಕೊಡಲ್ಪಟ್ಟಿತ್ತು.

2. ಮೆ॥ ಬೊಕೆಟ್ ಯವರು ಮೇಲ್ಕಂಡ ರಜಾದಿಂದ ವಾಪಸು ಬಂದು 1904ನೆ ನವಂಬರ್ 27ನೆ ತಾರೀಖಿನ ಪೂರ್ವಾಹ್ನದಲ್ಲಿ ಮೈಸೂರ ಸೀಮೆಯ ಘನಿಗಳ ಇನ್‌ಸ್ಪೆಕ್ಟರವರ ಆಫೀಸಿನ ಚಾರ್ಜನ್ನು ಪುನಃ ವಹಿಸಿರುತ್ತಾರೆ.

ಹುಕುಂ ಬಮೋಜಿಬ್,
ಡಬ್ಲ್ಯೂ. ಎಫ್. ಸ್ಕೀತ್,
ಮೈಸೂರು ಗವರ್ನಮೆಂಟ್ ಜಿಯೋಲಾಜಿಕಲ್ ಇಲಾಖಾ ಸೆಕ್ರಿಟೆರಿ.

1889

442

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಪ್ರಾಯಿಸ್ ಆದ್ದು. [ನಂ. 50.

ಬೆಂಗಳೂರು, ಗುರುವಾರ, ಡಿಸೆಂಬರ್ ತಾ॥ 22, ಸೇ॥ 1904.

IIನೆ ಭಾಗ.

ಇಂಡ್ಯಾಗವರ್ನಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

1904ನೆ ಇಸವಿ ಜುಲೈ 15ನೆ ಮುಕ್ತಂ R. 129—30—26—4ನೆ ನಂಬರ್ ಗವರ್ನಮೆಂಟ್ ಆರ್ಡರ್ ಅನುಸರಿಸಿ ಕೊಡೋಣಾದ ಇಸ್ತಿಹಾರ್‌ನಾಮೆ :—

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ — ಬೆಂಗಳೂರು ಡಿಸ್ಟ್ರಿಕ್ಟ್ ಕ್ಲೋಸಿಪೇಟೆ ಫಾರೆಸ್ಟ್ ರೇಂಜಿಗೆ ಸೇರಿದ ಸ್ಟೇಟ್ ಫಾರೆಸ್ಟ್‌ಗಳಲ್ಲಿ ಈ ಕೆಳಗೆ ವಿವರಿಸುವ ಮೋರೆ ದಾರಿಗಳು ಮತ್ತು ಜಲಾಶಯಗಳಿಗೆ ಮಾರ್ಗಗಳು ಜನೋಪಯೋಗಕ್ಕಾಗಿ ಬಿಡಲ್ಪಟ್ಟಿವೆ.

I ಸಾವನದುರ್ಗ ಫಾರೆಸ್ಟ್—ಮಾಗಡಿ ತಾಲ್ಲೂಕು.

(ಎ) ಸಾವನದುರ್ಗ ಬ್ಲಾಕ್.

(1) ನಾಯಕನ ಪಾಳ್ಯದಿಂದ ತಗಚೆಗುಪ್ಪೆಗೆ ಹೋಗುವ ಕಾಲುದಾರಿ.—ಇದು 2 ಗಜ ಅಗಲವೂ ಮತ್ತು 3 ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 1ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ನಾಯಕನ ಪಾಳ್ಯದ 22ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದ ಎಲ್ಲೆಕಟ್ಟಿನಿಂದ ಫಾರೆಸ್ಟನ್ನು ಪ್ರವೇಶಿಸಿ, ಉತ್ತರ ಮತ್ತು ಈಶಾನ್ಯಮಾರ್ಗವಾಗಿ ಹೋಗಿ, ಡಿಮಾರ್ಕೇಷನ್ ಲೈನಿನ 5ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಬಾಚನಹಟ್ಟಿಯ 13ನೆ ಸರ್ವೆ ನಂಬರಿನ ನೈರುತ್ಯ ಪಾರ್ಶ್ವದ ಎಲ್ಲೆಯನ್ನು ಪ್ರವೇಶಿಸುತ್ತದೆ.

(2) ಗುಡ್ಡಹಳ್ಳಿಯಿಂದ ನೆಲಪಟ್ಟಣಕ್ಕೆ ಹೋಗುವ ಕಾಲು ದಾರಿ.—ಇದು 2 ಗಜ ಅಗಲವೂ ಮತ್ತು $1\frac{1}{2}$ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿಮಾರ್ಕೇಷನ್ ಲೈನಿನ 4ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಗುಡ್ಡಹಳ್ಳಿಯ 33ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣ ಮತ್ತು ಪೂರ್ವ ಮಾರ್ಗವಾಗಿ ಹೋಗಿ, ನೆಲಪಟ್ಟದ 2ನೆ ಸರ್ವೆ ನಂ. ಪಶ್ಚಿಮ ಪಾರ್ಶ್ವವನ್ನು ಪ್ರವೇಶ ಮಾಡುತ್ತದೆ.

(3) ಕಲ್ಯಾಣದೇವರ ಮಟದಿಂದ ನೆಲಪಟ್ಣಕ್ಕೆ ಹೋಗುವ ಬಂಡೀದಾರಿ.—ಇದು 4 ಗಜ ಅಗಲವೂ ಮತ್ತು 1 ಮೈಲಿ ಉದ್ದ ವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇರ್ಷ ಲೈನಿನ 22ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಕಲ್ಯಾಣದೇವರ ಮಟದ 2ನೆ ಸರ್ವೆ ನಂಬರಿನ ಈಶಾನ್ಯ ಮೂಲೆಯಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಈಶಾನ್ಯಮಾರ್ಗವಾಗಿ ಹೋಗಿ ನೆಲಪಟ್ಣದ 1ನೆ ಸರ್ವೆ ನಂಬರಿನ ದಕ್ಷಿಣ ಪಾರ್ಶ್ವವನ್ನು ಪ್ರವೇಶ ಮಾಡುತ್ತದೆ.

(4) ಕಲ್ಯಾಣದೇವರ ಮಟದಿಂದ ಡುಬ್ಬಗುಳಿಗೆ ಹೋಗುವ ಕಾಲು ದಾರಿ.—2 ಗಜ ಅಗಲವೂ ಮತ್ತು $1\frac{1}{4}$ ಮೈಲಿ ಉದ್ದವುಳ್ಳದ್ದು. ಇದು ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇರ್ಷ ಲೈನಿನ 21ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ ಕಲ್ಯಾಣದೇವರ ಮಟದ 7ನೆ ಸರ್ವೆ ನಂಬರಿನ ಈಶಾನ್ಯ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪೂರ್ವ ಮತ್ತು ಈಶಾನ್ಯ ಮಾರ್ಗವಾಗಿ ಹೋಗಿ, ಡಿವಾರ್ಕೇರ್ಷ ಲೈನಿನ 10ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ, ಡುಬ್ಬಗುಳಿಯ 35ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(5) ಮಟದಿಂದ ಮಂಚನಬೆಲೆಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ ಮತ್ತು 3 ಮೈಲಿ ಉದ್ದ ವುಳ್ಳದ್ದು. ಇದು ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇರ್ಷ ಲೈನಿನ 20ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ, ಮಟದ 17ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದಿಂದ ಸ್ಟೇಟ್ ಫಾರೆಸ್ಟನ್ನು ಪ್ರವೇಶಿಸಿ, ಆಗ್ನೇಯ ಮಾರ್ಗವಾಗಿ ಹೋಗಿ, ಡಿವಾರ್ಕೇರ್ಷ ಲೈನಿನ 13ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಮಂಚನಬೆಲೆ ಗ್ರಾಮದ 70ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(6) ಮಟದಿಂದ ಧೂಪಕಲೆ ಹೋಗುವ ಕಾಲು ದಾರಿ.—ಇದು 2 ಗಜ ಅಗಲವೂ ಮತ್ತು 2 ಫರ್ಲಾಂಗು ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇರ್ಷ ಲೈನಿನ 18ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಮಟದ 35ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಈಶಾನ್ಯ ಮಾರ್ಗವಾಗಿ ಹೋಗಿ ಧೂಪಕಲೆನಲ್ಲಿ ಮೇಲೆ ಹೇಳಿದ 5ನೆ ನಂಬರಿನ ಬಂಡೀದಾರಿಯನ್ನು ಕೇರಿ ಫಾರೆಸ್ಟಿನಲ್ಲೆ ಖೈದಾಗುತ್ತದೆ.

(7) ಡುಬ್ಬಗುಳಿಯಿಂದ ಸಂಕೇನಹಳ್ಳಿ ಬೈಲಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ ಮತ್ತು 1 ಮೈಲಿ ಉದ್ದ ವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇರ್ಷ ಲೈನಿನ 12ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಡುಬ್ಬಗುಳಿಯ 11ನೆ ಸರ್ವೆ ನಂಬರಿನ ಪಶ್ಚಿಮ ಎಲ್ಲೆಯಿಂದ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮಕ್ಕೆ ಹೋಗಿ, ಸಂಕೇನಹಳ್ಳಿ ಬೈಲಿನಲ್ಲಿ ಮೇಲ ಹೇಳಿದ 5ನೆ ನಂಬರಿನ ಬಂಡೀದಾರಿಯನ್ನು ಕೇರಿ ಫಾರೆಸ್ಟಿನಲ್ಲೇ ಖೈದಾಗುತ್ತದೆ.

(8) ಅಡಿಕೆಮಾರನಹಳ್ಳಿಯಿಂದ ನೆಲಪಟ್ಣಕ್ಕೆ ಹೋಗುವ ಕಾಲು ದಾರಿ.—2 ಗಜ ಅಗಲವೂ 2 ಮೈಲಿ ಉದ್ದ ವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇರ್ಷ ಲೈನಿನ 7ನೆ ಮೈಲಿಯ 5ನೆ ಫರ್ಲಾಂಗಿನಲ್ಲಿ 27ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ನೈರುತ್ಯ ಮಾರ್ಗವಾಗಿ ಹೋಗಿ, 12ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಲ್ಲಿ ನೆಲಪಟ್ಣವನ್ನು ಪ್ರವೇಶಿಸುತ್ತದೆ.

(9) ವೀರಾಪುರದಿಂದ ನೆಲಪಟ್ಣಕ್ಕೆ ಹೋಗುವ ಕಾಲುದಾರಿ.—2 ಗಜ ಅಗಲವೂ ಮತ್ತು $1\frac{1}{2}$ ಮೈಲಿ ಉದ್ದ ವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇರ್ಷ ಲೈನಿನ 19ನೆ ಮೈಲಿಯ 3ನೆ ಫರ್ಲಾಂಗಿನಲ್ಲಿ ವೀರಾಪುರದ 19ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪಶ್ಚಿಮ ಮಾರ್ಗವಾಗಿ ಹೋಗಿ, ಮೇಲೆ ಹೇಳಿದ 8ನೆ ನಂಬರಿನ ಕಾಲುದಾರಿಯನ್ನು ಕೇರಿ ಖೈದಾಗುತ್ತದೆ.

(10) ಜೋಡಿಕಟ್ಟೆದಿಂದ ನಾಯಕನ ಪಾಳ್ಯಕ್ಕೆ ಹೋಗುವ ಕಾಲುದಾರಿ.—2 ಗಜ ಅಗಲವೂ 3 ಫರ್ಲಾಂಗು ಉದ್ದ ವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇರ್ಷ ಲೈನಿನ 5ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ, ಕರ್ಣಮಂಗಲ ಗ್ರಾಮದ 102ನೆ ಸರ್ವೆ ನಂಬರಿನ ಪೂರ್ವ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ಪೂರ್ವ ಮಾರ್ಗವಾಗಿ ಹೋಗಿ, 2ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಅಂಚೆಗುಪ್ಪೆ ಗ್ರಾಮದ 13ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(11) ಕ್ಲೋಸ್‌ಪೇಟೆಯಿಂದ ಪಾಗಡಿಗೆ ಹೋಗುವ ಹೈರೋಡು.—ಇದು ರೋಡಿನ 17ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ, ಡಿವಾರ್ಕೇರ್ಷ ಲೈನಿನ 1ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ವಾಯವ್ಯ ಮಾರ್ಗವಾಗಿ ಸುಮಾರು 1 ಮೈಲಿಯ ವರೆಗೆ ಹೋಗಿ, ರೋಡಿನ 18ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಮತ್ತು ಡಿವಾರ್ಕೇರ್ಷ ಲೈನಿನ 3ನೆ ಮೈಲಿಯ 1ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಡುತ್ತದೆ. ಇದು ಸಾರ್ವಜನಿಕ ರಸ್ತೆಯಾಗಿದ್ದು, ಜನರಿಗೂ ಮತ್ತು ವ್ಯಾಪಾರಕ್ಕೂ ಬಿಡಲ್ಪಟ್ಟಿದೆ. ಇದು 18 ಅಡಿ ಅಗಲವಾಗಿದೆ.

ಜಲಾಶಯಗಳು.

(ಎ) ಬಿದರಕಟ್ಟೆ.—ಇದು ನೆಲಪಟ್ಣದಿಂದ ಸುಮಾರು $1\frac{1}{2}$ ಫರ್ಲಾಂಗುಗಳ ಫಾಸಲೆಯಲ್ಲಿ ಸ್ಟೇಟ್ ಫಾರೆಸ್ಟಿನಲ್ಲಿ ಇದೆ. ಮತ್ತು ಇದರ ನೀರು ನೆಲಪಟ್ಣ, ಕಲ್ಯಾಣದೇವರ ಮಟ, ನಾಯಕನಪಾಳ್ಯ ಮತ್ತು ವೀರೆಗೌಡನದೊಡ್ಡಿ ಗ್ರಾಮಗಳ ಜಾನುವಾರುಗಳಿಂದಲೂ ಮತ್ತು ನೆಲಪಟ್ಣದಲ್ಲಿರುವ ನರಸಿಂಹದೇವರಸ್ವಾಮಿ ಮತ್ತು ವೀರಭದ್ರಸ್ವಾಮಿ ದೇವಸ್ಥಾನಗಳಿಗೆ ಹೋಗುವ ಯಾತ್ರಿಕರ ಜಾನುವಾರುಗಳಿಂದಲೂ ಉಪಯೋಗಿಸಲ್ಪಡುತ್ತದೆ.

(ಬಿ) ಸಂಕೋನಹಳ್ಳಿ ಬೈಲುಕಟ್ಟೆ.—ಇದು ಡಿವಾರ್ಕೇಷನ್ ಲೈನಿನಿಂದ ಸುಮಾರು 1½ ಮೈಲಿ ಫಾಸಲೆಯಲ್ಲಿ ಫಾರೆಸ್ಟಿನಲ್ಲಿದೆ. ಇದರ ನೀರು ಡುಬ್ಬಗುಳಿ ಮತ್ತು ಮಂಚನಬೆಲೆ ಗ್ರಾಮಗಳ ಜಾನುವಾರುಗಳಿಂದ ಉಪಯೋಗಿಸಲ್ಪಡುತ್ತದೆ.

(೩) ಚನ್ನೈಯ್ಯನ ಕಟ್ಟೆ.—ಇದು ಡಿವಾರ್ಕೇಷನ್ ಲೈನಿನಿಂದ 1 ಮೈಲಿ ಫಾಸಲೆಯಲ್ಲಿ ಫಾರೆಸ್ಟಿನಲ್ಲಿದೆ. ಮತ್ತು ಇದರ ನೀರು ಕಲ್ಯಾಣದೇವರಮಟ, ಡುಬ್ಬಗುಳಿ ಮತ್ತು ಮಂಚನಬೆಲೆ ಗ್ರಾಮಗಳ ಜಾನುವಾರುಗಳಿಂದ ಉಪಯೋಗಿಸಲ್ಪಡುತ್ತದೆ.

1891

ಫಾರೆಸ್ಟಿನಲ್ಲಿ ಸೇರಿರುವ ಗ್ರಾಮಗಳು.

(1) ನೆಲಪಟ್ಟಣ.—ಫಾರೆಸ್ಟಿನಲ್ಲಿದೆ. ಇದರ ಸುತ್ತಲೂ 7 ಗಜ ಅಗಲವುಳ್ಳ ಡಿವಾರ್ಕೇಷನ್ ಲೈನು ಇದೆ. ಇದು ರಿಜರ್ವೇಷನಿಂದ ರಹಿತವಾದದ್ದು.

(ಬಿ) ಸಿದ್ದೇದೇವರ ಬೆಟ್ಟ ಬ್ಲಾಕ್.

(1) ನಾಗಮಂಗಲದಿಂದ ಅಜ್ಜನಹಳ್ಳಿಗೆ ಹೋಗುವ ಬಂಡೀದಾರಿ.—4 ಗಜ ಅಗಲವೂ 1 ಮೈಲಿ ಉದ್ದ ವುಳ್ಳದ್ದು. ಜನರ, ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷನ್ ಲೈನಿನ 28ನೆ ಮೈಲಿಯ 4ನೆ ಫರ್ಲಾಂಗಿನಲ್ಲಿ, ನಾಗಮಂಗಲ ಗ್ರಾಮದ 28ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣ ಮಾರ್ಗವಾಗಿ ಹೋಗಿ, ಡಿವಾರ್ಕೇಷನ್ ಲೈನಿನ 7ನೆ ಮೈಲಿಯ 7ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು ಅಜ್ಜನಹಳ್ಳಿ ಗ್ರಾಮದ 32ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(2) ಅಣ್ಣೇಕಾರನಹಳ್ಳಿಯಿಂದ, (ಅಜ್ಜನಹಳ್ಳಿ ದಾಖಲೆ) ಹೊಸದೊಡ್ಡಿಗೆ ಹೋಗುವ ಬಂಡೀ ದಾರಿ.—ಸುಮಾರು 4 ಗಜ ಅಗಲವು ½ ಮೈಲಿ ಉದ್ದವುಳ್ಳದ್ದು. ಜನರ ಮತ್ತು ಜಾನುವಾರುಗಳ ಮತ್ತು ಬಂಡಿಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷನ್ ಲೈನಿನ 3ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಅಣ್ಣೇಕಾರನಹಳ್ಳಿಯ 32ನೆ ಸರ್ವೆ ನಂಬರಿನ ನೈರುತ್ಯ ಪಾರ್ಶ್ವದಿಂದ ಫಾರೆಸ್ಟನ್ನು ಪ್ರವೇಶಿಸಿ, ದಕ್ಷಿಣ ಮಾರ್ಗವಾಗಿ ಹೋಗಿ, ಡಿವಾರ್ಕೇಷನ್ ಲೈನಿನ 5ನೆ ಮೈಲಿಯ 2ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ಅಜ್ಜನಹಳ್ಳಿ ಗ್ರಾಮದ ಸರ್ವೆ ನಂ. 61ನೇದರ ಉತ್ತರ ಪಾರ್ಶ್ವವನ್ನು ಶೇರುತ್ತದೆ.

(3) ಮೇಗಳ ದೊಡ್ಡಿ (ಅತ್ತಿಂಗೆರೆ ದಾಖಲೆ)ಯಿಂದ ಹೊಸದೊಡ್ಡಿ (ಅಜ್ಜನಹಳ್ಳಿ ದಾಖಲೆ) ಗೆ ಹೋಗುವ ಕಾಲುದಾರಿ.—2 ಗಜ ಅಗಲವೂ ½ ಮೈಲಿ ಉದ್ದ ವುಳ್ಳದ್ದು. ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷನ್ ಲೈನಿನ 4ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಅತ್ತಿಂಗೆರೆಯ 66ನೆ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ನೈರುತ್ಯ ಮಾರ್ಗವಾಗಿ ಹೋಗಿ, ಡಿವಾರ್ಕೇಷನ್ ಲೈನಿನ 5ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಬಿಟ್ಟು, ಅಜ್ಜನಹಳ್ಳಿ ಗ್ರಾಮದ 49ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವವನ್ನು ಪ್ರವೇಶಿಸುತ್ತದೆ.

(4) ಕಾಯಂಗುತ್ತಾ ಗುದ್ದಲಹಳ್ಳಿಯಿಂದ ಮಾಡಬಾಳಕ್ಕೆ ಹೋಗುವ ಕಾಲುದಾರಿ.—2 ಗಜ ಅಗಲವೂ 1 ಮೈಲಿ ಉದ್ದ ವುಳ್ಳದ್ದು. ಇದು ಜನರ ಮತ್ತು ಜಾನುವಾರುಗಳ ಉಪಯೋಗಕ್ಕಾಗಿ ಬಿಡಲ್ಪಟ್ಟಿದೆ. ಇದು ಡಿವಾರ್ಕೇಷನ್ ಲೈನಿನ 8ನೆ ಮೈಲಿಯ 6ನೆ ಫರ್ಲಾಂಗಿನಲ್ಲಿ ಫಾರೆಸ್ಟನ್ನು ಪ್ರವೇಶಿಸಿ, ಉತ್ತರ ಮಾರ್ಗವಾಗಿ ಹೋಗಿ, 15ನೆ ಮೈಲಿಯ 4ನೆ ಫರ್ಲಾಂಗಿನ ಬಳಿ ಫಾರೆಸ್ಟನ್ನು ಬಿಟ್ಟು ಮಾಡಬಾಳದ 41ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವವನ್ನು ಪ್ರವೇಶಿಸುತ್ತದೆ.

